

Prof. B Mahananda (BAPU)
8TH YEAR FOND REMEMBRANCE
You Departed for the heavenly abode on this day eight years ago. However the light of your love and simplicity shall always remain in our hearts.
05-02-2018
We will always walk in the path you have shown us.
FONDLY REMEMBERED BY
Team Chirag ads & events 98806 37618



# ಮೈಸೂರು ಮಿತ್ರ

ಮೈಸೂರು–ಮಂಡ್ಯ–ಚಾಮರಾಜನಗರ–ಕೊಡಗು–ಹಾಸನ

ಬೆಳಗಿನ ಪ್ರಾದೇಶಿಕ ದಿನಪತ್ರಿಕೆ

ಫೆಬ್ರವರಿ 4 ಬುಧವಾರ 2026


ಮೈಸೂರು ಸುದ್ದಿ: ದೂರವಾಣಿ: 2496520/21/26/27/28 ಜಾಹೀರಾತು: 2496522/23
ನಗರ ಕಚೇರಿಗಳು: ಕೆ.ಆರ್.ಸರ್ಕಲ್, ವಿಶ್ವೇಶ್ವರಯ್ಯ ಕಟ್ಟಡ Ph: 2431774, ಡಿ.ದೇವರಾಜ ಅರಸು ರಸ್ತೆ, Ph: 2428695
ಸುದ್ದಿ ಜಾಹೀರಾತಿಗಾಗಿ–ಮಂಡ್ಯ: 8762960325, ಚಾಮರಾಜನಗರ: 9242265657, ಕೊಡಗು: 9731469871

46

ಸಂಪುಟ: 46 | ಸಂಚಿಕೆ: 286 | ಪುಟಗಳು: 12
ಸುದ್ದಿ, ಫೋಟೋಗೆ: news@mysurumithra.com
ಜಾಹೀರಾತು: ad@mysurumithra.com, website: www.mysurumithra.com

₹4




ಯಶಸ್ವಿ ಕಂಫಿ ಸೂಸೈಟಿ
D. D. Urs Road, MYSORE
Ph: 0821-2431830 / 4262458


## ರಾಜ್ಯದ ಬೊಕ್ಕಸಕ್ಕೆ 6000 ಕೋಟಿ ಕನ್ನ ಆರೋಪ; ಸಂಪುಟದಿಂದ ಅಬಕಾರಿ ಸಚಿವ ತಿಮ್ಮಾಪುರ ವಜಾಕ್ಕೆ ಆಗ್ರಹಿಸಿ ವಿಧಾನಸಭೆಯಲ್ಲಿ

# ಬಿಜೆಪಿ-ಜೆಡಿಎಸ್ ಅಹೋರಾತ್ರಿ ಧರಣಿ



ಅಬಕಾರಿ ಸಚಿವ ಆರ್.ಬಿ. ತಿಮ್ಮಾಪುರ್ ರಾಜೀನಾಮೆಗೆ ಆಗ್ರಹಿಸಿ ವಿಧಾನಸಭೆಯಲ್ಲಿ ಬಿಜೆಪಿ ಮತ್ತು ಜೆಡಿಎಸ್ ಶಾಸಕರು ಅಹೋರಾತ್ರಿ ಧರಣಿ ನಡೆಸಿದರು. ಸ್ಪೀಕರ್ ಯು.ಟಿ. ಖಾದರ್ ಮಾಡಿದ ಮನವಿಗೂ ಕಿವಿಗೊಡದೆ ಧರಣಿ ಮುಂದುವರೆಸಿದರು.

ಬೆಂಗಳೂರು, ಫೆ3(ಕೆಎಂಶಿ)– ರಾಜ್ಯ ಬೊಕ್ಕಸಕ್ಕೆ ಕನ್ನ ಹಾಕಿರುವ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ್ ವಿರುದ್ಧ ಉನ್ನತಮಟ್ಟದ ತನಿಖೆಗೆ ಆದೇಶಿಸಿ, ತಕ್ಷಣವೇ ಸಂಪುಟದಿಂದ ವಜಾ ಮಾಡುವಂತೆ ಪ್ರತಿಪಕ್ಷಗಳು ಆಗ್ರಹಿಸಿ ವಿಧಾನಸಭೆಯಲ್ಲಿ ಅಹೋರಾತ್ರಿ ಧರಣಿ ನಡೆಸುತ್ತಿವೆ.



ಆರ್.ಬಿ.ತಿಮ್ಮಾಪುರ್

ಇಂದು ಕಲಾಪ ಆರಂಭದಲ್ಲೇ ಪ್ರತಿಪಕ್ಷದ ನಾಯಕ ಆರ್.ಅಶೋಕ್ ಸೇರಿದಂತೆ ಹಲವು ಸದಸ್ಯರು ನಿಯಮ 69ರಡಿ ವಿಷಯ ಪ್ರಸ್ತಾಪಿಸಿ, ವಾರ್ಷಿಕವಾಗಿ 6,000 ಕೋಟಿ ರೂ. ಲಂಚ ರೂಪದಲ್ಲಿ ಪಡೆದು ಖಜಾನೆಗೆ ದೊಡ್ಡ ಪ್ರಮಾಣದಲ್ಲಿ ಹಾನಿ ಮಾಡಿದ್ದಾರೆ.

ಇಷ್ಟು ದೊಡ್ಡ ಪ್ರಮಾಣದ ಹಾನಿಯಲ್ಲಿ ಇಲಾಖೆ ಅಧಿಕಾರಿಗಳು ಹಾಗೂ ಕಾಣದ ಕೈ ಸೇರಿಕೊಂಡಿವೆ ಎಂದು ಆರೋಪಿಸಿದರು. ಇತ್ತೀಚಿನ ದಿನಗಳಲ್ಲಿ ಜಿಲ್ಲಾ ಅಬಕಾರಿ ಅಧಿಕಾರಿಗಳು ಸೇರಿದಂತೆ ಕೆಳ ಹಂತದ ಸಿಬ್ಬಂದಿ ಲೋಕಾಯುಕ್ತ ಬಲೆಗೆ ಬಿದ್ದಿದ್ದಾರೆ.

ಇದರಲ್ಲಿ ಮಧ್ಯವರ್ತಿಗಳು ಪಾಲುದಾರರಾಗಿದ್ದು, ಕೆಲವರು ಲೋಕಾಯುಕ್ತರ ಮುಂದೆ ಸಚಿವರ ವಿರುದ್ಧವೇ ದಾಖಲೆ ಸಮೇತ ಹೇಳಿಕೆ ನೀಡಿದ್ದಾರೆ.

ಇಲಾಖೆಯಲ್ಲಿ ನಡೆದಿರುವ ಭ್ರಷ್ಟಾಚಾರದಲ್ಲಿ ಅಧಿಕಾರಿಗಳು ಮತ್ತು ಸಚಿವರ ವಿರುದ್ಧವೇ ಫೆಡರೇಷನ್ ಆಫ್ ವೈನ್ ಮರ್ಚೆಂಟ್ಸ್ ಅಸೋಸಿಯೇಷನ್ಸ್ ಕರ್ನಾಟಕ ದೂರು ಸಲ್ಲಿಸಿ, ಆರೋಪಿಸಿದೆ. ಸರ್ಕಾರದ ಬೊಕ್ಕಸಕ್ಕೆ 40,000 ಕೋಟಿ ರೂ. ಗಳಿಗೂ ಹೆಚ್ಚು ಆದಾಯ ತಂದು ಕೊಡುವ ಸಂಘದ ಸದಸ್ಯರೇ ಗುರುತರ ಆರೋಪ ಮಾಡಿದ್ದರೂ ಆ ಸಚಿವರನ್ನು ಮುಂದುವರೆಸಿಕೊಂಡು ಹೋಗುತ್ತಿರುವುದರಲ್ಲಿ ಅರ್ಥವೇನು ಎಂದು ಪ್ರಶ್ನಿಸಿದರು. ■6ನೇ ಪುಟಕ್ಕೆ

## ವಿಬಿ ಜಿ ರಾಮ್ ಜಿ ರದ್ದುಗೊಳಿಸಿ; ಮನರೇಗಾ ಮರುಜಾರಿಗೆ ವಿಧಾನಸಭೆಯಲ್ಲಿ ನಿರ್ಣಯ ಮಂಡನೆ

■ ವಿಧಾನಸಭೆಯಲ್ಲಿ ಗದ್ದಲ; ಆಡಳಿತ ಪಕ್ಷ ಸದಸ್ಯರ ಸಮರ್ಥನೆ ■ ಬೊಕ್ಕಸಕ್ಕೆ ಹೊರೆಯಾದ, ವಿಕೇಂದ್ರೀಕರಣಕ್ಕೆ ವಿರುದ್ಧವಾದ ಈ ಕಾಯ್ದೆ ರದ್ದಾಗಬೇಕು: ಸಿಎಂ

ಬೆಂಗಳೂರು, ಫೆ.3(ಕೆಎಂಶಿ)– ಗ್ರಾಮೀಣ ಜನರ ಬದುಕಿನ ಹಕ್ಕು ಕಾಪಾಡುವ ದೃಷ್ಟಿಯಿಂದ, ಒಕ್ಕೂಟ ತತ್ವಕ್ಕೆ ವಿರೋಧವಾಗಿರುವ ವಿಕಸಿತ್ ಭಾರತ್ ಗ್ಯಾರಂಟಿ ಫಾರ್ ರೋಜ್ಗಾರ್ ಮತ್ತು ಆಜೀವಿಕಾ ಮಿಷನ್ (ಗ್ರಾಮೀಣ) ಕಾಯ್ದೆಯನ್ನು ಕೇಂದ್ರ ಸರ್ಕಾರ ತಕ್ಷಣವೇ ರದ್ದುಗೊಳಿಸಬೇಕು ಎಂಬ ನಿರ್ಣಯವನ್ನು ಮುಖ್ಯಮಂತ್ರಿ ಸಿದ್ದರಾಮಯ್ಯ ಗದ್ದಲದ ನಡುವೆಯೇ ವಿಧಾನ ಸಭೆಯಲ್ಲಿಂದು ಮಂಡಿಸಿದರು.



ಕೇಂದ್ರದ ನೂತನ ಕಾಯಿದೆ ಬಗ್ಗೆ ಚರ್ಚಿಸಲೆಂದೇ ಕರೆಯಲಾಗಿರುವ ವಿಶೇಷ ಅಧಿವೇಶನದಲ್ಲಿ ಮೂರು ಪುಟಗಳ ನಿರ್ಣಯವನ್ನು ಮಂಡಿಸಿ ಮಾತನಾಡಿದ ಅವರು, ರಾಜ್ಯದ ಬೊಕ್ಕಸಕ್ಕೆ ಹೊರೆಯಾಗಿರುವ, ವಿಕೇಂದ್ರೀಕರಣ ತತ್ವಕ್ಕೆ ವಿರುದ್ಧವಾಗಿರುವ ಪಂಚಾಯತ್ ಅಧಿಕಾರ ಮತ್ತು ಹಕ್ಕು ಕಸಿದುಕೊಂಡಿರುವ ಕಾಯ್ದೆ ತಕ್ಷಣವೇ ರದ್ದುಗೊಳಿಸಬೇಕು ಎಂದು ಆಗ್ರಹಿಸಿದರು.

ಗ್ರಾಮೀಣ ಅಭಿವೃದ್ಧಿಗೆ ಆಸರೆ ಹಾಗೂ ಬಡವರ ಸ್ವಾವಲಂಬನೆಗೆ ಕಾರಣವಾಗಿದ್ದ ಮಹಾತ್ಮ ಗಾಂಧಿ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆಯನ್ನು ಅದರ ಮೂಲ ಸ್ವರೂಪದಲ್ಲಿಯೇ ಮರುಸ್ಥಾಪಿಸಬೇಕು ಎಂಬುದಾಗಿ ಸದನ ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದರು. ಕೇಂದ್ರ ಸರ್ಕಾರ ಏಕಪಕ್ಷೀಯವಾಗಿ ಜಾರಿಗೆ ತಂದಿರುವ ಹೊಸ ವಿಬಿ–ಜಿ–ರಾಮ್–ಜಿ ಕಾಯ್ದೆ ಒಕ್ಕೂಟ ವ್ಯವಸ್ಥೆಯ ಮೂಲ ಆಶಯಗಳಿಗೆ ಮತ್ತು ಗ್ರಾಮೀಣ ಜನರ ಜೀವನೋಪಾಯದ ಹಕ್ಕಿಗೆ ಮಾರಕವಾಗಿದೆ. ಗ್ರಾಮೀಣ ಬಡ ಕುಟುಂಬಗಳಿಗೆ ಆರ್ಥಿಕ ಭದ್ರತೆ ನೀಡಲು 2005ರಲ್ಲಿ ಡಾ.ಮನ್‌ಮೋಹನ್ ಸಿಂಗ್ ■6ನೇ ಪುಟಕ್ಕೆ

### ಮೈಸೂರು ಜಿಲ್ಲೆಯಲ್ಲಿ ಈ ಬಾರಿ ಎಸ್‌ಎಸ್‌ಎಲ್‌ಸಿ ಫಲಿತಾಂಶ ಉತ್ತಮಪಡಿಸಲು


## ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ಅಭ್ಯಾಸ ತರಗತಿ

ಮೈಸೂರು, ಫೆ.3(ಪಿಎಂ)– ಮೈಸೂರು ಜಿಲ್ಲೆಯಲ್ಲಿ ಈ ಬಾರಿಯ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ (2025–26ನೇ ಸಾಲಿನ) ಉತ್ತಮ ಫಲಿತಾಂಶ ಸಾಧಿಸಲು ಶಾಲಾ ಶಿಕ್ಷಣ ಇಲಾಖೆಯ ಉಪ ನಿರ್ದೇಶಕರ ಕಚೇರಿ ವತಿಯಿಂದ 'ವಿಷನ್–40' ಶೀರ್ಷಿಕೆಯಡಿ ವಿಶೇಷ ಕಾರ್ಯಕ್ರಮ ಪ್ರಾರಂಭಿಸಲಾಗಿದೆ.



ಉದಯಕುಮಾರ್

ಈ ಕಾರ್ಯಕ್ರಮದಡಿ ಜಿಲ್ಲೆಯ ಸರ್ಕಾರಿ, ಅನುದಾನಿತ ಹಾಗೂ ಖಾಸಗಿ ಶಾಲೆಗಳಲ್ಲಿ ಕಲಿಕೆಯಲ್ಲಿ ಹಿಂದುಳಿದಿರುವ ಸುಮಾರು 5 ಸಾವಿರ ಮಕ್ಕಳಿಗೆ ವಿಶೇಷ ತರಗತಿ ಆರಂಭಿಸಲಾಗಿದೆ. ಮೈಸೂರು ಜಿಲ್ಲೆಯಲ್ಲಿ 705 ಶಾಲೆಗಳಿಂದ 36,093 ವಿದ್ಯಾರ್ಥಿಗಳು ಈ ಬಾರಿ ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ. ಇದರ ಹೊರತಾಗಿ 2,647 ಪುನರಾವರ್ತಿತ ವಿದ್ಯಾರ್ಥಿಗಳು ಪರೀಕ್ಷೆ ಬರೆಯುತ್ತಿದ್ದಾರೆ. ಈ ಎಲ್ಲವೂ ಸೇರಿದಂತೆ ಒಟ್ಟಾರೆ ಈ ಬಾರಿ ಜಿಲ್ಲೆಯಲ್ಲಿ 39 ಸಾವಿರ ವಿದ್ಯಾರ್ಥಿಗಳು ಎಸ್‌ಎಸ್‌ಎಲ್‌ಸಿ ಪರೀಕ್ಷೆ ಬರೆಯಲಿದ್ದಾರೆ. ವಿಷನ್–40ಯಡಿ ಕಲಿಕೆಯಲ್ಲಿ ಹಿಂದುಳಿದ ವಿದ್ಯಾರ್ಥಿಗಳಿಗೆ ಆಯಾಯ ಶಾಲೆಗಳಲ್ಲಿ ವಿಶೇಷ ತರಗತಿಗಳ ಮೂಲಕ ಅವರ ಕಲಿಕಾ ■6ನೇ ಪುಟಕ್ಕೆ




ಫೈಲ್ ಚಿತ್ರ

ಕೊನೆಯ ಮತ್ತು 3ನೇ ಪೂರ್ವಸಿದ್ಧತಾ ಪರೀಕ್ಷೆಯು ಫೆ.23ರಿಂದ 28 ರವರೆಗೆ ನಡೆಯಲಿದೆ. ಅಂತಿಮವಾಗಿ ಮುಖ್ಯ ಪರೀಕ್ಷೆಯು ಮಾ.18ರಿಂದ ಆರಂಭವಾಗಲಿದೆ. ಈ ಸಾಲಿನಿಂದ ಎಸ್‌ಎಸ್‌ಎಲ್‌ಸಿ ಪರೀಕ್ಷೆಯಲ್ಲಿ ಉತ್ತೀರ್ಣರಾಗಲು ಇರುವ ಕನಿಷ್ಠ ಅಂಕಗಳನ್ನು ಸರ್ಕಾರ 33ಕ್ಕೆ ಇಳಿಸಿದೆ. 100 ಅಂಕಗಳ ಪೈಕಿ 20 ಅಂಕಗಳಿಗೆ ಆಂತರಿಕ ಪರೀಕ್ಷೆ ಇದ್ದು, 80 ಅಂಕಗಳಿಗೆ ಲಿಖಿತ ಪರೀಕ್ಷೆ ನಡೆಯಲಿದೆ.




ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., (ಜಿಲ್ಲಾ ಹಾಪ್‌ಕಾಮ್ಸ್) ಕರ್ಜನ್ ಪಾರ್ಕ್, ಮೈಸೂರು




ಮಾನ್ಯ ಸದಸ್ಯ ಮತ ಬಾಂಧವರೆ,
ದಿನಾಂಕ: 05.02.2026ರ ಗುರುವಾರ ನಡೆಯಲಿರುವ ಆಡಳಿತ ಮಂಡಳಿ ನಿರ್ದೇಶಕರುಗಳ ಸ್ಥಾನಕ್ಕೆ ಅಭ್ಯರ್ಥಿಗಳಾಗಿ ನಾವುಗಳು ಸ್ಪರ್ಧಿಸಿರುತ್ತೇವೆ.
ತಮ್ಮ ಅತ್ಯಮೂಲ್ಯವಾದ ಮತವನ್ನು ನೀಡಿ ನಮ್ಮನ್ನು ಬೆಂಬಲಿಸಿ ಜಯಶೀಲರನ್ನಾಗಿ ಮಾಡಿ ತಮ್ಮಗಳ ಸೇವೆ ಮಾಡಲು ಅವಕಾಶ ಮಾಡಿಕೊಡಬೇಕಾಗಿ ವಿನಂತಿ.

| ಕ್ರ.ಸಂ | ಭಾವಚಿತ್ರ | ನಿರ್ದೇಶಕ ಸ್ಥಾನದ ಅಭ್ಯರ್ಥಿಗಳು | ಚಿಹ್ನೆ |
|---|---|---|---|
| 3 |  | ಕೃಷ್ಣ<br>ಮಾಜಿ ಅಧ್ಯಕ್ಷರು, ಪಿ.ಎಲ್.ಡಿ. ಬ್ಯಾಂಕ್, ಮೈಸೂರು ತಾ॥<br>ಮೈಸೂರು ತಾಲ್ಲೂಕು, ಸಾಮಾನ್ಯ<br>ಮೊಬೈಲ್: 93421 85774 | ಕಾರು |
| 10 |  | ನೇತ್ರಾವತಿ<br>ಮೈಸೂರು ತಾಲ್ಲೂಕು, ಮಹಿಳಾ ಮೀಸಲು<br>ಮೊಬೈಲ್: 95916 13421 | ತೆಂಗಿನಕಾಯಿ |
| 24 |  | ರವಿ (ಕನಕ)<br>ದುದ್ದಗೆರೆ, ಮೈಸೂರು ತಾಲ್ಲೂಕು<br>ಹಿಂದುಳಿದ ವರ್ಗ – ಪ್ರವರ್ಗ ಎ<br>ಮೊಬೈಲ್: 99022 98735 | ಹೊಲಿಗೆ ಯಂತ್ರ |
| 27 |  | ರಾಮಸ್ವಾಮಿ ಬಿ.ಎಸ್.<br>ಮೈಸೂರು ತಾಲ್ಲೂಕು,<br>ಪರಿಶಿಷ್ಟ ಜಾತಿ ಮೀಸಲು<br>ಮೊಬೈಲ್: 98808 45910 | ಹಣ್ಣಿನ ಬುಟ್ಟಿ |
| 34 |  | ಶ್ರೀನಿವಾಸ ಎಸ್.ಆರ್.<br>ಪಿರಿಯಾಪಟ್ಟಣ ತಾಲ್ಲೂಕು<br>ಸಾಮಾನ್ಯ<br>ಮೊಬೈಲ್: 9900159697 | ಟಿ.ವಿ. |
| 39 |  | ಸಂಜಯ್ ಎಂ.ವಿ. MBA<br>ಕೆ.ಆರ್. ನಗರ ತಾಲ್ಲೂಕು<br>ಸಾಮಾನ್ಯ<br>ಮೊಬೈಲ್: 7019905388 | ಕುಕ್ಕರ್ |

ಮತದಾನದ ದಿನಾಂಕ : 05.02.2026ರ ಗುರುವಾರ
ಸಮಯ: ಬೆಳಗ್ಗೆ 9.00 ರಿಂದ ಸಂಜೆ 4.00 ರವರೆಗೆ
ಸ್ಥಳ : ಸಂಘದ ಆವರಣ, ಮರೀಗೌಡ ಸಭಾಂಗಣ, ಕರ್ಜನ್ ಪಾರ್ಕ್, ಮೈಸೂರು.
ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ ಸಮಗ್ರ ಅಭಿವೃದ್ಧಿಯೇ ನಮ್ಮ ಗುರಿ, ಅದಕ್ಕಾಗಿ ಸದಾ ಇರಲಿ ನಿಮ್ಮ ಬೆಂಬಲ
ಪ್ರತಿ ಸದಸ್ಯರು 12 ಮತಗಳನ್ನು ಚಲಾಯಿಸುವ ಹಕ್ಕಿರುತ್ತದೆ.
ವಿಶೇಷ ಸೂಚನೆ: ಸಂಘದಿಂದ ನೀಡಿರುವ ಗುರುತಿನ ಚೀಟಿಯನ್ನು ಕಡ್ಡಾಯವಾಗಿ ತರತಕ್ಕದ್ದು.
ದಕ್ಷ, ಪ್ರಾಮಾಣಿಕ ಕ್ರಿಯಾಶೀಲ ಯೋಜನಾಬದ್ಧ ಆಡಳಿತ ನಮ್ಮದು – ಅದಕ್ಕಾಗಿ ತಮ್ಮ ಅಮೂಲ್ಯವಾದ ಮತದಾನ ನಿಮ್ಮದು.



22 ಕ್ಯಾರೆಟ್ ಚಿನ್ನದ ದರ @ ತೊಳಸಿ



ತೊಳಸಿ ಜ್ಯುವೆಲರ್ಸ್ THOLASI JEWELS
₹ 13,910/-
ಅಶೋಕ ರಸ್ತೆ, ಮೈಸೂರು. ಫೋ: 0821–2521926, ದೇವಸ್ಥಾನದ ರಸ್ತೆ, ವಿ.ವಿ.ಮೊಹಲ್ಲಾ, ಮೈಸೂರು. ಫೋ: 0821–2411926
ಎಂಜಿಎಸ್ ರಸ್ತೆ, ಬಸ್‌ಸ್ಟ್ಯಾಂಡ್ ಎದುರು, ನಂಜನಗೂಡು. ಫೋ: 08221–200926




ಮೈಸೂರು ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘ ನಿ., (ಜಿಲ್ಲಾ ಹಾಪ್‌ಕಾಮ್ಸ್) ಕರ್ಜನ್‌ಪಾರ್ಕ್, ಮೈಸೂರು

ಆಡಳಿತ ಮಂಡಳಿಯ ಚುನಾವಣೆ 2026



ಶ್ರೀ.ಸೂರ್ಯಕುಮಾರ್
ಹಾಲಿ ನಿರ್ದೇಶಕರು
ಮೊ: 9945799918

ಆತ್ಮೀಯ ಸಹಕಾರಿ ಬಂಧುಗಳೇ
ದಿನಾಂಕ 05-02-2026 ನೇ ಗುರುವಾರ ಬೆಳಿಗ್ಗೆ 9-00 ರಿಂದ ಸಂಜೆ 4-00 ರವರೆಗೆ ನಡೆಯಲಿರುವ ಮೇಲ್ಕಂಡ ಸಂಘದ ಚುನಾವಣೆಯಲ್ಲಿ ಈ ಕೆಳಕಂಡ ನಾವುಗಳು ಸ್ಪರ್ಧಿಸಿರುತ್ತೇವೆ. ನಿಮ್ಮ ಅಮೂಲ್ಯವಾದ ಮತವನ್ನು ನಮಗೆ ' ' ಈ ಚಿಹ್ನೆ ಒತ್ತುವುದರ ಮೂಲಕ ಮತ ನೀಡಿ ನಮ್ಮನ್ನು ಜಯಶೀಲರನ್ನಾಗಿ ಮಾಡಿ ನಿಮ್ಮ ಸೇವೆಗೆ ಅವಕಾಶ ಕಲ್ಪಿಸಿಕೊಡಬೇಕೆಂದು ತಮ್ಮಲ್ಲಿ ಕಳಕಳಿಯ ಮನವಿ



ಶ್ರೀ.ಹೆಚ್.ಎಸ್.ಚಂದ್ರೇಗೌಡ
ಹಾಲಿ ನಿರ್ದೇಶಕರು
ಮೊ:9448186931

| | | | | | | | |
|---|---|---|---|---|---|---|---|
|  | 9 | ನಳಿನಿ.ಎಸ್.ಜಿ<br>ಹಾಲಿ ಉಪಾಧ್ಯಕ್ಷರು, ಮಹಿಳಾ ಮೀಸಲು<br>9380680352 | ಕಿರೀಟ |  | 21 | ರಘು<br>ಹೊಸಹುಂಡಿ<br>ಹಾಲಿ ಅಧ್ಯಕ್ಷರು<br>ಹಿಂದುಳಿದ ವರ್ಗ ಪ್ರವರ್ಗ ಬಿ<br>9845074873 | ಬಲ್ಬ್ |
|  | 12 | ಡಿ. ಪದ್ಮನಾಭ<br>ಹಾಲಿ ನಿರ್ದೇಶಕರು, ಪರಿಶಿಷ್ಟ ಜಾತಿ ಮೀಸಲು<br>9480388088 | ಗುಡಿಸಲು |  | 25 | ರಾಜೀವ .ಎಂ.ಜೆ<br>ಜಿಲ್ಲಾ ಪತ್ರಿಕಾ ಬರಹಗಾರರು, ಮಿರ್ಲೆ<br>ಕೆ.ಆರ್. ನಗರ ತಾಲ್ಲೂಕು<br>94448731229 | ಬಸ್ಸು |
|  | 13 | ಬಿ.ಎನ್. ಪ್ರಭುಸ್ವಾಮಿ<br>ಹಾಲಿ ನಿರ್ದೇಶಕರು<br>9972726344 ನಂಜನಗೂಡು ತಾಲ್ಲೂಕು | ಏಣಿ |  | 28 | ಟಿ. ರಾಮೇಗೌಡ<br>ಹಾಲಿ ನಿರ್ದೇಶಕರು, ಹಿಂದುಳಿದ ವರ್ಗ ಪ್ರವರ್ಗ ಎ<br>9845911595 | ಫ್ಯಾನ್ |
|  | 17 | ಬಿ.ಪಿ. ಬೋರೇಗೌಡ<br>ಹಾಲಿ ನಿರ್ದೇಶಕರು, ಹೆಚ್.ಡಿ. ಕೋಟೆ ತಾಲ್ಲೂಕು<br>9845048858 | ವಿದ್ಯುತ್ ಕಂಬ |  | 31 | ಎಸ್.ಕೆ. ಶಿವಣ್ಣ<br>ಪಿರಿಯಾಪಟ್ಟಣ ತಾಲ್ಲೂಕು<br>9632465671 | ಬುಗುರಿ |
|  | 19 | ಮಹದೇವ .ಜೆ<br>ಹಾಲಿ ನಿರ್ದೇಶಕರು, ಮೈಸೂರು ತಾಲ್ಲೂಕು<br>9481234890 | ಸೂರ್ಯ |  | 33 | ಶೋಭ .ಬಿ.ಪಿ<br>ಮಹಿಳಾ ಮೀಸಲು<br>9945034210 | ಅಂಚೆ ಪೆಟ್ಟಿಗೆ |
|  | 20 | ವೈ.ಜಿ. ಮಹೇಂದ್ರ<br>ಹಾಲಿ ನಿರ್ದೇಶಕರು, ಟಿ. ನರಸೀಪುರ ತಾಲ್ಲೂಕು<br>9740133329 | ನೇಗಿಲು |  | 35 | ಆರ್. ಸರ್ವೇಶ<br>ಹಾಲಿ ನಿರ್ದೇಶಕರು, ಪರಿಶಿಷ್ಟ ಪಂಗಡ ಮೀಸಲು<br>9743660288 | ಡೀಸೆಲ್ ಪಂಪು |

ಚುನಾವಣೆ ನಡೆಯುವ ಸ್ಥಳ : ಜಿಲ್ಲಾ ಹಾಪ್‌ಕಾಮ್ಸ್, ಕರ್ಜನ್‌ಪಾರ್ಕ್, ಮೈಸೂರು
ವಿ.ಸೂ. : ಮತದಾನ ಮಾಡಲು ಕಡ್ಡಾಯವಾಗಿ ಗುರುತಿನ ಚೀಟಿಯನ್ನು ತರತಕ್ಕದ್ದು

# ಟಿ.ಎಸ್.ರವಿಶಂಕರ್ ನೆನಪಿನಂಗಳ ಕಾರ್ಯಕ್ರಮ; ಶ್ರೀಯುತರ ಸ್ಮರಣೆ



ಟಿ.ಎಸ್.ರವಿಶಂಕರ್ ಸ್ನೇಹ ಬಳಗ ಆಯೋಜಿಸಿದ್ದ ಟಿ.ಎಸ್.ರವಿಶಂಕರ್ ನೆನಪಿನಂಗಳ ಕಾರ್ಯಕ್ರಮದಲ್ಲಿ ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ, ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ಶಾಸಕ ತನ್ವೀರ್ ಸೇಠ್, ಮಾಜಿ ಶಾಸಕ ಎಂ.ಕೆ.ಸೋಮಶೇಖರ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ.ರಾಜೀವ್ ಅವರು ರವಿಶಂಕರ್ ಭಾವಚಿತ್ರಕ್ಕೆ ಪುಷ್ಪನಮನ ಸಲ್ಲಿಸಿದರು.

ಮೈಸೂರು, ಫೆ.3(ಬಿಎಲ್‌ಯು)– ಮೈಸೂರು ನಗರ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ದಿವಂಗತ ಟಿ.ಎಸ್.ರವಿಶಂಕರ್ ಅವರು ಪಕ್ಷ ಹಾಗೂ ಸಮಾಜಮುಖಿಯಾಗಿ ಸಲ್ಲಿಸಿದ ಸೇವೆ ಸದಾ ನೆನಪಿನಲ್ಲಿ ಉಳಿಯಲಿದೆ ಎಂದು ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಅಭಿಪ್ರಾಯಪಟ್ಟರು.

ಮೈಸೂರಿನ ಲಕ್ಷ್ಮಿಪುರಂನ ಖಾಸಗಿ ಕಲ್ಯಾಣ ಮಂಟಪದಲ್ಲಿ ಟಿ.ಎಸ್.ರವಿಶಂಕರ್ ಸ್ನೇಹ ಬಳಗ ಆಯೋಜಿಸಿದ್ದ ಟಿ.ಎಸ್.ರವಿಶಂಕರ್ ನೆನಪಿನಂಗಳ ಕಾರ್ಯಕ್ರಮದಲ್ಲಿ ಮಾತನಾಡಿದ ಅವರು, ಕಾಂಗ್ರೆಸ್ ಕಟ್ಟಾಳಾಗಿದ್ದ ರವಿಶಂಕರ್ ಅವರು ಪಕ್ಷವನ್ನು ಸಮರ್ಥವಾಗಿ ಸಂಘಟಿಸಿದ್ದರು. ಅಲ್ಲದೆ ಎಲ್ಲರನ್ನೂ ವಿಶ್ವಾಸಕ್ಕೆ ತೆಗೆದುಕೊಂಡು ಪ್ರತಿಯೊಬ್ಬರ ಪ್ರೀತಿ ವಿಶ್ವಾಸ ಗಳಿಸಿದ್ದರು ಎಂದರು.

ನಂಜನಗೂಡು ತಾಲೂಕು ತಗಡೂರಿನ ಸ್ವಾತಂತ್ರ್ಯ ಹೋರಾಟಗಾರರ ಮನೆತನದವರಾಗಿದ್ದ ರವಿಶಂಕರ್ ಅವರಲ್ಲಿ ಅಪಾರ ರಾಷ್ಟ್ರಭಕ್ತಿ ಇತ್ತು. ಕಾಂಗ್ರೆಸ್ ಪಕ್ಷದ ಸಂಘಟನೆ ಮಾತ್ರವಲ್ಲದೆ ಸಮಾಜಮುಖಿಯಾಗಿ ವಿವಿಧ ಸ್ತರದಲ್ಲಿ ಕೆಲಸ ಮಾಡಿದ್ದರು ಎಂದು ಸ್ಮರಿಸಿದರು.

ರವಿಶಂಕರ್ ಆಪ್ತ ಸ್ನೇಹಿತ ಹಾಗೂ ಶಾಸಕ ತನ್ವೀರ್ ಸೇಠ್ ಮಾತನಾಡಿ, ರವಿಶಂಕರ್ ಅಜಾತಶತ್ರುವಿನಂತೆ. ಪ್ರತಿಯೊಬ್ಬರ ಪ್ರೀತಿ–ವಿಶ್ವಾಸ ಗಳಿಸಿದ್ದರು. ಪಕ್ಷದ ಶಿಸ್ತಿನ ಸಿಪಾಯಿಯಾಗಿದ್ದ ರವಿಶಂಕರ್ ಅವರು, ನಗರ ಕಾಂಗ್ರೆಸ್ ಅಧ್ಯಕ್ಷರಾಗಿ ಪಕ್ಷ ಸಂಘಟನೆಗೆ ಹಲವು ವಿಶಿಷ್ಟ ಕಾರ್ಯಕ್ರಮಗಳನ್ನು ರೂಪಿಸಿದ್ದರು ಎಂದರು.

ಸುತ್ತೂರು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ, ನಗರ ಕಾಂಗ್ರೆಸ್ ಅಧ್ಯಕ್ಷ ಆರ್.ಮೂರ್ತಿ, ಜಿಲ್ಲಾಧ್ಯಕ್ಷ ಡಾ.ವಿಜಯಕುಮಾರ್, ಮಾಜಿ ಶಾಸಕ ಎಂ.ಕೆ. ಸೋಮಶೇಖರ್, ಕರ್ನಾಟಕ ವಸ್ತು ಪ್ರದರ್ಶನ ಪ್ರಾಧಿಕಾರದ ಅಧ್ಯಕ್ಷ ಅಯೂಬ್ ಖಾನ್, ಮುಡಾ ಮಾಜಿ ಅಧ್ಯಕ್ಷ ಹೆಚ್.ವಿ. ರಾಜೀವ್, ಟಿ.ಎಸ್.ರವಿಶಂಕರ್ ಸಹೋದರಿ ಡಾ.ಸುಜಾತ ಸೇರಿದಂತೆ ಹಲವರು ವೇದಿಕೆಯಲ್ಲಿ ಉಪಸ್ಥಿತರಿದ್ದರು.

## ಪ್ರೊ.ಭಾಷ್ಯಂ ಸ್ವಾಮೀಜಿಗೆ ಅಭಿನಂದನೆ...



ಕರ್ನಾಟಕ ರಾಜ್ಯ ಮುಕ್ತ ವಿಶ್ವವಿದ್ಯಾನಿಲಯದ 21ನೇ ಘಟಿಕೋತ್ಸವದಲ್ಲಿ ಗೌರವ ಡಾಕ್ಟರೇಟ್‌ಗೆ ಭಾಜನರಾದ ಮೈಸೂರಿನ ವಿಜಯನಗರ ಯೋಗಾನರಸಿಂಹಸ್ವಾಮಿ ದೇವಸ್ಥಾನದ ಸಂಸ್ಥಾಪಕರಾದ ಡಾ.ಭಾಷ್ಯಂ ಸ್ವಾಮೀಜಿ ಅವರನ್ನು ಅಖಿಲ ಕರ್ನಾಟಕ ಬ್ರಾಹ್ಮಣ ಮಹಾಸಭಾ ಜಿಲ್ಲಾ ಪ್ರತಿನಿಧಿ ಡಾ.ಕೆ.ವಿ.ಲಕ್ಷ್ಮೀದೇವಿ, ರಾಜ್ಯ ಸಂಘಟನಾ ಕಾರ್ಯದರ್ಶಿ ನಂ.ಶ್ರೀಕಂಠಕುಮಾರ್ ಅಭಿನಂದಿಸಿದರು. ದೇವಸ್ಥಾನದ ಆಡಳಿತಾಧಿಕಾರಿ ಶ್ರೀನಿವಾಸನ್, ಮಹಾಸಭಾ ರಾಜ್ಯ ಕಾರ್ಯಕಾರಿ ಸಮಿತಿ ಸದಸ್ಯರಾದ ಎಂ.ಆರ್.ಬಾಲಕೃಷ್ಣ, ಕಲ್ಕೆರೆ ನಾಗರಾಜ್, ಟಿ.ಎಸ್.ಅರುಣ್, ಮುಖಂಡರಾದ ಶ್ರೀನಿವಾಸ್‌ಪ್ರಸಾದ್, ರಾಜೇಶ್ ಬೋರೆ, ವನಜಾ ಇತರರಿದ್ದರು.

# ಮಡಿವಾಳ ಸಮುದಾಯದ ಶಿಕ್ಷಣ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ 500 ಕೋಟಿ ಮೀಸಲಿಡಿ

## ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘ ಆಗ್ರಹ

ಮೈಸೂರು,ಫೆ.3(ಜಿಎ)– ಮಡಿವಾಳ ಸಮುದಾಯದ ಶಿಕ್ಷಣ, ಸಾಮಾಜಿಕ, ಆರ್ಥಿಕ ಅಭಿವೃದ್ಧಿಗಾಗಿ ಸರ್ಕಾರ ಈ ಬಾರಿಯ ಬಜೆಟ್‌ನಲ್ಲಿ 500 ಕೋಟಿ ಮೀಸಲಿರಿಸಬೇಕೆಂದು ಮೈಸೂರು ಜಿಲ್ಲಾ ವೀರ ಮಡಿವಾಳ ಸಂಘ ಆಗ್ರಹಿಸಿದೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಸಂಘದ ಗೌರವಾಧ್ಯಕ್ಷ ಬಿ.ಜಿ.ಕೇಶವ ಮಾತನಾಡಿ, ಮಡಿವಾಳ ಸಮುದಾಯ ಎಲ್ಲಾ ರೀತಿಯಲ್ಲೂ ಹಿಂದುಳಿದಿದೆ. ಆದರೂ ಆಡಳಿತ ನಡೆಸುವ ಯಾವುದೇ ಸರ್ಕಾರ ಸಮುದಾಯವನ್ನು ಮುಖ್ಯವಾಹಿನಿಗೆ ತರಲು ಗಂಭೀರ ಯತ್ನ ನಡೆಸಲಿಲ್ಲ. ಸಮುದಾಯ ಸಂಘಟಿತವಾಗದಿರುವುದೇ ಇದಕ್ಕೆ ಪ್ರಮುಖ ಕಾರಣವಾಗಿದೆ ಎಂದು ವಿಷಾದಿಸಿದರು.

ಈ ಬಾರಿಯಾದರೂ ಸಿಎಂ ಸಿದ್ದರಾಮಯ್ಯರ ಸರ್ಕಾರ ಈ ಸಮುದಾಯದ ಅಭಿವೃದ್ಧಿಗಾಗಿ ಮಡಿವಾಳ ಮಾಚಿದೇವ ಅಭಿವೃದ್ಧಿ ನಿಗಮಕ್ಕೆ 500 ಕೋಟಿ ರೂ. ಮೀಸಲಿರಿಸಬೇಕು, ಪ್ರತಿ ಜಿಲ್ಲೆಯಲ್ಲಿ 5 ಕೋಟಿ ವೆಚ್ಚದಲ್ಲಿ, ತಾಲೂಕಿನಲ್ಲಿ 3 ಕೋಟಿ ವೆಚ್ಚದಲ್ಲಿ ಸಮುದಾಯ ಭವನ ನಿರ್ಮಿಸಿಕೊಡಬೇಕು ಎಂದು ಕೋರಿದರು. ಗೋಷ್ಠಿಯಲ್ಲಿ ಜಿಲ್ಲಾಧ್ಯಕ್ಷ ಸತ್ಯನಾರಾಯಣ, ಕುಮಾರ್ ಸಿದ್ದನಕೊಪ್ಪಲು, ಹರ್ಷವರ್ಧನ್, ರವಿ ಚೆಲ್ಲುಂದ, ರವಿ, ಕೆಂಪಶೆಟ್ಟಿ, ಡಾ.ಚಂದ್ರು, ಕೆ.ರಘು, ಶ್ರೀರಾಮ, ಕೆ.ಮಹದೇವಶೆಟ್ಟಿ ಮತ್ತಿತರರು ಉಪಸ್ಥಿತರಿದ್ದರು.

# ಫೆ.8, ಶಿವದೀಪೋತ್ಸವ ಕಾರ್ಯಕ್ರಮ



ಮೈಸೂರು,ಫೆ.3–ಮೈಸೂರಿನ ನೇಗಿಲ ಯೋಗಿ ಸಮಾಜ ಸೇವಾ ಟ್ರಸ್ಟ್, ಕನ್ನೇಗೌಡನಕೊಪ್ಪಲು ಮರುಳೇಶ್ವರ ದೇವಸ್ಥಾನದ ಧರ್ಮದರ್ಶಿ ಟ್ರಸ್ಟ್ ಹಾಗೂ ನೇಗಿಲಯೋಗಿ ಮಹಿಳೆಯರ ಹಿತೈಷಿಗಳ ಸೇವಾ ಬಳಗದ ಸಂಯುಕ್ತ ಆಶ್ರಯದಲ್ಲಿ ಶಿವದೀಪೋತ್ಸವ 2026 ಕಾರ್ಯಕ್ರಮವನ್ನು ಶಿವರಾತ್ರಿ ಅಂಗವಾಗಿ ಶಿವರಾತ್ರಿ ಹಬ್ಬದಂದು ಅಹೋರಾತ್ರಿ ವಿವಿಧ ಸಾಂಸ್ಕೃತಿಕ ಮತ್ತು ಧಾರ್ಮಿಕ ಕಾರ್ಯಕ್ರಮವನ್ನು ಕೆ.ಜಿ ಕೊಪ್ಪಲಿನ ಮರುಳೇಶ್ವರ ದೇವಸ್ಥಾನದ ಆವರಣದಲ್ಲಿ ಹಮ್ಮಿಕೊಳ್ಳಲಾಗಿದೆ.

ಶಿವದೀಪೋತ್ಸವದ 2026ರ ಅಂಗವಾಗಿ ಫೆ.8ರ ಭಾನುವಾರ ಬೆಳಿಗ್ಗೆ 10 ಗಂಟೆಗೆ ಶಿವನಿಗೆ ಸಂಬಂಧಿಸಿದ ಭಕ್ತಿಗೀತೆ ಸ್ಪರ್ಧೆ, 10 ವರ್ಷಕ್ಕಿಂತ ಕೆಳಗೆ, 11ರಿಂದ 15 ವರ್ಷ, 16ರಿಂದ 24 ವರ್ಷ, 24 ವರ್ಷಕ್ಕಿಂತ ಮೇಲ್ಪಟ್ಟವರಿಗೆ ಹಾಗೂ ರಂಗಗೀತೆ, ಸಮೂಹ ಭಕ್ತಿಗೀತೆ ಸ್ಪರ್ಧೆಗಳನ್ನು ಆಯೋಜಿಸಲಾಗಿದೆ (ವಯೋಮಿತಿ ಇರುವುದಿಲ್ಲ) ಈ ಸ್ಪರ್ಧೆಯ ವಿಜೇತರಿಗೆ ಶಿವರಾತ್ರಿ ಹಬ್ಬದಂದು ನಡೆಯುವ ಕಾರ್ಯಕ್ರಮದಲ್ಲಿ ಗಣ್ಯರಿಂದ ಬಹುಮಾನ ವಿತರಿಸಲಾಗುವುದು ಮತ್ತು ವಿಜೇತರಿಗೆ ಶಿವರಾತ್ರಿಯಂದು ನಡೆಯುವ ವೇದಿಕೆ ಕಾರ್ಯಕ್ರಮದಲ್ಲಿ ಹಾಡುವ ಅವಕಾಶ ಕಲ್ಪಿಸಲಾಗುವುದು.

ಆಸಕ್ತ ಸ್ಪರ್ಧಾಳುಗಳು ಹೆಚ್ಚಿನ ಮಾಹಿತಿಗಾಗಿ ನೇಗಿಲಯೋಗಿ ಮರುಳೇಶ್ವರ ಸೇವಾ ಭವನ, ಹೊಸ ಕೋರ್ಟ್ ಎದುರು, ಜಯನಗರ/ ಕೆ.ಜಿ ಕೊಪ್ಪಲು, ಮೈಸೂರು ಇಲ್ಲಿಗೆ ಕಚೇರಿ ಸಮಯದಲ್ಲಿ ಭೇಟಿ ನೀಡುವುದು ಅಥವಾ ಮೊಬೈಲ್ ಸಂಖ್ಯೆ 9741731955, 8296791429, 9483453005, 9900629393 ಸಂಪರ್ಕಿಸಲು ಕೋರಲಾಗಿದೆ.

## ನಿಧನ



**ಶ್ರೀಮತಿ ಗಜಲಕ್ಷ್ಮಿ**

ಮೈಸೂರು, ಫೆ. 3– ಮೈಸೂರಿನ ಸಾತಗಳ್ಳಿ ನಿವಾಸಿ ದಿವಂಗತ ಸುಂದರ್‌ರಾಜ್ ಅವರ ಪತ್ನಿ ಶ್ರೀಮತಿ ಗಜಲಕ್ಷ್ಮಿ (78) ಮಂಗಳವಾರ ಬೆಳಿಗ್ಗೆ ವಯೋಸಹಜ ಕಾಯಿಲೆಯಿಂದ ನಿಧನರಾದರು. ಮೃತರು ನಾಲ್ವರು ಪುತ್ರಿಯರು, ಇಬ್ಬರು ಪುತ್ರರು, ಮೊಮ್ಮಕ್ಕಳು ಮತ್ತು ಅಪಾರ ಬಂಧುಗಳು, ಸ್ನೇಹಿತರು ಹಾಗೂ ಹಿತೈಷಿಗಳನ್ನು ಅಗಲಿದ್ದಾರೆ. ಇವರ ಅಂತ್ಯಕ್ರಿಯೆ ಚಾಮುಂಡಿಬೆಟ್ಟದ ತಪ್ಪಲಿನಲ್ಲಿರುವ ರುದ್ರಭೂಮಿಯಲ್ಲಿ ನೆರವೇರಿಸಲಾಯಿತು ಎಂದು ಕುಟುಂಬದ ಮೂಲಗಳು ತಿಳಿಸಿವೆ.

# ಪ್ರಾಣಿ–ಪಕ್ಷಿ ಸಂಕುಲ ಸಂರಕ್ಷಣೆ ಜೊತೆಗೆ ಮಾನವನ ಹಿತ ಸಾಧನೆಗೂ ಜೌಗುಪ್ರದೇಶ ಸಂರಕ್ಷಣೆ ಅವಶ್ಯ

## ಸೆಸ್ಕ್ ಅಧ್ಯಕ್ಷರೂ ಆದ ಶಾಸಕ ರಮೇಶ್ ಬಂಡಿಸಿದ್ದೇಗೌಡ ಪ್ರತಿಪಾದನೆ





ಅರಣ್ಯ ಇಲಾಖೆಯ ಮೈಸೂರು ವನ್ಯಜೀವಿ ವಿಭಾಗವು ರಂಗನತಿಟ್ಟು ಪಕ್ಷಿಧಾಮದಲ್ಲಿ ಆಯೋಜಿಸಿದ್ದ ವಿಶ್ವ ಜೌಗು ಪ್ರದೇಶ ದಿನಾಚರಣೆ ಕಾರ್ಯಕ್ರಮಕ್ಕೆ ಶ್ರೀರಂಗಪಟ್ಟಣ ಶಾಸಕ ಎ.ಬಿ.ರಮೇಶ್‌ಬಾಬು ಬಂಡಿಸಿದ್ದೇಗೌಡ ಚಾಲನೆ ನೀಡಿದರು. ಕಾರ್ಯಕ್ರಮದಲ್ಲಿ ಶಾಲಾ ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಮೈಸೂರು, ಫೆ.3(ಎಂಟಿವೈ)–ವಿಶ್ವ ಜೌಗು ಪ್ರದೇಶ ದಿನದ ಅಂಗವಾಗಿ ಅರಣ್ಯ ಇಲಾಖೆಯ ಮೈಸೂರು ವನ್ಯಜೀವಿ ವಿಭಾಗ ರಂಗನತಿಟ್ಟು ಪಕ್ಷಿಧಾಮದಲ್ಲಿ ಆಯೋಜಿಸಿದ್ದ ಕಾರ್ಯಕ್ರಮದಲ್ಲಿ ವಿವಿಧ ಶಾಲೆಗಳ ವಿದ್ಯಾರ್ಥಿಗಳು ಪಾಲ್ಗೊಂಡು ಜೌಗು ಪ್ರದೇಶದ ಮಹತ್ವ ಹಾಗೂ ವಿವಿಧ ಪ್ರಾಣಿ–ಪಕ್ಷಿಗಳ ಜೀವ ವೈವಿಧ್ಯತೆ ಬಗ್ಗೆ ಮಾಹಿತಿ ಪಡೆದರು.

ಅರಣ್ಯ ಇಲಾಖೆಯ ಮೈಸೂರು ವನ್ಯಜೀವಿ ವಿಭಾಗ ಆಯೋಜಿಸಿದ್ದ 'ವಿಶ್ವ ಜೌಗು ಪ್ರದೇಶ(ವೆಟ್‌ಲ್ಯಾಂಡ್) ದಿನಾಚರಣೆ'ಯನ್ನು ಶಾಸಕ, ಚಾಮುಂಡೇಶ್ವರಿ ವಿದ್ಯುತ್ ನಿಗಮ ನಿಯಮಿತ ಅಧ್ಯಕ್ಷ ಎ.ಬಿ. ರಮೇಶ್ ಬಂಡಿಸಿದ್ದೇಗೌಡ ಉದ್ಘಾಟಿಸಿ ಮಾತನಾಡಿ, ಕಾವೇರಿ ನದಿ ಪಾತ್ರದಲ್ಲಿ ಜೌಗು ಪ್ರದೇಶ ಸೃಷ್ಟಿಯಾಗಿದ್ದು, ಹಲವು ಪ್ರಭೇದದ ಪಕ್ಷಿಗಳು ಹಾಗೂ ಜಲಚರಗಳು, ಕೀಟಗಳು ಇದನ್ನು ಆಶ್ರಯಿಸಿವೆ. ಅಲ್ಲದೆ, ವನ್ಯಜೀವಿಗಳು ಸಹ ನೀರಿಗೆ ಜೌಗು ಪ್ರದೇಶವನ್ನು ಅವಲಂಭಿಸಿವೆ. ಈ ಎಲ್ಲಾ ಬಗೆಯ ಪ್ರಾಣಿ–ಪಕ್ಷಿ ಸಂಕುಲ, ಜಲಚರ, ಕೀಟ ಸಂಕುಲದಿಂದ ಪರಿಸರ ಸಮತೋಲನ ಕಾಪಾಡಿಕೊಳ್ಳಲಾಗುತ್ತಿದೆ. ಈ ಜೀವ ವೈವಿಧ್ಯತೆಯನ್ನು ಕಾಪಾಡಿಕೊಂಡು ಹೋಗುವ ಜವಾಬ್ದಾರಿ ನಮ್ಮೆಲ್ಲರದ್ದಾಗಿದೆ ಎಂದು ಅಭಿಪ್ರಾಯಪಟ್ಟರು.

ಪರಿಶುದ್ಧವಾಗಿದ್ದ ಕಾವೇರಿ ನದಿಗೆ ವಿವಿಧೆಡೆಯಿಂದ ಕಲುಷಿತ ನೀರು, ತ್ಯಾಜ್ಯಗಳು ಸೇರುತ್ತಿದ್ದರೂ, ನದಿಯಲ್ಲಿರುವ ಜಲಚರಗಳು, ಸಸ್ಯ ಸಂಕುಲ ನೀರಿನಲ್ಲಿರುವ ಕಲ್ಮಶವನ್ನು ನಿಷ್ಕ್ರಿಯಗೊಳಿಸಿ ನದಿ ನೀರನ್ನು ಶುದ್ಧಗೊಳಿಸುತ್ತಿವೆ. ಆ ಮೂಲಕ ಜನರಿಗೆ ಶುದ್ಧ ನೀರು ಪೂರೈಕೆಯಾಗುವಂತೆ ಜಲಚರ, ಸಸ್ಯ ಸಂಕುಲ ಮಹತ್ತರ ಜವಾಬ್ದಾರಿ ನಿಭಾಯಿಸುತ್ತಿವೆ. ಇದನ್ನು ಮನಗಂಡು ನಮ್ಮ ಆರೋಗ್ಯ ಕಾಪಾಡಿಕೊಳ್ಳುವುದರೊಂದಿಗೆ ಮುಂದಿನ ಪೀಳಿಗೆ ಆರೋಗ್ಯವಂತರಾಗಲು ಪರಿಸರ, ಜಲ ಮಾಲಿನ್ಯ ತಡೆಗಟ್ಟಲು ಎಲ್ಲರೂ ಪ್ರಾಮಾಣಿಕ ಪ್ರಯತ್ನ ಮಾಡಬೇಕು. ಜೌಗು ಪ್ರದೇಶದ ಸಂರಕ್ಷಣೆಗೆ ಕ್ರಮ ಕೈಗೊಳ್ಳಬೇಕು ಎಂದರು.

ಡಬ್ಲ್ಯೂಡಬ್ಲ್ಯೂಎಫ್ ಇಂಡಿಯಾ ಸಂಸ್ಥೆಯ ಅಸೋಸಿಯೇಟ್ ಕೋ ಆರ್ಡಿನೇಟರ್ ವೆಟ್‌ಲ್ಯಾಂಡ್ ಶಶಿಕಲಾ ಮಾತನಾಡಿ, ವಿಶ್ವ ಜೌಗುಪ್ರದೇಶ ದಿನಾಚರಣೆ ಮಹತ್ವ ಜೌಗು ಪ್ರದೇಶದ ಪಾತ್ರ, ಜಲಚರ, ಸಸ್ಯಸಂಕುಲದ ಮಹತ್ವ ಸೇರಿದಂತೆ ವಿವಿಧ ವಿಷಯಗಳ ಬಗ್ಗೆ ವಿವರಿಸಿದರು.

ಮೈಸೂರು ವನ್ಯಜೀವಿ ವಿಭಾಗದ ಡಿಸಿಎಫ್ ಡಾ.ಐ.ಬಿ.ಪ್ರಭುಗೌಡ ಮಾತನಾಡಿ, ಪ್ರಸಕ್ತ ಸಾಲಿನ 'ವಿಶ್ವ ಜೌಗು ಪ್ರದೇಶ ದಿನಾಚರಣೆ'ಯನ್ನು 'ತೇವಭೂಮಿ ಮತ್ತು ಸಾಂಪ್ರದಾಯಿಕ ಜ್ಞಾನ; ಸಾಂಸ್ಕೃತಿಕ ಪರಂಪರೆ ಆಚರಣೆ ಕುರಿತಂತೆ ಆಚರಿಸಲಾಗುತ್ತಿದೆ. ಶ್ರೀರಂಗಪಟ್ಟಣ ತಾಲೂಕಿನಲ್ಲಿರುವ ರಂಗನತಿಟ್ಟು ಪಕ್ಷಿಧಾಮವು ರಾಮಸರ್ ಪಟ್ಟಿಗೆ ಸೇರಿರುವ ರಾಜ್ಯದ ಮೊದಲ ಪಕ್ಷಿಧಾಮವಾಗಿದೆ. ಈ ಪಕ್ಷಿಧಾಮದಲ್ಲಿ ವಲಸೆ ಪಕ್ಷಿಗಳು ಆಗಮಿಸುತ್ತಿದ್ದು, ಪ್ರವಾಸಿಗರಿಗೆ ಮುದ ನೀಡುತ್ತಿವೆ. ಫೆಲಿಕಾನ್, ಪೇಂಟೆಡ್ ಸ್ಟಾರ್ಕ್, ಓಪನ್ ಬಿಲ್ ಸ್ಟಾಕ್, ಡಾರ್ಟರ್, ಹೆರಾನ್ ಸೇರಿದಂತೆ ಇನ್ನಿತರ ವಲಸೆ ಪಕ್ಷಿಗಳು ಬಂದು ಸಂತಾನೋತ್ಪತ್ತಿ ಮಾಡುವ ಪರಿಪಾಠ ಹೊಂದಿವೆ. ಕಾವೇರಿ ನದಿ ಪಾತ್ರದಲ್ಲಿರುವ ಈ ಜೌಗು ಪ್ರದೇಶ ಕಾವೇರಿ ನದಿಯ ಜೀವಾಳವೂ ಆಗಿದೆ. ಅನೇಕ ಪಕ್ಷಿ, ಜಲಚರ, ಸಸ್ಯಸಂಕುಲಕ್ಕೂ ಆಶ್ರಯ ನೀಡಿದೆ. ವಿಶ್ವ ಜೌಗು ಪ್ರದೇಶ ದಿನಾಚರಣೆ ಹಿನ್ನೆಲೆಯಲ್ಲಿ ಶಾಲಾ ಮಕ್ಕಳಿಗೆ ಜೌಗು ಪ್ರದೇಶದ ಮಹತ್ವ ವಿವರಿಸುವ ನಿಟ್ಟಿನಲ್ಲಿ ಕಾರ್ಯಕ್ರಮ ಆಯೋಜಿಸಲಾಗಿದೆ ಎಂದರು.

**ವಿವಿಧ ಚಟುವಟಿಕೆ:** ಕಾರ್ಯಕ್ರಮದ ಅಂಗವಾಗಿ ಶಾಲಾ ಮಕ್ಕಳಿಗೆ ಜೌಗು ಪ್ರದೇಶ ಸಂರಕ್ಷಣೆಯ ಪ್ರತಿಜ್ಞಾ ವಿಧಿ ಬೋಧಿಸಲಾಯಿತು. ಅಲ್ಲದೆ, ಪ್ರಕೃತಿ ನಡಿಗೆಯಲ್ಲಿ ಪಕ್ಷಿ ವೀಕ್ಷಣೆ, ನೀರಿನ ಮಹತ್ವ ಮನವರಿಕೆ ಮಾಡಿಕೊಡಲು ಹಾವು–ಏಣಿ ಆಟ, ಚಿತ್ರ ಜೋಡಣೆ, ದೋಣಿ ವಿಹಾರ ಹಾಗೂ ಸಂವಾದ ಕಾರ್ಯಕ್ರಮ ಏರ್ಪಡಿಸಲಾಗಿತ್ತು. ರಸಪ್ರಶ್ನೆಯಲ್ಲಿ ವಿಜೇತರಾದ ವಿದ್ಯಾರ್ಥಿಗಳಿಗೆ ಬಹುಮಾನ ವಿತರಿಸಲಾಯಿತು. ಈ ಸಂದರ್ಭದಲ್ಲಿ ಆರ್‌ಎಫ್‌ಓ ನದೀಮ್ ಸೇರಿದಂತೆ ಇನ್ನಿತರರು ಪಾಲ್ಗೊಂಡಿದ್ದರು.

# ಪತ್ರಿಕಾ ರಂಗದಲ್ಲಿ ಮಹಿಳೆಯರ ಸಂಖ್ಯೆ ಹೆಚ್ಚಾಗಬೇಕು

## ಪತ್ರಕರ್ತೆ ಅಶ್ವಿನಿ ಎಂ.ಶ್ರೀಪಾದ್ ಅಭಿಮತ



ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನಲ್ಲಿ ನಡೆದ ಹಿರಿಯ ಸ್ವಾತಂತ್ರ್ಯ ಯೋಧ ಮತ್ತು ಪತ್ರಕರ್ತ ಖಾದ್ರಿ ಶಾಮಣ್ಣ ಅವರ ಜನ್ಮ ಶತಮಾನೋತ್ಸವ ಸಮಾರಂಭಕ್ಕೆ ಅಸ್ಸಾಂನ ಸಿಲ್ಚಾರ್ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಸಮ ಕುಲಪತಿ ಪ್ರೊ.ಕೆ.ವಿ.ನಾಗರಾಜ್ ಚಾಲನೆ ನೀಡಿದರು.

ಮೈಸೂರು,ಫೆ.3(ಎಂಟಿವೈ)–ಪತ್ರಿಕೋದ್ಯಮ ಕ್ಷೇತ್ರಕ್ಕೆ ಹೆಚ್ಚಿನ ಸಂಖ್ಯೆಯಲ್ಲಿ ಮಹಿಳಾ ಪತ್ರಕರ್ತರು ಪಾದಾರ್ಪಣೆ ಮಾಡುವುದರೊಂದಿಗೆ ರಾಜಕೀಯ ವರದಿಗಾರಿಕೆಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಪತ್ರಕರ್ತೆ ಅಶ್ವಿನಿ ಎಂ.ಶ್ರೀಪಾದ್ ಸಲಹೆ ನೀಡಿದರು.

ಮೈಸೂರಿನ ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪತ್ರಿಕೋದ್ಯಮ ವಿಭಾಗ ಹಾಗೂ ಮೇಲುಕೋಟೆಯ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ವತಿಯಿಂದ ಕಾಲೇಜಿನ ಸಭಾಂಗಣದಲ್ಲಿ ನಡೆದ ಹಿರಿಯ ಸ್ವಾತಂತ್ರ್ಯ ಯೋಧ, ಹಿರಿಯ ಪತ್ರಕರ್ತ ಖಾದ್ರಿ ಶಾಮಣ್ಣ ಅವರ ಜನ್ಮ ಶತಮಾನೋತ್ಸವ ಸಮಾರಂಭದಲ್ಲಿ 'ಮಹಿಳಾ ಪತ್ರಕರ್ತರ ದೃಷ್ಟಿಯಲ್ಲಿ ಮಾಧ್ಯಮ' ಕುರಿತು ಮಾತನಾಡಿದ ಅವರು, ಈ ಹಿಂದೆ ಮಹಿಳಾ ಪತ್ರ ಕರ್ತರು ಹಲವು ಸವಾಲುಗಳನ್ನು ಎದುರಿಸಬೇಕಾದ ಅನಿವಾರ್ಯತೆ ಇತ್ತು. ಆದರೆ, ಈಗ ಆ ಎಲ್ಲಾ ಸಮಸ್ಯೆ ನಿವಾರಣೆಯಾಗಿದೆ. ಮಹಿಳೆಯರು ಹೆಚ್ಚಿನ ಸಂಖ್ಯೆಯಲ್ಲಿ ಮಾಧ್ಯಮದಲ್ಲಿ ಇದ್ದಾರೆ. ಈ ಸಂಖ್ಯೆ ಇನ್ನಷ್ಟು ವೃದ್ಧಿಯಾಗಬೇಕು. ಅಲ್ಲದೆ, ರಾಜಕೀಯ ವರದಿಗಾರಿಕೆಯಲ್ಲಿ ಹೆಚ್ಚಾಗಿ ತೊಡಗಿಸಿಕೊಳ್ಳಬೇಕು ಎಂದರು.

ಸಾಮಾಜಿಕ ಜಾಲತಾಣಗಳಲ್ಲಿ ರೀಲ್ಸ್, ವಾಟ್ಸಪ್‌ನಲ್ಲಿ ಬರುವುದೆಲ್ಲವೂ ಸುದ್ದಿಯಲ್ಲ. ಅವುಗಳಲ್ಲಿ ಹೆಚ್ಚಿನವು ಅವರ ಅಭಿಪ್ರಾಯಗಳಾಗಿರುತ್ತವೆ. ಈ ಹಿನ್ನೆಲೆಯಲ್ಲಿ ಅವುಗಳನ್ನು ಪರಾಮರ್ಶಿಸಬೇಕು. ಸುದ್ದಿಯನ್ನು ಸುದ್ದಿಯ ಹಾಗೇ ಬರೆಯಬೇಕು. ಮಹಿಳಾ ಪತ್ರಕರ್ತರು ಸಮಸ್ಯೆಯನ್ನು ಸಮಸ್ಯೆಯನ್ನಾಗಿಯೇ ನೋಡುತ್ತಾರೆ. ಅವರು ಸುದ್ದಿಯನ್ನು ನೋಡುವ ಬಗೆಯೂ ಸ್ವಲ್ಪ ಭಿನ್ನ. ಯಾವುದೇ ಒಂದು ವಿಷಯದ ಬಗ್ಗೆ ಬರೆಯಲು ಕುಳಿತಾಗ ಅದರಲ್ಲಿರುವ ಮಾನವೀಯ ದೃಷ್ಟಿಕೋನವು ಮಹಿಳೆ ಪತ್ರಕರ್ತರಿಗೆ ಹೆಚ್ಚು ಕಾಣುತ್ತದೆ ಎಂದು ಪ್ರಶ್ನೆಯೊಂದಕ್ಕೆ ಪ್ರತಿಕ್ರಿಯಿಸಿದರು.

ಅಸ್ಸಾಂನ ಸಿಲ್ಚಾರ್ ಕೇಂದ್ರೀಯ ವಿಶ್ವವಿದ್ಯಾನಿಲಯದ ವಿಶ್ರಾಂತ ಸಮ ಕುಲಪತಿ ಪ್ರೊ.ಕೆ.ವಿ.ನಾಗರಾಜ್ ಕಾರ್ಯಕ್ರಮವನ್ನು ಉದ್ಘಾಟಿಸಿ ಮಾತನಾಡಿ, ಖಾದ್ರಿ ಶಾಮಣ್ಣನವರ ಬದುಕು, ಬರಹವನ್ನು ವಿವರಿಸಿದರು. ಖಾದ್ರಿ ಶಾಮಣ್ಣನವರಿಗೆ ಸಂಸ್ಕೃತದ ಹಿನ್ನೆಲೆಯಿದ್ದ ಕಾರಣಕ್ಕೆ ಕನ್ನಡ ಭಾಷೆಯ ಮೇಲೆ ಪ್ರಭುತ್ವವಿತ್ತು. ಖಾದ್ರಿ ಶಾಮಣ್ಣನವರ ಸಂಪಾದಕೀಯ ಬರಹಗಳನ್ನು ವಿದ್ಯಾರ್ಥಿಗಳು ಓದಬೇಕು ಎಂದರು. ಮಹಾರಾಣಿ ಮಹಿಳಾ ಕಲಾ ಕಾಲೇಜಿನ ಪ್ರಾಂಶುಪಾಲರಾದ ಪ್ರೊ.ಎಂ.ಎಸ್.ಅನಿತಾ ಮಾತನಾಡಿದರು. ಕಾರ್ಯಕ್ರಮದಲ್ಲಿ ಖಾದ್ರಿ ಶಾಮಣ್ಣ ಸ್ಮಾರಕ ಟ್ರಸ್ಟ್ ಅಧ್ಯಕ್ಷ, ಹಿರಿಯ ಪತ್ರಕರ್ತ ಹೆಚ್.ಆರ್.ಶ್ರೀಶ, ಹಿರಿಯ ಪತ್ರಕರ್ತ ಡಾ. ಕೂಡ್ಲಿ ಗುರುರಾಜ, ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥೆ ಡಾ.ಅಶ್ವಿನಿ, ಅತಿಥಿ ಉಪನ್ಯಾಸಕರಾದ ಡಾ.ಕುಮಾರಸ್ವಾಮಿ, ರಶ್ಮಿ ಇದ್ದರು.

# ಇಂದು ಮಾರಿಷಿಯಸ್‌ನಲ್ಲಿ ಜೆಎಸ್‌ಎಸ್ ಸ್ಕೂಲ್ ಆಫ್ ಮೆಡಿಸಿನ್ ಉದ್ಘಾಟನೆ

ಮೈಸೂರು,ಫೆ.3–ನಾಳೆ (ಫೆ.4) ಮಾರಿಷಿಯಸ್‌ನಲ್ಲಿ ಜೆಎಸ್‌ಎಸ್ ಸ್ಕೂಲ್ ಆಫ್ ಮೆಡಿಸಿನ್ ಅನ್ನು ಶ್ರೀ ಶಿವರಾತ್ರಿ ದೇಶಿಕೇಂದ್ರ ಸ್ವಾಮೀಜಿ ದಿವ್ಯ ಸಾನ್ನಿಧ್ಯದಲ್ಲಿ ಮಾರಿಷಿಯಸ್ ಗಣರಾಜ್ಯದ ಅಧ್ಯಕ್ಷ ಧರ್ಮಬೀರ್ ಗೋಕುಲ್ ಉದ್ಘಾಟಿಸಲಿದ್ದಾರೆ.

ಮಾರಿಷಿಯಸ್‌ನ ಪ್ರಾದೇಶಿಕ ಶಿಕ್ಷಣ, ವಿಜ್ಞಾನ–ಸಂಶೋಧನಾ ಸಚಿವ ಕವಿರಾಜ್ ಶರ್ಮಾ ಸುಕೋನ್, ಆರೋಗ್ಯ–ಕಲ್ಯಾಣ ಸಚಿವ ಅನಿಲ್‌ಕುಮಾರ್ ಬಚೂ, ಮಾರಿಷಿಯಸ್‌ನಲ್ಲಿ ಭಾರತದ ಹೈಕಮಿಷನರ್ ಅನುರಾಗ್ ಶ್ರೀವಾತ್ಸವ್ ವಿಶೇಷ ಆಹ್ವಾನಿತರಾಗಿರುವರು. ಜೆಎಸ್‌ಎಸ್ ಮಹಾವಿದ್ಯಾಪೀಠದ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಸಿ.ಜಿ.ಬೆಟಸೂರಮಠ, ಕಾರ್ಯದರ್ಶಿ ಎಸ್.ಪಿ.ಮಂಜುನಾಥ್, ಜೆಎಸ್‌ಎಸ್ ಎಹೆಚ್‌ಇಆರ್‌ನ ಸಮ ಕುಲಾಧಿಪತಿ ಡಾ.ಸುರೇಶ್ ಭೋಜರಾಜ್ ಮತ್ತಿತರರು ಭಾಗವಹಿಸಲಿದ್ದಾರೆ. ಜೆಎಸ್‌ಎಸ್ ಸ್ಕೂಲ್ ಆಫ್ ಮೆಡಿಸಿನ್ ಅನ್ನು ಮಾರಿಷಿಯಸ್ ಸರ್ಕಾರದ ಅನುಮತಿಯೊಂದಿಗೆ ಈ ವರ್ಷದಿಂದ ಪ್ರಾರಂಭಿಸಲಾಗಿದೆ. ಆಸಕ್ತಿಯುಳ್ಳ ವಿದ್ಯಾರ್ಥಿಗಳು ಪ್ರವೇಶಾತಿ ಪಡೆಯಬಹುದಾಗಿರುತ್ತದೆ.

# ಮೈಸೂರು ಹಾಗೂ ಸುತ್ತಮುತ್ತ ಇಂದು...



## ಇಂದಿನ ಪಂಚಾಂಗ

4.2.2026 ಬುಧವಾರ, ಮಳೆ ನಕ್ಷತ್ರ: ಶ್ರವಣ 24.01.2026ರಿಂದ 05.02.2026
ವಿಶ್ವಾವಸು ನಾಮ ಸಂವತ್ಸರ, ಉತ್ತರಾಯಣ, ಶಿಶಿರ ಋತು, ಮಾಘ ಮಾಸ, ಕೃಷ್ಣ ಪಕ್ಷ,
ತಿಥಿ: ತದಿಗೆ, ನಕ್ಷತ್ರ: ಪುಬ್ಬ, ರಾಹುಕಾಲ: ಮಧ್ಯಾಹ್ನ 12ರಿಂದ 1.30ರವರೆಗೆ

- **ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ :** ಮೈಗ್ರೇನ್ ಹಾಗೂ ಕಣ್ಣು–ಮೂಗಿನ ಅಲರ್ಜಿ ಚಿಕಿತ್ಸಾ ಶಿಬಿರ, ಸ್ಥಳ: ಜೆಎಸ್‌ಎಸ್ ಆಯುರ್ವೇದ ಆಸ್ಪತ್ರೆ, ಆಲನಹಳ್ಳಿ, ಬೆಳಗ್ಗೆ 9.30 ರಿಂದ.
- **ಕಾವೇರಿ ಆಯುರ್ವೇದ ಆಸ್ಪತ್ರೆ :** ಮಕ್ಕಳಲ್ಲಿ ಕಂಡುಬರುವ ಸೆರೆಬ್ರಲ್ ಪಾಲ್ಸಿ ಹಾಗೂ ಕುಂಠಿತ ಬೆಳವಣಿಗೆ ಕುರಿತು ಉಚಿತ ತಪಾಸಣೆ ಮತ್ತು ಚಿಕಿತ್ಸಾ ಶಿಬಿರ, ಸ್ಥಳ: ಕಾವೇರಿ ಆಯುರ್ವೇದ ಆಸ್ಪತ್ರೆ, ದೇವೇಗೌಡ ಸರ್ಕಲ್ ಹತ್ತಿರ, ಕೆಬಿಎಲ್ ಲೇಔಟ್. ಬೆಳಗ್ಗೆ 10 ಗಂಟೆಯಿಂದ.
- **ಸುಯೋಗ್ ಆಸ್ಪತ್ರೆ :** ಉಚಿತ ಹೃದ್ರೋಗ ತಪಾಸಣಾ ಶಿಬಿರ, ಸ್ಥಳ: ಸುಯೋಗ್ ಆಸ್ಪತ್ರೆ, ರಾಮಕೃಷ್ಣ ನಗರ, ಬೆಳಗ್ಗೆ 10 ರಿಂದ.
- **ಮಹಾರಾಜ ಕಾಲೇಜು, ಕನ್ನಡ ವಿಭಾಗ ಮತ್ತು ಕನ್ನಡ ಅಧ್ಯಯನ ಮಂಡಳಿ :** ಪದವಿ ಪಠ್ಯರಚನೆ–ಬೋಧನೆ ಪ್ರಶ್ನೆ ಪತ್ರಿಕೆ ತಯಾರಿ ಮತ್ತು ಮೌಲ್ಯಮಾಪನದ ವಿಧಿ ವಿಧಾನಗಳು ಕುರಿತು ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಅಧ್ಯಕ್ಷತೆ : ಕಾಲೇಜು ಪ್ರಿನ್ಸಿಪಾಲ್ ಪ್ರೊ. ವಿ. ಷಣ್ಮುಗಂ, ಉಪಸ್ಥಿತರು : ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕಿ ಪ್ರೊ. ಎನ್.ಕೆ. ಲೋಲಾಕ್ಷಿ, ಎಂಎಂಟಿಟಿಸಿ ನಿರ್ದೇಶಕಿ ಪ್ರೊ. ಎಚ್.ಪಿ. ಜ್ಯೋತಿ, ಕನ್ನಡ ವಿಭಾಗದ ಮುಖ್ಯಸ್ಥೆ ಪ್ರೊ. ಡಿ. ವಿಜಯಲಕ್ಷ್ಮಿ, ಸ್ಥಳ: ಮಾಳವಿಯ ಮಿಷನ್ ಶಿಕ್ಷಕರ ತರಬೇತಿ ಕೇಂದ್ರ, ಮಾನಸಗಂಗೋತ್ರಿ, ಬೆಳಗ್ಗೆ 10ಕ್ಕೆ
- **ಬಾಸುದೇವ ಸೋಮಾನಿ ಕಾಲೇಜು, ಕುವೆಂಪುನಗರ, ಮೈಸೂರು ವಿಶ್ವವಿದ್ಯಾನಿಲಯ ಅರ್ಥಶಾಸ್ತ್ರ ಅಧ್ಯಾಪಕರ ಸಂಘ :** ರಾಜ್ಯ ಶಿಕ್ಷಣ ನೀತಿ ಕುರಿತು ರಾಜ್ಯ ಮಟ್ಟದ ಕಾರ್ಯಾಗಾರ, ಉದ್ಘಾಟನೆ : ಮೈಸೂರು ವಿವಿ ಕುಲಪತಿ ಪ್ರೊ. ಎನ್.ಕೆ. ಲೋಕನಾಥ್, ಮುಖ್ಯ ಅತಿಥಿಗಳು: ಅರ್ಥಶಾಸ್ತ್ರ ಮತ್ತು ಸಹಕಾರ ಅಧ್ಯಯನ ವಿಭಾಗದ ಅಧ್ಯಕ್ಷೆ ಡಾ. ನಮಿತಾ ತಿಮ್ಮಯ್ಯ, ಕಾಲೇಜು ಶಿಕ್ಷಣ ಇಲಾಖೆ ಜಂಟಿ ನಿರ್ದೇಶಕರಾದ ಡಾ. ಡಿ.ಎಸ್. ಪ್ರತಿಮಾ, ಡಾ. ಎಂ. ಪುಟ್ಟಸ್ವಾಮಿ, ಡಾ. ಎಂ. ಮಹೇಶ್, ಅಧ್ಯಕ್ಷತೆ: ಕಾಲೇಜು ಪ್ರಿನ್ಸಿಪಾಲ್ ಡಾ. ಎಂ. ಮಹದೇವಸ್ವಾಮಿ, ಸ್ಥಳ: ಬಾಸುದೇವ ಸೋಮಾನಿ ಕಾಲೇಜು ಆವರಣ, ಬೆಳಗ್ಗೆ 10.30ಕ್ಕೆ.
- **ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ :** ಮಧ್ವ–ಪುರಂದರ ನಮನ, ಫೆ.4 ರಂದು 'ನಾರದಪುರಾಣ ಮತ್ತು ಬ್ರಹ್ಮವೈವರ್ತಪುರಾಣ', ಸ್ಥಳ: ಶಾರದಾ ವಿಲಾಸ ಶತಮಾನೋತ್ಸವ ಭವನ, ಕೃಷ್ಣಮೂರ್ತಿಪುರಂ, ಸಂಜೆ 5 ರಿಂದ
- **ಶ್ರೀ ನಟರಾಜ ಪರ್ಫಾರ್ಮಿಂಗ್ ಆರ್ಟ್ಸ್ ಸೆಂಟರ್ (ಎಸ್‌ಎನ್‌ಪಿಎಸಿ), ಮೈಸೂರು:** ಮಂಜೀರ ಮಹೋತ್ಸವ (ಭಾರತೀಯ ಕಲೆಗಳ ಸಂಭ್ರಮ) ಸಂಜೆ 6 ರಿಂದ ಕು. ನಿಖಿತಾ ಮಂಜುನಾಥ್, ಕು. ವಿ.ಕೆ.ಎಸ್. ಮಧುಮಿತಾ, ಕು. ವಿಯನೀತಾ ರಮೇಶ್, ಡಾ. ಸತ್ಯನಾರಾಯಣ ರಾಜು ಮತ್ತು ಅವರ ಶಿಷ್ಯರಿಂದ ಸ್ವರಿತಾ ಎನ್ಸೆಂಬಲ್ ಅವರಿಂದ ಭರತನಾಟ್ಯ, ಸಂಜೆ 7.30 ರಿಂದ ಬೆಂಗಳೂರಿನ ಪಿ. ಪ್ರವೀಣ್ ಕುಮಾರ್ ಅವರ ಶಿಷ್ಯೆ ವಿದುಷಿ ನವ್ಯಶ್ರೀ ಕೆ.ಎನ್. ಅವರಿಂದ ಭರತನಾಟ್ಯ ಪ್ರದರ್ಶನ, ಸ್ಥಳ: ಗಾನಭಾರತೀ ರಮಾಗೋವಿಂದ ಕಲಾವೇದಿಕೆ, ಕುವೆಂಪುನಗರ.

## ಮೈಸೂರು ಆಕಾಶವಾಣಿ



**ಬೆಳಗ್ಗೆ:** 6.10 ಚಿಂತನ, 6.15 ಗೀತಾರಾಧನ, 6.35 ಮತ್ತು ಸಂಜೆ 6.10 ಅಂಚೆ ದನಿ ಪಾರಿವಾಳದಿಂದ ಡ್ರೋನ್ ವರೆಗೆ ಅಂಚೆ ಪಯಣ – ಬಾನುಲಿ ಸರಣಿ, ಪ್ರಸ್ತುತಿ–ಡಾ. ಅಮ್ಮ ಸಂದ್ರ ಸುರೇಶ್, 6.40 ಅರಿವಿನ ಶಿಖರ–ಸರ್ವಜ್ಞನ ತ್ರಿಪದಿಗಳನ್ನಾಧರಿಸಿದ ಬಾನುಲಿ ಸರಣಿ, ಗಾಯನ–ಕೆ. ಶ್ರೇಯಾ, ವ್ಯಾಖ್ಯಾನ–ಡಾ. ಹೆಚ್.ಎಂ. ಕಲಾಶ್ರೀ, 6.50 ರೈತರಿಗೆ ಸಲಹೆ, 7.15 ಪ್ರಾಯೋಜಿತ ಕಾರ್ಯಕ್ರಮ ಲಿಡ್ಕರ್ ನಂಬಿಕೆ ನಿರಂತರ, ಪ್ರಾಯೋಜಕರು–ಡಾ. ಬಾಬು ಜಗಜೀವನ್ ರಾಮ್ ಚರ್ಮೋದ್ಯಮಗಳ ಅಭಿವೃದ್ಧಿ ನಿಗಮ ನಿಯಮಿತ, ಬೆಂಗಳೂರು, 8.30 ಯುವವಾಣಿ : ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ ದ್ವಿತೀಯ ಪಿ.ಯು.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ. ವಿಷಯ–ಜೀವಶಾಸ್ತ್ರ (Biology), ಭಾಗವಹಿಸುತ್ತಾರೆ–ರವಿಕುಮಾರ್ ಎನ್. ಜೀವಶಾಸ್ತ್ರ ಉಪನ್ಯಾಸಕರು, ಸರ್ಕಾರಿ ಬಾಲಕಿಯರ ಪದವಿಪೂರ್ವ ಕಾಲೇಜು, ಮದ್ದೂರು, ಮಂಡ್ಯಜಿಲ್ಲೆ. ಪ್ರಸ್ತುತಿ– ದಿಗ್ವಿಜಯ್ .ಬಿ, 9.15 ಮನೋನಂದನ–ಪ್ರಾಯೋಜಿತ ಕಾರ್ಯಕ್ರಮ, ಪ್ರಾಯೋಜಕರು ಪ್ರೇರಣಾ ಆಸ್ಪತ್ರೆ ಮತ್ತು ಪ್ರೇರಣಾ ಫರ್ಟಿಲಿಟಿ, ಮೈಸೂರು, 10.00 ಹಿಂದೂಸ್ಥಾನಿ ಶಾಸ್ತ್ರೀಯ ಸಂಗೀತ – ಪಂಡಿತ್ ಅಲಿ ಅಹಮದ್ ಹುಸೇನ್– ಶಹನಾಯ್ ವಾದನ, 11.00 ನಿಮ್ಮೊಂದಿಗೆ ಮೈಸೂರು ಆಕಾಶವಾಣಿ ಹಾಗೂ ಪಶ್ನೋತ್ತರ

**ಮಧ್ಯಾಹ್ನ:** 12.05 ವನಿತಾ ವಿಹಾರ, 12.35 ದೇವರನಾಮ–ಜಿ. ದೀಪಿಕಾ ಎಸ್. ಕಾಮತ್, 12.45 ಜನಪದ ಸಂಗೀತ, 1.00 ಪ್ರಗತಿ ಪಥ – ಕೇಂದ್ರ ಸರ್ಕಾರದ ವಿವಿಧ ಅಭಿವೃದ್ಧಿ ಯೋಜನೆಗಳ ಕುರಿತು ಸರಣಿ, 1.20 ಭಾವಗೀತೆಗಳ–ರೇಣುಕಾ ನಾಕೋಡ್, 2.40 ಚಿತ್ರಗೀತೆಗಳು, 3.00 ಕರ್ನಾಟಕ ಶಾಸ್ತ್ರೀಯ ಸಂಗೀತ, ಎಂ.ಎನ್. ಗಣೇಶ್ ಮತ್ತು ಎಂ.ಎಸ್. ಪುಟ್ಟರಾಜು– ಯುಗಳ ನಾದಸ್ವರ ವಾದನ, 4.00 ಮಹಿಳಾರಂಗ, 4.30 ಹಿಂದಿ ಚಿತ್ರಗೀತೆಗಳು, 4.45 ಹಿಂದಿ ಪಾಠ, ಪ್ರಸ್ತುತಿ–ಡಾ. ಎಸ್.ಪಿ. ವಿದ್ಯಾಕುಮಾರ್, 5.00 ಕಟ್ಟೋಣ ಬನ್ನಿ ನಿರ್ಮಾಣ ತಾಂತ್ರಿಕತೆಗಳನ್ನ ಕುರಿತ ಪ್ರಾಯೋಜಿತ ಬಾನುಲಿ ಸರಣಿ. ಪ್ರಾಯೋಜಕರ–ಅಸೋಸಿಯೇಷನ್ ಆಫ್ ಕನ್ಸಲ್ಟಿಂಗ್ ಸಿವಿಲ್ ಇಂಜಿನಿಯರ್ಸ್ ಇಂಡಿಯಾ, ಮೈಸೂರು ಛಾಪ್ಟರ್. ವಿಷಯ–ವಾಟರ್ ಪ್ರೂಫಿಂಗ್, ಭಾಗವಹಿಸುತ್ತಾರೆ ಎ.ಸಿ.ಇ. ಟೆಕ್ನಾಲಜಿಸ್‌ನ ಮುಖ್ಯ ಸಲಹೆಗಾರರಾದ ಎನ್.ಆರ್. ಅಶೋಕ್ ಮತ್ತು ಕೌಶಿಕ್ ಎಂಟರ್ ಪ್ರೈಸಸ್‌ನ ಎ.ವಿ. ದೀಪಕ್, ಪ್ರಸ್ತುತಿ–ಎನ್.ಕೇಶವಮೂರ್ತಿ, 6.15 ಗರ್ಭಕಂಠದ ಕ್ಯಾನ್ಸರ್ ಕುರಿತ ಜಾಗೃತಿ ಕಾರ್ಯಕ್ರಮ, ಪ್ರಾಯೋಜಕರು : ಇಂಡಿಯನ್ ಕ್ಯಾನ್ಸರ್ ಸೊಸೈಟಿ, ಕರ್ನಾಟಕ ಛಾಪ್ಟರ್, 6.50 ಕೃಷಿರಂಗ–ತೋಟಗಾರಿಕಾ ಶಿಕ್ಷಣ, ಸಂಶೋಧನೆ ಹಾಗೂ ವಿಸ್ತರಣೆ ಈ ಕುರಿತು ಬಾಗಲಕೋಟೆಯ ತೋಟಗಾರಿಕಾ ವಿಶ್ವವಿದ್ಯಾನಿಲಯದ ಕುಲಪತಿಗಳಾದ ಡಾ.ವಿಷ್ಣುವರ್ಧನ ಅವರೊಂದಿಗೆ ಸಂದರ್ಶನ, ಸಂದರ್ಶಕರು–ಎನ್. ಕೇಶವ ಮೂರ್ತಿ, 7.45 ಕನ್ನಡ ಚಿತ್ರಗೀತೆಗಳು, 8.00 ಮಕ್ಕಳ ಮಂಟಪ, ಪರೀಕ್ಷೆಗೆ ಸಿದ್ಧರಾಗೋಣ ಬನ್ನಿ–ಎಸ್.ಎಸ್.ಎಲ್.ಸಿ. ಪರೀಕ್ಷಾ ಸಿದ್ಧತೆ ಕುರಿತು ಬಾನುಲಿ ಸರಣಿ ಕಾರ್ಯಕ್ರಮ, ಪ್ರಸ್ತುತಿ– ದಿಗ್ವಿಜಯ್. ಬಿ., 9.30 ಕ್ರೀಡಾಲೋಕ, 10.00 ನಾಟಕ–ಮನ್ಮಥ ವಿಜಯ, 10.30 ಸವಿನೆನಪು

- **ಸಂಚಲನ (ಮೈಸೂರು), ಅರಳಿ ಸೇವಾಟ್ರಸ್ಟ್ (ಬೆಂಗಳೂರು), ಕನ್ನಡ ಮತ್ತು ಸಂಸ್ಕೃತಿ ಇಲಾಖೆ :** ಸಂಚಲನ ದಶಮಾನೋತ್ಸವ–ರಂಗ ಸಂಭ್ರಮ, ಸಂಜೆ 6 ರಿಂದ ಸಭಾ ಕಾರ್ಯಕ್ರಮ, ಉಪಸ್ಥಿತರು : ರೋಟರಿ ಕ್ಲಬ್ ಆಫ್ ಸೇವಾ ಟ್ರಸ್ಟ್ ಸಂಸ್ಥಾಪಕ ಅಧ್ಯಕ್ಷ ರೊ. ಡಾ.ಎಂ.ಪಿ. ವರ್ಷಾ, ರಾಜರಾಜೇಶ್ವರಿ ವಸ್ತ್ರಾಲಂಕಾರ ಮಾಲೀಕ ಬಿ.ಎಂ. ರಾಮಚಂದ್ರ, ರಂಗ ನಟ ಪ್ರೊ. ಎನ್. ಧನಂಜಯ, ರಂಗ ನಿರ್ದೇಶಕ ಪ್ರಸಾದ್ ಕುಂದೂರು, ಸಮಾಗಮ ಸಾಂಸ್ಕೃತಿಕ ವೇದಿಕೆಯಿಂದ ಜನಪದ ಗೀತೆಗಳು, ರಕ್ಷಾ ಎಂ. ಹಿರೇಮಠ, ಸ್ಥಳ: ಕಿರುರಂಗ ಮಂದಿರ, ಸಂಜೆ 6 ಗಂಟೆಯಿಂದ.
- **ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್ :** ಕಲಾ ಸಪ್ತಮಿ ವಾರದ ಕಾರ್ಯಕ್ರಮ, ವಿದುಷಿ ಅಕ್ಷತಾ ರುದ್ರಪಟ್ಣಂ ಅವರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ, ವಿದ್ವಾನ್ ಸುನಾದ ಕೃಷ್ಣ ಅಮೈ–ಮೃದಂಗ, ವಿದ್ವಾನ್ ಕೃತಿಕ ಕೌಶಿಕ್ ಎಂ.ಪಿ.–ವಯೋಲಿನ್, ವಿದ್ವಾನ್ ಬಿ.ಎಸ್. ರಘುನಂದನ್–ಘಟಂ, ಸ್ಥಳ: ಜಗನ್ನಾಥ ಸೆಂಟರ್ ಫಾರ್ ಆರ್ಟ್ ಅಂಡ್ ಕಲ್ಚರ್, ವಿಜಯನಗರ 1ನೇ ಹಂತ, ಸಂಜೆ 6 ರಿಂದ.

# ಹಿಂದಿನ ನಿರ್ಧಾರದಂತೆ ಸರ್ಕಾರ ತನ್ನ ಪಾಲಿನ 50 ರೂ. ನೀಡುತ್ತೆ... ಅದರಂತೆ ನಿಮ್ಮ ಪಾಲಿನ 50 ರೂ. ನೀವೂ ನೀಡಲೇಬೇಕು...

● ಸಕ್ಕರೆ ಕಾರ್ಖಾನೆ ಆಡಳಿತ ವರ್ಗಕ್ಕೆ ಮೈಸೂರು ಡಿಸಿ ಲಕ್ಷ್ಮೀಕಾಂತರೆಡ್ಡಿ ವಾರ್ನ್ ● ಇನ್ನು 15 ದಿನದಲ್ಲಿ ಕಬ್ಬಿನ ಬಾಕಿ 100 ರೂ. ರೈತರ ಖಾತೆಗೆ ಜಮಾ ಆಗಲಿದೆ ● ಸರ್ಕಾರದ ಸಹಾಯ ಧನ 50, ಕಾರ್ಖಾನೆಗಳಿಂದ 50 ರೂ. ● ಸಕ್ಕರೆ ಕಾರ್ಖಾನೆ 50 ರೂ. ಕೊಡದಿದ್ದರೆ ದಂಡ, ಕಠಿಣ ಕ್ರಮ ● ಕಬ್ಬಿನ ಸಕ್ಕರೆ ಇಳುವರಿ ಪರಿಶೀಲನೆಗೆ ಕಾರ್ಖಾನೆಗೆ ದಿಢೀರ್ ಭೇಟಿ ● ಕಾರ್ಖಾನೆ ಕಿರುಕುಳದಿಂದ 15 ಲಕ್ಷ ಟನ್ ನಿಂದ 7 ಲಕ್ಷ ಟನ್ ಕಬ್ಬು ಬೆಳೆ ಇಳಿಕೆ

ಮೈಸೂರು, ಫೆ.3(ಬಿಎಲ್‌ಯು)– ಪ್ರತಿ ಟನ್ ಕಬ್ಬಿಗೆ ರಾಜ್ಯ ಸರ್ಕಾರದ 50 ರೂಪಾಯಿ ಸಹಾಯ ಧನ ಹಾಗೂ ಸಕ್ಕರೆ ಕಾರ್ಖಾನೆಗಳ ಹೆಚ್ಚುವರಿ 50 ರೂಪಾಯಿ ಸೇರಿದಂತೆ 100 ರೂಪಾಯಿಗಳನ್ನು ಇನ್ನು 15 ದಿನದಲ್ಲಿ ರೈತರ ಬ್ಯಾಂಕ್ ಖಾತೆಗೆ ಜಮಾ ಮಾಡಲಾಗುವುದು ಎಂದು ಮೈಸೂರು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಭರವಸೆ ನೀಡಿದ್ದಾರೆ.



ಮೈಸೂರು ಜಿಪಂ ಸಭಾಂಗಣದಲ್ಲಿ ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅಧ್ಯಕ್ಷತೆಯಲ್ಲಿ ರೈತ ಸಂಘದ ಪ್ರತಿನಿಧಿಗಳ ಸಭೆ ನಡೆಯಿತು.

ಮೈಸೂರು ಜಿಲ್ಲಾ ಪಂಚಾಯತ್ ಸಭಾಂಗಣದಲ್ಲಿ ಇಂದು ಕಬ್ಬು ಬೆಳೆಗಾರರ ಕುಂದು ಕೊರತೆ ಆಲಿಸಲು ಕರೆದಿದ್ದ ಸಭೆಯಲ್ಲಿ ಮಾತನಾಡಿದ ಅವರು, ಇನ್ನು ನಾಲ್ಕು ದಿನದಲ್ಲಿ ರಾಜ್ಯ ಸರ್ಕಾರದ ಸಹಾಯ ಧನವನ್ನು ಬಿಡುಗಡೆ ಮಾಡುವುದಾಗಿ ಹಣಕಾಸು ಇಲಾಖೆ ತಿಳಿಸಿದೆ. ಅದಾದ 10 ದಿನದ ನಂತರ ಬ್ಯಾಂಕ್ ಮೂಲಕ ರೈತರ ಖಾತೆಗೆ ಹಣ ಜಮಾ ಆಗಲಿದೆ. ಒಟ್ಟಾರೆ ಇನ್ನು 15 ದಿನದಲ್ಲಿ ರಾಜ್ಯ ಸರ್ಕಾರದ ಸಹಾಯ ಧನ ರೈತರ ಕೈ ಸೇರಲಿದೆ ಎಂದರು.

ಅದೇ ವೇಳೆಗೆ ಸಕ್ಕರೆ ಕಾರ್ಖಾನೆಗಳಿಂದ ಹೆಚ್ಚುವರಿ 50 ರೂಪಾಯಿ ಕೂಡ ರೈತರ ಖಾತೆಗೆ ಸೇರಲಿದೆ. ಒಟ್ಟಾರೆ ಪ್ರತಿ ಟನ್ ಕಬ್ಬಿಗೆ 100 ರೂಪಾಯಿಗಳು ರೈತರ ಬ್ಯಾಂಕ್ ಖಾತೆಗೆ ಜಮೆ ಆಗಲಿದೆ ಎಂದು ಲಕ್ಷ್ಮಿಕಾಂತ ರೆಡ್ಡಿ ತಿಳಿಸಿದರು.

ರಾಜ್ಯ ಸರ್ಕಾರವೇನೊ ತನ್ನ ಪಾಲಿನ ಸಹಾಯ ಧನ ಬಿಡುಗಡೆ ಮಾಡುತ್ತದೆ. ಆದರೆ ಸಕ್ಕರೆ ಕಾರ್ಖಾನೆಗಳು ಕೊಡಬೇಕಲ್ಲವೇ? ಇಲ್ಲಿ ಇರುವ ಸಕ್ಕರೆ ಕಾರ್ಖಾನೆ ಪ್ರತಿನಿಧಿಗಳಿಂದ ಈ ಬಗ್ಗೆ ಖಚಿತ ಭರವಸೆ ಕೊಡಿಸಿ ಎಂದು ರೈತರು ಆಗ್ರಹಿಸಿದರು.

**ಡಿಸಿ ಖಡಕ್ ಮಾತು:** ಈ ಮಾತಿಗೆ ಲಕ್ಷ್ಮಿಕಾಂತರೆಡ್ಡಿ ಅವರು ಕೋಪೋದ್ರಿಕ್ತರಾದರು. ಸರ್ಕಾರದ ಆದೇಶವನ್ನು ಸಕ್ಕರೆ ಕಾರ್ಖಾನೆಗಳು ಕೂಡ ಪಾಲನೆ ಮಾಡಬೇಕು, ಅವರಿಗೆ ಹೇಳುವುದು, ಕೇಳುವುದು ಏನೂ ಇಲ್ಲ. ರೈತರಿಗೆ ಹೆಚ್ಚುವರಿ ಹಣ ಕೊಡ್ತೀರಾ ಎಂದು ಪ್ರಶ್ನೆ ಕೇಳುವ ಪ್ರಮೇಯವಿಲ್ಲ. ಸರ್ಕಾರದ ಆದೇಶ ಪಾಲನೆ ಮಾಡಬೇಕಷ್ಟೆ ಎಂದು ಖಡಕ್ ಆಗಿ ತಾಕೀತು ಮಾಡಿದರು.

ಒಂದು ವೇಳೆ ಸಕ್ಕರೆ ಕಾರ್ಖಾನೆಗಳು ಹೆಚ್ಚುವರಿ ಹಣ ಕೊಡಲಿಲ್ಲ ಅಂದರೆ ದಂಡ ವಿಧಿಸುವುದು ಸೇರಿದಂತೆ ಕಠಿಣ ಕ್ರಮ ಕೈಗೊಳ್ಳಲಾಗುವುದು ಎಂದು ಎಚ್ಚರಿಸಿದರು.

ಈ ವೇಳೆ ಮಾತನಾಡಿದ ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ವೇಲು ಸ್ವಾಮಿ ಅವರು, ಹೆಚ್ಚುವರಿ ಹಣ ನೀಡುವ ವಿಚಾರ ಕುರಿತಂತೆ ಹೈಕೋರ್ಟ್‌ನಲ್ಲಿ ಪ್ರಕರಣವಿದೆ ಎಂದು ಸ್ಪಷ್ಟನೆ ನೀಡಿದರು.

### ಡ್ರಿಂಕ್ಸ್ ಬಿಟ್ಟು ಡ್ರಗ್ಸ್‌ಗೆ ಅಡಿಕ್ಟ್

ಡ್ರಿಂಕ್ಸ್ ಸೇವಿಸುತ್ತಿದ್ದ ಹಳ್ಳಿ ಹುಡುಗರು ಈಗ ಡ್ರಗ್ಸ್ ಸೇವಿಸುತ್ತಿದ್ದಾರೆ. ಇದೂವರೆಗೆ ಹಳ್ಳಿಗಳಲ್ಲಿ ಮದ್ಯದ ವಿರುದ್ಧ ಹೋರಾಟ ಮಾಡುತ್ತಿದ್ದರು. ಆದರೆ, ಈಗ ಡ್ರಗ್ಸ್ ವಿರುದ್ಧ ಹೋರಾಟ ಮಾಡಬೇಕಾದ ಅನಿವಾರ್ಯತೆ ಎದುರಾಗಿದೆ. ಹಳ್ಳಿಗಳಿಗೆ ಹೇಗೆ ಡ್ರಗ್ಸ್ ಸರಬರಾಜಾಗುತ್ತಿದೆ ಎಂದು ತಿಳಿಯುತ್ತಿಲ್ಲ. ಹಳ್ಳಿ ಯುವಕರು ಮಾದಕ ವಸ್ತುಗಳಿಗೆ ದಾಸರಾಗಿ ಬದುಕು ಹಾಳು ಮಾಡಿಕೊಳ್ಳುತ್ತಿದ್ದಾರೆ. ಮೊದಲು ಇದಕ್ಕೆ ಕಡಿವಾಣ ಹಾಕಬೇಕು.

- ಕುರುಬೂರು ಶಾಂತಕುಮಾರ್,
ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ, ಮೈಸೂರು.

ಈ ವಿಚಾರ ಕೇಳುತ್ತಿದ್ದಂತೆ ಲಕ್ಷ್ಮಿಕಾಂತ ರೆಡ್ಡಿ ಅವರು ಮತ್ತಷ್ಟು ಆಕ್ರೋಶ ಭರಿತರಾಗಿ ವೇಲು ಸ್ವಾಮಿ ಅವರನ್ನು ತೀವ್ರ ತರಾಟೆಗೆ ತೆಗೆದುಕೊಂಡರು. ಹೆಚ್ಚುವರಿ ಹಣ ನೀಡಬಾರದೆಂದು ನೀವು ಬಹಳಷ್ಟು ಸರ್ಕಸ್ ಮಾಡಿದ್ದೀರಾ. ಆದರೆ ಹೈಕೋರ್ಟ್ ತಡೆಯಾಜ್ಞೆ ನೀಡಿಲ್ಲ. ಈಗ ಹೆಚ್ಚುವರಿ ಹಣ ನೀಡುವ ಬಗ್ಗೆ ಸರ್ಕಾರದ ಆದೇಶ ಪಾಲನೆ ಬಿಟ್ಟು ನಿಮಗೆ ಬೇರೆ ಮಾರ್ಗವಿಲ್ಲ. ಸರ್ಕಾರದ ಆದೇಶ ಧಿಕ್ಕರಿಸಿದರೆ ಕಠಿಣ ಕ್ರಮ ಎದುರಿಸಬೇಕಾಗುತ್ತದೆ ಎಂದು ಮತ್ತೊಮ್ಮೆ ಎಚ್ಚರಿಸಿದರು.

ಒಂದು ಟನ್ ಕಬ್ಬು ಅರೆದಾಗ ಅದರಲ್ಲಿ ಶೇಕಡ 9.25 ರಷ್ಟು ಸಕ್ಕರೆ ಇಳುವರಿ ದೊರೆಯುತ್ತದೆ. ಆದರೆ ಉತ್ತರ ಕರ್ನಾಟಕ ಹಾಗೂ ಮಹಾರಾಷ್ಟ್ರದಲ್ಲಿ ಶೇಕಡ 10 ರಿಂದ 11 ರಷ್ಟು ಇಳುವರಿ ಸಿಗುತ್ತದೆ. ಇದರಲ್ಲಿ ಅನ್ಯಾಯವಾಗುತ್ತಿದೆ ಎಂದು ಹಳ್ಳಿಕೆರೆ ಹುಂಡಿ ಭಾಗ್ಯರಾಜ್ ಆಗ್ರಹಿಸಿದರು.

ಈ ಬಗ್ಗೆ ಸ್ಪಷ್ಟನೆ ನೀಡಿದ ಲಕ್ಷ್ಮಿಕಾಂತ ರೆಡ್ಡಿ, ಸ್ವತಃ ನಾನೇ ಕಾರ್ಖಾನೆಗೆ ಭೇಟಿ ನೀಡಿ ಪರಿಶೀಲನೆ ನಡೆಸಿ, ಪರೀಕ್ಷೆಗೊಳಪಡಿಸಿದಾಗ ಶೇಕಡ 9.25 ರಷ್ಟು ಇಳುವರಿ ಬರುತ್ತಿದೆ. ರೈತರು ಆರೋಪ ಮಾಡಿದಂತೆ ಅಂತಹ ದೊಡ್ಡ ವ್ಯತ್ಯಾಸ ಕಂಡು ಬರುತ್ತಿಲ್ಲ ಎಂದು ಸ್ಪಷ್ಟಪಡಿಸಿದರು.

ಆದರೂ ಕೆಲವು ರೈತರು ಈ ಬಗ್ಗೆ ಅನುಮಾನ ವ್ಯಕ್ತಪಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ರೈತ ಪ್ರತಿನಿಧಿಗಳೊಂದಿಗೆ ಸಕ್ಕರೆ ಕಾರ್ಖಾನೆಗಳಿಗೆ ದಿಢೀರ್ ಭೇಟಿ ನೀಡಿ ಪರಿಶೀಲನೆ ನಡೆಸೋಣ. ಅಲ್ಲಿ ಇಳುವರಿಯ ಕರಾರುವಕ್ಕಾದ ಮಾಹಿತಿ ಪಡೆಯೋಣ ಎಂದು ಭರವಸೆ ನೀಡಿದಾಗ, ಅದಕ್ಕೆ ರೈತರು ಸಮ್ಮತಿಸಿದರು.

ಜಿಲ್ಲಾ ಪಂಚಾಯತ್ ಮುಖ್ಯ ಕಾರ್ಯ ನಿರ್ವಾಹಕ ಅಧಿಕಾರಿ ಯುಕೇಶ್ ಕುಮಾರ್, ಕೃಷಿ ಇಲಾಖೆ ಜಂಟಿ ನಿರ್ದೇಶಕ ರವಿ, ಆಹಾರ ಮತ್ತು ನಾಗರಿಕ ಸರಬರಾಜು ಇಲಾಖೆ ಅಧಿಕಾರಿ ಮಂಟೇಸ್ವಾಮಿ, ಅಡಿಷನಲ್ ಎಸ್ಪಿ ಮಲ್ಲಿಕ್, ಕಬ್ಬು ಬೆಳೆಗಾರರ ಸಂಘದ ಅಧ್ಯಕ್ಷ ಕುರುಬೂರು ಶಾಂತಕುಮಾರ್, ಅತ್ತಳ್ಳಿ ದೇವರಾಜ್, ಸಿದ್ದೇಶ್, ಬರಡನಪುರ ನಾಗರಾಜ್, ಪ್ರದೀಪ್, ಪ್ರಸಾದ್ ನಾಯಕ್, ಕಿರಸಗೂರು ಶಂಕರ್ ಸೇರಿದಂತೆ ಹಲವು ರೈತರು ಸಭೆಯಲ್ಲಿ ಪಾಲ್ಗೊಂಡಿದ್ದರು.

## ಕಾರ್ಖಾನೆ ಪ್ರವೇಶ ದ್ವಾರದಲ್ಲಿ ತೂಕ ಮಾಡುವ ಯಂತ್ರ ಅಳವಡಿಸದಿದ್ದರೆ ಲೈಸೆನ್ಸ್ ತಡೆ ಗ್ಯಾರಂಟಿ

ಸರ್ಕಾರದ ಆದೇಶ ಹಾಗೂ ರೈತರ ಬೇಡಿಕೆಯಂತೆ ಸಕ್ಕರೆ ಕಾರ್ಖಾನೆ ಪ್ರವೇಶ ದ್ವಾರದಲ್ಲೇ ತೂಕ ಮಾಡುವ ಯಂತ್ರ ಅಳವಡಿಸದಿದ್ದರೆ ಕಾರ್ಖಾನೆಯ ಲೈಸೆನ್ಸ್‌ಗೆ ತಡೆ ನೀಡಬೇಕಾಗುತ್ತದೆ ಎಂದು ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರು ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಗೆ ಎಚ್ಚರಿಕೆ ನೀಡಿದರು.

ಕಾರ್ಖಾನೆ ಹಿಂದೆ ಇರುವ ತೂಕ ಯಂತ್ರದಿಂದ ನಮಗೆ ಮೋಸವಾಗುತ್ತಿದೆ ಎಂಬ ರೈತರ ಆರೋಪದ ಹಿನ್ನೆಲೆಯಲ್ಲಿ ಕಾರ್ಖಾನೆ ಪ್ರವೇಶ ದ್ವಾರದಲ್ಲೇ ತೂಕ ಯಂತ್ರ ಅಳವಡಿಸಲು ಸರ್ಕಾರ ಆದೇಶಿಸಿದೆ. ಇದನ್ನು ಪಾಲನೆ ಮಾಡಬೇಕು ಎಂದು ತಾಕೀತು ಮಾಡಿದರು.

ಈಗ ಕಾರ್ಖಾನೆ ಹಿಂದೆ ತೂಕದ ಯಂತ್ರವಿದೆ. ಅದನ್ನು ಕಾರ್ಖಾನೆ ಮುಂದೆ ಅಳವಡಿಸುತ್ತೇವೆ. ಆದರೆ ಪ್ರವೇಶ ದ್ವಾರದಲ್ಲಿ ಸಾಧ್ಯವಿಲ್ಲ, ಅಲ್ಲಿಂದ ನೂರು ಮೀಟರ್ ಮುಂದೆ ಅಳವಡಿಸುತ್ತೇವೆ ಎಂದು ಕಾರ್ಖಾನೆಯ ವ್ಯವಸ್ಥಾಪಕ ನಿರ್ದೇಶಕ ವೇಲುಸ್ವಾಮಿ ತಿಳಿಸಿದರು.

ಈ ವೇಳೆ ಲಕ್ಷ್ಮಿಕಾಂತರೆಡ್ಡಿ ಅವರು ವೇಲು ಸ್ವಾಮಿ ಅವರನ್ನು ಮತ್ತೆ ತೀವ್ರ ತರಾಟೆಗೆ ತೆಗೆದುಕೊಂಡರು. ರೈತರ ಯಾವುದೇ ಬೇಡಿಕೆಗೆ ಸಾಧ್ಯವಿಲ್ಲ ಎಂದೇಳಿದರೆ ಹೇಗೆ, ನಿಮ್ಮ ಧೋರಣೆಯಿಂದ ಕಬ್ಬು ಬೆಳೆಯುವುದನ್ನು ರೈತರು ಕಡಿಮೆ ಮಾಡಿದ್ದಾರೆ. ಇದರಿಂದ 15 ಲಕ್ಷ ಟನ್ ಇದ್ದ ಕಬ್ಬಿನ ಪ್ರಮಾಣ 7 ಲಕ್ಷ ಟನ್‌ಗೆ ಇಳಿಕೆಯಾಗಿದೆ. ರೈತರಿಗೆ ಹೀಗೆ ಅಸಹಕಾರ ನೀಡಿದರೆ ಅವರು ಕ್ರಮೇಣ ಕಬ್ಬು ಬೆಳೆಯುವುದರಿಂದ ವಿಮುಖರಾಗುತ್ತಾರೆ. ಇದರಿಂದ ಇನ್ನು ನಾಲ್ಕೈದು ವರ್ಷದಲ್ಲಿ ಕಬ್ಬು ಬೆಳೆಯೇ ಇಲ್ಲದಂತಾಗಿ, ನೀವೇ ಸಂಕಷ್ಟಕ್ಕೆ ಸಿಲುಕುತ್ತೀರಾ ಎಂದು ಎಚ್ಚರಿಸಿದರು.

ಸರ್ಕಾರದ ಆದೇಶವನ್ನು ನೀವು ಕಟ್ಟು ನಿಟ್ಟಾಗಿ ಪಾಲನೆ ಮಾಡಬೇಕು. ಹೀಗೆ ಜಿಲ್ಲಾಡಳಿತಕ್ಕೆ ಅಸಹಕಾರ ತೋರಿದರೆ ನಿಮ್ಮ ಲೈಸೆನ್ಸ್‌ಗೆ ತಡೆ ನೀಡಬೇಕಾಗುತ್ತದೆ ಎಂದು ಎಚ್ಚರಿಸಿದರು.

ಒಂದು ದಿನಕ್ಕೆ 500 ರಿಂದ 600 ಟ್ರಕ್‌ಗಳಲ್ಲಿ ಕಬ್ಬು ಬರುತ್ತದೆ ಎಂದು ಹೇಳುತ್ತೀರಾ. ಕಟಾವಾದ ಕಬ್ಬನ್ನು ಒಂದು ದಿನದೊಳಗೆ ತೂಕ ಮಾಡದಿದ್ದರೆ ಅದರ ತೂಕ ಕಡಿಮೆಯಾಗುತ್ತದೆ ಎಂದು ರೈತರು ಆಪಾದಿಸುತ್ತಿದ್ದಾರೆ. ಈ ಹಿನ್ನೆಲೆಯಲ್ಲಿ 24 ಗಂಟೆ ಮೀರಿ ತೂಕ ಹಾಕಿದ ಕಬ್ಬಿಗೆ ಹೆಚ್ಚುವರಿ ಹಣ ನೀಡಬೇಕು ಎಂದು ಸೂಚಿಸಿದರು. ಜಿಲ್ಲಾಧಿಕಾರಿಗಳ ಖಡಕ್ ಮಾತುಗಳಿಂದ ಎಚ್ಚೆತ್ತ ಕಾರ್ಖಾನೆ ವ್ಯವಸ್ಥಾಪಕ ನಿರ್ದೇಶಕ ವೇಲು ಸ್ವಾಮಿ ಅವರು ಕಾರ್ಖಾನೆ ಪ್ರವೇಶ ದ್ವಾರದಲ್ಲಿ ತೂಕ ಯಂತ್ರ ಅಳವಡಿಸಲು ಸಮ್ಮತಿಸಿದರು.

## ಡಿಸಿ ವೈಲೆಂಟ್, ಡ್ರಿಂಕ್ಸ್, ಕೋಳಿ, ಲಂಚ ಕೊಡಬೇಕು, ಮರಕ್ಕೆ ಕಟ್ಟಿ ಪಾಠ ಕಲಿಸುತ್ತೇವೆ

### ರೈತರ ಸಭೆಯ ಸ್ವಾರಸ್ಯಗಳು

ಜಿಲ್ಲಾಧಿಕಾರಿ ಜಿ.ಲಕ್ಷ್ಮಿಕಾಂತರೆಡ್ಡಿ ಅವರು ಮೃದು ಸ್ವಭಾವದವರು. ಅವರು ಎಂದೂ ಕೋಪೋದ್ರಿಕ್ತರಾಗಿ ಮಾತನಾಡಿದ ನಿದರ್ಶನ ಇಲ್ಲ. ಆದರೆ, ಇಂದು ರೈತರ ಪರವಾಗಿ ಧ್ವನಿ ಎತ್ತಿದ ಲಕ್ಷ್ಮಿಕಾಂತರೆಡ್ಡಿ ಅವರು ಸಕ್ಕರೆ ಕಾರ್ಖಾನೆ ಆಡಳಿತ ವರ್ಗದ ಮೇಲೆ ರೇಗಿದರು.

ನಮ್ಮ ಕಬ್ಬು ಮೊದಲು ಕಟಾವು ಮಾಡುವಂತೆ ಕಾರ್ಖಾನೆ ಸೂಪರ್‌ವೈಸರ್‌ಗೆ ಡ್ರಿಂಕ್ಸ್, ಕೋಳಿ, ಲಂಚ ಕೊಡಬೇಕಾದ ಪರಿಸ್ಥಿತಿ ಬಂದಿದೆ ಎಂದು ಕೆಲ ರೈತರು ಆರೋಪಿಸಿದರು.

ಕೆಲವರು ಸಾಲ ಮಾಡಿಕೊಂಡಿರುತ್ತಾರೆ. ಇದರಿಂದ ಬೇಗ ಕಟಾವು ಮಾಡಿಸಿ ಹಣ ಪಡೆಯಲು ಇಂತಹ ಆಮಿಷವೊಡ್ಡುತ್ತಾರೆ. ಆದರೆ ಇನ್ನು ಮುಂದೆ ಇದಕ್ಕೆ ಅವಕಾಶ ನೀಡುವುದಿಲ್ಲ. ಇಂತಹ ದಿನಾಂಕದಂದೇ ಕಬ್ಬು ಕಟಾವು ಮಾಡುವಂತೆ ಪಟ್ಟಿ ಮಾಡುತ್ತೇವೆ. ಆ ದಿನದಂದೇ ಕಟಾವು ಮಾಡುತ್ತಾರೆ ಎಂದು ಜಿಲ್ಲಾಧಿಕಾರಿ ಲಕ್ಷ್ಮಿಕಾಂತರೆಡ್ಡಿ ಭರವಸೆ ನೀಡಿದರು.

ಭತ್ತ ಖರೀದಿ ಕೇಂದ್ರ ತುಂಬಾ ವಿಳಂಬವಾಗಿ ಆರಂಭವಾಗಿದೆ. ಆದರೆ ಸಾಲ ಮಾಡಿದ್ದ ರೈತರು ಇಷ್ಟು ದಿನದ ತನಕ ಕಾಯಲು ಸಾಧ್ಯವಾಗದೆ ಕಳೆದ ತಿಂಗಳೆ ಭತ್ತ ಮಾರಾಟ ಮಾಡಿದ್ದಾರೆ. ದಲ್ಲಾಳಿಗಳು, ರೈಸ್ ಮಿಲ್‌ಗಳು ಕಡಿಮೆ ಬೆಲೆಗೆ ಭತ್ತ ಖರೀದಿ ಮಾಡಿ, ಲಾಭ ಮಾಡಿಕೊಂಡಿದ್ದಾರೆ ಎಂದು ಅತ್ತಳ್ಳಿ ದೇವರಾಜ್ ದೂರಿದರು.

ಸಕ್ಕರೆ ಕಾರ್ಖಾನೆಗಳ ಕಿರುಕುಳದಿಂದ ಕಬ್ಬು ಬೆಳೆಯುವುದನ್ನು ರೈತರು ಕಡಿಮೆ ಮಾಡಿದ್ದಾರೆ. ಇದರಿಂದ ಕಬ್ಬು ಬೆಳೆಯುವುದು 15 ಲಕ್ಷ ಟನ್‌ನಿಂದ 7 ಲಕ್ಷ ಟನ್‌ಗೆ ಇಳಿಕೆಯಾಗಿದೆ. ಈಗ ರೈತರ ಬಳಿ ಬಂದು ಕಬ್ಬು ಬೆಳೆಯುವಂತೆ ಆಮಿಷವೊಡ್ಡುತ್ತಿದ್ದಾರೆ. ಮತ್ತೇನಾದರೂ ಕಾರ್ಖಾನೆಯವರು ರೈತರ ಬಳಿ ಬಂದು ಆಮಿಷವೊಡ್ಡಿದರೆ ಮರಕ್ಕೆ ಕಟ್ಟಿ ಹಾಕಿ ಸರಿಯಾಗಿ ಪಾಠ ಕಲಿಸುತ್ತೇವೆ ಎಂದು ನಂಜುಂಡಸ್ವಾಮಿ ಎಚ್ಚರಿಸಿದರು.

ಈ ವೇಳೆ ಮಾತನಾಡಿದ ಕಬ್ಬು ಬೆಳೆಗಾರರ ಸಂಘದ ರಾಜ್ಯಾಧ್ಯಕ್ಷ ಕುರುಬೂರು ಶಾಂತಕುಮಾರ್ ಅವರು, ಬಣ್ಣಾರಿ ಅಮ್ಮನ್ ಸಕ್ಕರೆ ಕಾರ್ಖಾನೆಯವರು ಕಬ್ಬಿನಿಂದ ಉಪ ಉತ್ಪನ್ನ ತಯಾರಿಸುತ್ತಿದ್ದಾರೆ. ಸಕ್ಕರೆ, ಮೊಲಾಸಸ್, ವಿದ್ಯುತ್ ಅನ್ನು ಬೇರೆ ಬೇರೆ ಹೆಸರಿನಿಂದ ಉತ್ಪಾದಿಸಿ ನಷ್ಟ ತೋರಿಸಿ ರೈತರಿಗೆ ಮೋಸ ಮಾಡುತ್ತಿದ್ದಾರೆಂದು ಆಪಾದಿಸಿದರು.

## ನಾಳೆಯಿಂದ ತಂಬಾಕು ಹರಾಜು ಪುನಾರಂಭ: ಯದುವೀರ್

ಮೈಸೂರು, ಫೆ.3– ತಂಬಾಕು ಮಾರುಕಟ್ಟೆ ಹರಾಜು ಪ್ರಕ್ರಿಯೆ ಫೆ.5ರಿಂದ ಪುನಾರಂಭವಾಗುತ್ತಿದೆ ಎಂದು ಮೈಸೂರು–ಕೊಡಗು ಕ್ಷೇತ್ರದ ಸಂಸದ ಯದುವೀರ ಕೃಷ್ಣದತ್ತ ಚಾಮರಾಜ ಒಡೆಯರ್ ತಿಳಿಸಿದ್ದಾರೆ.



ತಂಬಾಕು ಬೆಳೆಗಾರರ ಹಿತ ಕಾಯಲು ಕೇಂದ್ರ ಬಿಜೆಪಿ ಸರ್ಕಾರ ಬದ್ಧವಾಗಿದ್ದು, ಈ ನಿಟ್ಟಿನಲ್ಲಿ ಕಚ್ಚಾ ತಂಬಾಕು ಮೇಲಿನ ಸುಂಕವನ್ನು ರದ್ದುಗೊಳಿಸಲಾಗಿದೆ. ನಮ್ಮ ಮನವಿಯನ್ನು ಪುರಸ್ಕರಿಸಿ, ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರು ಈ ಮಹತ್ವದ ನಿರ್ಧಾರ ಕೈಗೊಂಡಿದ್ದಾರೆ ಎಂದು ಹೇಳಿದ್ದಾರೆ.

ಅಬಕಾರಿ ಸುಂಕ ರದ್ದುಗೊಳಿಸಿರುವ ಬಗ್ಗೆ ಗೆಜೆಟ್ ಅಧಿಸೂಚನೆ ಹೊರಡಿಸಲಾಗಿದ್ದು, ಈ ಮೂಲಕ ರೈತರು ಮತ್ತು ವ್ಯಾಪಾರಿಗಳ ದೀರ್ಘ ಕಾಲದ ಬೇಡಿಕೆ ಈಡೇರಿದಂತಾಗಿದೆ. ಫೆ.5ರಿಂದ ತಂಬಾಕು ಮಾರುಕಟ್ಟೆ ಹರಾಜು ಪುನಾರಂಭಿಸಲು ಕ್ರಮ ವಹಿಸಿರುವುದರಿಂದ ತಂಬಾಕು ಬೆಳೆಗಾರರು ಹಾಗೂ ಈ ವಲಯಕ್ಕೆ ಸಂಬಂಧಿಸಿದ ಎಲ್ಲರಿಗೂ ಅನುಕೂಲವಾಗಲಿದೆ. ತಂಬಾಕು ಮಾರುಕಟ್ಟೆಯ ಸ್ಥಿರತೆ ಕಾಯ್ದುಕೊಳ್ಳುವುದು, ವ್ಯಾಪಾರದಲ್ಲಿ ನಿರಂತರತೆ ತರುವ ಮುಖೇನ ರೈತರ ವಿಶ್ವಾಸ ಬಲಪಡಿಸಲು ನೆರವಾಗಲಿದೆ. ರೈತರ ಸಮಸ್ಯೆಗಳು ಹಾಗೂ ಬೇಡಿಕೆಗಳನ್ನು ಕೇಂದ್ರ ಸರ್ಕಾರದ ಗಮನಕ್ಕೆ ತಂದು, ಪರಿಹಾರ ಕಲ್ಪಿಸಲು ನಾನು ಬದ್ಧನಾಗಿದ್ದೇನೆ ಎಂದು ಯದುವೀರ್ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

## ತಂಬಾಕು ಮೇಲೆ ವಿಧಿಸಲಾಗಿದ್ದ ಶೇ.18ರಷ್ಟು ಅಬಕಾರಿ ಸುಂಕ ರದ್ದು

● ಕೇಂದ್ರ ಸಚಿವ ಕುಮಾರಸ್ವಾಮಿ ಮನವಿಗೆ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ತಕ್ಷಣ ಕ್ರಮ ● ಧನ್ಯವಾದ ಹೇಳಿದ ಹೆಚ್‌ಡಿಕೆ

ನವದೆಹಲಿ, ಫೆ.3– ಎಫ್‌ಸಿವಿ ತಂಬಾಕು ಮೇಲೆ ವಿಧಿಸಲಾಗಿದ್ದ ಶೇ.18ರಷ್ಟು ಅಬಕಾರಿ ಸುಂಕವನ್ನು ಕೇಂದ್ರ ಸರ್ಕಾರ ರದ್ದುಗೊಳಿಸುವಲ್ಲಿ ಕೇಂದ್ರ ಬೃಹತ್ ಕೈಗಾರಿಕೆ ಸಚಿವ ಹೆಚ್.ಡಿ.ಕುಮಾರಸ್ವಾಮಿ ಪ್ರಮುಖ ಪಾತ್ರವಹಿಸಿದ್ದಾರೆ.



ತಂಬಾಕು ಮೇಲೆ ಭಾರೀ ಅಬಕಾರಿ ಸುಂಕ ವಿಧಿಸಿದ್ದರಿಂದ ಖರೀದಿದಾರರು ಹರಾಜು ಪ್ರಕ್ರಿಯೆಯಿಂದ ದೂರ ಸರಿದಿದ್ದರು. ಪರಿಣಾಮ ರಾಜ್ಯದ ಹುಣಸೂರು, ಪಿರಿಯಾಪಟ್ಟಣ, ಹೆಚ್.ಡಿ.ಕೋಟೆ, ಅರಕಲಗೂಡು ಸೇರಿದಂತೆ ವಿವಿಧೆಡೆಯ ತಂಬಾಕು ಬೆಳೆಗಾರರು ತೀವ್ರ ಸಂಕಷ್ಟಕ್ಕೆ ಗುರಿಯಾಗಿದ್ದರು.

ಬಳಿಕ ಬೆಳೆಗಾರರು ಕೇಂದ್ರ ಸಚಿವ ಕುಮಾರಸ್ವಾಮಿ ಅವರನ್ನು ಭೇಟಿಯಾಗಿ ಅವಲತ್ತುಕೊಂಡ ನಂತರ ಸಚಿವರು ಬೆಂಗಳೂರಿನ ತಂಬಾಕು ಮಂಡಳಿ ವ್ಯವಸ್ಥಾಪಕ ನಿರ್ದೇಶಕರು ಮತ್ತು ವಿಶಾಖಪಟ್ಟಣ ವಿಭಾಗದ ಕೇಂದ್ರೀಯ ಅಬಕಾರಿ ಮತ್ತು ಜಿಎಸ್ಟಿ ಮುಖ್ಯ ಆಯುಕ್ತರೊಂದಿಗೆ ಪತ್ರ ವ್ಯವಹಾರ ನಡೆಸಿ, ಮಾಹಿತಿ ಪಡೆದುಕೊಂಡಿದ್ದರು.

ನಂತರ ಸಚಿವರು, ತಂಬಾಕು ಬೆಳೆಗಾರರ ಸಂಕಷ್ಟದ ಬಗ್ಗೆ ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರ ಗಮನಕ್ಕೆ ತಂದು, ತಂಬಾಕು ಮೇಲಿನ ಅಬಕಾರಿ ಸುಂಕವನ್ನು ರದ್ದುಪಡಿಸುವಂತೆ ವಿನಂತಿಸಿದ್ದರು. ಮನವಿಗೆ ತಕ್ಷಣವೇ ಸ್ಪಂದಿಸಿರುವ ಹಣಕಾಸು ಸಚಿವರು, ತಂಬಾಕು ಮೇಲಿನ ಅಬಕಾರಿ ಸುಂಕ ವಿನಾಯಿತಿ ನಿರ್ಧಾರ ಕೈಗೊಂಡು, ಈ ಸಂಬಂಧ ಆದೇಶ ಹೊರಡಿಸಿದ್ದಾರೆ. ಈ ಹಿನ್ನೆಲೆಯಲ್ಲಿ ತಂಬಾಕು ಮಂಡಳಿಯು ತಕ್ಷಣದಿಂದಲೇ ಜಾರಿಗೆ ಬರುವಂತೆ ಅಬಕಾರಿ ಸುಂಕವನ್ನು ಹಿಂಪಡೆದು, ಫೆ5ರಿಂದಲೇ ಹರಾಜು ಪ್ರಕ್ರಿಯೆ ಆರಂಭಿಸಲು ನಿರ್ದೇಶನ ನೀಡಿದೆ.

**ಧನ್ಯವಾದ ತಿಳಿಸಿದ ಹೆಚ್‌ಡಿಕೆ:** ತಂಬಾಕು ಮೇಲಿನ ಅಬಕಾರಿ ಸುಂಕದಿಂದ ಉಂಟಾಗಿದ್ದ ಸಮಸ್ಯೆಗಳ ಬಗ್ಗೆ ಹುಣಸೂರು ಶಾಸಕ ಜಿ.ಡಿ.ಹರೀಶ್‌ಗೌಡ, ಅರಕಲಗೂಡು ಶಾಸಕ ಎ.ಮಂಜು, ಪಿರಿಯಾಪಟ್ಟಣ ಮಾಜಿ ಶಾಸಕ ಮಹದೇವು ಹಾಗೂ ಹೆಚ್.ಡಿ.ಕೋಟೆಯ ಜೆಡಿಎಸ್ ಹಿರಿಯ ಮುಖಂಡ ಕೃಷ್ಣ ನಾಯಕ್ ಮತ್ತಿತರರು ನನ್ನೊಂದಿಗೆ ಚರ್ಚಿಸಿದ್ದರು. ಈ ಬಗ್ಗೆ ನಾನು ಕೇಂದ್ರ ಹಣಕಾಸು ಸಚಿವರಾದ ನಿರ್ಮಲಾ ಸೀತಾರಾಮನ್ ಅವರೊಂದಿಗೆ ಮಾತನಾಡಿ, ರೈತರ ನೆರವಿಗೆ ನಿಲ್ಲುವಂತೆ ಮನವಿ ಮಾಡಿದ್ದೆ. ಇದಕ್ಕೆ ಕೂಡಲೇ ಸ್ಪಂದಿಸಿ, ಸೂಕ್ತ ಕ್ರಮ ಕೈಗೊಂಡಿರುವುದರಿಂದ ತಂಬಾಕು ಬೆಳೆಗಾರರಿಗೆ ದೊಡ್ಡ ಮಟ್ಟದಲ್ಲಿ ಸಹಾಯವಾಗಲಿದೆ. ಮಹತ್ವದ ನಿರ್ಧಾರ ಕೈಗೊಂಡ ನಿರ್ಮಲಾ ಸೀತಾರಾಮನ್ ಅವರಿಗೆ ಧನ್ಯವಾದ ತಿಳಿಸುತ್ತೇನೆ ಎಂದು ಕೇಂದ್ರ ಸಚಿವ ಹೆಚ್.ಡಿ.ಕುಮಾರಸ್ವಾಮಿ ತಿಳಿಸಿದ್ದಾರೆ.

## ಮೈಸೂರು ಪಾಲಿಕೆಯ ವಿವಿ ವಾಟರ್ ವರ್ಕ್ಸ್‌ನ ಜಲಸಂಗ್ರಹಗಾರದ ನೀರು ನುಗ್ಗಿ ಹೋಟೆಲ್‌ಗೆ ಹಾನಿ





### ಲಕ್ಷಾಂತರ ರೂ. ಹಾನಿ ಅಂದಾಜು

ಮೈಸೂರು, ಫೆ. 3(ಆರ್‌ಕೆ)– ಇಂದು ಮುಂಜಾನೆ ಮೈಸೂರಿನ ಯಾದವಗಿರಿಯಲ್ಲಿರುವ ವಾಣಿ ವಿಲಾಸ ವಾಟರ್ ವರ್ಕ್ಸ್‌ನ (ವಿವಿಡಬ್ಲ್ಯುಡಬ್ಲ್ಯು) ನೆಲಮಟ್ಟದ ಜಲಸಂಗ್ರಹಾಗಾರದಿಂದ ಭಾರೀ ಪ್ರಮಾಣದ ನೀರು ನುಗ್ಗಿದ ಪರಿಣಾಮ ವಿವೇಕಾನಂದ ರಸ್ತೆಯಲ್ಲಿರುವ ಹೋಟೆಲ್‌ಗೆ ತೀವ್ರ ಹಾನಿಯಾಗಿದೆ.

ದೋಷಪೂರಿತ ವಾಲ್ವ್‌ನಿಂದಾಗಿ ಜಲಸಂಗ್ರಹಾಗಾರದಿಂದ ನಿಯಂತ್ರಣಕ್ಕೆ ಬಾರದ ನೀರು ಓವರ್ ಫ್ಲೋ ಆಗಿ, ಪಕ್ಕದ ತಗ್ಗು ಪ್ರದೇಶದ ಹೋಟೆಲ್ ಕಂಫರ್ಟ್ ಸೂಟ್ಸ್‌ನ ಹಿಂಬದಿಗೆ ನುಗ್ಗಿದ ಪರಿಣಾಮ ಹೋಟೆಲ್‌ನ ಕಾಂಪೌಂಡ್ ಗೋಡೆ ಸಂಪೂರ್ಣ ಕುಸಿದು ಬಿದ್ದು, ನೆಲಮಹಡಿಯಲ್ಲಿ ಸುಮಾರು 1 ಅಡಿ ನೀರು ಸಂಗ್ರಹವಾಗಿತ್ತು. ಅದೂ ಕೊಚ್ಚೆ ನೀರು ತುಂಬಿದ್ದರಿಂದ ಹೋಟೆಲ್ ಸಿಬ್ಬಂದಿ ಪರಿಸ್ಥಿತಿ ಸುಧಾರಣೆಗೆ ಹೆಣಗಾಡಬೇಕಾಯಿತು.

ನೀರು ಹೋಟೆಲ್‌ನ ನೆಲಮಾಳಿಗೆಯ ಹಾಲ್, ಕಾರಿಡಾರ್‌ಗಳು ಮತ್ತು ಕೊಠಡಿಗಳಿಗೆ ನುಗ್ಗಿದೆ. ಜೊತೆಗೆ ಕಾಂಪೌಂಡ್ ಗೋಡೆ, ಪೀಠೋಪಕರಣಗಳಿಗೆ ಹಾನಿಯಾಗಿದೆ. ಕವಾಟವನ್ನು ಮುಚ್ಚುವಲ್ಲಿ ಸುಮಾರು 30 ನಿಮಿಷಗಳ ವಿಳಂಬವಾದ ಕಾರಣ ನೀರು ಹೊಳೆಯಂತೆ ಹೋಟೆಲ್‌ಗೆ ನುಗ್ಗಿ ವ್ಯಾಪಕ ಹಾನಿಯನ್ನುಂಟು ಮಾಡಿದೆ. ವಾಲ್ವ್ ಅನ್ನು ಮುಚ್ಚಲು ಸಿಬ್ಬಂದಿ ಸಮಯಕ್ಕೆ ಸರಿಯಾಗಿ ಬಾರದ ಕಾರಣ, ಹೆಚ್ಚಿನ ಹಾನಿಯನ್ನು ತಡೆಗಟ್ಟಲು ಹೋಟೆಲ್ ಸಿಬ್ಬಂದಿಯೇ ಖುದ್ದು ಅದನ್ನು ಸ್ಥಗಿತಗೊಳಿಸಬೇಕಾಯಿತು.

### ನಷ್ಟ ಯಾರು ಭರಿಸುತ್ತಾರೆ... ಪಾಲಿಕೆಯೋ ಇಲ್ಲ ವಾಟರ್ ವರ್ಕ್ಸೋ...

ಹೋಟೆಲ್ ಕಂಫರ್ಟ್ ಸೂಟ್ಸ್‌ನ ಅಧ್ಯಕ್ಷ ಮತ್ತು ಸಿಇಓ ಹೇಮಂತ್‌ಕುಮಾರ್ ಘಟನೆ ಸಂಬಂಧ ಇಂದು ಬೆಳಿಗ್ಗೆ 'ಮೈಸೂರು ಮಿತ್ರ'ನಿಗೆ ಪ್ರತಿಕ್ರಿಯೆ ನೀಡಿ, ಹೋಟೆಲ್‌ನ ನೈರ್ಮಲ್ಯ ಮಾರ್ಗಗಳು, ನೀರಿನ ಪೈಪ್‌ಗಳು ಮತ್ತು ಭೂಗತ ವಿದ್ಯುತ್ ಕೇಬಲ್‌ಗಳು ಹಾನಿಗೊಳಗಾಗಿವೆ. ನೀರು ನುಗ್ಗಿ ಫಾಲ್ಸ್ ಸೀಲಿಂಗ್, ಕಾಂಪೌಂಡ್ ಗೋಡೆ ಮತ್ತು ಬೇಲಿ ಕುಸಿದಿದೆ. ಕಿಟಕಿಗಳಿಗೆ ಹಾಕಿದ ಪರದೆಗಳು ಕಿತ್ತುಹೋಗಿವೆ.

ಹೋಟೆಲ್ ನೆಲಮಹಡಿ ಕೊಚ್ಚೆ ನೀರಿನಿಂದ ತುಂಬಿದ್ದು, ಸಿಬ್ಬಂದಿ ಅದನ್ನು ಸ್ವಚ್ಛ ಮಾಡುತ್ತಿದ್ದಾರೆ. ಕೆಸರು ಶೇಖರಣೆ ಮತ್ತು ದುರ್ವಾಸನೆಯಿಂದಾಗಿ ಹೋಟೆಲ್ ಎಡಭಾಗದಲ್ಲಿರುವ ಕೊಠಡಿಗಳನ್ನು ಕನಿಷ್ಠ ಒಂದು ವಾರ ಬಾಡಿಗೆಗೆ ಕೊಡಲಾಗುವುದಿಲ್ಲ. ನನಗೆ ಲಕ್ಷಾಂತರ ರೂ. ನಷ್ಟವಾಗಿದೆ. ಈ ನಷ್ಟವನ್ನು ಪಾಲಿಕೆ ಇಲ್ಲವೇ ವಾಟರ್ ವರ್ಕ್ಸ್‌ನವರು ಭರಿಸುತ್ತಾರೆಯೇ? ನನ್ನ ಹೋಟೆಲ್ ಕಟ್ಟಡದಿಂದಾಗಿ, ತಗ್ಗು ಪ್ರದೇಶಗಳಲ್ಲಿನ ಮನೆಗಳಿಗೆ ನೀರು ನುಗ್ಗುವುದು ತಪ್ಪಿದೆ. ಈ ನಿಟ್ಟಿನಲ್ಲಿ ನಾನು ಪಾಲಿಕೆ ಆಯುಕ್ತರಿಗೆ ಪತ್ರ ಬರೆಯುತ್ತೇನೆ ಎಂದು ಹೇಳಿದರು.

ನೀರು ತೆರವುಗೊಳಿಸುವ ಕಾರ್ಯದಲ್ಲಿ ತೊಡಗಿರುವ ನೌಕರರ ಪ್ರಕಾರ ಇದು ಮೊದಲ ಘಟನೆಯೇನಲ್ಲ. ಹೋಟೆಲ್, ಹಿಂದೆ ಹಲವಾರು ಬಾರಿ ಈ ರೀತಿಯ ಪ್ರವಾಹಕ್ಕೆ ಗುರಿಯಾಗಿದೆ ಮತ್ತು ಸಮಸ್ಯೆಯನ್ನು ಸರಿಪಡಿಸಲು, ಆವರಣಕ್ಕೆ ನೀರು ಪ್ರವೇಶಿಸದಂತೆ ಅಧಿಕಾರಿಗಳಿಗೆ ಪದೇ ಪದೆ ಮನವಿ ಮಾಡಲಾಗಿದ್ದರೂ, ಇಲ್ಲಿಯವರೆಗೆ ಯಾವುದೇ ಶಾಶ್ವತ ಪರಿಹಾರವನ್ನು ಒದಗಿಸಿಲ್ಲ ಎಂದು ಆರೋಪಿಸಿದರು.

ಈ ಮಧ್ಯೆ, ಮೈಸೂರು ಗ್ರಾಹಕ ಪರಿಷತ್ (ಎಂಜಿಪಿ) ಮತ್ತು ಯಾದವಗಿರಿ ನಿವಾಸಿಗಳ ಸಂಘದ (ವೈಆರ್‌ಎ) ಸದಸ್ಯರು ಸ್ಥಳಕ್ಕೆ ಧಾವಿಸಿ ಹೋಟೆಲ್ ಆವರಣವನ್ನು ಪರಿಶೀಲಿಸಿದರು. ಮೈಸೂರು ಮಹಾನಗರ ಪಾಲಿಕೆ (ಎಂಸಿಸಿ) ಮತ್ತು ವಿವಿ ವಾಟರ್ ವರ್ಕ್ಸ್ ಅಧಿಕಾರಿಗಳಿಗೆ ಘಟನೆ ಬಗ್ಗೆ ಮಾಹಿತಿ ನೀಡಿ ಸಮಸ್ಯೆ ಬಗೆಹರಿಸುವಂತೆ ಸೂಚಿಸಿದರು. ಹೋಟೆಲ್ ಮಾಲೀಕರ ಪತ್ತಿನ ಸಹಕಾರ ಸಂಘದ ಅಧ್ಯಕ್ಷರಾದ ನಾರಾಯಣ ವಿ. ಹೆಗಡೆ ಸಹ ಸ್ಥಳಕ್ಕೆ ಭೇಟಿ ನೀಡಿ, ಪರಿಶೀಲಿಸಿದರು.

ತದನಂತರ, ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಂಜು, ಕಾರ್ಯನಿರ್ವಾಹಕ ಇಂಜಿನಿಯರ್ ಅಶ್ವಿನ್ ಕುಮಾರ್, ಸಹಾಯಕ ಕಾರ್ಯನಿರ್ವಾಹಕ ಇಂಜಿನಿಯರ್ ಮುಸ್ತಫಾ, ಜೂನಿಯರ್ ಇಂಜಿನಿಯರ್ ನಟೇಶ್ ಮತ್ತು ಇತರ ಸಿಬ್ಬಂದಿ ಸ್ಥಳಕ್ಕೆ ಭೇಟಿ ನೀಡಿ ಹೋಟೆಲ್ ಮತ್ತು ವಾಲ್ವ್ ಚೇಂಬರ್ ಅನ್ನು ಪರಿಶೀಲಿಸಿದರು.

ಈ ಕುರಿತು 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಪಾಲಿಕೆ ಸೂಪರಿಂಟೆಂಡಿಂಗ್ ಇಂಜಿನಿಯರ್ ಮಂಜು, ನೆಲಮಟ್ಟದ ಜಲ ಸಂಗ್ರಹಾಗಾರದ ನೀರಿನ ಕವಾಟದಲ್ಲಿ ಸಮಸ್ಯೆ ಇದ್ದು, ವಾಲ್ವ್ ಚೇಂಬರ್ ಅನ್ನು ದುರಸ್ತಿ ಮಾಡಲು ಅಂದಾಜು ಪಟ್ಟಿ ಸಿದ್ಧಪಡಿಸಲಾಗುತ್ತಿದೆ ಎಂದರು. ವಾಲ್ವ್ ಅನ್ನು ಈಗ ಮುಚ್ಚಲಾಗಿದೆ ಹೋಟೆಲ್‌ಗೆ ನುಗ್ಗುತ್ತಿದ್ದ ನೀರು ಬಂದ್ ಆಗಿದೆ. ಹಾನಿಗೊಳಗಾದ ಕಾಂಪೌಂಡ್ ಗೋಡೆಯನ್ನು ದುರಸ್ತಿ ಮಾಡಿಸುತ್ತೇವೆ ಮತ್ತು ಭವಿಷ್ಯದಲ್ಲಿ ಇಂತಹ ಘಟನೆಗಳು ಮರುಕಳಿಸದಂತೆ ಎಚ್ಚರಿಕೆ ವಹಿಸುತ್ತೇವೆ ಎಂದರು.

## ಹುಲಿ ಪ್ರತ್ಯಕ್ಷ: ಜಟ್ಟಿಹುಂಡಿ ಗ್ರಾಮಸ್ಥರಲ್ಲಿ ಭಾರೀ ಆತಂಕ

● ಹಾಡಹಗಲೇ ಹುಲಿ ಓಡಾಡುತ್ತಿರುವುದ ಕಂಡ ರೈತರು
● ತೋಟದ ಸಿಸಿ ಕ್ಯಾಮರಾದಲ್ಲೂ ಹುಲಿ ವಿಹಾರದ ದೃಶ್ಯ ಸೆರೆ
● ಸ್ಥಳಕ್ಕೆ ದೌಡಾಯಿಸಿ ಕಾರ್ಯಾಚರಣೆ ನಡೆಸಿದ ಅರಣ್ಯ ಸಿಬ್ಬಂದಿ

ಮೈಸೂರು,ಫೆ.3(ಎಂಟಿವೈ)– ಮೈಸೂರು ತಾಲೂಕಿನ ಜಟ್ಟಿಹುಂಡಿ ಬಳಿ ಜಮೀನಲ್ಲಿ ಹುಲಿಯೊಂದು ಹಾಡಹಗಲೆ ಪ್ರತ್ಯಕ್ಷವಾಗಿದ್ದು, ಅರಣ್ಯ ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದಾರೆ.

ಮೈಸೂರು ತಾಲೂಕಿನ ಮರಟಿಕ್ಯಾತನಹಳ್ಳಿ, ಜಟ್ಟಿಹುಂಡಿ, ಗೋಹಳ್ಳಿ, ಚಿಕ್ಕರೆ ಬಳಿ ಹುಲಿ ಸಂಚರಿಸುತ್ತಿರುವ ಬಗ್ಗೆ ರೈತರೊಬ್ಬರು ನೀಡಿದ ಮಾಹಿತಿ ಮೇರೆಗೆ ಮೈಸೂರು ವಿಭಾಗದ ಅರಣ್ಯ ಸಿಬ್ಬಂದಿ, ಚಿರತೆ ಪಡೆ ಸೇರಿದಂತೆ 20ಕ್ಕೂ ಹೆಚ್ಚು ಸಿಬ್ಬಂದಿ ಸ್ಥಳೀಯರು ಮಾಹಿತಿ ನೀಡಿದ ಸ್ಥಳಕ್ಕೆ ದೌಡಾಯಿಸಿ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ್ದಾರೆ. ಒಂದೂವರೆ ಗಂಟೆ ಕೂಂಬಿಂಗ್ ನಡೆಸಿದರೂ ಹುಲಿ ಸುಳಿವಾಗಲೀ ಅಥವಾ ಹುಲಿ ಹೆಜ್ಜೆಯಾಗಲೀ ಕಂಡು ಬರಲಿಲ್ಲ.

ಆದರೆ, ಸಮೀಪದ ತೋಟವೊಂದರಲ್ಲಿ ಅಳವಡಿಸಿದ್ದ ಸಿಸಿ ಕ್ಯಾಮರಾದಲ್ಲಿ ಹುಲಿ ಓಡಾಡುತ್ತಿರುವ ದೃಶ್ಯ ಸೆರೆ ಸಿಕ್ಕಿದ್ದು, ಅದನ್ನು ಕಂಡ ಅರಣ್ಯ ಸಿಬ್ಬಂದಿ ತಂಡ ಕಾರ್ಯಾಚರಣೆ ಮುಂದುವರೆಸಿದ್ದಾರೆ. ಹುಲಿ ಇರುವಿಕೆ ಸಿಸಿ ಕ್ಯಾಮರಾದ ದೃಶ್ಯ ಖಚಿತಪಡಿಸಿದ್ದರಿಂದ ಸುತ್ತಮುತ್ತಲಿನ ಗ್ರಾಮಸ್ಥರು ಎಚ್ಚರಿಕೆಯಿಂದ ಇರುವಂತೆ ಜಾಗೃತಿ ಮೂಡಿಸಲಾಗಿದೆ ಅಲ್ಲದೆ ರಾತ್ರಿ ವೇಳೆ ಥರ್ಮಲ್ ಡ್ರೋನ್ ಬಳಸಿ ಹುಲಿ ಪತ್ತೆ ಮಾಡುವ ಕಾರ್ಯಾಚರಣೆ ನಡೆಸಲು ನಿರ್ಧರಿಸಲಾಗಿದೆ.

**ಅಲೋಕ ಬಳಿ ಕಾಣಿಸಿಕೊಂಡಿದ್ದು ಹುಲಿಯಾ?:** ಕಳೆದ ಮೂರು ತಿಂಗಳ ಹಿಂದೆ ಅಲೋಕ ಸುತ್ತಮುತ್ತ ಮೂರು ಮರಿಗಳೊಂದಿಗೆ ಕಾಣಿಸಿಕೊಂಡಿದ್ದ ತಾಯಿ ಹುಲಿ ಅಥವಾ ಮರಿಯೊಂದು ಮರಟಿಕ್ಯಾತನಹಳ್ಳಿ, ಜಟ್ಟಿಹುಂಡಿ ಬಳಿ ಕಾಣಿಸಿಕೊಂಡಿರಬಹುದು ಎಂಬ ಶಂಕೆ ಇದೆ. ಈಗಾಗಲೇ ಎರಡು ಮರಿಯನ್ನು ಸೆರೆ ಹಿಡಿದು ಬನ್ನೇರುಘಟ್ಟದ ಪುನರ್ವಸತಿ ಕೇಂದ್ರಕ್ಕೆ ಸ್ಥಳಾಂತರಿಸಲಾಗಿದೆ. ಆದರೆ, ಇಂದು ಬೆಳಗ್ಗೆ ಕಾಣಿಸಿಕೊಂಡ ಹುಲಿ ಯಾವುದು ಎಂದು ಪತ್ತೆ ಮಾಡಲು ಅರಣ್ಯ ಸಿಬ್ಬಂದಿ ಮುಂದಾಗಿದ್ದಾರೆ.

**ದಾಳಿ ವದಂತಿ:** ರೈತರೊಬ್ಬರ ಮೇಲೆ ಹುಲಿ ದಾಳಿ ಮಾಡಿದೆ ಎಂಬ ವದಂತಿ ಬೆಳಿಗ್ಗೆ ಹಬ್ಬಿತ್ತು. ಆದರೆ ಕೂಂಬಿಂಗ್ ಕಾರ್ಯಾಚರಣೆ ನಡೆಸಿದ ಸಿಬ್ಬಂದಿಗೆ ಹುಲಿ ದಾಳಿ ಮಾಡಿರುವ ಯಾವುದೇ ಪ್ರಕರಣದ ಬಗ್ಗೆ ಮಾಹಿತಿ ಲಭ್ಯವಾಗಲಿಲ್ಲ. ಹುಲಿ ನೋಡಿದ್ದಾಗಿ ಕರೆ ಮಾಡಿದ್ದ ವ್ಯಕ್ತಿಯೂ ಸುರಕ್ಷಿತವಾಗಿರುವುದರಿಂದ ಹುಲಿ ದಾಳಿ ವದಂತಿ ಅಷ್ಟೇ ಎಂಬುದು ಸ್ಪಷ್ಟವಾಗಿದೆ.

ಡಿಸಿಎಫ್ ಕೆಪರಮೇಶ್, ಎಸಿಎಫ್ ರವೀಂದ್ರ ಆರ್‌ಎಫ್‌ಓ ಸಂತೋಷ್ ಹೂಗಾರ್ ಸೇರಿದಂತೆ 20ಕ್ಕೂ ಹೆಚ್ಚು ಸಿಬ್ಬಂದಿ ಕೂಂಬಿಂಗ್ ಕಾರ್ಯಾಚರಣೆಯಲ್ಲಿ ಪಾಲ್ಗೊಂಡಿದ್ದರು.

## ನಕ್ಕರೆ ಅದೇ ಸ್ವರ್ಗ

ಹೆಂಡತಿ: ರೀ ಕನ್ನಡದಲ್ಲಿ ಅದೆಂಥಾ ಫಿಲಂ ತೆಗಿತಾರೆ?
ಇಲ್ಲಿ ನೋಡಿ 'ಬೀಡಿ ಸೇದಿ ಬಂದ' ಅಂತೆ ಫಿಲಂ ಹೆಸರು!
ಗಂಡ : 'ಬೀಡಿ ಸೇದಿ ಬಂದ' ಅಲ್ಲಾ ಲೇ ಅದು 'ಬಿಡಿಸದ ಬಂಧ!!'


ಮೈಸೂರು ಮಿತ್ರ

ಬುಧವಾರ, ಫೆಬ್ರವರಿ 4, 2026

ಸತ್ಯೇನೋತ್ತಭಿತಾ ಭೂಮಿಃ ನ ಹಿ ಸತ್ಯಾತ್ಪರೋ ಧರ್ಮಃ
(ಭೂಮಿಯು ಸತ್ಯದ ಮೇಲೆ ನಿಂತಿದೆ, ಸತ್ಯಕ್ಕಿಂತ ಮಿಗಿಲಾದ ಧರ್ಮವಿಲ್ಲ)

ಸಂಪಾದಕ: ಎಂ.ಗೋವಿಂದೇಗೌಡ *M.A.*


## ಅಮೃತ ವಾಹಿನಿ..........

ನಾವು ಇಂದು ಮಾಡುವ ಪ್ರತಿಯೊಂದು ಕಾರ್ಯವೂ ನಮ್ಮ ನಾಳೆಗಳ ಸ್ವರೂಪವನ್ನು ನಿರ್ಧರಿಸುತ್ತದೆ. ಹಾಗಾಗಿ ನಮ್ಮ ಪ್ರತಿ ಹೆಜ್ಜೆಯೂ ಸಮಯೋಚಿತವಾಗಿರಲಿ.

ವೇದ ಸುಳ್ಳಾದರೂ ಗಾದೆ ಸುಳ್ಳಾಗದು { ಸ್ವಾರ್ಥ ಉಳಿಸಿದವ ಪಾಪಾತ್ಮ, ನಿಸ್ವಾರ್ಥ ಗಳಿಸಿದವ ಪುಣ್ಯಾತ್ಮ.

## ನಿಮ್ಮ ಪತ್ರಗಳು

### ಚಿನ್ನ–ಬೆಳ್ಳಿ ಬೆಲೆ ಏರಿಕೆ : ಲಾಬಿಗೆ ಕಡಿವಾಣ ಅಗತ್ಯ

ಮಾನ್ಯರೆ,

ಚಿನ್ನ, ಬೆಳ್ಳಿಗಳ ಬೆಲೆ ಇತ್ತೀಚಿನ ವರ್ಷಗಳಲ್ಲಿ ನಾಗಾಲೋಟದಲ್ಲಿ ಏರಿಕೆಯಾಗುತ್ತಿದೆ. ಅದರಲ್ಲೂ ಕಳೆದ ಒಂದು ವರ್ಷದಿಂದ ಈಚೆಗೆ ಪ್ರತಿ ದಿನವೂ ಭಾರೀ ಪ್ರಮಾಣದಲ್ಲಿ ಏರುತ್ತಿದೆ. ಇಳಿಕೆ ನೂರು ರೂಪಾಯಿ ಆದರೆ, ಏರಿಕೆ ಐದು, ಹತ್ತು ಸಾವಿರದ ಪ್ರಮಾಣದಲ್ಲಿ ಆಗುತ್ತಿದೆ. ಉದಾ :20.1.26 ರಂದು ಚಿನ್ನ ಹತ್ತು ಗ್ರಾಮ್‌ಗೆ 5100 ರೂ ಏರಿಕೆ ಆಗಿದ್ದರೆ ಬೆಳ್ಳಿ ಕೆಜಿಗೆ 20400 ರೂ ಏರಿಕೆ ಕಂಡಿದೆ! ಇದು ನಿಜಕ್ಕೂ ಆಶ್ಚರ್ಯಕರ.

ಭಾರತದ ಸಂಪ್ರದಾಯದಲ್ಲಿ ಚಿನ್ನ, ಬೆಳ್ಳಿ ಗಳಿಗೆ ವಿಶೇಷ ಸ್ಥಾನಮಾನವಿದೆ. ಮದುವೆಯಂತಹ ಶುಭ ಕಾರ್ಯಗಳಿಗೆ, ವಧು–ವರರಿಗೆ ಚಿನ್ನದ ಆಭರಣಗಳನ್ನು ಮಾಡಿಸಲೇಬೇಕಾದ ಅನಿವಾರ್ಯತೆ ಬಹುತೇಕ ಕುಟುಂಬಗಳಲ್ಲಿದೆ. ಇದರಿಂದಾಗಿ ಮಧ್ಯಮ ವರ್ಗದವರು ಇತ್ತ ಆಭರಣಗಳನ್ನು ಕೊಳ್ಳಲು ಆಗದೇ, ಅತ್ತ ಬಿಡಲೂ ಆಗದೇ ಸಾಲದ ಸುಳಿಗೆ ಸಿಲುಕಿ ಹೊಯ್ದಾಡುವಂತಾಗಿದೆ.

ಚಿನ್ನ–ಬೆಳ್ಳಿ ಬೆಲೆ ಏರಿಕೆಗೆ ಅಮೆರಿಕಾ ಅಂತರ ರಾಷ್ಟ್ರೀಯ ವಿದ್ಯಮಾನಗಳು, ಷೇರು ಪೇಟೆ, ಬ್ಯಾಂಕ್ ಬಡ್ಡಿ, ತೈಲ ಬೆಲೆ ಏರಿಕೆಗಳು ಕಾರಣ ಎಂದು ಮೇಲ್ನೋಟಕ್ಕೆ ಕಂಡು ಬಂದರೂ, ಇದು ಭಾರತದ ಜನರಿಗೆ ಇರುವ ಚಿನ್ನದ ಮೇಲಿನ ಮೋಹ, ಇದರಿಂದ ಎಷ್ಟೇ ಏರಿಕೆ ಆದರೂ ಜನರು ಚಿನ್ನ ಕೊಳ್ಳುತ್ತಾರೆ ಎಂದು ಅರಿತಿರುವ ಚಿನ್ನದ ಲಾಬಿ ಇದರ ಹಿಂದೆ ಕೆಲಸ ಮಾಡುತ್ತಿದೆಯೇ? ಎನ್ನುವ ಅನುಮಾನ ಜನರನ್ನು ಕಾಡುತ್ತಿದೆ. ಆದ್ದರಿಂದ ಕೇಂದ್ರ, ರಾಜ್ಯ ಸರ್ಕಾರಗಳು ಈ ಬಗ್ಗೆ ಗಮನಹರಿಸಬೇಕಾಗಿದೆ.

ಅಲ್ಲದೆ ಚಿನ್ನ ಬೆಳ್ಳಿಯ ಮೇಲೆ ಶೇ 3 ರಷ್ಟು ಜಿಎಸ್‌ಟಿ ಇದೆ. ಈಗಿನ ದರದಲ್ಲಿ 10 ಗ್ರಾಂ ಚಿನ್ನಕ್ಕೆ ನಾಲ್ಕೂವರೆ ಸಾವಿರ ರೂ. ಜಿಎಸ್‌ಟಿ ಆಗುತ್ತದೆ. ಆದರೆ ಬ್ರಾಂಡ್ ಅಲ್ಲದ ಮಳಿಗೆಗಳಲ್ಲಿ ಚಿನ್ನದ ವ್ಯಾಪಾರಿಗಳು, ಗ್ರಾಹಕರಿಗೆ ಕಡಿಮೆ ದರದಲ್ಲಿ ಆಭರಣ ನೀಡುವ ಸಲುವಾಗಿ ಬಿಲ್ ಹಾಕದೆ ಆಭರಣಗಳನ್ನು ನೀಡುತ್ತಾರೆ. ಇದರಿಂದ ಗ್ರಾಹಕರಿಗೆ ಅಷ್ಟು ಲಾಭ ವಾಗುವುದರಿಂದ ಗ್ರಾಹಕರು ಕೂಡ ಇದಕ್ಕೆ ಸಮ್ಮತಿಸುತ್ತಾರೆ. ಬಿಲ್ ಕೇಳಿದರೆ ಜಿಎಸ್‌ಟಿ ಅಸ್ತ್ರ ಬಿಡುತ್ತಾರೆ! ಇದರಿಂದ ಸರ್ಕಾರಕ್ಕೆ ತೆರಿಗೆ ವಂಚನೆಯಾಗುತ್ತಿದೆ. ಇಲ್ಲಿ ಗ್ರಾಹಕರದ್ದು ಕೂಡ ತಪ್ಪು ಎಂದು ಹೇಳಲು ಸಾಧ್ಯವಿಲ್ಲ. ಆದ್ದರಿಂದ ಕೇಂದ್ರ ಸರ್ಕಾರ ಜಿಎಸ್‌ಟಿಯನ್ನು ಶೇ1ಕ್ಕೆ ಇಳಿಸಬೇಕು. ಆಗ ಸರ್ಕಾರ, ಗ್ರಾಹಕ ಇಬ್ಬರಿಗೂ ಅನುಕೂಲವಾಗುತ್ತದೆ. ಬರುವ ಬಜೆಟ್‌ನಲ್ಲಿ ಕೇಂದ್ರ ಸರ್ಕಾರ ಈ ಬಗ್ಗೆ ತೀರ್ಮಾನ ಮಾಡಬೇಕು.

–ಮುಳ್ಳೂರು ಪ್ರಕಾಶ್, ಕನಕದಾಸನಗರ, ಮೈಸೂರು.

### 'ಕೇಂದ್ರ' ರಾಷ್ಟ್ರೀಯ ಹಲಸಿನ ಹಣ್ಣಿನ ಮಂಡಳಿ ಸ್ಥಾಪಿಸಲಿ

ಮಾನ್ಯರೇ,

ನಮ್ಮ ದೇಶದಲ್ಲಿ ಕಾಫಿ, ಟೀ ಮತ್ತು ಸಾಂಬಾರ ಪದಾರ್ಥಗಳ ಅಭಿವೃದ್ಧಿಗೆ ಪ್ರತ್ಯೇಕ ಮಂಡಳಿಗಳಿರುವಂತೆ ಕೇಂದ್ರ ಸರ್ಕಾರವು ಹಲಸಿನ ಹಣ್ಣಿನ ಮಂಡಳಿಯನ್ನು (ಜಾಕ್ ಫ್ರೂಟ್ ಬೋರ್ಡ್) ಸ್ಥಾಪಿಸುವುದು ಅತ್ಯಗತ್ಯವಾಗಿದೆ ವಿಶ್ವದಲ್ಲೇ ಅತೀ ಹೆಚ್ಚು ಹಲಸು ಬೆಳೆಯುವ ದೇಶ ಭಾರತವಾಗಿದ್ದು ಅದರಲ್ಲಿಯೂ ದಕ್ಷಿಣ ಭಾರತದ ಕೊಡುಗೆ ಅಪಾರ. ಕರ್ನಾಟಕವೊಂದರಲ್ಲೇ ವಾರ್ಷಿಕ ಸುಮಾರು 4 ಲಕ್ಷ ಟನ್ ಉತ್ಪಾದನೆಯಾಗುತ್ತಿದ್ದು ಕೇರಳ ಮತ್ತು ತಮಿಳುನಾಡಿನೊಂದಿಗೆ ಸೇರಿ ಇಡೀ ದಕ್ಷಿಣ ಭಾರತವು ಈ ಬೆಳೆಯಲ್ಲಿ ಮುಂಚೂಣಿಯಲ್ಲಿದೆ. ಆದರೆ, ದುರಂತವೆಂದರೆ ಸರಿಯಾದ ಮಾರುಕಟ್ಟೆ ಮತ್ತು ಶೇಖರಣಾ ವ್ಯವಸ್ಥೆಯಿಲ್ಲದೆ ಶೇ. 40 ರಿಂದ 50 ರಷ್ಟು ಹಣ್ಣುಗಳು ಪ್ರತಿವರ್ಷ ವ್ಯರ್ಥವಾಗುತ್ತಿವೆ.

ಹಲಸು ಕೇವಲ ಋತುಮಾನದ ಹಣ್ಣಲ್ಲ ಅದು ಪೌಷ್ಟಿಕಾಂಶದ ಗಣಿಯಾಗಿರುವ ಭವಿಷ್ಯದ ಸೂಪರ್ ಫುಡ್. ಇದನ್ನು ಮೌಲ್ಯವರ್ಧಿತ ಉತ್ಪನ್ನಗಳನ್ನಾಗಿ ಪರಿವರ್ತಿಸಿದರೆ ಗ್ರಾಮೀಣ ಭಾಗದ ರೈತರ ಆದಾಯ ದ್ವಿಗುಣಗೊಳ್ಳಲು ಸಾಧ್ಯವಿದೆ. ಒಂದು ವೇಳೆ ಕೇಂದ್ರ ಸರ್ಕಾರವು ಪ್ರತ್ಯೇಕ ಮಂಡಳಿ ರಚಿಸಿದರೆ ಸಂಶೋಧನೆ ರಫ್ತು ಮತ್ತು ಶೀತಲೀಕರಣ ಘಟಕಗಳಿಗೆ ಹೆಚ್ಚಿನ ಅನುದಾನ ಸಿಗಲಿದೆ. ಇದು ದಕ್ಷಿಣ ಭಾರತದ ಕೃಷಿ ಆರ್ಥಿಕತೆಗೆ ಹೊಸ ಚೈತನ್ಯ ನೀಡಬಲ್ಲದು. ಆದುದರಿಂದ, ಸರ್ಕಾರವು ಈ ಕೂಡಲೇ ಹಲಸನ್ನು ವಾಣಿಜ್ಯ ಬೆಳೆ ಎಂದು ಪರಿಗಣಿಸಿ ಮಂಡಳಿಯನ್ನು ಸ್ಥಾಪಿಸಬೇಕು. –ಡಾ. ಹೆಚ್.ಕೆ. ವಿಜಯಕುಮಾರ್, ಮೈಸೂರು.

### ಅಂಚೆ ಕಚೇರಿಗಳಲ್ಲಿ ಕನ್ನಡದ ಬಗ್ಗೆ ತಾತ್ಸಾರ ಮನೋಭಾವನೆ ಏಕೆ?

ಮಾನ್ಯರೆ,

ಕೇಂದ್ರ ಸರ್ಕಾರದ ಸ್ವಾಧೀನದಲ್ಲಿರುವ ಅಂಚೆ ಕಚೇರಿಗಳಲ್ಲಿ ಗ್ರಾಹಕರು ಹಣ ಕಟ್ಟುವ ಉಳಿತಾಯ ಖಾತೆ ಸೇರಿದಂತೆ ಆರ್‌ಡಿ, ಪಿಪಿಎಫ್, ಎಂಐಎಸ್, ಹಾಗೂ ಅಂಚೆ ಕಚೇರಿಗಳಲ್ಲಿ ತೊಡಗಿಸಿರುವ ಹಣ ವಾಪಸ್ ಪಡೆಯುವ ಅಥವಾ ಮೆಚುರಿಟಿ ಹಣ ಪಡೆಯುವ ಯಾವುದೇ ರೀತಿಯ ಚಲನ್‌ಗಳು ಸಹ ಕನ್ನಡದಲ್ಲಿ ದೊರೆಯುವುದಿಲ್ಲ. ಫಾರಂನ ಒಂದು ಭಾಗದಲ್ಲಿ ಇಂಗ್ಲಿಷ್ ಹಾಗೂ ಮತ್ತೊಂದು ಭಾಗದಲ್ಲಿ ಹಿಂದಿಯಲ್ಲಿ ಮಾತ್ರ ಪ್ರಿಂಟ್ ಆಗಿರುತ್ತವೆ.

ಆತಂಕಕಾರಿ ಸಂಗತಿಯೆಂದರೆ ನಮ್ಮ ಪಕ್ಕದ ರಾಜ್ಯಗಳಲ್ಲಿ ಉದಾಹರಣೆಗೆ ತಮಿಳು ನಾಡಿನಲ್ಲಿ ಒಂದು ಭಾಗದಲ್ಲಿ ಇಂಗ್ಲಿಷ್ ಹಾಗೂ ಇನ್ನೊಂದು ಕಡೆ ತಮಿಳು ಭಾಷೆಯಲ್ಲಿ ಪ್ರಿಂಟ್ ಆಗಿರುತ್ತದೆ. ಆದರೆ ನಮ್ಮ ಕರ್ನಾಟಕದ ಅಂಚೆ ಕಚೇರಿಗಳಲ್ಲಿ ಕನ್ನಡದ ಬಗ್ಗೆ ತಾತ್ಸಾರ ಮನೋಭಾವನೆ ಏಕೆ? ಇದೊಂದು ರೀತಿಯಲ್ಲಿ ಮಲತಾಯಿ ಧೋರಣೆಯಲ್ಲವೇ? ಈ ಬಗ್ಗೆ ಸ್ಥಳೀಯ ಅಂಚೆ ಕಚೇರಿಗಳ ಸಿಬ್ಬಂದಿ ವರ್ಗದವರನ್ನು ಕೇಳಿದರೆ ನೀವು ಮೇಲಿನ ಅಧಿಕಾರಿಗಳಿಗೆ ಈ ಬಗ್ಗೆ ದೂರು ನೀಡಿ ನಮಗೂ, ಇದಕ್ಕೂ ಸಂಬಂಧವಿಲ್ಲ ಎಂದು ಮೇಲಿನ ಆಫೀಸ್‌ನಿಂದ ಬರುವ ಫಾರಂಗಳನ್ನು ನಾವು ನೀಡುತ್ತಿದ್ದೇವೆ ಎಂದು ಮೇಲಾಧಿಕಾರಿಗಳ ದೂರವಾಣಿ ಸಂಖ್ಯೆ ನೀಡುತ್ತಾರೆ. ಆ ಮೇಲಾಧಿಕಾರಿಗಳನ್ನು ಸಂಪರ್ಕಿಸಿದರೆ ಅವರು, ಸಾರ್ ನೀವು ದೆಹಲಿಯಲ್ಲಿರುವ ಹೆಡ್ ಆಫೀಸನ್ನು ಕೇಳಿ ಎನ್ನುತ್ತಾರೆ. ಕನ್ನಡ ಅಭಿವೃದ್ಧಿ ಪ್ರಾಧಿಕಾರದವರು ಕೂಡಲೇ ಈ ಬಗ್ಗೆ ಗಮನ ಹರಿಸಬೇಕು.

–ಬೂಕನಕೆರೆ ವಿಜಯೇಂದ್ರ, ಕುವೆಂಪುನಗರ, ಮೈಸೂರು




ಡಾ. ಹೆಚ್.ವಿ. ನಾಗರಾಜ ರಾವ್
ಮೈಸೂರು.



## ಸಂಸ್ಕೃತಿ ಚಿಂತನಾ

# ವ್ಯಕ್ತಿತ್ವ ವಿಕಸನ ವಿಚಾರಧಾರೆ

ಪ್ರತಿಯೊಬ್ಬ ವ್ಯಕ್ತಿಯಲ್ಲೂ ಪ್ರತಿಭಾ ವಿಶೇಷವಿದೆ. ಅದು ಹೂವಿನಂತೆ ಅರಳುವ ಅಥವಾ ವಿಕಸಿಸುವ ಅವಕಾಶಗಳು ವಿರಳ. ಅದು ಮುರುಟಿ ಹೋಗುವ ಸಂಭವವೇ ಹೆಚ್ಚು. ವ್ಯಕ್ತಿಯ ಪ್ರತಿಭೆಯ ವಿಕಾಸ ಪರಿಸರವನ್ನೂ, ಸನ್ನಿವೇಶವನ್ನೂ, ಪ್ರೋತ್ಸಾಹವನ್ನೂ ಅವಲಂಬಿಸಿರುತ್ತದೆ ಎನ್ನುವುದು ನಿಜವಾದರೂ ಆಯಾ ವ್ಯಕ್ತಿಯ ಅಂತಶ್ಶಕ್ತಿಯನ್ನು ಸಾಧಿಸುವ ಛಲವನ್ನೂ, ಪ್ರಯತ್ನವನ್ನೂ, ಆತ್ಮವಿಶ್ವಾಸವನ್ನೂ ಅವಲಂಬಿಸುತ್ತದೆ ಎಂಬುದು ಅಷ್ಟೇ ಸತ್ಯ. ವ್ಯಕ್ತಿಯಲ್ಲಿ ಆತ್ಮ ವಿಶ್ವಾಸವನ್ನು ಬೆಳೆಸಲು ಬೇರೆಯವರು ನೆರವಾಗುತ್ತಾರೆ ಎಂಬುದು ಅನುಭವ ಸಿದ್ಧ.

ರಾಮಭಕ್ತ ಹನುಮಂತನಿಗೆ ತನ್ನ ಶಕ್ತಿ ತಿಳಿದಿರಲಿಲ್ಲ. ಬೇರೆಯವರು ಅವನನ್ನು ಹೊಗಳಿ ಅವನ ಅಪಾರ ಶಕ್ತಿಯನ್ನು ಜ್ಞಾಪಿಸಿದಾಗಲೇ ಅವನಿಗೆ ಉತ್ಸಾಹ ತುಂಬಿ ಸಾಗರವನ್ನು ದಾಟಿದನೆಂಬ ವರ್ಣನೆ ರಾಮಾಯಣದಲ್ಲಿದೆ. ಈ ದೃಷ್ಟಿಯಿಂದ ಇಂದು ವಿದ್ಯಾರ್ಥಿಗಳಿಗೆ, ವೃತ್ತಿಪರರಿಗೆ, ಎಲ್ಲ ಸಾರ್ವಜನಿಕರಿಗೆ ವ್ಯಕ್ತಿತ್ವ ವಿಕಸನದ ವಿಚಾರಗಳು ಅವಶ್ಯಕ. ಅನೇಕ ದೊಡ್ಡ ಸಂಸ್ಥೆಗಳು ವ್ಯಕ್ತಿತ್ವ ಶಿಬಿರಗಳನ್ನು ನಡೆಸಿ ಲೋಕೋಪಕಾರವನ್ನು ಮಾಡುತ್ತಿವೆ. ಅಲ್ಲಿ ವ್ಯವಸ್ಥಿತವಾದ ತರಗತಿಗಳನ್ನು ನಡೆಸುವ, ಸ್ಫೂರ್ತಿದಾಯಕ ವಿಷಯಗಳನ್ನು ತರ್ಕಬದ್ಧವಾಗಿ ಹೇಳುವ, ಸ್ವಾನುಭವದ ಉದಾಹರಣೆಗಳಿಂದ ಸಮರ್ಥಿಸುವ ಸಂಪನ್ಮೂಲ ವ್ಯಕ್ತಿಗಳೂ ಬೇಕು. ಅಂತಹ ವಿಶಿಷ್ಟ ವ್ಯಕ್ತಿಯೊಬ್ಬರು ಜಯಪ್ರಕಾಶ್ ಪುತ್ತೂರು. ಅವರನ್ನು ಜಯಪ್ರಕಾಶ್‌ರಾವ್ ಎಂತಲೂ, ಜೆ.ಪಿ. ಎಂತಲೂ ಆತ್ಮೀಯರು ಕರೆಯುವುದುಂಟು. ಇವರು ರಾಷ್ಟ್ರ ಮಟ್ಟದಲ್ಲಿ ಮತ್ತು ಅಂತಾರಾಷ್ಟ್ರ ಸ್ತರದಲ್ಲಿ ವ್ಯಕ್ತಿತ್ವ ವಿಕಸನ ಶಿಬಿರಗಳನ್ನು ನಡೆಸಿ ಖ್ಯಾತಿಯನ್ನು ಪಡೆದಿರುವವರು. ಭೂತಪೂರ್ವ ರಾಷ್ಟ್ರಪತಿ ಎ.ಪಿ.ಜೆ. ಅಬ್ದುಲ್ ಕಲಾಂ, ಕೇಂದ್ರ ಮಂತ್ರಿಗಳಾಗಿದ್ದ ಜಾರ್ಜ್ ಫರ್ನಾಂಡೀಸ್ ಮುಂತಾದವರೊಡನೆ ಕೆಲಸ ಮಾಡಿ ಹೆಸರನ್ನು ಗಳಿಸಿದವರು. ತಮ್ಮ ಜ್ಞಾನವನ್ನು ಸಾರವತ್ತಾಗಿ ಜನರಿಗೆ ತಿಳಿಸಲು ಅವರು ರಚಿಸಿ ಪ್ರಕಟಿಸಿರುವ ಪುಸ್ತಕ ವ್ಯಕ್ತಿತ್ವ ವಿಕಸನ ವಿಚಾರಧಾರೆ. ಇದನ್ನು ಸಪ್ನ ಬುಕ್ ಹೌಸ್ 2025ರಲ್ಲಿ ಪ್ರಕಟಿಸಿದೆ. ಇದರಲ್ಲಿ ಪ್ರತಿಯೊಬ್ಬ ಮಾನವನಿಗೂ ಉಪಯೋಗ ವಾಗುವ ನಲವತ್ತೆರಡು ಲೇಖನಗಳಿವೆ. ಇವುಗಳಲ್ಲಿ ಜಯಪ್ರಕಾಶ್‌ರಾವ್ ಅವರ ಲೇಖನಗಳಲ್ಲದೆ, ಪ್ರೊ ನಿರಂಜನ ವಾನಳ್ಳಿ, ಎ.ಎಸ್.ಎನ್. ಹೆಬ್ಬಾರ್, ಎಚ್.ಜಿ. ಜಗದೀಶ್, ಜಿ.ಕೆ ಮಧ್ಯಸ್ಥ ಉಡುಪಿ, ಎಂ.ಬಿ.ಜಯರಾಮ್, ಡಾ. ಅಬ್ದುಲ್ ಕಲಾಂ ಅವರ ಬರಹಗಳೂ ಇವೆ. ಇವರೆಲ್ಲ ಶ್ರೇಷ್ಠ ವ್ಯಕ್ತಿತ್ವವನ್ನು ಹೊಂದಿ ಜೀವನದಲ್ಲಿ ಹೆಚ್ಚು ಯಶಸ್ಸನ್ನು ಗಳಿಸಿದವರು. ಆದ್ದರಿಂದ ಈ ಬಗೆಗೆ ತಿಳಿವನ್ನು ಜನರಿಗೆ ಕೊಡಲು ಅರ್ಹರು.

ವ್ಯಕ್ತಿತ್ವ ವಿಕಸನದ ತರಬೇತಿಗಳು ಏಕೆ? ಎಂಬುದು ಇಲ್ಲಿ ಮೊದಲನೆಯ ಲೇಖನ. ವ್ಯಕ್ತಿತ್ವ ವಿಕಾಸ ತಾನಾಗಿ ಆಗುತ್ತದೆ. ಅದಕ್ಕೆ ತರಬೇತಿ ಬೇಕೆ? ಎನ್ನುವವರೂ ಇದ್ದಾರೆ.ಆದ್ದರಿಂದ ಈ ಲೇಖನ ಬೇಕು. ಅನೇಕ ಲೇಖನಗಳಲ್ಲಿ ಜಯಪ್ರಕಾಶರು ಬುದ್ಧನ ಜೀವನದ ಉದಾಹರಣೆಗಳನ್ನು ಕೊಟ್ಟಿದ್ದಾರೆ. ಯಾರಾದರೂ ಕೊಟ್ಟಿದ್ದನ್ನು ನಾವು ಸ್ವೀಕರಿಸದಿದ್ದರೆ ಅದು ಅವರದಾಗಿಯೇ ಉಳಿಯುತ್ತದೆ. ಹಾಗೆ ಯಾರಾದರೂ ಬೈಯುವ ಮಾತುಗಳನ್ನು ನಿಂದನೆಯ ನುಡಿಗಳನ್ನು ನಾವು ಸ್ವೀಕರಿಸದಿದ್ದರೆ ಸಾಕು. ಅವು ಅವರಿಗೇ ಸೇರುತ್ತವೆ ಎಂಬ ಮಾತು ಎಷ್ಟು ಚೆನ್ನಾಗಿದೆ! ಸೋಲೇ ಗೆಲುವಿನ ಸೋಪಾನ ಎಂಬ ಲೇಖನದಲ್ಲಿ ಲೇಖಕರು ಉತ್ತಮ ವಿಶ್ಲೇಷಣೆಯನ್ನು ಮಾಡಿದ್ದಾರೆ. ಯಾವುದನ್ನು ಒಬ್ಬರು ಗೆಲುವೆಂದು ಪರಿಗಣಿಸುತ್ತಾರೋ ಅದನ್ನೇ ಮತ್ತೊಬ್ಬರು ಸೋಲೆಂದು ತಿಳಿಯುವ ಕಾರಣದಿಂದ ಅದೆಲ್ಲ ದೃಷ್ಟಿಭೇದ ಅಷ್ಟೆ.




ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಇಟ್ಟುಕೊಂಡಿರುವುದು, ಅದನ್ನು ಪರಿಶ್ರಮದಿಂದ ತಲುಪುವುದು ಬದುಕಿನಲ್ಲಿ ಎಷ್ಟು ಮುಖ್ಯ ಎಂಬುದನ್ನು ಗುರಿಗಳ ಅನುಷ್ಠಾನ ಮುಂತಾದ ಲೇಖನಗಳಲ್ಲಿ ಸ್ಪಷ್ಟಪಡಿಸಲಾಗಿದೆ. ಪ್ರಪಂಚದಲ್ಲಿ ಬಹುಜನರಿಗೆ ನಿರ್ದಿಷ್ಟವಾದ ಯಾವ ಗುರಿಯೂ ಇರುವುದಿಲ್ಲ. ದಾರ ಕಿತ್ತ ಗಾಳಿಪಟದಂತೆ ಎಲ್ಲೆಲ್ಲೋ ಗಾಳಿ ಬೀಸಿದಂತೆ ಹಾರಿ ಎಲ್ಲೋ ಹೋಗಿ ಬೀಳುತ್ತಾರೆ. ಆದರೆ ಜೀವನದಲ್ಲಿ ನಿರ್ದಿಷ್ಟ ಗುರಿಯನ್ನು ಹೊಂದಿ ಶ್ರಮಿಸಿದ ಮಹನೀಯರು ಮತ್ತು ಮಹಿಳೆಯರು ಉನ್ನತ ಸ್ಥಾನಗಳಿಗೆ ಏರಿ ನಮಗೆ ಆದರ್ಶರಾಗಿದ್ದಾರೆ ಎಂಬುದನ್ನು ಈ ಲೇಖನಗಳಲ್ಲಿ ಸ್ಪಷ್ಟಪಡಿಸಲಾಗಿದೆ.

ಪ್ರಭಾವಪೂರ್ಣ ಭಾಷಣ ಕಲೆ ಎಂಬ ಲೇಖನವು ಉತ್ತಮ ಭಾಷಣಕಾರರಾಗ ಬಯಸುವವರಿಗೆ ಮಾರ್ಗದರ್ಶಕವಾಗಿದೆ. ಸ್ವಾಗತ ಭಾಷಣ, ಪರಿಚಯ ಭಾಷಣ, ವಂದನಾರ್ಪಣೆ ಇವುಗಳನ್ನು ಹೇಗೆ, ಎಷ್ಟು ಮಾತನಾಡಬೇಕು. ಇದನ್ನು ಲೇಖಕರು ತಿಳಿಸಿದ್ದಾರೆ. ಇಂದು ಬಂದಿರುವ ತೊಂದರೆ ಏನೆಂದರೆ ಸ್ವಾಗತ ಭಾಷಣವನ್ನು ಮಾಡುವವರು ಮುಖ್ಯ ಭಾಷಣಕಾರರಿಗಿಂತ ತಾವೇನೂ ಪಾಂಡಿತ್ಯದಲ್ಲಿ ಕಡಿಮೆಯಲ್ಲ ಎಂದು ತೋರಿಸಿಕೊಳ್ಳುವುದಕ್ಕಾಗಿ ದೀರ್ಘ ಭಾಷಣಗಳನ್ನು ಮಾಡುವುದು, ಅತಿಥಿಗಳ ಬಗೆಗೆ ಏನನ್ನೂ ತಿಳಿಯದವರು ತಪ್ಪು ತಪ್ಪಾಗಿ ಪರಿಚಯ ಮಾಡುವುದು, ಎಲ್ಲರೂ ಹೊರಡಲು ಸಿದ್ಧರಾಗಿರುವಾಗ ವಂದನಾರ್ಪಣಕಾರರು ಒಬ್ಬೊಬ್ಬರ ಹೆಸರನ್ನೂ ಹೇಳುತ್ತಾ ವಂದನಾರ್ಪಣೆ ಮಾಡುತ್ತಾ ಬೇಸರವನ್ನು ಹುಟ್ಟಿಸುವುದು ಅಂತಹವರು ಪ್ರಸ್ತುತ ಲೇಖನವನ್ನು ಓದಿ ತಿದ್ದಿಕೊಳ್ಳುವುದು ಲೇಸು.

ಜೀವನದಲ್ಲಿ ಚೆಲ್ಲುತ್ತಾ ಇರಬೇಕು ಹೂನಗೆ ಎಂಬ ಲೇಖನ ಸ್ವಾರಸ್ಯಪೂರ್ಣವಾಗಿದೆ. ಇದರಲ್ಲಿ ದಿನಕರ ದೇಸಾಯಿ ಅವರ ಚುಟುಕವನ್ನು ಲೇಖಕರು ಉದಾಹರಿಸಿದ್ದಾರೆ–

**ಮಾತಾಡಿ ಮಾತಾಡಿ ನಡೆಸಿದರು ಗಾಡಿ**
**ಇದಕ್ಕೆನ್ನುವನೆ ನವ ಭಾರತದ ನಾಡಿ**
**ಹೋದಲ್ಲಿ ಬಂದಲ್ಲಿ ಕೂತಲ್ಲಿ ಮಾತು**
**ಮತ್ತಷ್ಟು ಅಗಲವಾಯಿತು ಕಿವಿಯ ತೂತು.**

**ಈ ದಿನವೇ ಸುದಿನ ಎಂಬ ಲೇಖನದಲ್ಲಿ ಸುಂದರವಾದ ಉಕ್ತಿಯಿದೆ.**

**Yesterday is a cancelled cheque**
**Tomorrow is a promissory note**
**Today is ready cash! Use it.**

ಇದನ್ನು ಅರ್ಥ ಮಾಡಿಕೊಂಡು ಅಳವಡಿಸಿಕೊಂಡರೆ ವ್ಯಕ್ತಿತ್ವ ವಿಕಸನ ತಾನಾಗಿ ಆಗುತ್ತದೆ.

ಸಂವಹನ ಕೌಶಲ ಎಂಬ ಲೇಖನ ಪ್ರೊ. ನಿರಂಜನ ವಾನಳ್ಳಿಯವರದು ವೈಜ್ಞಾನಿಕವೂ ವೈಚಾರಿಕವೂ ಆಗಿದೆ. ವ್ಯಕ್ತಿತ್ವ ವಿಕಸನದಲ್ಲಿ ಸಂವಹನ ಎಷ್ಟು ಮುಖ್ಯ. ಸಂವಹನಕಾರನ ಲಕ್ಷಣಗಳೇನು ಎಂಬುದನ್ನು ವಾನಳ್ಳಿಯವರು ತಿಳಿಸಿದ್ದಾರೆ. ಮಾತಿನಂತೆ ದೇಹಭಾಷೆಯೂ ಮುಖ್ಯ ಎಂಬುದು ಅವರ ಲೇಖನದಲ್ಲಿ ಒತ್ತಿ ಹೇಳಲ್ಪಟ್ಟಿದೆ.

ಕೇಳುವಿಕೆ ಎಂಬ ಕೌಶಲ ಲೇಖನ ಸಂವಹನದ ಇನ್ನೊಂದು ಆಯಾಮವನ್ನು ತೆರೆದಿಟ್ಟಿದೆ. ಉತ್ತಮ ಸಂವಹನಕಾರನು ಉತ್ತಮ ಕೇಳುಗನೂ ಆಗಿರುತ್ತಾನೆ. ಸಂವಹನ ಏಕಮುಖವಲ್ಲ, one way traffic ಅಲ್ಲ. ಎರಡು ದಿಕ್ಕಿನಲ್ಲಿ ಚಲಿಸುವುದು ಎಂಬುದನ್ನು ಲೇಖಕರು ಸ್ಪಷ್ಟಪಡಿಸಿದ್ದಾರೆ. ವಿಶ್ವಾಸಾರ್ಹತೆ, ಸಂದರ್ಭ, ತಿರುಳು, ಸ್ಪಷ್ಟತೆ, ಮಾಧ್ಯಮ, ಸಾಮರ್ಥ್ಯ ಎಂಬ ಏಳು ಯಶಸ್ವಿ ಸಂವಹನ ಸೂತ್ರಗಳನ್ನೂ ಅವರು ವಿವರಿಸಿದ್ದಾರೆ.

ಸೌಜನ್ಯ ಇಲ್ಲದ ಸಾರ್ವಜನಿಕ ಸೇವೆ ಎಂಬ ಲೇಖನವೂ ಈ ಪುಸ್ತಕದಲ್ಲಿದೆ. ಸರ್ಕಾರಿ ಕಚೇರಿಗಳಲ್ಲಿ ಸಿಗುವ ಸೇವೆ ಹೇಗಿರುವುದೆಂದು ಈ ದೇಶದ ಎಲ್ಲ ಜನರಿಗೂ ಗೊತ್ತು. ಖಾಸಗಿ ಹೋಟೆಲುಗಳಲ್ಲೂ ಯಾವ ಸೌಜನ್ಯವನ್ನೂ ತೋರಿಸದೆ ರೂಕ್ಷವಾಗಿ ನಡೆದುಕೊಂಡ ಸಿಬ್ಬಂದಿಯ ಬಗೆಗೆ ಜಯಪ್ರಕಾಶರಾವ್ ಬರೆದಿದ್ದಾರೆ. ಅಂತಹ ಸಂದರ್ಭದಲ್ಲಿ ಮೇಲಧಿಕಾರಿಗಳ ಸಂಪರ್ಕದಿಂದ ಸಮಸ್ಯೆ ಹೇಗೆ ಬಗೆಹರಿಯಿತೆಂಬುದನ್ನು ತಿಳಿಸಿದ್ದಾರೆ. ಈ ಅನುಭವಗಳು ಓದುಗರಿಗೆ ಪಾಠಗಳಂತಿವೆ. ಸಮಸ್ಯೆ ಎದುರಾದಾಗ ದೃಢ ವ್ಯಕ್ತಿತ್ವ ಇದ್ದವರು ಪರಿಹಾರವನ್ನು ಕಂಡುಕೊಳ್ಳಬಲ್ಲರು. ಆ ವ್ಯಕ್ತಿತ್ವ ಇಲ್ಲದವರು ಕಷ್ಟದಲ್ಲಿ ಸಿಕ್ಕಿಕೊಳ್ಳುತ್ತಾರೆ. ಹಾಗಾಗದಿರಲು ವ್ಯಕ್ತಿತ್ವ ವಿಕಾಸ ಆವಶ್ಯಕ. ಈ ಪಾಠಗಳು ಯಾವ ಪಠ್ಯ ಪುಸ್ತಕಗಳಲ್ಲಿ ಇರುವುದಿಲ್ಲ.

ಹೊಟ್ಟೆ ಕಿಚ್ಚು ಎಂಬ ನಕಾರಾತ್ಮಕ ಭಾವನೆ ವ್ಯಕ್ತಿತ್ವ ವಿಕಾಸದ ಶತ್ರು. ಇದನ್ನು ವಿವರಿಸುವಾಗ ಲೇಖಕರು–

**ಹೊಟ್ಟೆಯೊಂದರ ರಗಳೆ ಸಾಲದೆಂದೇನೊ ವಿಧಿ**
**ಹೊಟ್ಟೆ ಕಿಚ್ಚಿನ ಕಿಡಿಯ ನೆಟ್ಟಿಹನು ನರನೊಳ್।**
**ಹೊಟ್ಟೆ ತುಂಬಿದ ತೋಳ ಮಲಗೀತು, ನೀಂ ಪರರ**
**ದಿಟ್ಟಿಸುತ ಕರುಬುವೆಂಮೊ ಮಂಕುತಿಮ್ಮ ॥**

ಎಂಬ ಮಂಕುತಿಮ್ಮನ ಕಗ್ಗದ ಪದ್ಯವನ್ನು ಉದಾಹರಿಸಿದ್ದಾರೆ.

ಡಾ. ಅಬ್ದುಲ್ ಕಲಾಂ ಅವರ 'ಯುವಕರಿಗಾಗಿ ಮಾರ್ಗದರ್ಶಿ ಸೂತ್ರಗಳು' ಲೇಖನ ಪಠನಾರ್ಹವಾಗಿದೆ. ಯಾರನ್ನಾದರೂ ಕಾಪಾಡಿ, ನಿಮ್ಮ ಮನೋಭಾವದಿಂದ ನಾನು ಮತ್ತು ನನ್ನದು ಎಂಬುದನ್ನು ತೆಗೆಯಿರಿ. ಕ್ಷಮೆಯೇ ಉತ್ತಮ ಜೀವನದ ತಳಪಾಯ. ದಾನದಿಂದ ಶಾಂತಿ ಮತ್ತು ಸಂತೋಷ, ಉತ್ತಮ ಕೆಲಸಗಳಿಂದ ಉತ್ತಮ ಸಾಧನೆ ಎಂಬ ತತ್ವಗಳನ್ನು ಇಲ್ಲಿ ಪ್ರತಿಪಾದಿಸಿದ್ದಾರೆ.

ಇಷ್ಟೇ ಅಲ್ಲದೆ ಈ ಪುಸ್ತಕದಲ್ಲಿ ಜೆ.ಪಿ. ಅವರ ಇತರ ಕೃತಿಗಳ ವಿಮರ್ಶೆಗಳೂ ಜೆ.ಪಿ. ಅವರನ್ನು ಇತರ ಲೇಖಕರು ಕಂಡಂತೆ ಎಂಬ ವಿಭಾಗವೂ ಇವೆ. ಓದಿ ತಿಳಿಯುವ ಹಂಬಲ ಇದ್ದವರಿಗೆ, ವ್ಯಕ್ತಿತ್ವ ವಿಕಸನದ ತರಬೇತಿಯನ್ನು ನೀಡಬಯಸುವವರಿಗೆ ಇದೊಂದು ಆಕರ ಗ್ರಂಥ. ಗ್ರಂಥದ ಉಪಶೀರ್ಷಿಕೆ ಹೇಳುವಂತೆ 'ಯುವ ಜನಾಂಗದ ಪ್ರಗತಿಗಾಗಿ ಕೈಪಿಡಿ.' ಅಗ್ನಿಯ ರೆಕ್ಕೆಗಳು, ಹಮಾರಾ ಪಿಆರ್‌ಒ, ಬದುಕಲು ಬಿಡಿ ಪ್ಲೀಸ್, ಕಲಾಂ ಜೀವನ ಧರ್ಮ. ಫೇಸ್‌ಬುಕ್ ಪ್ರಪಂಚ, ದಶಕಗಳ ಸಾಹಿತ್ಯದ ಮೊಗಸಾಲೆ ಯಲ್ಲಿ ಎಂಬ ಜೆ.ಪಿ. ಅವರ ಕೃತಿ ಮಾಲೆಯಲ್ಲಿ ಇದೊಂದು ನೂತನ ಕುಸುಮ. ಕನ್ನಡಿಗರು ಇದನ್ನು ಸಹೃದಯತೆಯಿಂದ ಸ್ವಾಗತಿಸಲಿ.

## ಫೆ.19, ಬೆಂಗಳೂರು ಚಲೋ

ಮೈಸೂರು, ಫೆ. 3(ಎಸ್‌ಪಿಎನ್)– ನಾಲ್ಕು ಸಾರಿಗೆ ನಿಗಮಗಳ ನೌಕರರಿಗೆ ಹಿಂಬಾಕಿ ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಸುವಂತೆ ಒತ್ತಾಯಿಸಿ ಬೆಂಗಳೂರು ಚಲೋ ಕಾರ್ಯಕ್ರಮವನ್ನು ಫೆ.19ರಂದು ಹಮ್ಮಿಕೊಳ್ಳಲಾಗುವುದು ಎಂದು ಕೆಎಸ್‌ಆರ್‌ಟಿಸಿ ಜಂಟಿ ಕ್ರಿಯಾ ಸಮಿತಿ ತಿಳಿಸಿದೆ.

ಹಿರಿಯ ಕಾರ್ಮಿಕ ಮುಖಂಡ ಎಚ್.ವಿ. ಅನಂತ ಸುಬ್ಬರಾವ್ ನಿಧನದಿಂದ ತಾತ್ಕಾಲಿಕವಾಗಿ ಮುಂದೂಡಲಾಗಿದ್ದ ಜ.29ರ 'ಬೆಂಗಳೂರು ಚಲೋ'ವನ್ನು ಫೆ.19ರಂದು ಬೆಂಗಳೂರಿನ ಫ್ರೀಡಂ ಪಾರ್ಕ್‌ನಲ್ಲಿ ಬೆಳಗ್ಗೆ 10ರಿಂದ ಸಂಜೆ 4 ಗಂಟೆಯವರೆಗೆ ಶಾಂತಿಯುತ ಪ್ರತಿಭಟನಾ ಸಭೆ ನಡೆಯಲಿದೆ.

## ಅಬಕಾರಿ ಇಲಾಖೆ ಭ್ರಷ್ಟಾಚಾರ ಪ್ರಸ್ತಾಪ ವೇಳೆ ಸಿಎಂ ಸಿಡಿಮಿಡಿ!

### ಸದನದಲ್ಲಿ ಕೋಲಾಹಲ

ಬೆಂಗಳೂರು, ಫೆ.3(ಕೆಎಂಶಿ)–ಅಬಕಾರಿ ಇಲಾಖೆ ಭ್ರಷ್ಟಾಚಾರದ ವಿರುದ್ಧ ವಿರೋಧ ಪಕ್ಷದ ನಾಯಕರ ಗಂಭೀರ ಚರ್ಚೆಗೆ ಸಿಡಿಮಿಡಿಗೊಂಡ ಮುಖ್ಯಮಂತ್ರಿ ಸಿದ್ದರಾಮಯ್ಯ, ಕೇಂದ್ರದ ವಿಬಿ–ಜಿ–ರಾಮ್–ಜಿ ಕಾಯಿದೆ ವಿರುದ್ಧದ ನಿರ್ಣಯ ಮಂಡನೆಗೆ ಅವಕಾಶ ನೀಡಬೇಕೆಂಬ ಪಟ್ಟು ವಿಧಾನಸಭೆಯಲ್ಲಿಂದು ಕೋಲಾಹಲದ ವಾತಾವರಣ ಸೃಷ್ಟಿಸಿತು.

ವರ್ಷದ ಮೊದಲ ಅಧಿವೇಶನ ರಾಜ್ಯಪಾಲರ ಭಾಷಣದೊಂದಿಗೆ ಆರಂಭಿಸಿದ್ದು, ಕೊನೆಯ ಎರಡು ದಿನ ಕೇಂದ್ರ ಸರ್ಕಾರ ಜಾರಿಗೆ ತರಲು ಮುಂದಾಗಿರುವ ವಿಬಿ–ಜಿ–ರಾಮ್–ಜಿ ಯೋಜನೆ ಬಗ್ಗೆ ಚರ್ಚಿಸಲು ಅಜೆಂಡಾ ನಿಗದಿಪಡಿಸಲಾಗಿದೆ. ನಿನ್ನೆವರೆಗೆ ರಾಜ್ಯಪಾಲರ ಭಾಷಣದ ಮೇಲಿನ ವಂದನಾ ನಿರ್ಣಯಕ್ಕೆ ಚರ್ಚೆಯಾಗಿ ಮುಖ್ಯಮಂತ್ರಿ ಹಾಗೂ ಗೃಹ ಸಚಿವರು ಉತ್ತರ ನೀಡಿದ್ದಾರೆ.

ಇಂದಿನ ಅಜೆಂಡಾ ಪ್ರಕಾರ ಸದನ ನಡೆಯಬೇಕು. ಆದರೆ, ವಿರೋಧ ಪಕ್ಷದ ನಾಯಕ ಆರ್.ಅಶೋಕ್ ಹಠದಿಂದಾಗಿ ನಿಯಮ 69ರಡಿ ಅಬಕಾರಿ ಇಲಾಖೆ ಭ್ರಷ್ಟಾಚಾರದ ಚರ್ಚೆಗೆ ಸಭಾಧ್ಯಕ್ಷ ಯು.ಟಿ.ಖಾದರ್ ಅವಕಾಶ ಮಾಡಿಕೊಟ್ಟರು. ಈ ಹಂತದಲ್ಲಿ ಅಬಕಾರಿ ಇಲಾಖೆ ಭ್ರಷ್ಟಾಚಾರವನ್ನು ಎಳೆ ಎಳೆಯಾಗಿ ಬಿಡಿಸಿಡುವ ವೇಳೆ ಸಿಟ್ಟಾದ ಸಿದ್ದರಾಮಯ್ಯ, ಸದನದ ಕಾರ್ಯಕಲಾಪಗಳ ಸಲಹಾ ಸಮಿತಿ ಸಭೆಯಲ್ಲಿ ನಿರ್ಧಾರವಾದ ಪ್ರಕಾರ, ವಿರೋಧ ಪಕ್ಷದ ನಾಯಕ ಅಶೋಕ್ ಅವರಿಗೆ ಮಾತ್ರ ಮಾತನಾಡಲು ಅವಕಾಶ ನೀಡಬೇಕು. ಅವರು ಒಂದು ಗಂಟೆ ಮಾತ್ರ ಮಾತನಾಡಬೇಕು. ಉಳಿದಂತೆ ಕಾರ್ಯಕಲಾಪ ಪಟ್ಟಿಯಲ್ಲಿರುವ ಕಾರ್ಯಸೂಚಿಯ ಪ್ರಕಾರವೇ ಸದನ ನಡೆಯಬೇಕು ಎಂದು ಹೇಳಿದರು.

ಅಶೋಕ್ 2 ಗಂಟೆ ಮಾತನಾಡಿದ್ದಾರೆ. ಈಗ ಪ್ರತಿಪಕ್ಷದವರು ಒಬ್ಬರಾದ ನಂತರ ಒಬ್ಬರಂತೆ ಮಾತನಾಡುತ್ತೇವೆ ಎನ್ನುತ್ತಿದ್ದಾರೆ. ಇದು ಸರಿಯಲ್ಲ, ಚರ್ಚೆ ಮೊಟಕುಗೊಳಿಸಿ, ಸರ್ಕಾರದ ಅಧಿಕೃತ ನಿರ್ಣಯ ಮಂಡನೆಗೆ ಅವಕಾಶ ಮಾಡಿಕೊಡಿ ಎಂದು ಸಭಾಧ್ಯಕ್ಷರನ್ನು ಒತ್ತಾಯಿಸಿದರು.

ಇದಕ್ಕೆ ಬಿಜೆಪಿ ಮತ್ತು ಜೆಡಿಎಸ್ ಸದಸ್ಯರು ವಿರೋಧ ವ್ಯಕ್ತಪಡಿಸಿ, ಸರ್ಕಾರ ಭ್ರಷ್ಟಾಚಾರದಲ್ಲಿ ಮುಳುಗಿದೆ, ಕೋಟ್ಯಾಂತರ ರೂ. ಲೂಟಿ ನಡೆಯುತ್ತಿದೆ. ಇದರ ಚರ್ಚೆಗೆ ಅವಕಾಶ ನೀಡುವುದಿಲ್ಲ ಎಂದರೆ ಹೇಗೆ ಎಂಬ ವಾಗ್ವಾದಕ್ಕಿಳಿದರು. ಇದರಿಂದ ಕೆರಳಿದ ಆಡಳಿತ ಹಾಗೂ ವಿರೋಧ ಪಕ್ಷದ ಸದಸ್ಯರ ಆರೋಪ ಪ್ರತ್ಯಾರೋಪ ತೀವ್ರಗೊಂಡು ಸದನದಲ್ಲಿ ಕೋಲಾಹಲದ ವಾತಾವರಣ ನಿರ್ಮಾಣವಾಯಿತು.

## ವಿವಿಧ ಹಾಡಿಯ ಬುಡಕಟ್ಟು ಸಮುದಾಯದ ಆಶ್ರಮ ಶಾಲೆ ಮಕ್ಕಳಿಗೆ ವಿಜ್ಞಾನ, ತಾರಾಲಯದ ಕೌತುಕ ಪರಿಚಯ





ಹಾಡಿಗಳ ಆಶ್ರಮ ಶಾಲೆ ವಿದ್ಯಾರ್ಥಿಗಳು ಬೆಂಗಳೂರಿನ ವಿಜ್ಞಾನ ವಸ್ತುಸಂಗ್ರಹಾಲಯ, ನೆಹರು ತಾರಾಲಯಕ್ಕೆ ಭೇಟಿ ನೀಡಿ ವಿಜ್ಞಾನದ ಕೌತುಕಗಳ ಬಗ್ಗೆ ಮಾಹಿತಿ ಪಡೆದರು.

ಮೈಸೂರು,ಫೆ.3(ಎಂಟಿವೈ)–ಚಾಮರಾಜನಗರ ಜಿಲ್ಲೆಯ ವಿವಿಧ ಹಾಡಿ ವ್ಯಾಪ್ತಿ ಬುಡಕಟ್ಟು ಸಮುದಾಯದ ಆಶ್ರಮ ಶಾಲೆಯ ವಿದ್ಯಾರ್ಥಿಗಳು ವಿಜ್ಞಾನ ವಸ್ತು ಸಂಗ್ರಹಾಲಯ ಹಾಗೂ ನೆಹರು ತಾರಾಲಯಕ್ಕೆ ಭೇಟಿ ನೀಡಿ ವಿಜ್ಞಾನದ ಕೌತುಕಗಳ ಬಗ್ಗೆ ಮಾಹಿತಿ ಪಡೆದುಕೊಂಡರು.

ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ವತಿಯಿಂದ ಬುಡಕಟ್ಟು ಮಕ್ಕಳಿಗಾಗಿ ಆಯೋಜಿಸಿದ್ದ ಶೈಕ್ಷಣಿಕ ಅಧ್ಯಯನ ಪ್ರವಾಸದಲ್ಲಿ ಚಾಮರಾಜನಗರ ಜಿಲ್ಲೆಯ ಬೇಡಗುಳಿ, ಪುಣಜನೂರು, ರಂಗಸಂದ್ರ, ಕೋಳಿಪಾಳ್ಯ, ಮುರಟಿಪಾಳ್ಯ, ಹಿರಿಯಂಬಲ, ಮದ್ದೂರು ಕಾಲೋನಿ, ಬರಗಿ, ಬಂಡೀಪುರ, ಪುರಾಣಿ ಪೋಡು, ನಕ್ಕುಂದಿ, ಗಾಣಿಗಮಂಗಲ, ಪೊನ್ನಾಚಿ, ಮಲೆಮಹದೇಶ್ವರಬೆಟ್ಟ, ರಾಚಪ್ಪಾಜಿನಗರ, ಕಂಚಗರ್ಳಳಿ, ಕೋಣನಕೆರೆ, ಬೈಲೂರು, ಜೀರಿಗೆಗದ್ದೆ ಆಶ್ರಮಶಾಲೆಯ 190 ವಿದ್ಯಾರ್ಥಿಗಳು ಪಾಲ್ಗೊಂಡಿದ್ದರು.

ಬೆಂಗಳೂರಿನಲ್ಲಿರುವ ಜವಾಹರಲಾಲ್ ನೆಹರು ತಾರಾಲಯ, ಸರ್. ಎಂ.ವಿಶ್ವೇಶ್ವರಯ್ಯ ವಿಜ್ಞಾನ ವಸ್ತು ಸಂಗ್ರಹಾಲಯಕ್ಕೆ ಭೇಟಿ ನೀಡಿದ್ದ ಬುಡಕಟ್ಟು ವಿದ್ಯಾರ್ಥಿಗಳು ಸೌರವ್ಯೂಹ, ಬಾಹ್ಯಾಕಾಶದ ರಹಸ್ಯ, ಬಾಹ್ಯಾಕಾಶದ ಕೌತುಕ ಹಾಗೂ ವಿಜ್ಞಾನಕ್ಕೆ ಸಂಬಂಧಿಸಿದ ವಿವಿಧ ಮಾದರಿಗಳನ್ನು ವೀಕ್ಷಿಸಿದರು.

ಈ ಸಂದರ್ಭದಲ್ಲಿ ಕರ್ನಾಟಕ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಉಪನಿರ್ದೇಶಕಿ ಹೆಚ್.ಎಸ್. ಗಿರಿಜಾಂಬ ಮಾತನಾಡಿ, ವಿವಿಧ ಹಾಡಿ ವಾಸಿಗಳಾದ ಬುಡಕಟ್ಟು ಮಕ್ಕಳಿಗೆ ಶಿಕ್ಷಣದೊಂದಿಗೆ ವಿಜ್ಞಾನದ ಸಾಧನೆ ಬಗ್ಗೆ ಮಾಹಿತಿ ನೀಡುವ ನಿಟ್ಟಿನಲ್ಲಿ ಶೈಕ್ಷಣಿಕ ಪ್ರವಾಸ ಕೈಗೊಂಡು ಬೆಂಗಳೂರಿನ ವಿಜ್ಞಾನ ವಸ್ತು ಸಂಗ್ರಹಾಲಯ, ತಾರಾಲಯಕ್ಕೆ ಕರೆದುಕೊಂಡು ಬಂದು ಬುಡಕಟ್ಟು ಮಕ್ಕಳಿಗೆ ವಿಜ್ಞಾನದ ವಿಸ್ಮಯದ ಬಗ್ಗೆ ಮನವರಿಕೆ ಮಾಡಿಕೊಡಲಾಗಿದೆ. ಇದರಿಂದ ಮಕ್ಕಳಲ್ಲಿ ಕುತೂಹಲ, ಜ್ಞಾನಶಕ್ತಿ ಮತ್ತು ಕಲಿಕೆಯ ಪ್ರೇರಣೆಯನ್ನು ಮೂಡಿಸಿ, ಮಕ್ಕಳು ಕಲಿಕಾ ಅನುಭವವನ್ನು ಇನ್ನಷ್ಟು ಸಮೃದ್ಧಿಗೊಳಿಸಿ ಅವರ ಭವಿಷ್ಯದ ಕನಸುಗಳಿಗೆ ಹೊಸದಿಕ್ಕು ತೋರಿಸುವ ಸ್ಮರಣೀಯ ಕ್ಷಣವಾಗಿ ಉಳಿಯುತ್ತದೆ. ಇದರಿಂದ ಶಿಕ್ಷಕರಿಗೂ ಮಕ್ಕಳಿಗೆ ವಿಜ್ಞಾನದ ಬಗ್ಗೆ ಬೋಧನೆ ಮಾಡಲು ಅನುಕೂಲವಾಗುತ್ತದೆ ಎಂದು ತಿಳಿಸಿದರು. ಈ ಸಂದರ್ಭದಲ್ಲಿ ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆಯ ಭರತ್‌ಕುಮಾರ್, ಶಿಕ್ಷಕರು ಉಪಸ್ಥಿತರಿದ್ದರು.

## ಮಾಜಿ ಸೈನಿಕರು, ಅವಲಂಬಿತರ ಕುಂದು ಕೊರತೆ ಆಲಿಸುವ ಸಭೆ

ಮೈಸೂರು,ಫೆ.3 – ಸೈನಿಕ ಕಲ್ಯಾಣ ಮತ್ತು ಪುನರ್ವಸತಿ ಇಲಾಖೆ ಕಾರ್ಯ ವ್ಯಾಪ್ತಿಗೆ ಒಳಪಡುವ ಮೈಸೂರು, ಮಂಡ್ಯ, ಚಾಮರಾಜನಗರ ಜಿಲ್ಲೆಯ ಮಾಜಿ ಸೈನಿಕರು ಹಾಗೂ ಅವಲಂಬಿತರ ಕುಂದು ಕೊರತೆ ಆಲಿಸುವ ಸಭೆಯನ್ನು ಫೆ.9 ರಂದು ಬೆಳಗ್ಗೆ 10 ಗಂಟೆಯಿಂದ ಮೈಸೂರು ಜಿಲ್ಲಾ ಪಂಚಾಯತ್‌ನ 'ಅಬ್ದುಲ್ ನಜೀರ್ ಸಾಬ್' ಸಭಾಂಗಣದಲ್ಲಿ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗುತ್ತದೆ.

ಮೈಸೂರು, ಮಂಡ್ಯ ಮತ್ತು ಚಾಮರಾಜನಗರ ಜಿಲ್ಲೆಗೆ ಒಳಪಡುವ ಮಾಜಿ ಸೈನಿಕರು ಹಾಗೂ ಅವಲಂಬಿತರು ಹೆಚ್ಚಿನ ಸಂಖ್ಯೆಯಲ್ಲಿ ಆಗಮಿಸಿ ತಮ್ಮ ಕುಂದುಕೊರತೆ ನಿವಾರಣೆಗಾಗಿ ಅರ್ಜಿಗಳನ್ನು ಲಿಖಿತ ರೂಪದಲ್ಲಿ ದ್ವಿಪ್ರತಿಯಲ್ಲಿ ಸಲ್ಲಿಸಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ಕಾರ್ಯಾಲಯದ ದೂ.ಸಂಖ್ಯೆ 0821-2425240 ಅನ್ನು ಕಚೇರಿ ವೇಳೆಯಲ್ಲಿ ಸಂಪರ್ಕಿಸಬಹುದು ಎಂದು ಉಪ ಸೈನಿಕ ಕಲ್ಯಾಣ, ಪುನರ್ವಸತಿ ಇಲಾಖೆ ನಿರ್ದೇಶಕರು ಪ್ರಕಟಣೆಯಲ್ಲಿ ತಿಳಿಸಿದ್ದಾರೆ.

*Printed by T.S. Gopinath, Published by M. Govinde Gowda on behalf of Academy Newspapers Private Limited, 15-C Industrial 'A' Layout, Bannimantap, Mysore-570 015 and Printed at Academy Newspapers Private Limited, 15-C Industrial 'A' Layout, Bannimantap, Mysore-570 015 and Published at 15-C Industrial 'A' Layout, Bannimantap, Mysore-570 015, Editor: M. Govinde Gowda Ph: 2496520 / 2496521 / 2496526 / 2496527 / 2496528. Fax: 0821-2496525. CITY OFFICES: Visveswaraya Building, III Floor, K.R. CIRCLE, MYSORE-570 001, Ph: 2431774 and No. 114, D. DEVARAJ URS ROAD (Opposite Big Bus), MYSORE-570 001. Ph: 2428695. RNI Reg. No. 36581 / 1980 E-mail address: news@mysurumithra.com For advertisements: ad@mysurumithra.com*

# ಮೈಸೂರಿನ ಹೈವೆ ವೃತ್ತದ ಅಂದಗೆಡಿಸುತ್ತಿರುವ ಅವೈಜ್ಞಾನಿಕ ಸಿಗ್ನಲ್ ಲೈಟ್ ಕಂಬಗಳು

## ವೃತ್ತದ ಸೌಂದರ್ಯಕ್ಕೆ ಧಕ್ಕೆ; ಐಕಾನಿಕ್ ಎಲಿಫೆಂಟ್ ಶಿಲ್ಪ ಕಾರಂಜಿ ಮರೆ



ಮೈಸೂರಿನ ಹೈವೆ ವೃತ್ತದಲ್ಲಿ ಸಂಚಾರಿ ಪೊಲೀಸರು ಅವೈಜ್ಞಾನಿಕವಾಗಿ ಅಳವಡಿಸಿರುವ ಸಿಗ್ನಲ್ ಲೈಟ್ ಕಂಬಗಳು.

ಮೈಸೂರು, ಫೆ.3(ಬಿಎಲ್‌ಯು, ಆರ್‌ಕೆ)–ಮೈಸೂರಿನ ಹೈವೆ ವೃತ್ತ (ಮೌಲಾನಾ ಅಬ್ದುಲ್ ಕಲಾಂ ಆಜಾದ್ ವೃತ್ತ)ದಲ್ಲಿ ಸಂಚಾರಿ ಪೊಲೀಸರು ಅಳವಡಿಸಿರುವ ಸಿಗ್ನಲ್ ಲೈಟ್ ಕಂಬಗಳು ಅವೈಜ್ಞಾನಿಕವಾಗಿವೆ ಎಂಬ ಟೀಕೆ ವ್ಯಕ್ತವಾಗಿದೆ. ಇದು ವೃತ್ತದ ಸೌಂದರ್ಯಕ್ಕೆ ಧಕ್ಕೆ ತರುವುದಲ್ಲದೆ, ಸರ್ಕಲ್ ಒಳಗಿರುವ ಐಕಾನಿಕ್ ಎಲಿಫೆಂಟ್ ಶಿಲ್ಪ ಕಾರಂಜಿಯನ್ನು ಮರೆ ಮಾಡುವಂತಿದೆ ಎಂಬ ಆರೋಪ ಕೇಳಿ ಬಂದಿದೆ.

ಸುಗಮ ವಾಹನ ಸಂಚಾರ, ಅಪಘಾತ ನಿಯಂತ್ರಣ, ಸಂಚಾರ ನಿಯಮ ಉಲ್ಲಂಘನೆಗೆ ಕಡಿವಾಣ ಸೇರಿದಂತೆ ಸಂಚಾರಿ ನಿಯಮವನ್ನು ಜನಸಾಮಾನ್ಯರು ಶಿಸ್ತುಬದ್ಧವಾಗಿ ಪಾಲಿಸಲು ಮೈಸೂರಿನ ಹೈವೆ ವೃತ್ತ, ಬಲ್ಲಾಳ್ ವೃತ್ತ, ಕೆ.ಆರ್.ಆಸ್ಪತ್ರೆ ಮತ್ತು ಆಯುರ್ವೇದಿಕ್ ಆಸ್ಪತ್ರೆ ಜಂಕ್ಷನ್ ಸೇರಿದಂತೆ ಇತರೆಡೆ ಪೊಲೀಸ್ ಇಲಾಖೆ ಸಿಗ್ನಲ್ ಲೈಟ್ ಅಳವಡಿಸುತ್ತಿದೆ.

ಸಂಚಾರ ನಿಯಮ ಪಾಲನೆಗೆ ಇದು ಅತ್ಯವಶ್ಯ ಹಾಗೂ ಅನಿವಾರ್ಯ ಕೂಡ. ಆದರೆ, ಹೈವೆ ವೃತ್ತದಲ್ಲಿ ಅವೈಜ್ಞಾನಿಕವಾಗಿ ಸಿಗ್ನಲ್ ಲೈಟ್ ಕಂಬಗಳನ್ನು ಅಳವಡಿಸಲಾಗುತ್ತಿದೆ. ವೃತ್ತದ ಒಳಗೆ ಮೂರು ನೀಲಿ ಬಣ್ಣದ ಕಂಬಗಳಿರುವ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಇದು ವೃತ್ತದ ಸೌಂದರ್ಯವನ್ನು ಹಾಳು ಮಾಡುತ್ತದೆ ಎಂದು ಸಾರ್ವಜನಿಕರು ಟೀಕಿಸಿದ್ದಾರೆ.

ವಿಶ್ವ ಪ್ರವಾಸಿ ತಾಣಗಳ ಪಟ್ಟಿಯಲ್ಲಿ ಪ್ರಮುಖ ಸ್ಥಾನ ಪಡೆದಿರುವ ಸಾಂಸ್ಕೃತಿಕ ನಗರಿ ಮೈಸೂರಿಗೆ ದೇಶ–ವಿದೇಶದ ಸಾವಿರಾರು ಪ್ರವಾಸಿಗರು ಆಗಮಿಸುತ್ತಾರೆ. ಬೆಂಗಳೂರಿಂದ ಆಗಮಿಸುವ ಪ್ರವಾಸಿಗರಿಗೆ ನಗರದ ಆರಂಭದ ಸ್ವಲ್ಪ ದೂರದಲ್ಲಿ ಮೊದಲು ಎದುರಾಗುವುದು ಹೈವೆ ವೃತ್ತ.

ಸಿಗ್ನಲ್ ಕಂಬಗಳನ್ನು ಅಳವಡಿಸಿರುವುದರಿಂದ ವೃತ್ತದ ಒಳಗಿರುವ ಐಕಾನಿಕ್ ಎಲಿಫೆಂಟ್ ಶಿಲ್ಪ ಕಾರಂಜಿ ವೀಕ್ಷಣೆ ಪ್ರವಾಸಿಗರಿಗೆ ಅಡ್ಡಿಯಾಗುತ್ತದೆ. ಸಿಗ್ನಲ್ ಲೈಟ್ ಕಂಬಗಳನ್ನು ಸಾಮಾನ್ಯವಾಗಿ ವೃತ್ತದ ಒಳಗೆ ಅಳವಡಿಸಬಾರದು. ಬದಲಿಗೆ ಜಂಕ್ಷನ್‌ಗಳ ಮೂಲಕ ಹಾದು ಹೋಗುವ ರಸ್ತೆಯ ಪ್ರವೇಶ ಭಾಗ ಅಥವಾ ತುದಿಯಲ್ಲಿ ಅಳವಡಿಸಬೇಕು.

ಆದರೆ ಸಂಚಾರಿ ಪೊಲೀಸರು ಅವೈಜ್ಞಾನಿಕವಾಗಿ ವೃತ್ತದ ಒಳಗೆ ಸಿಗ್ನಲ್ ಲೈಟ್‌ಗಳ ಕಂಬಗಳನ್ನು ಅಳವಡಿಸಿದ್ದು, ವೃತ್ತದ ಸೌಂದರ್ಯ ಮಾತ್ರವಲ್ಲದೆ, ಐಕಾನಿಕ್ ಎಲಿಫೆಂಟ್ ಶಿಲ್ಪ ಕಾರಂಜಿಯನ್ನು ಮರೆ ಮಾಡಿದಂತಾಗುತ್ತದೆ.

ಮೈಸೂರು ನಗರದ ಬಹಳಷ್ಟು ವೃತ್ತಗಳಲ್ಲಿ ಸಿಗ್ನಲ್ ಲೈಟ್‌ಗಳನ್ನು ಅಳವಡಿಸಲಾಗಿದೆ. ಆದರೆ ಹೈವೆ ವೃತ್ತದಂತಹ ಅವೈಜ್ಞಾನಿಕ ಸಿಗ್ನಲ್ ಲೈಟ್ ಅಳವಡಿಕೆ ಬೇರೆಲ್ಲೂ ಇಲ್ಲ ಎಂದು ಸಾರ್ವಜನಿಕರು ಆಕ್ರೋಶ ವ್ಯಕ್ತಪಡಿಸಿದರು.

### ಸೌಂದರ್ಯಕ್ಕೆ ಧಕ್ಕೆಯಾದರೆ ತೆರವು

ಹೈವೆ ವೃತ್ತದೊಳಗಿರುವ ಸಿಗ್ನಲ್ ಲೈಟ್ ಕಂಬಗಳು ನಿಜವಾಗಿಯೂ ಆನೆಯ ಪ್ರತಿಮೆಯ ಸೌಂದರ್ಯಕ್ಕೆ ಧಕ್ಕೆಯಾದರೆ ಅಥವಾ ವೀಕ್ಷಣೆಗೆ ಅಡ್ಡಿಯಾದರೆ ಅದನ್ನು ತೆರವುಗೊಳಿಸಲಾಗುವುದು. ಸಿಗ್ನಲ್ ಲೈಟ್ ಕಂಬಗಳಿಂದ ವೃತ್ತದ ಸೌಂದರ್ಯಕ್ಕೆ ಅಡ್ಡಿಯಾಗುವುದೇ ಎಂಬುದನ್ನು ಖುದ್ದು ಪರಿಶೀಲಿಸಲಾಗುವುದು.

–ಎಂ.ಶಿವಶಂಕರ್, ಎಸಿಪಿ, ಮೈಸೂರು ನಗರ ಸಂಚಾರ ವಿಭಾಗ

## 2016ರಲ್ಲಿ ನಿರ್ಮಾಣವಾದ ಐಕಾನಿಕ್ ಎಲಿಫೆಂಟ್ ಶಿಲ್ಪ ಕಾರಂಜಿ

ಹೈವೆ ವೃತ್ತದ ಆನೆ ಶಿಲ್ಪ ಕಲಾ ಕಾರಂಜಿಯನ್ನು 2016ರಲ್ಲಿ ನಿರ್ಮಾಣ ಮಾಡಲಾಯಿತು. ಬ್ರಿಗೇಡ್ ಗ್ರೂಪ್‌ನವರು 25 ಲಕ್ಷ ರೂ. ವೆಚ್ಚದಲ್ಲಿ ನಿರ್ಮಿಸಿ, ಒಂದು ವರ್ಷಗಳ ಕಾಲ ಅದರ ನಿರ್ವಹಣೆ ಕೂಡ ಮಾಡಿದ್ದರು. ಬ್ರಿಗೇಡ್ ಗ್ರೂಪ್‌ನವರ ನಿರ್ವಹಣೆಯ ಅವಧಿಯಲ್ಲಿ ವೃತ್ತದ ಸೌಂದರ್ಯಕ್ಕೆ ಯಾವುದೇ ಧಕ್ಕೆ ಆಗಿರಲಿಲ್ಲ. ಜೊತೆಗೆ ಅದರ ಭವ್ಯತೆ ಕೂಡ ಉಳಿದುಕೊಂಡಿತ್ತು. ಆದರೆ 2017ರಲ್ಲಿ ವೃತ್ತವನ್ನು ಮೈಸೂರು ಪಾಲಿಕೆಗೆ ಹಸ್ತಾಂತರಿಸಿದ ನಂತರ ವೃತ್ತದ ಸೌಂದರ್ಯ ಕ್ರಮೇಣ ಹದಗೆಟ್ಟಿತು. ಇಡೀ ವೃತ್ತ ನಾನಾ ಪಕ್ಷಗಳ, ಸಂಘಟನೆಗಳ ಬಂಟಿಂಗ್ಸ್, ಫ್ಲೆಕ್ಸ್, ಬ್ಯಾನರ್‌ಗಳನ್ನು ಕಟ್ಟುವುದಕ್ಕೆ ವೇದಿಕೆಯಾಗಿದೆ. ಅಲ್ಲದೆ ವೃತ್ತದ ಸುತ್ತಲಿನ ಗ್ರಿಲ್‌ನಲ್ಲಿ ಮೃತಪಟ್ಟವರಿಗೆ ಶ್ರದ್ಧಾಂಜಲಿ, ಹುಟ್ಟುಹಬ್ಬ ಆಚರಿಸುವವರಿಗೆ ಶುಭಾಶಯ, ರಾಜಕೀಯ ಪಕ್ಷಗಳ ಕಾರ್ಯಕ್ರಮ ನಡೆದಾಗ ಸ್ವಾಗತದ ಫ್ಲೆಕ್ಸ್‌ಗಳನ್ನು ಕಟ್ಟಲು ಮಾತ್ರ ಬಳಕೆಯಾಗುತ್ತಿದೆ. ಈ ಮೂಲಕ ವೃತ್ತದ ಮೂಲ ಉದ್ದೇಶವೇ ಮರೆಯಾಗಿದೆ. ಬಂಟಿಂಗ್ಸ್, ಬ್ಯಾನರ್, ಫೆಕ್ಸ್ ಕಟ್ಟುವುದರಿಂದ ಎದುರು ಬರುವ ವಾಹನಗಳ ಚಾಲಕರಿಗೆ ಮರೆಯಾಗಿ, ಅಪಘಾತಕ್ಕೆ ಕಾರಣವಾಗುತ್ತಿದೆ. ವೃತ್ತದ ಅಂದ ಹೆಚ್ಚಿಸಲು ನಿರ್ಮಿಸಿರುವ ಐಕಾನಿಕ್ ಎಲಿಫೆಂಟ್ ಶಿಲ್ಪ ಕಾರಂಜಿ ಕೂಡ ಕಾಣದಂತಾಗಿದೆ ಪಾಲಿಕೆ ಇದನ್ನು ಗಂಭೀರವಾಗಿ ಪರಿಗಣಿಸಿ, ವೃತ್ತದ ಮೂಲ ಉದ್ದೇಶವನ್ನು ಪಾಲನೆ ಆಗುವಂತೆ ನೋಡಿಕೊಳ್ಳಬೇಕು. ಫ್ಲೆಕ್ಸ್, ಬ್ಯಾನರ್, ಬಂಟಿಂಗ್ಸ್ ಕಟ್ಟಿದವರ ವಿರುದ್ಧ ನಿರ್ದಾಕ್ಷಿಣ್ಯ ಕ್ರಮ ಕೈಗೊಳ್ಳಬೇಕೆಂದು ಸ್ಥಳೀಯರು ಆಗ್ರಹಿಸಿದ್ದಾರೆ.



ಮೈಸೂರಿನ ಜೆಎಲ್‌ಬಿ ರಸ್ತೆ–ಮಾನಂದವಾಡಿ ರಸ್ತೆ ಜಂಕ್ಷನ್‌ನಲ್ಲಿರುವ ಸೇಠ್ ಮೋಹನದಾಸ್ ತುಳಸಿದಾಸ್ ಆಸ್ಪತ್ರೆಯ ಬಳಿಯ ಫೈವ್‌ಲೈಟ್ ವೃತ್ತದೊಳಗೆ ಅಳವಡಿಸಲಾದ ಸಂಚಾರ ಸಿಗ್ನಲ್ ದೀಪಗಳು. ರಸ್ತೆ ಮೂಲೆಗಳಲ್ಲಿ ಓವರ್‌ಹೆಡ್ ಸಿಗ್ನಲ್ ದೀಪಗಳನ್ನು ಅಳವಡಿಸಿದ್ದರೂ, ವೃತ್ತದೊಳಗಿನ ಕಂಬಗಳು ಅದರ ಸೌಂದರ್ಯ ಹಾಳುಮಾಡುತ್ತಿವೆ.

# ಮೈಸೂರಿನ ಯಾವುದಾದರೂ ವೃತ್ತಕ್ಕೆ ಹಿರಿಯ ಕುಸ್ತಿ ಪಟು ಟೈಗರ್ ಬಾಲಾಜಿ ಹೆಸರಿಡುವಂತೆ ಆಗ್ರಹ



ಮೈಸೂರು,ಫೆ.3–ಮೈಸೂರಿನ ಹಿರಿಯ ಕುಸ್ತಿಪಟು ಟೈಗರ್ ಬಾಲಾಜಿ ಸ್ಮರಣಾರ್ಥ ನಗರದ ಯಾವುದಾದರೂ ವೃತ್ತಕ್ಕೆ ಅವರ ಹೆಸರಿಡುವಂತೆ ಮೈಸೂರು ದಸರಾ ಕುಸ್ತಿ ಸಮಿತಿ ಮಾಜಿ ಅಧ್ಯಕ್ಷ, ಬಿಜೆಪಿ ಮುಖಂಡರು ಆದ ಪಿ.ವಿ.ಗಿರಿಧರ್ ಆಗ್ರಹಿಸಿದ್ದಾರೆ.

ಟೈಗರ್ ಬಾಲಾಜಿ ಅವರ ಅಗಲಿಕೆಯಿಂದ ಸಾಂಸ್ಕೃತಿಕ ನಗರಿ ಮೈಸೂರಿನ ಸಾಂಪ್ರದಾಯಕ ಸಾಹಸ ಕಲೆ ಕುಸ್ತಿಗೆ ಅಪಾರ ನಷ್ಟವಾಗಿದೆ. ಕುಸ್ತಿ ಕ್ಷೇತ್ರಕ್ಕೆ ಅವರು ನೀಡಿದ ಅಮೂಲ್ಯ ಕೊಡುಗೆ, ಅವರ ಶಿಸ್ತು, ಧೈರ್ಯ ಮತ್ತು ಅಪ್ರತಿಮ ಹೋರಾಟ ಮನೋಭಾವ ಸದಾಕಾಲ ಸ್ಮರಣೀಯ. ಅವರು ಕೇವಲ ಒಬ್ಬ ಕುಸ್ತಿಪಟುವಷ್ಟೇ ಅಲ್ಲ. ಅನೇಕ ಯುವ ಕುಸ್ತಿಪಟುಗಳಿಗೆ ಮಾರ್ಗದರ್ಶಕ, ಪ್ರೇರಣಾದಾಯಕ ವ್ಯಕ್ತಿಯಾಗಿದ್ದರು. ಅವರ ಸಾಧನೆಗಳು ಹಾಗೂ ಕ್ರೀಡೆಯ ಮೇಲಿನ ಅಪಾರ ಪ್ರೀತಿ ಮೈಸೂರು ಕುಸ್ತಿ ಇತಿಹಾಸದಲ್ಲಿ ಚಿರಸ್ಥಾಯಿಯಾಗಿ ಉಳಿಯಲಿದೆ. ಈ ನಿಟ್ಟಿನಲ್ಲಿ ಅವರ ಸ್ಮರಣಾರ್ಥವಾಗಿ ಮೈಸೂರು ನಗರಪಾಲಿಕೆಯೂ ಯಾವುದಾದರೂ ಒಂದು ವೃತ್ತಕ್ಕೆ ಅವರ ಹೆಸರನ್ನು ಇಡಬೇಕೆಂದು ಪ್ರಕಟಣೆ ಮೂಲಕ ಮನವಿ ಮಾಡಿದ್ದಾರೆ.

## ಬಾಣಂತಿಯರು, ಮಕ್ಕಳಿಗೆ ಬೆಡ್‌ಶೀಟ್, ಬೇಬಿ ಕಿಟ್ ವಿತರಣೆ...



ರೋಟರಿ ಮೈಸೂರು ಅಂಬಾರಿ ವತಿಯಿಂದ ಮೈಸೂರಿನ ಕೆಆರ್‌ಎಸ್ ರಸ್ತೆಯಲ್ಲಿರುವ ಕಾರ್ಮಿಕರ ರಾಜ್ಯ ವಿಮಾ ಆಸ್ಪತ್ರೆ ಬಾಣಂತಿಯರು ಹಾಗೂ ಮಕ್ಕಳಿಗೆ ಬೆಡ್‌ಶೀಟ್ ಮತ್ತು ಬೇಬಿ ಕಿಟ್‌ಗಳನ್ನು ವಿತರಿಸಲಾಯಿತು. ಈ ವೇಳೆ ಇಎಸ್‌ಐ ಆಸ್ಪತ್ರೆಯ ವೈದ್ಯಕೀಯ ಅಧೀಕ್ಷಕ ಡಾ.ಶಿವಕುಮಾರ್, ಡಾ ನವೀನ್, ಡಾ.ಅನಿತಾ ಡಾ.ರಾಜೇಶ್, ಡಾ.ಲಕ್ಷ್ಮೀಶ್, ರೋಟರಿ ಮೈಸೂರು ಅಂಬಾರಿ ಅಧ್ಯಕ್ಷ ಹರೀಶ್, ಉಪಾಧ್ಯಕ್ಷ ಚಂದ್ರಹಾಸ, ಕಾರ್ಯದರ್ಶಿ ಮಂಜುನಾಥ್, ಮಾಜಿ ಅಧ್ಯಕ್ಷರಾದ ಜಗದೀಶ್, ಯದು ಕೃಷ್ಣ, ಜಗದೀಶ್, ಭರತ್, ಲೋಕೇಶ್, ಸೋಮಣ್ಣ, ಆಸ್ಪತ್ರೆಯ ಸಿಬ್ಬಂದಿ ಉಪಸ್ಥಿತರಿದ್ದರು.

## ಆರ್‌ಎಎಂಪಿ ಯೋಜನೆಯಡಿ ಪ್ರಮಾಣ ಪತ್ರದ ಮೊತ್ತ ಮರುಪಾವತಿ

ಮೈಸೂರು,ಫೆ.3–ಕೈಗಾರಿಕಾ ಘಟಕಗಳು ಐ.ಎಸ್.ಓ ಪ್ರಮಾಣ ಪತ್ರ, ಬಿ.ಐ.ಎಸ್ ಪ್ರಮಾಣ ಪತ್ರ, ಗುಣಮಟ್ಟ ದೃಢೀಕರಣಕ್ಕೆ ಸಂಬಂಧಪಟ್ಟ ಪ್ರಮಾಣ ಪತ್ರಗಳನ್ನು ಪಡೆದಲ್ಲಿ, ಸದರಿ ಘಟಕಗಳಿಗೆ ಆರ್‌ಎಎಂಪಿ ಯೋಜನೆಯಡಿ ಪ್ರಮಾಣ ಪತ್ರದ ಮೊತ್ತ, ಗರಿಷ್ಠ 50,000 ಮೊತ್ತವನ್ನು ಮರುಪಾವತಿಸಲಾಗುವುದು. ಒಂದು ಜಿಲ್ಲೆ ಒಂದು ಉತ್ಪನ್ನ ಯೋಜನೆಯಡಿ ಉತ್ಪನ್ನಗಳು, ಆಹಾರ ಸಂಸ್ಕರಣೆ ಘಟಕಗಳು, ಕೃಷಿ ಉತ್ಪನ್ನ ಘಟಕಗಳು ಮೇಲ್ಕಂಡ ಸೌಲಭ್ಯವನ್ನು ಪಡೆಯಬಹುದು. ಮೇಲ್ಕಂಡ ಘಟಕಗಳು ಪ್ಯಾಕೇಜಿಂಗ್ ಡಿಸೈನಿಂಗ್ ವೆಚ್ಚ ಮಾಡಿದ್ದಲ್ಲಿ, ಡಿಸೈನಿಂಗ್ ವೆಚ್ಚ, ಗರಿಷ್ಠ 50,000 ರೂ. ಮೊತ್ತವನ್ನು ಮರುಪಾವತಿಸಲಾಗುವುದು. ಮಾಹಿತಿಗೆ ದೂ.ಸಂ.0821–2449810 ಜಿಲ್ಲಾ ಕೈಗಾರಿಕಾ ಕೇಂದ್ರ, ಸಿ.ಟಿ.ಐ ಕಟ್ಟಡ, ನ್ಯೂ ಸಯ್ಯಾಜಿರಾವ್ ರಸ್ತೆ, ಕಚೇರಿ ಸಂಪರ್ಕಿಸುವುದು.

## ಶಾಸಕ ಜಿ.ಡಿ.ಹರೀಶ್‌ಗೌಡರಿಗೆ ಹುಟ್ಟುಹಬ್ಬ ಶುಭಾಶಯ...



ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್‌ಗೌಡ ಅವರನ್ನು ಮಾಜಿ ಸಂಸದ ಪ್ರತಾಪ್ ಸಿಂಹ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು. ಈ ಸಂದರ್ಭದಲ್ಲಿ ಮುಖಂಡರಾದ ಉಮೇಶ್, ಆರ್.ಪರಮೇಶಗೌಡ, ಸಿ.ಶ್ರೀರಾಂ, ಮಲ್ಲಿಕಾರ್ಜುನ್, ಉಮೇಶ್, ಕೋಟೆಹುಂಡಿ ಮಹದೇವ್, ಟೆನ್ನಿಸ್ ಗೋಪಿ, ಶ್ರವಣ್ ಮಾಲಿ, ಕಿರಣ್, ವಿನೋದ್, ರಾಜಣ್ಣ, ಆನಂದ್ ಇನ್ನಿತರರು ಉಪಸ್ಥಿತರಿದ್ದರು.

# ಜನರ ಬದುಕಿನ ಜೀವನ ಶೈಲಿಯೇ ಜಾನಪದ

### ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಅಭಿಮತ



ಜಾನಪದ ವಿದ್ವಾಂಸ ಡಾ.ಪಿ.ಕೆ.ರಾಜಶೇಖರ್ ಅವರನ್ನು ಸನ್ಮಾನಿಸಲಾಯಿತು.

ಮೈಸೂರು, ಫೆ.3(ಎಸ್‌ಪಿಎನ್)–ಜಾನಪದ ಕೇವಲ ಹಾಡು, ನೃತ್ಯಕ್ಕೆ ಸೀಮಿತವಾಗಿಲ್ಲ. ಜನರ ಬದುಕಿನ ಜೀವನ ಶೈಲಿಯೇ ಜಾನಪದ ಎಂದರೆ ತಪ್ಪಾಗಲಾರದು ಎಂದು ಜಾನಪದ ವಿದ್ವಾಂಸ ಡಾ.ಪಿ.ಕೆರಾಜಶೇಖರ್ ಅಭಿಪ್ರಾಯಪಟ್ಟರು.

ಮೈಸೂರು ರಾಮಕೃಷ್ಣನಗರ ವೃತ್ತದ ಶ್ರೀ ರಾಮಕೃಷ್ಣ ದಿವ್ಯಮಂದಿರದಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದಿಂದ ಪ್ರತಿ ಹುಣ್ಣಿಮೆಯಂದು ಜರುಗಲಿರುವ ವಿಶೇಷ ಉಪನ್ಯಾಸ ಕಾರ್ಯಕ್ರಮದ 'ತಿಂಗಳ ತಿಳಿವು' ಕಾರ್ಯಕ್ರಮದಲ್ಲಿ ಭಾಗವಹಿಸಿ ಮಾತನಾಡಿದರು.

ಜಾನಪದ ಜನರ ಬದುಕಿನ ಜೀವನಾಡಿ, ಇದನ್ನು ಕೇವಲ ಹಾಡು, ನೃತ್ಯಕ್ಕೆ ಸೀಮಿತವಾಗಿ ನೋಡಬಾರದು. ಜನರ ಉಡುಗೆ, ತೊಡುಗೆ, ಆಹಾರ ಪದ್ಧತಿ ಹಾಗೂ ಜೀವನ ಸಂಪೂರ್ಣ ಜೀವನ ಶೈಲಿಯ ಭಾಗವಾಗಿ ಜಾನಪದ ಪರಿಗಣಿಸಬೇಕು ಎಂದು ಸಲಹೆ ನೀಡಿದರು.

ನಮ್ಮ ಹಿರಿಯರು ಮಲೆ ಮಹದೇಶ್ವರ, ಚಾಮುಂಡೇಶ್ವರಿದೇವಿ, ಉತ್ತನಹಳ್ಳಿ ಮಾರಮ್ಮ, ಮಂಟೇಸ್ವಾಮಿ ಸೇರಿದಂತೆ ಇತರೆ ದಾರ್ಶನಿಕರ ಕುರಿತು ನಮ್ಮ ಪೂರ್ವಜರು ಜಾನಪದದಲ್ಲಿ ಹಾಡುಕಟ್ಟಿದ್ದಾರೆ. ಇಂದಿಗೂ ಪ್ರಸ್ತುತವಿದೆ ಎಂದರು. ವೇದಿಕೆಯಲ್ಲಿ ಶ್ರೀ ರಾಮಕೃಷ್ಣ ಪರಮಹಂಸ ಸೇವಾ ಪ್ರತಿಷ್ಠಾನದ ಕಾರ್ಯಾಧ್ಯಕ್ಷ ಡಾ.ಎಸ್.ಪಿ.ಯೋಗಣ್ಣ, ಕಾರ್ಯದರ್ಶಿ ಕೆ.ಕೆಂಪಲಿಂಗರಾಜು ಸೇರಿದಂತೆ ಇತರರು ಉಪಸ್ಥಿತರಿದ್ದರು. ಇದಕ್ಕೂ ಮುನ್ನ ಲಲಿತಾ ಸಂಗೀತ ಶಾಲೆಯ ವಿದ್ಯಾರ್ಥಿಗಳು ಗಾಯನ ನಡೆಸಿಕೊಟ್ಟರು.

# ಅಸ್ವಾಳು ರಾಕೇಶ್ ಕೊಲೆ ಆರೋಪಿಗಳ ಬಂಧನಕ್ಕೆ ಆಗ್ರಹಿಸಿ ಗ್ರಾಮಸ್ಥರಿಂದ ರಸ್ತೆತಡೆ



ಕೊಲೆ ಆರೋಪಿ ಬಂಧನಕ್ಕೆ ಆಗ್ರಹಿಸಿ ಹುಣಸೂರು ತಾಲೂಕಿನ ಅಸ್ವಾಳು ಗ್ರಾಮಸ್ಥರು ಮಂಗಳವಾರ ಪ್ರತಿಭಟನೆ ನಡೆಸಿದರು.

ಮೈಸೂರು,ಫೆ.3(ಎಂಕೆ)– ಹುಣಸೂರು ತಾಲೂಕಿನ ಅಸ್ವಾಳು ಗ್ರಾಮದ ರಾಕೇಶ್‌ನನ್ನು ಕೊಲೆ ಮಾಡಿ, ತಲೆ ಮರೆಸಿಕೊಂಡಿರುವ ಆರೋಪಿ ಬಂಧನಕ್ಕೆ ಆಗ್ರಹಿಸಿ ಗ್ರಾಮಸ್ಥರು ರಸ್ತೆ ತಡೆದು ಪ್ರತಿಭಟನೆ ನಡೆಸಿದ ಘಟನೆ ಮಂಗಳವಾರ ನಡೆದಿದೆ.

ಭಾನುವಾರ(ಫೆ.1) ರಾತ್ರಿ ಸುಮಾರು 9 ಗಂಟೆಗೆ ಮನೆಯಿಂದ ಹೊರ ಬಂದ ರಾಕೇಶ್, ಬೈಕಿನಲ್ಲಿ ಹುಣಸೂರು ಮುಖ್ಯ ರಸ್ತೆ ತಲುಪುತ್ತಿದ್ದಂತೆಯೇ ಹುಣಸೂರು ಕಡೆಯಿಂದ ವೇಗವಾಗಿ ಬೈಕ್‌ನಲ್ಲಿ ಬಂದ ಭೈರಪ್ಪ ಡಿಕ್ಕಿ ಹೊಡೆದ ಪರಿಣಾಮ ರಾಕೇಶ್ ಮೃತಪಟ್ಟಿದ್ದಾನೆ ಎಂದು ಹೇಳಲಾಗುತ್ತಿದೆ. ಆದರೆ, ರಾಕೇಶ್ ಸಾವು ಅಪಘಾತವಲ್ಲ. ಆತನನ್ನು ಕೊಲೆ ಮಾಡಲಾಗಿದ್ದು, ಆರೋಪಿಯನ್ನು ಕೂಡಲೇ ಬಂಧಿಸಬೇಕು ಎಂದು ಗ್ರಾಮಸ್ಥರು ಆಗ್ರಹಿಸಿದ್ದಾರೆ.

ಭೈರಪ್ಪನ ಸಂಬಂಧಿ ನವೀನ್ ಎಂಬಾತ ಬೂಟ್ ಕಾಲಿನಿಂದ ರಾಕೇಶ್ ಎದೆಗೆ ಒದ್ದು ಕೊಲೆ ಮಾಡಿದ್ದಾನೆ. ಆದರೆ, ಬಿಳಿಕೆರೆ ಠಾಣೆ ಪೊಲೀಸರು ಆರೋಪಿಯೊಂದಿಗೆ ಶಾಮೀಲಾಗಿ ಕೊಲೆಯನ್ನು ಮುಚ್ಚಿಟ್ಟು ಅಪಘಾತ ಎಂದೇಳುತ್ತಿದ್ದಾರೆ. ಅಲ್ಲದೆ ಪೊಲೀಸರು ಕೊಲೆ ಆರೋಪಿಯನ್ನು ಬಂಧಿಸದೆ ರಾಜೀ ಸಂಧಾನಕ್ಕೆ ಮುಂದಾಗಿದ್ದಾರೆ ಎಂದು ದೂರಿದ್ದಾರೆ. ಪ್ರತಿಭಟನಾ ವೇಳೆ ಗ್ರಾಮಸ್ಥರಾದ ರಮೇಶ್, ಶಿವರಾಜ್, ದಾಸಯ್ಯ, ಅರುಣ್‌ಕುಮಾರ್, ಪ್ರವೀಣ್‌ಕುಮಾರ್, ಹರಿಹರ ಆನಂದ ಸ್ವಾಮಿ ಸೇರಿದಂತೆ ನೂರಾರು ಮಂದಿ ಗ್ರಾಮಸ್ಥರು ಭಾಗವಹಿಸಿದ್ದರು.



## ಪೂಜಾ ಕಾರ್ಯಕ್ರಮ

ಮೈಸೂರಿನ ಸುಣ್ಣದಕೇರಿಯ ನಾಲಾಬೀದಿಯಲ್ಲಿರುವ ಶ್ರೀ ರೇಣುಕಾ ಎಲ್ಲಮ್ಮನವರ ಮತ್ತು ಶ್ರೀ ಕಬ್ಬಾಳಮ್ಮನವರ ಹಾಗೂ ಶ್ರೀ ಮಹಾಲಕ್ಷ್ಮಿ ಅಮ್ಮನವರ 27ನೇ ವರ್ಷದ ಪೂಜಾ ಮಹೋತ್ಸವ ಮತ್ತು ಅನ್ನದಾನ ಕಾರ್ಯಕ್ರಮದಲ್ಲಿ ಕೃಷ್ಣರಾಜ ಕ್ಷೇತ್ರದ ಮಾಜಿ ಶಾಸಕ ಎಂ.ಕೆ.ಸೋಮಶೇಖರ್ ಭಾಗವಹಿಸಿದ್ದರು. ಈ ಸಂದರ್ಭದಲ್ಲಿ ಮುಖಂಡರಾದ ಬಾಲು, ಎಂ.ಆರ್. ಶಿವಪ್ರಸಾದ್ ಉಪಸ್ಥಿತರಿದ್ದರು.

## ಡಾ.ಅಶ್ವಥ್‌ನಾರಾಯಣರಿಗೆ ಶುಭಾಶಯ...



ಹುಟ್ಟುಹಬ್ಬ ಆಚರಿಸಿಕೊಂಡ ಮಾಜಿ ಉಪಮುಖ್ಯಮಂತ್ರಿ ಡಾ.ಸಿ.ಎನ್.ಅಶ್ವಥ್ ನಾರಾಯಣ್ ಅವರಿಗೆ ಶಾಸಕರಾದ ಡಾ.ಶೈಲೇಂದ್ರ ಬೆಲ್ದಾಳೆ, ಸಿಂಡಿಕೇಟ್ ಸದಸ್ಯ ಬಸವರಾಜ್ ಕನ್ನಾಳೆ, ಯುವ ಮುಖಂಡ ಗೆಜ್ಜಗಳ್ಳಿ ಪ್ರತಾಪ್ ಹೂಗುಚ್ಛ ನೀಡಿ ಆತ್ಮೀಯವಾಗಿ ಅಭಿನಂದಿಸಿ, ಹುಟ್ಟುಹಬ್ಬದ ಶುಭಾಶಯ ಕೋರಿದರು.

## ಫೆ.6ಕ್ಕೆ ಮಹದೇವಪ್ಪ ಅಭಿಮಾನಿ ಬಳಗದ ವಾರ್ಷಿಕೋತ್ಸವ

ಮೈಸೂರು,ಫೆ.3(ಜಿಎ)–ಅಖಿಲ ಕರ್ನಾಟಕ ಡಾ.ಹೆಚ್.ಸಿ.ಮಹದೇವಪ್ಪ ಅಭಿಮಾನಿ ಬಳಗದ ರಾಜ್ಯ ಸಮಿತಿಯ 8ನೇ ವಾರ್ಷಿಕೋತ್ಸವ, ಜಿಲ್ಲಾ, ತಾಲೂಕು ಅಧ್ಯಕ್ಷರ ಪದಗ್ರಹಣ, ವಿವಿಧ ಕ್ಷೇತ್ರದ ಸಾಧಕರ ಸನ್ಮಾನ ಸಮಾರಂಭವನ್ನು ಫೆ.6ರಂದು ಬೆಳಗ್ಗೆ 11ಗಂಟೆಗೆ ಮಾನಸ ಗಂಗೋತ್ರಿ ರಾಣಿ ಬಹದ್ದೂರ್ ಸಭಾಂಗಣದಲ್ಲಿ ಆಯೋಜಿಸಲಾಗಿದೆ ಎಂದು ಬಳಗದ ರಾಜ್ಯಾಧ್ಯಕ್ಷ ಹಿನಕಲ್ ನಂಜುಂಡ ತಿಳಿಸಿದರು.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ಕಾರ್ಯಕ್ರಮವನ್ನು ಕಾರ್ಮಿಕ ಸಚಿವ ಸಂತೋಷ್‌ಲಾಡ್ ಉದ್ಘಾಟಿಸಲಿದ್ದು, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ. ಮಹದೇವಪ್ಪ ಉಪಸ್ಥಿತರಿರುವರು. ವಿಧಾನಪರಿಷತ್ ಸದಸ್ಯ ಡಾ.ಯತೀಂದ್ರ ಅಧ್ಯಕ್ಷತೆ ವಹಿಸಲಿದ್ದಾರೆ ಎಂದರು.

ಮುಖ್ಯ ಅತಿಥಿಗಳಾಗಿ ವಿಧಾನಪರಿಷತ್ ಸದಸ್ಯ ಡಾ.ಡಿ.ತಿಮ್ಮಯ್ಯ, ಚಿಂತಕ ಪ್ರೊ.ರಾಜಪ್ಪ ದಳವಾಯಿ, ಪ್ರೊ.ಆನಂದ್ ಆಗಮಿಸಲಿದ್ದಾರೆ. ಕಾರ್ಯಕ್ರಮದಲ್ಲಿ ವಿವಿಧ ಕ್ಷೇತ್ರದ ಸಾಧಕರಾದ ಹಿರಿಯ ಪತ್ರಕರ್ತ ಅಂಶಿ ಪ್ರಸನ್ನಕುಮಾರ್, ದಸಂಸ ಹಿರಿಯ ಹೋರಾಟಗಾರ ಗುರುಪ್ರಸಾದ್ ಕೆರೆಗೋಡು, ವೈದ್ಯರಾದ ಡಾ.ಪಶುಪತಿ, ಪ್ರಗತಿಪರ ರೈತ ಕೆ.ಜಿ.ಗೋಪಾಲಯ್ಯ, ಸೋಬಾನ ಪದ ಕಲಾವಿದೆ ಗಿರಿಜಮ್ಮ, ಪೌರಕಾರ್ಮಿಕ ಚಿನ್ನಪ್ಪ, ಖೋ–ಖೋ ಪಟು ಚೈತ್ರ, ಉದ್ಯಮಿ ಶರಫುದ್ದೀನ್, ವಾಸ್ತುಶಿಲ್ಪಿ ರಮೇಶ್, ಪ್ರತಿಭಾನ್ವಿತ ವಿದ್ಯಾರ್ಥಿನಿ ಆರ್.ಸಂಜನ ಅವರನ್ನು ಸನ್ಮಾನಿಸಲಾಗುತ್ತದೆ ಎಂದರು. ಸುದ್ದಿಗೋಷ್ಠಿಯಲ್ಲಿ ಡಾ.ಕೆ.ಬಸವರಾಜ್, ನಾಗೇಶ್, ಮಧುಕುಮಾರ್, ಬಿ.ಆರ್.ನಾಗರಾಜು, ಮಹೇಶ್ ಬಾಬು, ಮಂಜುಕೋಟೆ ಉಪಸ್ಥಿತರಿದ್ದರು.

# ದೇವರಾಜ ಬಾಲಕಿಯರ ಪಿಯು ಕಾಲೇಜಿನ ಪ್ರತಿಭಾನ್ವಿತರಿಗೆ ಪ್ರತಿಭಾ ಪುರಸ್ಕಾರ



ದೇವರಾಜ ಬಾಲಕಿಯರ ಪಿಯು ಕಾಲೇಜಿನ ಪ್ರತಿಭಾನ್ವಿತ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಲಾಯಿತು.

ಮೈಸೂರು, ಫೆ.3(ಎಂಕೆ)– ಮೈಸೂರಿನ ದೇವರಾಜ ಮೊಹಲ್ಲಾದಲ್ಲಿರುವ ದೇವರಾಜ ಬಾಲಕಿಯರ ಸರ್ಕಾರಿ ಸ್ವತಂತ್ರ ಪದವಿ ಪೂರ್ವ ಕಾಲೇಜಿನಲ್ಲಿ ಕಳೆದ ಸಾಲಿನ ದ್ವಿತೀಯ ಪಿಯುಸಿ ಪರೀಕ್ಷೆಯಲ್ಲಿ ಅತ್ಯುನ್ನತ ಶ್ರೇಣಿಯಲ್ಲಿ ತೇರ್ಗಡೆಯಾದ ವಿದ್ಯಾರ್ಥಿನಿಯರಿಗೆ ಪ್ರತಿಭಾ ಪುರಸ್ಕಾರ ನೀಡಿ, ಅಭಿನಂದಿಸಲಾಯಿತು.

ವಿದ್ಯಾರ್ಥಿನಿಯರಾದ ಎಂ.ವಾರುಣಿ, ರಾಜಮ್ಮ, ವಿ.ಲಕ್ಷ್ಮಿ, ರಕ್ಷಿತಾ, ಅಮೃತಾ, ಲಕ್ಷ್ಮಿ, ಷಿಫಾನ, ಲಿಖಿತಾ, ನೇತ್ರಾವತಿ, ಎಂ.ಮೇಘನಾ, ಎಸ್.ಜೀವಿತಾ ಮತ್ತು ರಾಜೇಶ್ವರಿಗೆ ಪ್ರತಿಭಾ ಪುರಸ್ಕಾರ ಹಾಗೂ 100ಕ್ಕೆ 100 ಅಂಕ ಗಳಿಸಿದ ವಿದ್ಯಾರ್ಥಿನಿಯರಿಗೆ ಆಯಾ ವಿಷಯ ಉಪಾಧ್ಯಾಯರಿಂದ ನಗದು ಬಹುಮಾನ ನೀಡಲಾಯಿತು.

ಕಾರ್ಯಕ್ರಮ ಉದ್ಘಾಟಿಸಿ, ಕಾಲೇಜು ವಾರ್ಷಿಕ ಸಂಚಿಕೆ ಬಿಡುಗಡೆ ಮಾಡಿದ ಶಾಲಾ ಶಿಕ್ಷಣ ಇಲಾಖೆ(ಪದವಿ ಪೂರ್ವ) ಉಪನಿರ್ದೇಶಕಿ ಎಂ.ಪಿ.ನಾಗಮ್ಮ ಮಾತನಾಡಿ, ಕಾಲೇಜಿನಲ್ಲಿರುವ ವಿದ್ಯಾರ್ಥಿನಿಯರ ಸಂಖ್ಯೆಯೇ ಕಾಲೇಜಿನಲ್ಲಿ ದೊರೆಯುತ್ತಿರುವ ಶಿಕ್ಷಣದ ಗುಣಮಟ್ಟದ ಬಗ್ಗೆ ತಿಳಿಸುತ್ತದೆ. ಖಾಸಗಿ ಕಾಲೇಜುಗಳಲ್ಲಿ ಉತ್ತಮ ಅಂಕಗಳ ಬರುವುದು ಸಹಜ. ಏಕೆಂದರೆ ಅಲ್ಲಿ ಶುಲ್ಕದ ಜೊತೆಗೆ ಅಡ್ಮಿಷನ್ ಮಾಡಿಕೊಳ್ಳುವಾಗಲೇ ವಿದ್ಯಾರ್ಥಿಗಳ ಸಂದರ್ಶನ ನಡೆಸುತ್ತಾರೆ. ಆದರೆ ಸರ್ಕಾರಿ ಕಾಲೇಜುಗಳಲ್ಲಿ ಯಾವುದೇ ಸಂದರ್ಶನ ಇಲ್ಲದೆ ದಾಖಲು ಮಾಡಿಕೊಂಡು ಉತ್ತಮ ಅಂಕಗಳನ್ನು ಗಳಿಸುವಂತೆ ಮಾಡುವುದು ಸುಲಭದ ಕೆಲಸವಲ್ಲ ಎಂದು ಕಾಲೇಜಿನ ಬೋಧಕ ಸಿಬ್ಬಂದಿಯನ್ನು ಶ್ಲಾಘಿಸಿದರು.

ಸರ್ಕಾರದಿಂದ ಸಾಕಷ್ಟು ಸೌಲಭ್ಯಗಳನ್ನು ನೀಡಲಾಗುತ್ತಿದ್ದು, ವಿದ್ಯಾರ್ಥಿನಿಯರು ಸದುಪಯೋಗಪಡೆದುಕೊಂಡು ಉತ್ತಮ ಅಂಕಗಳೊಂದಿಗೆ ಉನ್ನತ ವಿದ್ಯಾಭ್ಯಾಸ ನಡೆಸಬೇಕು. ಓದುವ ಸಮಯ ಓದಬೇಕು. ಮತ್ತೊಮ್ಮೆ ಈ ಸಮಯ ಬರುವುದಿಲ್ಲ. ಯಾವುದೇ ಕಾರಣಕ್ಕೂ ದಾರಿ ತಪ್ಪಬಾರದು. ಸುಖ–ನಿದ್ದೆ ಬಯಸದೆ ಓದಿದರೆ ಉತ್ತಮ ಅಂಕಗಳನ್ನು ಪಡೆಯಲು ಸಾಧ್ಯ ಎಂದರು. ರಾಜ್ಯ ಬುಡಕಟ್ಟು ಸಂಶೋಧನಾ ಸಂಸ್ಥೆ ಉಪ ನಿರ್ದೇಶಕಿ ಹೆಚ್.ಎಸ್.ಗಿರಿಜಾಂಭ, ಕಾಲೇಜು ಪ್ರಾಂಶುಪಾಲ ಡಾ.ಎಂ.ಜಿ.ರಮಾನಂದ, ಸಮಾಜ ಸೇವಕರಾದ ಸ್ವಪ್ರಭಾನಂದ, ಉಪನ್ಯಾಸಕರಾದ ಜಗದೀಶ್, ಸವಿತಾ, ಗಿರಿಜಾ, ಶ್ರೀಮತಿ, ರಾಧ ಮತ್ತಿತರರಿದ್ದರು.

ಮೈಸೂರು ಮಿತ್ರ ಬುಧವಾರ 4 ಫೆಬ್ರವರಿ 2026

# ಜಿಲ್ಲೆ ಜನ ಬಯಸಿದರೇ ಮಂಡ್ಯದಿಂದಲೇ ಸ್ಪರ್ಧೆ

### ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ



ದೇವಸ್ಥಾನ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮವನ್ನು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ಉದ್ಘಾಟಿಸಿದರು.

ಭಾರತೀನಗರ, ಫೆ.3– ಜಿಲ್ಲೆಯ ಜನತೆ ಪ್ರೀತಿ ವಿಶ್ವಾಸದಿಂದ ಮುಂದೊಂದು ದಿನ ಮಂಡ್ಯ ದಿಂದಲ್ಲೇ ಸ್ಪರ್ಧಿಸಬೇಕೆಂದು ಬಯಸಿದರೇ ಅದನ್ನು ಸ್ವಾಗತಿಸುತ್ತೇನೆ ಎಂದು ಜೆಡಿಎಸ್ ಯುವ ಘಟಕದ ರಾಜ್ಯಾಧ್ಯಕ್ಷ ನಿಖಿಲ್ ಕುಮಾರಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಯಡಗನಹಳ್ಳಿಯಲ್ಲಿ ಶ್ರೀಮಂಚಮ್ಮ ಹಾಗೂ ಮಾಸ್ತಮ್ಮ ದೇವಿ ದೇವಸ್ಥಾನದ ಪುನರ್ ಪ್ರತಿಷ್ಠಾಪನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಮಂಡ್ಯ ಜಿಲ್ಲೆಯಿಂದಲೇ ಚುನಾವಣೆಗೆ ಸ್ಪರ್ಧಿಸಬೇಕು ಎಂದು ಜನತೆ ಒತ್ತಾಯಿಸಿದರೇ ಅದು ದೈವ ನಿರ್ಣಯ. ನಾನು ಸಹ ನಿಲ್ಲಲೇಬೇಕು ಎಂಬುದು ಏನಿಲ್ಲ. ಮುಂದಿನ ದಿನಗಳಲ್ಲಿ ನಮ್ಮ ಸರ್ಕಾರ ಅಧಿಕಾರಕ್ಕೆ ಬಂದ ವೇಳೆ ನನ್ನದೇ ಆದ ಕೆಲವು ಆಲೋಚನೆಗಳಿವೆ. ನನ್ನ ಭವಿಷ್ಯದ ಅಕ್ಕ–ತಂಗಿಯರು, ಅಣ್ಣ ತಮ್ಮಂದಿರ ಜೀವನ ರೂಪಿಸುವ ಕರ್ತವ್ಯ ನನ್ನ ಮೇಲಿದ್ದು, ಅದನ್ನು ನಾನು ಎಂದಿಗೂ ಕೂಡ ಮರೆಯುವುದಿಲ್ಲ. ಮಂಡ್ಯ ಜಿಲ್ಲೆಯಲ್ಲಿ ಅತೀ ಹೆಚ್ಚು ಉದ್ಯೋಗ ಸೃಷ್ಟಿಸಬೇಕೆಂಬ ಆಸೆ ನನ್ನದಾಗಿದೆ. ಹೀಗಾಗಿ ನಿರಂತರವಾಗಿ ನಿಮ್ಮೊಂದಿಗೆ ಇರುತ್ತೇನೆಂದು ಭರವಸೆ ನೀಡಿದರು.

**ನನ್ನ ಸೋಲು ಸೋಲಲ್ಲ:** ನಿಖಿಲ್ ಕುಮಾರಸ್ವಾಮಿ ಅನಿರೀಕ್ಷಿತವಾಗಿ ಸೋತಿರಬಹುದು. ಆದರೆ ನನ್ನ ಸೋಲು ಸೋಲಲ್ಲ. ನೀವು ಕೊಟ್ಟಿರುವ ಪ್ರೀತಿಯ ಮುಂದೆ ಸೋಲು ಲೆಕ್ಕಕ್ಕಿಲ್ಲ. ಮುಂದಿನ ದಿನಗಳಲ್ಲಿ ಒಳ್ಳೆಯ ದಿನ ಬಂದೆ ಬರುತ್ತದೆ ಎಂದು ನಂಬಿದ್ದೇನೆ ಎಂದರು.

**ಯುವ ಶಕ್ತಿ ದೇಶದ ಶಕ್ತಿ:** ಯಾವುದೇ ಸಮಸ್ಯೆ ಎದುರಾದರೂ ಮೆಟ್ಟಿ ನಿಲ್ಲುವ ಶಕ್ತಿ ಇದ್ದರೆ ಅದು ಯುವ ಸಮುದಾಯಕ್ಕೆ ಮಾತ್ರ ಯುವಕರು ಮನಸ್ಸು ಮಾಡಿದರೆ ಭಾರತ ದೇಶ ಮತ್ತು ಕರ್ನಾಟಕ ರಾಜ್ಯವನ್ನು ಒಳ್ಳೆಯ ದಿಕ್ಕಿಗೆ ಕೊಂಡೊಯ್ಯಬಹುದು ಎಂದರು.

**ಹೆಚ್‌ಡಿಕೆ ಸಿಎಂ ಆಗಿದ್ದ ದಿನ ಸ್ಮರಿಸಿದ ನಿಖಿಲ್:** ಇಂದಿಗೆ 20 ವರ್ಷಗಳ ಹಿಂದೆ ಹೆಚ್.ಡಿ.ಕುಮಾರಸ್ವಾಮಿ ಅವರು ರಾಜ್ಯದ ಮುಖ್ಯಮಂತ್ರಿಯಾಗಿದ್ದರು. ಅಂದಿನಿಂದ ಇಂದಿನವರೆಗೂ ಜಿಲ್ಲೆಯ ಜನತೆ ನಮ್ಮ ತಂದೆಯವರ ಕೈ ಹಿಡಿಯುತ್ತಾ ಬಂದಿದ್ದೀರಿ. ಇದೀಗ ಮದ್ದೂರು ಕ್ಷೇತ್ರದಿಂದ ಅತೀ ಹೆಚ್ಚು ಮತ ನೀಡಿ ಆಯ್ಕೆ ಮಾಡಿ ಕೇಂದ್ರದಲ್ಲಿ ಅವರಿಗೆ ಮಂತ್ರಿ ಸ್ಥಾನ ದೊರಕುವಂತೆ ಮಾಡಿರುವ ನಿಮ್ಮೆಲ್ಲರಿಗೂ ಆಭಾರಿಯಾಗಿರುತ್ತೇನೆ ಎಂದರು.

ಮಂಡ್ಯ ಕೃಷಿ ಪ್ರಧಾನ ಜಿಲ್ಲೆ. ರೈತ ದೇಶದ ಬೆನ್ನೆಲುಬು. ಆದರೆ ರೈತರಿಗೆ ಯಾವುದೇ ಪ್ರೋತ್ಸಾಹ ರಾಜ್ಯದಿಂದ ಸಿಗುತ್ತಿಲ್ಲ. ಮುಂದೊಂದು ದಿನ ಶ್ರೀಚಾಮುಂಡೇಶ್ವರಿ ಕೃಪೆಯಿಂದ ರೈತರಿಗೆ ಒಳ್ಳೆಯ ದಿನ ಬಂದೇ ಬರುತ್ತದೆ ಎಂದರು. ಲೋಕ ಕಲ್ಯಾಣಕ್ಕಾಗಿ, ಗ್ರಾಮದ ಅಭಿವೃದ್ಧಿಗಾಗಿ ದೇವಸ್ಥಾನದ ಪ್ರತಿಷ್ಠಾಪನೆ ಅಗತ್ಯವಾಗಿದೆ. ಹೀಗಾಗಿ ಮಾಸ್ತಮ್ಮ ಮತ್ತು ಮಂಚಮ್ಮ ದೇವರು ಗ್ರಾಮಕ್ಕೆ ಒಳಿತು ಉಂಟು ಮಾಡಲಿ ಎಂದು ಪ್ರಾರ್ಥಿಸಿದರು.

**ಎತ್ತಿನಗಾಡಿ ಮೆರವಣಿಗೆ:** ಕಾರ್ಯಕ್ರಮಕ್ಕೂ ಮೊದಲು ಗ್ರಾಮಸ್ಥರು ಯಡಗನಹಳ್ಳಿ ಗ್ರಾಮದ ಮುಖ್ಯ ರಸ್ತೆಯಲ್ಲಿ ತಮಟೆ–ನಗಾರಿಗಳೊಂದಿಗೆ ಎತ್ತಿನ ಗಾಡಿಯಲ್ಲಿ ನಿಖಿಲ್ ಕುಮಾರಸ್ವಾಮಿ ಹಾಗೂ ಡಿ.ಸಿ. ತಮ್ಮಣ್ಣ ಅವರನ್ನು ಅದ್ದೂರಿಯಾಗಿ ಮೆರವಣಿಗೆ ಮಾಡುವ ಮೂಲಕ ವೇದಿಕೆಗೆ ಕರೆ ತಂದರು.

> ಪೂರ್ವಿಕರು ಗ್ರಾಮಕ್ಕೆ ಒಳಿತಾಗಲಿ ಎಂದು ದೇವಸ್ಥಾನ ನಿರ್ಮಿಸುತ್ತಿದ್ದರು. ಅದನ್ನು ಉಳಿಸಿ ಬೆಳೆಸಿಕೊಂಡು ಹೋಗುವ ಜವಾಬ್ದಾರಿ ನಮ್ಮದಾಗಿದೆ. ಪೂರ್ವಿಕರ ದೈವಭಕ್ತಿಯನ್ನು ಇಂದು ನಾವು ಕಾಣಲು ಸಾಧ್ಯವಿಲ್ಲ. ನಮ್ಮಲ್ಲಿ ಆತ್ಮಾವಲೋಕನ, ಚಿಂತನೆ ಇಲ್ಲದಿರುವುದೇ ಇದಕ್ಕೆ ಕಾರಣವಾಗಿದೆ. ಹಾಗಾಗಿ ನಾವು ಮಾಡುವ ಪ್ರತಿಯೊಂದು ಕೆಲಸ ಹಾಗೂ ಆಡುವ ಮಾತುಗಳು ಸರಿಯಾಗಿದೆಯೇ ಎಂಬುವುದನ್ನು ಅವಲೋಕನ ಮಾಡಿಕೊಳ್ಳಬೇಕಿದೆ.
>
> – ಡಿ.ಸಿ.ತಮ್ಮಣ್ಣ, ಮಾಜಿ ಸಚಿವ.

ಕೆಂಗೇರಿ ವಿಶ್ವ ಒಕ್ಕಲಿಗರ ಮಹಾಸಂಸ್ಥಾನ ಮಠದ ಪೀಠಾಧ್ಯಕ್ಷ ಡಾ.ನಿಶ್ಚಲಾನಂದನಾಥ ಸ್ವಾಮೀಜಿ ಮಾತನಾಡಿದರು. ಬಿಜೆಪಿ ಜಿಲ್ಲಾಧ್ಯಕ್ಷ ಡಾ.ಸಿದ್ದರಾಮಯ್ಯ, ತಾಲೂಕು ಅಧ್ಯಕ್ಷ ಚಿಕ್ಕತಿಮ್ಮೇಗೌಡ, ರಾಜಣ್ಣ, ಹನುಮಂತೇಗೌಡ, ಶೇಖರ್, ಕಾಳೇಗೌಡ, ಕೆ.ಟಿ.ರಾಜಣ್ಣ, ಎಸ್.ಡಿ. ಹೊನ್ನೇಗೌಡ, ಗ್ರಾಮದ ಮುಖಂಡರಾದ ಕೆ.ಕೃಷ್ಣ, ವೈ.ಎಸ್.ನಾಗರಾಜು, ವೈ.ಇ.ರಮೇಶ್, ವೈ.ಜೆ.ನವೀನ್, ವೈ.ಎಸ್.ಶಶಿಧರ್, ವೈ.ಟಿ. ಅಶೋಕ, ಮನು, ವೈ.ಆರ್.ಅಶೋಕ್, ವೈ.ಇ. ಪ್ರವೀಣ್‌ಕುಮಾರ್, ಸಚಿನ್, ಶಂಕರ್, ಬಸವರಾಜು, ಈರೇಶ್, ಸುನೀಲ್ ಕುಮಾರ್, ಕೆಂಪರಾಜು, ಸೊಸೈಟಿ ಅಧ್ಯಕ್ಷ ಮಧು, ಪುಟ್ಟಸ್ವಾಮಿ, ಹನುಮೇಗೌಡ ಸೇರಿದಂತೆ ಹಲವರಿದ್ದರು.

## ಜಿಲ್ಲಾಸ್ಪತ್ರೆಗಾಗಿ ಪ್ರಸ್ತಾವನೆ ಸಲ್ಲಿಕೆ: ಶಾಸಕ ರವಿಕುಮಾರ್



ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಶಾಸಕ ರವಿಕುಮಾರ್ ಭೂಮಿ ಪೂಜೆ ನೆರವೇರಿಸಿದರು.

ಮಂಡ್ಯ, ಫೆ.3– ಈ ಬಾರಿಯ ರಾಜ್ಯ ಬಜೆಟ್‌ನಲ್ಲಿ ಮಂಡ್ಯ ನಗರದಲ್ಲಿ ಜಿಲ್ಲಾಸ್ಪತ್ರೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಶಾಸಕ ರವಿಕುಮಾರ್‌ಗೌಡ ತಿಳಿಸಿದರು.

ನಗರದ ಕಲ್ಲಹಳ್ಳಿಯ ರೈಲ್ವೆ ಗೇಟ್ ಸಮೀಪ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ ವತಿಯಿಂದ ಆಯೋಜಿಸಿದ್ದ ಶಂಕರಪುರ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ನಿರ್ಮಾಣಕ್ಕೆ ಭೂಮಿ ಪೂಜೆ ನೆರವೇರಿಸಿ ಮಾತನಾಡಿದ ಅವರು, ಸ್ಥಳೀಯರ ಅವಶ್ಯಕತೆಗೆ ಅನುಗುಣವಾಗಿ ಪ್ರಾಥಮಿಕ ಆರೋಗ್ಯ ಕೇಂದ್ರ 1 ಕೋಟಿ ರೂ. ವೆಚ್ಚದಲ್ಲಿ ನಿರ್ಮಾಣವಾಗುತ್ತಿದೆ. ಮುಂದಿನ ಒಂದು ವರ್ಷದಲ್ಲಿ ಅತ್ಯುತ್ತಮ 2 ಅಂತಸ್ತಿನ ಆಸ್ಪತ್ರೆ ಲೋಕಾರ್ಪಣೆ ಮಾಡುತ್ತೇವೆ ಎಂದರು.

ಗುತ್ತಲು ಬಡಾವಣೆಯಲ್ಲಿರುವ ಸರ್ಕಾರಿ ನಗರ ಪ್ರಾಥಮಿಕ ಆರೋಗ್ಯ ಕೇಂದ್ರ ಬಾಡಿಗೆ ಕಟ್ಟಡದಲ್ಲಿ ನಡೆಯುತ್ತಿದೆ. ಸ್ವಂತ ಕಟ್ಟಡ ಬೇಕೆಂದು ಸಾರ್ವಜನಿಕರು ಕೇಳಿದ್ದಾರೆ. ಅದಕ್ಕಾಗಿ ಸರ್ಕಾರಕ್ಕೆ ಪ್ರಸ್ತಾವನೆ ಕಳುಹಿಸಿದ್ದೇವೆ. ಮುಂದಿನ ವರ್ಷ ಭೂಮಿ ಪೂಜೆ ಮಾಡುತ್ತೇವೆ ಎಂದು ತಿಳಿಸಿದರು.

ಜೊತೆಗೆ ಮುಖ್ಯಮಂತ್ರಿ ಮತ್ತು ಉಪಮುಖ್ಯಮಂತ್ರಿ ಹಾಗೂ ಜಿಲ್ಲಾ ಉಸ್ತುವಾರಿ ಸಚಿವರ ಬಳಿ ನಾವು ಜಿಲ್ಲಾಸ್ಪತ್ರೆಯಿಂದ ಇದೆ ಅದು ಮೆಡಿಕಲ್ ಆಸ್ಪತ್ರೆಯಾಗಿದೆ. ಜಿಲ್ಲಾಸ್ಪತ್ರೆ ಇಲ್ಲ ಎಂದು ತಿಳಿಸಿ ಈ ಸಾಲಿನ ಬಜೆಟ್‌ನಲ್ಲಿ ಮಂಡ್ಯ ಜಿಲ್ಲೆಗೆ ಜಿಲ್ಲಾಸ್ಪತ್ರೆ ಮಂಜೂರಾತಿಗಾಗಿ ಪ್ರಸ್ತಾವನೆ ಸಲ್ಲಿಸಿದ್ದೇವೆ ಎಂದು ಹೇಳಿದರು.

ಮಿಮ್ಸ್ ಆಸ್ಪತ್ರೆಗೆ ನಿತ್ಯ ಸಾವಿರಾರು ರೋಗಿಗಳು ಬರುವುದರಿಂದ ಒತ್ತಡ ಆಗುತ್ತಿದೆ. ವೈದ್ಯರಿಗೆ ಮತ್ತು ರೋಗಿಗಳಿಗೆ ಕಿರಿಕಿರಿಯಾಗುವುದನ್ನು ತಪ್ಪಿಸಲು ಮತ್ತು ಬೆಡ್‌ಗಳ ಕೊರತೆ ನೀಗಿಸಲು 500 ಬೆಡ್‌ವುಳ್ಳ ಇನ್ನೊಂದು ಜಿಲ್ಲಾಸ್ಪತ್ರೆ ಬೇಕಾಗಿದೆ ಎಂದು ಸರ್ಕಾರಕ್ಕೆ ಒತ್ತಾಯಿಸಿದ್ದೇವೆ ಎಂದರು.

ಕಾರ್ಯಕ್ರಮದಲ್ಲಿ ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಮೋಹನ್, ಮುಡಾ ಅಧ್ಯಕ್ಷ ಬಿ.ಪಿ.ಪ್ರಕಾಶ್, ಮಾಜಿ ಸದಸ್ಯ ಎಂ.ಕೃಷ್ಣ, ನಗರಸಭಾ ಸದಸ್ಯರಾದ ನಯೀಂ, ಪೂರ್ಣಿಮಾ, ಮಂಗಳಾ, ಜಾಕೀರ್‌ಪಾಷಾ, ಮಾಜಿ ಸದಸ್ಯ ರವೀಂದ್ರ, ಮುಖಂಡರಾದ ಕಲ್ಲಹಳ್ಳಿ ಆನಂದ್, ಅನುಫ್, ಮಂಜುನಾಥ್, ಗುತ್ತಿಗೆದಾರ ಚೇತನ್‌ಗೌಡ ಮತ್ತಿತರರಿದ್ದರು.

### ಅಂಬೇಡ್ಕರ್ ಭವನ ಅಂದಾಜು ಪಟ್ಟಿ ತಡೆ ಹಿಡಿಯುವಂತೆ ಆದೇಶ

## ತಾಪಂ ಇಒ ವಿರುದ್ಧ ದಲಿತ ಮುಖಂಡರ ಪ್ರತಿಭಟನೆ



ತಾಪಂ ಇಒ ವಿರುದ್ಧ ದಲಿತ ಮುಖಂಡರು ಪ್ರತಿಭಟನೆ ನಡೆಸಿದರು.

ಶ್ರೀರಂಗಪಟ್ಟಣ, ಫೆ.3– ತಾಲೂಕಿನ ಹುಲಿಕೆರೆ ಗ್ರಾಪಂ ವ್ಯಾಪ್ತಿಯ ಹೊಂಗಹಳ್ಳಿ ಅಂಬೇಡ್ಕರ್ ಭವನ ಅಭಿವೃದ್ಧಿ ಕಾಮಗಾರಿ ಅಂದಾಜು ಪಟ್ಟಿಯನ್ನು ಮುಂದಿನ ಆದೇಶದವರೆಗೆ ತಡೆ ಹಿಡಿಯುವಂತೆ ಆದೇಶಿಸಿರುವ ತಾಪಂ ಇಒ ಕ್ರಮ ಖಂಡಿಸಿ ಪಟ್ಟಣದಲ್ಲಿ ದಲಿತ ಮುಖಂಡರು ಪ್ರತಿಭಟನೆ ನಡೆಸಿದರು.

ಪಟ್ಟಣದ ತಾಪಂ ಎದುರು ಜಮಾಯಿಸಿದ ಹೊಂಗಹಳ್ಳಿ ಗ್ರಾಮಸ್ಥರು ಹಾಗೂ ದಲಿತ ಮುಖಂಡರು ಪ್ರತಿಭಟನೆ ನಡೆಸಿ ತಾಪಂ ಇಒ ವೇಣು ವಿರುದ್ಧ ಆಕ್ರೋಶ ವ್ಯಕ್ತಪಡಿಸಿದರು.

ಈ ವೇಳೆ ಮಾತನಾಡಿದ ಪ್ರತಿಭಟನಾಕಾರರು ಹೊಂಗಹಳ್ಳಿ ಗ್ರಾಮದಲ್ಲಿ 6 ಲಕ್ಷ ರೂ. ವೆಚ್ಚದ ಅಂಬೇಡ್ಕರ್ ಭವನ ಅಭಿವೃದ್ಧಿ ಕಾಮಗಾರಿಗೆ ಆಡಳಿತಾತ್ಮಕ ಅನುಮೋದನೆಯಾಗಿ, ಸಂಬಂಧ ಪಟ್ಟ ಸಕ್ಷಮ ಪ್ರಾಧಿಕಾರ ಅನುಮೋದನೆಗೊಂಡ ಕ್ರಿಯಾ ಯೋಜನೆ ಸಹ ಬಿಡುಗಡೆಯಾಗಿದೆ. ಆದರೂ ತಾಪಂ ಇಒ ವೇಣು ಅವರು ಅನಗತ್ಯವಾಗಿ ಎಇಇ ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಪತ್ರ ಬರೆದು ವರ್ಗ–2 ಕಾಮಗಾರಿಗಳನ್ನು ಮುಂದಿನ ಆದೇಶದವರೆಗೆ ತಡೆ ಹಿಡಿಯುವಂತೆ ಸೂಚಿಸಿರುವುದು ಸರಿಯಲ್ಲ ಎಂದರು.

ಆದೇಶವಾಗಿ 10 ದಿನ ಸಹ ಕಳೆದಿಲ್ಲ. ಅಲ್ಲದೇ ಈವರೆವಿಗೂ ಯಾವುದೇ ಕಾಮಗಾರಿ ಪ್ರಾರಂಭವಾಗಿಲ್ಲ. ಆದರೂ ಕಾಮಗಾರಿ ತಡೆ ಹಿಡಿಯುವಂತೆ ಸೂಚಿಸಿರುವುದರ ಹಿಂದೆ ಇಒ ದುರುದ್ದೇಶ ಹೊಂದಿದ್ದಾರೆ. ಅಂಬೇಡ್ಕರ್ ಭವನ ನಿರ್ಮಾಣವಾಗಬಾರದು ಎಂಬ ಉದ್ದೇಶದಿಂದ ಈ ಕ್ರಿಯಾಯೋಜನೆ ತಡೆ ಹಿಡಿದಿದ್ದಾರೆ ಎಂದು ಆಕ್ರೋಶ ವ್ಯಕ್ತಪಡಿಸಿದರು.

ತಾಪಂ ಇಒ ಪ್ರತಿಭಟನಾ ಸ್ಥಳಕ್ಕೆ ಆಗಮಿಸಿ, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆಗೆ ಬರೆದಿದ್ದ ಪತ್ರ ಹಿಂಪಡೆದು, ವರ್ಗ–2 ಕಾಮಗಾರಿಗಳನ್ನು ನಡೆಸುವಂತೆ ಸಂಬಂಧ ಪಟ್ಟ ಇಲಾಖೆಗೆ ಪತ್ರ ವ್ಯವಹಾರ ನಡೆಸಿದ ಹಿನ್ನೆಲೆಯಲ್ಲಿ ಪ್ರತಿಭಟನಾಕಾರರು ಪ್ರತಿಭಟನೆ ಹಿಂಪಡೆದರು.

ತಾಲೂಕು ಜಾಗೃತ ಸಮಿತಿ ಮಾಜಿ ಸದಸ್ಯ ಮಹದೇವಸ್ವಾಮಿ, ತಾಪಂ ಮಾಜಿ ಅಧ್ಯಕ್ಷ ಪುಟ್ಟಸ್ವಾಮಿ, ಸುರೇಶ್, ರೈತ ಮುಖಂಡ ಪಾಂಡು, ಸುರೇಶ್ ಸೇರಿದಂತೆ ಇತರರಿದ್ದರು.

### ಇಂದು ಬೃಹತ್ ಕಾಲ್ನಡಿಗೆ ಜಾಥ

ಮಂಡ್ಯ, ಫೆ.3– ಜಿಲ್ಲಾಡಳಿತ, ಸಾರಿಗೆ ಇಲಾಖೆ, ಪೊಲೀಸ್ ಇಲಾಖೆ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ, ಜಿಲ್ಲಾ ಕಾನೂನು ಸೇವೆಗಳ ಪ್ರಾಧಿಕಾರ, ಸ್ಕೌಟ್ ಅಂಡ್ ಗೈಡ್ಸ್ ಇವರುಗಳ ಸಹಯೋಗದೊಂದಿಗೆ ರಾಷ್ಟ್ರೀಯ ರಸ್ತೆ ಸುರಕ್ಷತಾ ಜಾಗೃತಿ ಮಾಸಾಚಾರಣೆ 2026ರ ಅಂಗವಾಗಿ ಬೃಹತ್ ಕಾಲ್ನಡಿಗೆ ಜಾಥ – ವಾಕಥಾನ್ ಕಾರ್ಯಕ್ರಮವನ್ನು ಫೆ.4 ರಂದು ಬೆಳಗ್ಗೆ 8.30ಕ್ಕೆ ಜಿಲ್ಲಾಧಿಕಾರಿಗಳ ಕಚೇರಿಯಿಂದ ಸಂಜಯ ಟಾಕೀಸ್ ವೃತ್ತದವರೆಗೆ ಹಮ್ಮಿಕೊಳ್ಳಲಾಗಿದೆ. ಜಿಲ್ಲಾಧಿಕಾರಿ ಹಾಗೂ ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಅಧ್ಯಕ್ಷ ಡಾ.ಕುಮಾರ ಚಾಲನೆ ನೀಡಲಿದ್ದು, ನ್ಯಾಯಾಧೀಶ ಆನಂದ್ ಎಂ., ಜಿಪಂ ಸಿಇಒ ನಂದಿನಿ ಕೆ.ಆರ್, ಎಸ್ಪಿ ಶೋಭಾರಾಣಿ ವಿ.ಜೆ, ಎಡಿಸಿ ಬಿ. ಸಿ.ಶಿವಾನಂದ ಮೂರ್ತಿ, ಜಂಟಿ ಸಾರಿಗೆ ಆಯುಕ್ತ ಎಂ.ಶೋಭಾ, ಜಿಲ್ಲಾ ರಸ್ತೆ ಸುರಕ್ಷತಾ ಸಮಿತಿ ಕಾರ್ಯನಿರ್ವಾಹಕ ಅಭಿಯಂತರ ಪುರುಷೋತ್ತಮ್ ಕೆ.ಎಂ, ವಿಭಾಗೀಯ ನಿಯಂತ್ರಣ ಅಧಿಕಾರಿಗಳಾದ ಶರಣ್, ಬಸವರಾಜು ಕೆಎಂ, ವಾರ್ತಾಧಿಕಾರಿ ಟಿ.ಕೆಹರೀಶ್ ಉಪಸ್ಥಿತರಿರುವರು. ಪ್ರಾದೇಶಿಕ ಸಾರಿಗೆ ಅಧಿಕಾರಿ ಹೇಮಾವತಿ ಟಿ.ಜಿ ಗಣ್ಯರನ್ನು ಸ್ವಾಗತಿಸಲಿದ್ದಾರೆ.

### ಕೆ.ವಿ.ರಂಗನಾಥ್ ನಿಧನ



ಕೆ.ಆರ್.ಪೇಟೆ, ಫೆ.3– ಪಟ್ಟಣದ ಅಗ್ರಹಾರ ಕೆರೆ ಬೀದಿ ನಿವಾಸಿ, ಬ್ರಾಹ್ಮಣ ಸಮಾಜದ ಹಿರಿಯ ಮುಖಂಡ ಕೆ.ವಿ.ರಂಗನಾಥ್ (83) ಮಂಗಳವಾರ ಸಂಜೆ ನಿಧನರಾದರು. ಮೃತರು ಪತ್ನಿ ಜ್ಞಾನಾಂಭ, ಪುತ್ರರಾದ ಸಬ್ ರಿಜಿಸ್ಟ್ರಾರ್ ಕಚೇರಿಯ ದಾಸ್ತ ವೇಜು ಪತ್ರ ಬರಹಗಾರ ಕೆ.ಆರ್.ಹರೀಶ್‌ಕುಮಾರ್, ಐಸಿಎಲ್ ಷುಗರ್ ಕಾರ್ಖಾನೆ ನಿವೃತ್ತ ನೌಕರ ಕೆ.ಆರ್.ರವಿ, ಪುತ್ರಿ ಶಶಿರೇಖಾ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಫೆ.4ರಂದು ಪಟ್ಟಣದ ದೇವಿರಮ್ಮಣ್ಣಿ ಕೆರೆಕೋಡಿ ಬಳಿಯ ಸ್ಮಶಾನದಲ್ಲಿ ನಡೆಯಲಿದೆ ಎಂದು ಕುಟಂಬದ ಮೂಲಗಳು ತಿಳಿಸಿವೆ.

### ಭಾರತಿ



ಕೆ.ಆರ್.ಪೇಟೆ, ಫೆ.3– ತಾಲೂಕಿನ ಹೊಸಹೊಳಲು ಗ್ರಾಮದ ಮುಖಂಡ ವಿಜಯಕುಮಾರ್ ಅವರ ಪತ್ನಿ ಭಾರತಿ (45) ಮಂಗಳವಾರ ನಿಧನರಾದರು. ಮೃತರು ಓರ್ವ ಪುತ್ರ, ಪುತ್ರಿ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಬುಧವಾರ ಬೆಳಗ್ಗೆ 11 ಗಂಟೆಗೆ ಮೃತರ ಜಮೀನಿನಲ್ಲಿ ನೆರವೇರಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

### ಕಮಲಾಮಾಮಿ



ಮೇಲುಕೋಟೆ, ಫೆ.3– ಶ್ರೀಚೆಲುವನಾರಾಯಣಸ್ವಾಮಿ ದೇವಾಲಯದ ಸ್ಥಾನೀಕರ ಕುಟುಂಬದ ಹಿರಿಯ ಸೊಸೆ ಪತ್ರಕರ್ತೆ ಸೌಮ್ಯ ಸಂತಾನಂ ಅವರ ತಾಯಿ ಕಮಲಾಮಾಮಿ(54) ಮಂಗಳವಾರ ಮಧ್ಯಾಹ್ನ ವೈಕುಂಠವಾಸಿಯಾಗಿದ್ದಾರೆ. ಮೃತರು ಇಬ್ಬರು ಪುತ್ರರು, ಓರ್ವ ಪುತ್ರಿ, ಅಳಿಯ ಮೇಲುಕೋಟೆ ಸರ್ಕಾರಿ ಪ್ರಾಥಮಿಕ ಬಾಲಕರ ಶಾಲೆ ಮುಖ್ಯಶಿಕ್ಷಕ ಸ್ಥಾನೀಕಂ ಸಂತಾನ ರಾಮನ್ ಸೇರಿದಂತೆ ಅಪಾರ ಬಂಧುಗಳನ್ನು ಅಗಲಿದ್ದಾರೆ. ಅಂತ್ಯಕ್ರಿಯೆ ಚೆಲುವನಾರಾಯಣಸ್ವಾಮಿ ಮಾಲೆ ಗೌರವ ಹಾಗೂ ಶ್ರೀವೈಷ್ಣವ ಸಂಪ್ರದಾಯದೊಂದಿಗೆ ಕೆ.ಆರ್.ಪೇಟೆ ತಾಲೂಕಿನ ಅಘಲಯದಲ್ಲಿ ಬುಧವಾರ ಬೆಳಗ್ಗೆ ನಡೆಯಲಿದೆ ಎಂದು ಕುಟುಂಬದ ಮೂಲಗಳು ತಿಳಿಸಿವೆ.

ಒಂದನೇ ಪುಟದಿಂದ

### ಬಿಜೆಪಿ-ಜೆಡಿಎಸ್ ಅಹೋರಾತ್ರಿ ಧರಣಿ

ಹೊಸದಾಗಿ ಪರವಾನಗಿ ಪಡೆಯಲು, ಇಲ್ಲವೇ ನವೀಕರಿಸಲು ಭಾರೀ ಪ್ರಮಾಣದಲ್ಲಿ ಲಂಚ ಪಡೆಯಲಾಗುತ್ತಿದೆ. ಅಲ್ಲದೇ ಜಾತಿ ರಾಜ ಕೀಯವೂ ನಡೆಯುತ್ತಿದೆ ಎಂಬುದಕ್ಕೆ ಮಂಡ್ಯ ಜಿಲ್ಲಾ ಅಬಕಾರಿ ಅಧಿಕಾರಿಯ ಆಡಿಯೊ ಸಾಕ್ಷಿ ಎಂದು ಸದನದ ಮುಂದಿಟ್ಟರು. ಪರವಾನಗಿ ನೀಡುವಂತೆ ನ್ಯಾಯಾಲಯ ಆದೇಶಿಸಿದ್ದರೂ, ಈ ಅಧಿಕಾರಿ, ನೀನು ಯಾವ ಪಕ್ಷಕ್ಕೆ ಸೇರಿದವನು, ಯಾವ ಜಾತಿ ಎಂದೆಲ್ಲಾ ಕೇಳುತ್ತಾರೆ.

ನಾನು ಯಾವುದೇ ಪಕ್ಷಕ್ಕೆ ಸೇರಿಲ್ಲ ಎಂದ ನಂತರವೂ, ಹಾಗಿದ್ದರೆ, ನೀನು ಒಕ್ಕಲಿಗನಾಗಿದ್ದರೆ ನಿಮ್ಮ ಸಮುದಾಯದ ಮುಖಂಡರನ್ನು ಕರೆದುಕೊಂಡು ಜಿಲ್ಲಾ ಉಸ್ತುವಾರಿ ಸಚಿವ ಚಲುವರಾಯಸ್ವಾಮಿ ಅವರನ್ನು ಭೇಟಿ ಮಾಡು, ಕುರುಬನಾದರೆ ಆ ಸಮುದಾಯದ ಮುಖಂಡರನ್ನು ಕರೆದುಕೊಂಡು ಮುಖ್ಯಮಂತ್ರಿ ಸಿದ್ದರಾಮಯ್ಯ ಪುತ್ರ ಯತೀಂದ್ರ ಅವರನ್ನು ಭೇಟಿ ಮಾಡು ಎಂಬುದಾಗಿ ಅಧಿಕಾರಿಯೇ ಸೂಚಿಸುತ್ತಾರೆ.

ಈ ಅಧಿಕಾರಿಯ ಸಂಭಾಷಣೆಯಲ್ಲಿ ಇನ್ನೂ ಬಹಳಷ್ಟಿದೆ, ಇಷ್ಟನ್ನು ಸದನದ ಗಮನಕ್ಕೆ ತರುತ್ತಿದ್ದೇನೆ. ಸಚಿವರ ವಿರುದ್ಧ ನಾಲ್ಕು ದಾಖಲೆಗಳನ್ನು ಇಟ್ಟಿದ್ದೇನೆ. ಅವರನ್ನು ತಕ್ಷಣ ಸಂಪುಟದಿಂದ ವಜಾ ಮಾಡಿ.

ಸಚಿವರ ಆಪ್ತರ ಪ್ರಕಾರ, ಅವರಿಗೆ ಮೂರು ಜಿಲ್ಲೆಗಳ ಉಸ್ತುವಾರಿ ಅಷ್ಟೇ ನೀಡಲಾಗಿದೆ. ಉಳಿದ ಜಿಲ್ಲೆಗಳ ವ್ಯವಹಾರವನ್ನು ಕಾಣದ ಕೈಯೊಂದು ನೋಡಿಕೊಳ್ಳುತ್ತಿದೆ. ಈ ಬಗ್ಗೆ ತನಿಖೆ ಆಗಲೇಬೇಕು ಎಂದು ಆಗ್ರಹಿಸಿದರು. ಭ್ರಷ್ಟಾಚಾರ ನಡೆದಿದೆ ಎಂಬುದನ್ನು ಸಾಬೀತುಪಡಿಸಲು ದಾಖಲೆಗಳನ್ನು ಇಟ್ಟಿದ್ದೇವೆ. ಇನ್ನೂ ಏಕೆ ಮಂತ್ರಿಯನ್ನಾಗಿ ಮುಂದುವರೆಸಿದ್ದೀರಿ. ತಕ್ಷಣ ವಜಾ ಮಾಡಿ ಎಂದು ಒತ್ತಾಯಿಸಿದರು. ಪ್ರತಿಪಕ್ಷದ ನಾಯಕರ ಆರೋಪದ ವೇಳೆ, ಆಡಳಿತ ಸದಸ್ಯರು ಮೌನವಾಗಿ ಆಲಿಸುತ್ತಿದ್ದರು. ಮುಖ್ಯಮಂತ್ರಿ ಸಿದ್ದರಾಮಯ್ಯ ಸದನ ಪ್ರವೇಶಿಸುತ್ತಿದ್ದಂತೆ, ಕೆಲವು ಸಚಿವರು ಮತ್ತು ಶಾಸಕರು ವಿರೋಧಿ ಸದಸ್ಯರ ಮೇಲೆ ಹರಿಹಾಯಲು ಶುರು ಮಾಡಿದರು. ಈ ಹಂತದಲ್ಲಿ ಆಡಳಿತ ಹಾಗೂ ಪ್ರತಿಪಕ್ಷಗಳ ನಡುವೆ ಏರಿದ ಧ್ವನಿಯಲ್ಲಿ ಮಾತಿನ ಚಕಮಕಿ ನಡೆದು ಸದನ ಗದ್ದಲದಲ್ಲಿ ಮುಳುಗಿತು.

ಇಷ್ಟಾದರೂ ಮುಖ್ಯಮಂತ್ರಿ ಸಿದ್ದರಾಮಯ್ಯ ಇತ್ತ ಕಿವಿಗೊಡದೆ ವಿಬಿ ಜಿ ರಾಮ್ ಜಿ ವಿರೋಧಿಸಿ, ಮನರೇಗಾ ಮರುಸ್ಥಾಪನೆ ವಿಚಾರ ಪ್ರಸ್ತಾಪಿಸಿ, ಈ ಸಂಬಂಧ ನಿರ್ಣಯ ಮಂಡಿಸುವುದ ರಲ್ಲಿ ಬ್ಯುಸಿಯಾಗಿರುವುದನ್ನು ಖಂಡಿಸಿ, ಅಂತಿಮವಾಗಿ ಬಿಜೆಪಿ–ಜೆಡಿಎಸ್ ಅಬಕಾರಿ ಸಚಿವರ ರಾಜೀನಾಮೆಗೆ ಆಗ್ರಹಿಸಿ ಅಹೋರಾತ್ರಿ ಧರಣಿಗೆ ನಿರ್ಧರಿಸಿದವು.

### ವಿಶೇಷ ಅಭ್ಯಾಸ ತರಗತಿ

ಸಾಮರ್ಥ್ಯ ಹೆಚ್ಚಿಸಲು ಮಾರ್ಗಸೂಚಿ ನೀಡಲಾಗಿದೆ. ಆಯಾಯ ಶಾಲೆಗಳ ಶಿಕ್ಷಕರು ಕಲಿಕೆಯಲ್ಲಿ ಹಿಂದುಳಿದಿರುವ ಮಕ್ಕಳೊಂದಿಗೆ ಸಮಾಲೋಚಿಸಿ ಅವರಲ್ಲಿ ಆತ್ಮವಿಶ್ವಾಸ ತುಂಬಿ ಎಲ್ಲಾ ವಿಷಯಗಳಲ್ಲಿ ಕನಿಷ್ಠ 40 ಅಂಕಗಳನ್ನು ಪಡೆದು ತೇರ್ಗಡೆ ಹೊಂದುವಂತೆ ಮಾಡಲು ಈ ಕಾರ್ಯಕ್ರಮ ರೂಪಿಸಲಾಗಿದೆ. 'ಮೈಸೂರು ಮಿತ್ರ'ನೊಂದಿಗೆ ಮಾತನಾಡಿದ ಶಾಲಾ ಶಿಕ್ಷಣ ಇಲಾಖೆ ಉಪನಿರ್ದೇಶಕ ಡಿ.ಉದಯಕುಮಾರ್, ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಿ ಅವರು ಕನಿಷ್ಠ ಶೇ.40ರಷ್ಟು ಫಲಿತಾಂಶ ಪಡೆದು ತೇರ್ಗಡೆ ಹೊಂದುವುದಕ್ಕೆ ಪೂರಕವಾಗಿ ತರಬೇತಿ ನೀಡುವುದು ವಿಷನ್–40 ಕಾರ್ಯಕ್ರಮದ ಉದ್ದೇಶ. ಈ ಕಾರ್ಯಕ್ರಮದಡಿ ಇಂತಹ ಮಕ್ಕಳ ಕಲಿಕಾ ಸಾಮರ್ಥ್ಯ ಹೆಚ್ಚಿಸಲಾಗುವುದು. ಪೂರ್ವ ಸಿದ್ಧತಾ ಪರೀಕ್ಷೆಯಲ್ಲಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳನ್ನು ಗುರುತಿಸಲಾಗಿದೆ. ಕಡಿಮೆ ಕಾರ್ಯಕ್ಷಮತೆ ತೋರಿದ, ನಾಟ್ ಕಂಪ್ಲೀಟ್ ವಿದ್ಯಾರ್ಥಿಗಳನ್ನು ಗುರುತಿಸಿದ್ದು, ಜಿಲ್ಲೆಯಲ್ಲಿ ಇಂತಹ ಐದು ಸಾವಿರ ವಿದ್ಯಾರ್ಥಿಗಳಿಗೆ ವಿಶೇಷ ತರಗತಿ ನಡೆಸಲಾಗುತ್ತಿದೆ ಎಂದು ತಿಳಿಸಿದರು.

ಇಂತಹ ಮಕ್ಕಳು ಅನುದಾನಿತ ಶಾಲೆಗಳಲ್ಲಿ ಹೆಚ್ಚು ಸಂಖ್ಯೆಯಲ್ಲಿ ಕಂಡು ಬಂದಿದ್ದಾರೆ. ಇಂತಹ ಮಕ್ಕಳಿಗೆ ವಿಶೇಷ ಗಮನ ನೀಡಲಾಗುತ್ತಿದೆ. ವಿಷನ್–40 ಕಾರ್ಯಕ್ರಮದಡಿ ಗುಂಪು ಅಧ್ಯಯನ, ಓಪನ್ ಬುಕ್ಸ್ ಮಾದರಿ ಪರೀಕ್ಷೆಗಳಲ್ಲಿ ತೊಡಗಿಸುವುದು, ಅವರ ಮನೆಗೆ ಭೇಟಿ ನೀಡಿ ಅವರ ಕಲಿಕಾ ಚಟುವಟಿಕೆ ಪರಿಶೀಲಿಸುವುದು ಹಾಗೂ ಸಮಾಲೋಚನೆ ಮೂಲಕ ಅವರಲ್ಲಿ ಆತ್ಮವಿಶ್ವಾಸ ಮೂಡಿಸುವ ಕೆಲಸ ಮಾಡಲಾಗುತ್ತಿದೆ. ಆಯಾಯ ಶಾಲೆಗಳಲ್ಲಿ ಅಲ್ಲಿನ ಶಿಕ್ಷಕರು ಸದರಿ ಕಾರ್ಯಕ್ರಮದಡಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿ ನೀಡುವಂತೆ ಈ ಕಾರ್ಯಕ್ರಮ ವಿನ್ಯಾಸಗೊಳಿಸಲಾಗಿದೆ ಎಂದು ವಿವರಿಸಿದರು.

ಮೊದಲ ಪೂರ್ವಸಿದ್ಧತಾ ಪರೀಕ್ಷೆಯಲ್ಲಿ (ಜ.5ರಿಂದ 10ರವರೆಗೆ ನಡೆಯಿತು) ಕನಿಷ್ಠ ಅಂಕ ಪಡೆದವರು, ನಾಟ್ ಕಂಪ್ಲೀಟ್ (ಪರೀಕ್ಷೆಯಲ್ಲಿ ಕಡಿಮೆ ಅಂಕ ಪಡೆದವರು) ಸೇರಿದಂತೆ 5 ಸಾವಿರ ವಿದ್ಯಾರ್ಥಿಗಳನ್ನು ವಿಶೇಷ ತರಗತಿಗಳಿಗೆ ಆಯ್ಕೆ ಮಾಡಿಕೊಳ್ಳಲಾಗಿತ್ತು. ನಾಳೆ 2ನೇ ಪೂರ್ವ ಸಿದ್ಧತಾ ಪರೀಕ್ಷೆಯ (ಜ.27ರಿಂದ ಫೆ.2ರವರೆಗೆ) ಫಲಿತಾಂಶ ಪ್ರಕಟವಾಗುತ್ತಿದ್ದು, ಈಗಾಗಲೇ ಅಂದಾಜಿಸಿರುವ ಪ್ರಕಾರ 2ನೇ ಪರೀಕ್ಷೆಯಲ್ಲಿ ಶೇ.70ರಷ್ಟು ವಿದ್ಯಾರ್ಥಿಗಳು ಉತ್ತಮ ಕಾರ್ಯಕ್ಷಮತೆ ತೋರಿರುವುದು ಕಂಡು ಬರುತ್ತಿದೆ. ಆ ಮೂಲಕ ಶೇ.20ರಷ್ಟು ಮಕ್ಕಳು ಕನಿಷ್ಠ ಅಂಕ ಗಳಿಸಿದ್ದರೆ, ಕೇವಲ ಶೇ.10ರಷ್ಟು ಮಕ್ಕಳು ಮಾತ್ರವೇ ಪರೀಕ್ಷೆಯಲ್ಲಿ ಕಳಪೆ ಕಾರ್ಯಕ್ಷಮತೆ ತೋರಿಸಿರುವುದನ್ನು ಅಂದಾಜಿಸಲಾಗಿದೆ ಎಂದರು.

ಅಲ್ಲಿಗೆ ಶೇ.10ರಷ್ಟು ಮಕ್ಕಳತ್ತ ಮಾತ್ರವೇ ಹೆಚ್ಚು ಗಮನ ನೀಡಬೇಕಾಗಬಹುದು. ಹಾಗಾಗಿ ಇಂತಹ ಮಕ್ಕಳ ಸಂಖ್ಯೆಯು 5 ಸಾವಿರದಿಂದ 3 ಸಾವಿರಕ್ಕೆ ಇಳಿಯುವ ಸಾಧ್ಯತೆ ಇದೆ. ಅದಾಗ್ಯೂ ಈ ಎಲ್ಲಾ 5 ಸಾವಿರ ಮಕ್ಕಳಿಗೂ ವಿಶೇಷ ತರಬೇತಿ ಮುಂದುವರೆಸಲಾಗುವುದು. ಆದರೆ 3 ಸಾವಿರ ಮಕ್ಕಳ ಕುರಿತಂತೆ ಹೆಚ್ಚು ಒತ್ತು ನೀಡಲಾಗುವುದು. ನಾಳೆ ಫಲಿತಾಂಶ ಪ್ರಕಟವಾದ ಬಳಿಕ ಅಂತಿಮ ಚಿತ್ರಣ ದೊರೆಯಲಿದೆ. ಜೊತೆಗೆ ಕರ್ನಾಟಕ ಶಾಲಾ ಪರೀಕ್ಷೆ ಮತ್ತು ಮೌಲ್ಯನಿರ್ಣಯ ಮಂಡಲಿಯಿಂದ ಜಿಲ್ಲೆಗೆ ಸಂಬಂಧಿಸಿದಂತೆ ಫಲಿತಾಂಶ ವಿಶ್ಲೇಷಣಾ ವರದಿ ದೊರೆಯಲಿದ್ದು, ಆ ಬಳಿಕ ವಿಷಯವಾರು, ಶಾಲಾವಾರು ಹಾಗೂ ತಾಲೂಕುವಾರು ಫಲಿತಾಂಶ ಲಭಿಸಲಿದೆ ಎಂದು ತಿಳಿಸಿದರು.

ಸದರಿ ಕಾರ್ಯಕ್ರಮದಡಿ ಪ್ರತಿ ಶಿಕ್ಷಕರಿಗೆ 3ರಿಂದ 4 ಮಕ್ಕಳನ್ನು ಕೇಂದ್ರೀಕರಿಸಿ ಅಧ್ಯಯನಕ್ಕೆ ಉತ್ತೇಜನ ನೀಡಲು ಜವಾಬ್ದಾರಿ ನೀಡಲಾಗಿದೆ. ಪ್ರತಿಯೊಬ್ಬ ವಿದ್ಯಾರ್ಥಿ ಸಹ ಎಲ್ಲಾ ವಿಷಯಗಳಲ್ಲಿ 40 ಅಂಕಗಳನ್ನು ಗಳಿಸಲೇಬೇಕೆಂಬ ಗುರಿಯೊಂದಿಗೆ ಚಟುವಟಿಕೆಗಳನ್ನು ನಡೆಸಲಾಗುತ್ತಿದೆ. ಮಾದರಿ ಪ್ರಶ್ನೆಪತ್ರಿಕೆ ಆಧಾರದಲ್ಲಿ ಅಭ್ಯಾಸ ಮಾಡಿಸಲಾಗುತ್ತಿದೆ. ಆಯಾಯ ಶಾಲೆಗಳಲ್ಲಿ ಸದರಿ ಕಾರ್ಯಕ್ರಮದಡಿ ಕಲಿಕೆಯಲ್ಲಿ ಹಿಂದುಳಿದ ಮಕ್ಕಳಿಗೆ ವಿಶೇಷ ತರಗತಿ ನಡೆಸಲಾಗುತ್ತಿದೆ. ಇಲಾಖಾಧಿಕಾರಿಗಳು ಶಾಲೆಗಳಿಗೆ ಭೇಟಿ ನೀಡಿ ವಿಷನ್–40ಯಡಿ ನಡೆಯುತ್ತಿರುವ ಚಟುವಟಿಕೆಗಳ ಬಗ್ಗೆ ಮೇಲ್ವಿಚಾರಣೆ ಮಾಡುತ್ತಿದ್ದಾರೆ. ಜಿಲ್ಲಾಧಿಕಾರಿಗಳು, ಜಿಪಂ ಸಿಇಒ ಅವರಿಗೆ ಈ ಚಟುವಟಿಕೆಗಳ ಬಗ್ಗೆ ಆಗಾಗ್ಗೆ ವರದಿಯನ್ನು ನೀಡುತ್ತಿದ್ದೇವೆ. ಅವರಿಂದ ಮಾರ್ಗದರ್ಶನ ಪಡೆಯುತ್ತಿದ್ದೇವೆ. ಈ ಬಾರಿ ಒಳ್ಳೆಯ ಫಲಿತಾಂಶ ಜಿಲ್ಲೆಗೆ ಬರಬೇಕೆಂದು ನಮ್ಮ ಉದ್ದೇಶ ಎಂದರು.

## ಮರುಜಾರಿಗೆ ವಿಧಾನಸಭೆಯಲ್ಲಿ ನಿರ್ಣಯ ಮಂಡನೆ

ನೇತೃತ್ವದ ಯುಪಿಎ ಸರ್ಕಾರ ಮಹಾತ್ಮ ಗಾಂಧೀ ರಾಷ್ಟ್ರೀಯ ಗ್ರಾಮೀಣ ಉದ್ಯೋಗ ಖಾತ್ರಿ ಕಾಯ್ದೆ ಜಾರಿಗೆ ತಂದಿತ್ತು. ಯೋಜನೆಯು ನಿರುದ್ಯೋಗ ನಿರ್ಮೂಲನೆ, ವಲಸೆ ತಡೆ, ಲಿಂಗ ತಾರತಮ್ಯವಿಲ್ಲದೆ ವೇತನ ನೀಡುವಿಕೆ, ಪಂಚಾಯತ್ ವಿಕೇಂದ್ರೀ ಕರಣದ ಬಲವರ್ಧನೆ ಹಾಗೂ ಗ್ರಾಮೀಣ ಜನರ ವೈಯುಕ್ತಿಕ ಹಾಗೂ ಸಮುದಾಯ ಆಸ್ತಿಗಳ ಸೃಜನೆಯಿಂದ ಕ್ರಾಂತಿಕಾರಿ ಬದಲಾವಣೆ ತಂದಿದೆ.

ಹೊಸ ಕಾಯ್ದೆ ಸಂವಿಧಾನದ 21ನೇ ಅನುಚ್ಛೇದದಡಿ ಜೀವಿಸುವ ಹಕ್ಕು ಮತ್ತು ಜೀವನೋಪಾಯ ಹಕ್ಕನ್ನು ಉಲ್ಲಂಘಿಸುತ್ತದೆ. ಸಂವಿಧಾನದ 73ನೇ ತಿದ್ದುಪಡಿಯ ಮೂಲಕ ಗ್ರಾಮ ಪಂಚಾಯತ್‌ಗಳಿಗೆ ನೀಡಲಾದ ಅಧಿಕಾರ ಮತ್ತು ಸ್ವಾಯತ್ತತೆ ಕಸಿದುಕೊಳ್ಳುವ ಮೂಲಕ, ಸಂವಿಧಾನದ 73ನೇ ತಿದ್ದುಪಡಿಯ ಆಶಯಕ್ಕೆ ವಿರುದ್ಧವಾಗಿದೆ.

**ಗಾಂಧೀಜಿಯವರ ಕಲ್ಪನೆ ವಿಫಲವಾಗುತ್ತೆ:** ರಾಷ್ಟ್ರಪಿತ ಮಹಾತ್ಮ ಗಾಂಧಿ ಅವರ ಕಲ್ಪನೆಯ ಗ್ರಾಮ ಸ್ವರಾಜ್ಯದ ಉದ್ದೇಶವನ್ನೂ ವಿಫಲಗೊಳಿಸುತ್ತದೆ. ಮನ್ರೇಗಾ ಕಾಯ್ದೆಯಲ್ಲಿ 100 ಮಾನವ ದಿನಗಳ ಕೂಲಿ ಹಣವನ್ನು ಶೇ.100 ರಷ್ಟು ಸಂಪೂರ್ಣವಾಗಿ ಕೇಂದ್ರ ಭರಿಸುತ್ತಿತ್ತು.

ರಾಜ್ಯಗಳ ಜೊತೆ ಸಮಾಲೋಚಿಸದೆ, ಏಕಾಏಕಿ ರಾಜ್ಯ ಸರ್ಕಾರಗಳು ಶೇ.40ರಷ್ಟು ಅನುದಾನ ಭರಿಸಬೇಕೆಂಬ ನಿಯಮವನ್ನು ಹೇರಿದೆ. ಇದರಿಂದ 125 ಮಾನವ ದಿನಗಳ ಕೆಲಸ ಒದಗಿಸುವುದಾಗಿ ಹೊಸ ಕಾಯ್ದೆಯಲ್ಲಿ ಹೇಳಲಾಗಿದ್ದರೂ, ವಾಸ್ತವವಾಗಿ 50 ಮಾನವ ದಿನಗಳ ವೆಚ್ಚವನ್ನು ರಾಜ್ಯ ಸರ್ಕಾರ ಭರಿಸಬೇಕಾಗುತ್ತದೆ.

ಇದು ಸಂವಿಧಾನದ ಅನುಚ್ಛೇದ 258 ಮತ್ತು ಅನುಚ್ಛೇದ 280ಗಳನ್ನು ಸ್ಪಷ್ಟವಾಗಿ ಉಲ್ಲಂಘನೆಯಾಗಿದೆ. ಕರ್ನಾಟಕ ದೇಶದಲ್ಲೇ ಅತೀ ಹೆಚ್ಚು ತೆರಿಗೆ ಪಾವತಿಸುವ ರಾಜ್ಯಗಳಲ್ಲಿ ಎರಡನೇ ಸ್ಥಾನದಲ್ಲಿದೆ. ನಮ್ಮ ಗ್ರಾಮ ಪಂಚಾಯತ್‌ಗಳು ಅತೀ ಹೆಚ್ಚು ತೆರಿಗೆ ಸಂಗ್ರಹಿಸುವ ಮೂಲಕ ರಾಜ್ಯ ದೇಶದಲ್ಲಿಯೇ ಮೊದಲ ಸ್ಥಾನದಲ್ಲಿದೆ.

ಕರ್ನಾಟಕಕ್ಕೆ 14ನೇ ಹಣಕಾಸು ಆಯೋಗದಲ್ಲಿ ಶೇ.4.71ರಷ್ಟು ತೆರಿಗೆ ಹಂಚಿಕೆ ಶಿಫಾರಸ್ಸು ಮಾಡಲಾಗಿತ್ತು. 15ನೇ ಹಣಕಾಸು ಆಯೋಗದಲ್ಲಿ ಶೇ.3.64ಕ್ಕೆ ಇಳಿಕೆಯಾಯಿತು. ಇದೀಗ 16ನೇ ಹಣಕಾಸು ಆಯೋಗದ ಶಿಫಾರಸಿನಲ್ಲಿ ಶೇ.4.131ರಷ್ಟು ಹಂಚಿಕೆ ಮಾಡಿದ್ದರೂ, 14ನೇ ಹಣಕಾಸು ಆಯೋಗದ ಶಿಫಾರಸಿಗಿಂತ ಶೇ. 14.1 ರಷ್ಟು ಕಡಿಮೆ ಆಗಿದೆ.

ಹೊಸ ಕಾಯ್ದೆ ಮೂಲಕ ಯೋಜನೆ ಅನುಷ್ಠಾನದಲ್ಲಿ ಶೇ.40 ರಷ್ಟು ಹೊರೆಯನ್ನು ರಾಜ್ಯದ ಮೇಲೆ ಹೊರಿಸುತ್ತಿರುವುದು ರಾಜ್ಯದ ಆರ್ಥಿಕ ಭದ್ರತೆ ಮತ್ತು ಅಭಿವೃದ್ಧಿಯನ್ನು ಅಪಾಯಕ್ಕೆ ದೂಡುವ ಹುನ್ನಾರವಾಗಿದೆ.

**ಗ್ರಾಪಂಗಳಿಗೆ ಸ್ವಾತಂತ್ರ್ಯವಿಲ್ಲ:** ಹೊಸ ಕಾಯ್ದೆಯಲ್ಲಿ ಕೇಂದ್ರ ಸರ್ಕಾರ ರೂಪಿಸುವ ಮಾನದಂಡಗಳ ಹಂಗಿಗೆ ಒಳಪಡಿಸಿ ಜನರ ಹಕ್ಕನ್ನು ಕಸಿದುಕೊಳ್ಳಲಾಗಿದೆ. ಗ್ರಾಮಸಭೆಗಳ ಅಧಿಕಾರ ಕಿತ್ತುಕೊಳ್ಳಲಾಗಿದೆ. ಗ್ರಾಮ ಪಂಚಾಯತ್‌ಗಳು ತಮ್ಮ ಅಗತ್ಯಕ್ಕೆ ತಕ್ಕಂತೆ ಕಾಮಗಾರಿ ಆಯ್ಕೆ ಮಾಡುವ ಸ್ವಾತಂತ್ರ್ಯ ಕಳೆದುಕೊಂಡಿವೆ.

ಕೇಂದ್ರ ಸರ್ಕಾರ ಆಯ್ಕೆ ಮಾಡಿದ ಪಂಚಾಯತ್‌ಗಳಲ್ಲಿ ಮಾತ್ರ ಯೋಜನೆ ಜಾರಿಯಾಗುತ್ತಿದ್ದು, ಉಳಿದ ಕಡೆಗಳಲ್ಲಿ ಉದ್ಯೋಗದ ಹಕ್ಕನ್ನು ನಿರಾಕರಿಸಲಾಗಿದೆ. ಈ ಮೊದಲಿದ್ದ ಕಾಯಿದೆಯಲ್ಲಿ ನಮ್ಮ ಹೊಲ–ನಮ್ಮ ದಾರಿ, ದನದ ಕೊಟ್ಟಿಗೆ, ಕುರಿ ದೊಡ್ಡಿ, ಕಣ, ಶಾಲಾ ಕಾಂಪೌಂಡ್, ಶೌಚಾಲಯ, ಬದು, ಹೊಳಗಟ್ಟಿ, ಪಂಚಾಯತ್ ಕಟ್ಟಡ, ತೋಟಗಾರಿಕೆ ಬೆಳೆಗಳು, ಆಟದ ಮೈದಾನದಂತಹ ಸ್ಥಳೀಯ ಗ್ರಾಮೀಣ ಆಸ್ತಿಗಳನ್ನು ನಿರ್ಮಿಸಲಾಗುತ್ತಿತ್ತು.

**ಬಡವರ ಅನ್ನಕ್ಕೆ ಕನ್ನ:** ಹೊಸ ಕಾಯ್ದೆಯನ್ನು ಪಿ.ಎಂ ಗತಿಶಕ್ತಿ ಯೋಜನೆಗೆ ಜೋಡಿಸಿರುವುದರಿಂದ, ದೊಡ್ಡ ರಸ್ತೆಗಳು ಮತ್ತು ಹೈವೇಗಳ ನಿರ್ಮಾಣಕ್ಕೆ ಬಳಕೆಯಾಗುತ್ತಿದ್ದು, ಇದು ಪರೋಕ್ಷವಾಗಿ ಗುತ್ತಿಗೆದಾರರು ಮತ್ತು ಕಾರ್ಪೊರೇಟ್ ಕಂಪನಿಗಳಿಗೆ ಲಾಭ ಮಾಡಿಕೊಡುವ ಯೋಜನೆಯಾಗಿ ಮಾರ್ಪಟ್ಟಿದ್ದು, ಬಡವರ ಕೈಯಿಂದ ಅನ್ನ ಕಸಿದುಕೊಂಡು ಉಳ್ಳವರನ್ನು ಇನ್ನಷ್ಟು ಶ್ರೀಮಂತರನ್ನಾಗಿಸುವ ಯೋಜನೆಯಾಗಿದೆ ಎಂದರು. ಹೊಸ ಕಾಯ್ದೆ ವರ್ಷಕ್ಕೆ 12 ತಿಂಗಳ ಬದಲು 10 ತಿಂಗಳು ಮಾತ್ರ ಕೆಲಸಕ್ಕೆ ಅವಕಾಶ ನೀಡುತ್ತದೆ. ವಿಬಿ–ಜಿ ರಾಮ್–ಜಿ ಕಾಯ್ದೆಯಡಿ ಎಲ್ಲಾ ಗ್ರಾಮ ಪಂಚಾಯತ್‌ಗಳು ಸೇರ್ಪಡೆಗೊಳ್ಳುವ ಖಚಿತತೆ ಇಲ್ಲ ಹಾಗೂ ಕಾರ್ಮಿಕರಿಗೆ ನೀಡಲಾಗುವ ಕೂಲಿ ದರದ ಬಗ್ಗೆ ಯಾವುದೇ ಖಾತ್ರಿ ಇಲ್ಲ. ಈ ಅನಿಶ್ಚಿತತೆ ಗ್ರಾಮೀಣ ಕೂಲಿ ಕಾರ್ಮಿಕರು ಅದರಲ್ಲೂ ವಿಶೇಷವಾಗಿ ಮಹಿಳೆಯರು, ಪರಿಶಿಷ್ಟ ಜಾತಿ ಮತ್ತು ಪಂಗಡದ ಕಾರ್ಮಿಕರು, ಆದಿವಾಸಿಗಳು, ರೈತಾಪಿ ಜನರ ಹಕ್ಕುಗಳನ್ನು ಕಸಿದುಕೊಂಡಿದೆ. ಕೂಲಿ ಕಾರ್ಮಿಕರನ್ನು ಆಧುನಿಕ ಗುಲಾಮಗಿರಿಗೆ ತಳ್ಳುವ ಪ್ರಯತ್ನವಾಗಿದೆ.

ಕೇಂದ್ರದ ನೂತನ ಕಾಯಿದೆಯನ್ನು ತೀವ್ರವಾಗಿ ವಿರೋಧಿಸುವುದಲ್ಲದೆ, ಮನರೇಗಾ ಯೋಜನೆಯನ್ನು ಮೂಲ ಸ್ವರೂಪದಲ್ಲಿ ಮರುಸ್ಥಾಪಿಸಬೇಕು ಎಂದು ಸದನವು ಕೇಂದ್ರ ಸರ್ಕಾರವನ್ನು ಒತ್ತಾಯಿಸುತ್ತದೆ ಎಂದು ಹೇಳಿದರು.

## ಶ್ರೀಗಂಧ ಸಮೃದ್ಧತೆಗೆ ಭಾರತದ ಮೊದಲ ಶ್ರೀಗಂಧ ಜೀನ್ ಪೂಲ್ ಕರ್ನಾಟಕದಲ್ಲಿ ಸ್ಥಾಪನೆ

ಬೆಂಗಳೂರು, ಫೆ.3– ಭಾರತದ ಮೊದಲ ಶ್ರೀಗಂಧದ ಜೀನ್ ಪೂಲ್ ಮತ್ತು ಜರ್ಮ್‌ಪ್ಲಾಸಂ ಬ್ಯಾಂಕ್‌ನ್ನು ಕರ್ನಾಟಕದಲ್ಲಿ ಸ್ಥಾಪಿಸಲಾಗಿದೆ. ಇದರಿಂದ ಕರ್ನಾಟಕದಲ್ಲಿ ಮಾತ್ರವಲ್ಲದೆ ದೇಶದಾದ್ಯಂತ ವಾಣಿಜ್ಯ ಬೆಳೆ ಬೆಳೆಸಲು ರೈತರಿಗೆ ಅತ್ಯುತ್ತಮ ಗುಣಮಟ್ಟದ ಸಸಿಗಳು ಲಭ್ಯವಾಗಲಿದೆ.

ಈ ಜೀನ್ ಪೂಲ್ ಮತ್ತು ಜರ್ಮ್‌ಪ್ಲಾಸಂ ಬ್ಯಾಂಕ್ ನ್ನು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್ (KSDL) ಸಂಸ್ಥೆಯು ಇನ್‌ಸ್ಟಿಟ್ಯೂಟ್ ಆಫ್ ವುಡ್ ಸೈನ್ಸ್ ಅಂಡ್ ಟೆಕ್ನಾಲಜಿ (IWST) ಸಹಭಾಗಿತ್ವದಲ್ಲಿ ಸ್ಥಾಪಿಸಿದೆ. ಮಾದರಿ ಸಂಗ್ರಹಣೆ ಮೂರು ತಿಂಗಳ ಹಿಂದೆ ಆರಂಭವಾಗಿದ್ದರೂ, ಇತ್ತೀಚಿನ ಕೇಂದ್ರ ಬಜೆಟ್‌ನಲ್ಲಿ ಕರಾವಳಿ ಪ್ರದೇಶದಲ್ಲಿ ಶ್ರೀಗಂಧದ ಬೆಳವಣಿಗೆಯನ್ನು ಉತ್ತೇಜಿಸುವ ಘೋಷಣೆಯು ಈ ಯೋಜನೆಗೆ ಮತ್ತಷ್ಟು ಬಲ ನೀಡಿದೆ.

ಶ್ರೀಗಂಧದ ಬೆಳೆ ಲಾಭದಾಯಕ ಉದ್ಯಮವಾಗಿರುವುದರಿಂದ, ಇತರ ಜಾತಿಗಳ ಜೊತೆಗೆ ಶ್ರೀಗಂಧ ಗಿಡ ನೆಡುವಿಕೆಯನ್ನು ಉತ್ತೇಜಿಸಲು ರಾಜ್ಯ ಮತ್ತು ಕೇಂದ್ರ ಸರ್ಕಾರಗಳಿಗೆ ಮನವಿ ಮಾಡಿದ್ದೇವೆ. ಇದಕ್ಕಾಗಿ ಉತ್ತಮ ಗುಣಮಟ್ಟದ ಸಸಿಗಳು ಅಗತ್ಯವಾಗಿದ್ದು, ಹೀಗಾಗಿ ಈ ಉಪಕ್ರಮವನ್ನು ಕೈಗೊಳ್ಳಲಾಗಿದೆ ಎಂದು ಕರ್ನಾಟಕ ಸೋಪ್ಸ್ ಅಂಡ್ ಡಿಟರ್ಜೆಂಟ್ಸ್ ಲಿಮಿಟೆಡ್(KSDL)ನ ಹಿರಿಯ ಅಧಿಕಾರಿ ಹೇಳಿದ್ದಾರೆ. ಜೊತೆಗೆ, ಜೀನ್ ಪೂಲ್ ಶ್ರೀಗಂಧ ಮತ್ತು ಅದರ ಎಣ್ಣೆಗೆ ಮೂಲಮಟ್ಟದ ಮಾನದಂಡವನ್ನು ರೂಪಿಸಲು ಸಹಾಯ ಮಾಡುತ್ತದೆ ಎಂದರು. ಈ ಸಂಶೋಧನೆಗಳನ್ನು ಇತರ ರಾಜ್ಯಗಳಿಗೂ ಹಂಚಿಕೊಳ್ಳಲಾಗುತ್ತದೆ. ಮಧ್ಯಪ್ರದೇಶ, ಅಸ್ಸಾಂ, ನಾಗಾಲ್ಯಾಂಡ್, ಮಹಾರಾಷ್ಟ್ರ ಮತ್ತು ಗುಜರಾತ್‌ನ ರೈತರಿಂದ ಬೀಜಗಳು ಮತ್ತು ಸಸಿಗಳಿಗಾಗಿ ಕೆಎಸ್‌ಡಿಎಲ್‌ಗೆ ಆದೇಶಗಳು ಬರುತ್ತಿವೆ.

ಮರ ಮತ್ತು ಎಣ್ಣೆಯ ಗುಣಮಟ್ಟ ಹಾಗೂ ಪ್ರಮಾಣದಲ್ಲಿ ಉಂಟಾಗಿರುವ ಕುಸಿತವನ್ನು ಸೆಂಟ್ರಲ್ ವಿಸ್ಟಾ ಓವರ್‌ಸೈಟ್ ಸಮಿತಿಯಿಂದ ಬಿಡುಗಡೆಗೊಂಡ ಶ್ರೀಗಂಧ ಅಭಿವೃದ್ಧಿ ಸಮಿತಿಯ ವರದಿ ಪ್ರಸ್ತಾಪಿಸಿತ್ತು. ವರದಿಯು ಭಾರತ, ವಿಶೇಷವಾಗಿ ಕರ್ನಾಟಕ, ಆಸ್ಟ್ರೇಲಿಯಾದಿಂದ ಶ್ರೀಗಂಧದ ಎಣ್ಣೆ ಮತ್ತು ಬೀಜಗಳನ್ನು ಆಮದು ಮಾಡಿಕೊಳ್ಳುತ್ತಿದ್ದುದನ್ನೂ ಉಲ್ಲೇಖಿಸಿದೆ.

ಕಳೆದ ವರ್ಷ ಕರ್ನಾಟಕ ಅರಣ್ಯ ಇಲಾಖೆ KSDL ಜೊತೆಗೆ ಕೈಜೋಡಿಸಿ ರಾಜ್ಯದಾದ್ಯಂತ ಪ್ರತಿವರ್ಷ 1 ಲಕ್ಷ ಶ್ರೀಗಂಧದ ಸಸಿಗಳನ್ನು ನೆಡುವ ಯೋಜನೆಯನ್ನು ರೂಪಿಸಿತ್ತು. ಆದರೆ ಈ ಯೋಜನೆ ಇನ್ನೂ ಆರಂಭವಾಗಿಲ್ಲ.


ಕರ್ನಾಟಕ, ತಮಿಳುನಾಡು ಮತ್ತು ಕೇರಳದ ಅರಣ್ಯ ಸಿಬ್ಬಂದಿಯ ಸಹಾಯದಿಂದ ಅರಣ್ಯಗಳಲ್ಲಿ ಮತ್ತು ಇತರ ಸ್ಥಳಗಳಲ್ಲಿ ಅತ್ಯುತ್ತಮ ಹಳೆಯ ಶ್ರೀಗಂಧದ ಮರಗಳನ್ನು ಗುರುತಿಸಲಾಗುತ್ತಿದೆ, ಅವುಗಳಿಂದ ಮಾದರಿಗಳನ್ನು ಸಂಗ್ರಹಿಸಲಾಗುತ್ತಿದೆ.

ಜರ್ಮ್‌ಪ್ಲಾಸಂ ಬ್ಯಾಂಕ್ ಮತ್ತು ಜೀನ್ ಪೂಲ್‌ನಲ್ಲಿ ಈ ಮಾದರಿಗಳನ್ನು ವಿಶ್ಲೇಷಿಸಿ, ಮೂಲ ಮರ, ಉತ್ತಮ ಮರದ ಗುಣಮಟ್ಟ ಮತ್ತು ಎಣ್ಣೆಯ ಗುಣಮಟ್ಟವನ್ನು ತಿಳಿಯಲಾಗುತ್ತಿದೆ. ಅತ್ಯುತ್ತಮ ಮಾದರಿಗಳನ್ನು ಹೆಚ್ಚಿಸಿ ರೈತರಿಗೆ ಪೂರೈಸಲಾಗುತ್ತದೆ ಎಂದು ಕೆಎಸ್‌ಡಿಎಲ್ ಅಧಿಕಾರಿ ತಿಳಿಸಿದ್ದಾರೆ.

ಮೈಸೂರು, ಚಾಮರಾಜನಗರ ಮತ್ತು ಬಂಡೀಪುರ ಹುಲಿ ಸಂರಕ್ಷಿತ ಪ್ರದೇಶ, ಕೇರಳದ ಮರಾಯೂರು ಪ್ರದೇಶಗಳು ಅತ್ಯುತ್ತಮ ಗುಣಮಟ್ಟದ ಶ್ರೀಗಂಧಕ್ಕಾಗಿ ಪ್ರಸಿದ್ಧವಾಗಿವೆ.

ಕರ್ನಾಟಕದಲ್ಲಿ 713 ರೈತರು 4,000 ಎಕರೆ ಪ್ರದೇಶದಲ್ಲಿ ಶ್ರೀಗಂಧವನ್ನು ಬೆಳೆಸುತ್ತಿದ್ದಾರೆ. ಇದರ ಜೊತೆಗೆ, ರಾಜ್ಯದ ಅರಣ್ಯಗಳಲ್ಲಿ ಶ್ರೀಗಂಧ ಮರಗಳು ಸಹಜವಾಗಿ ಕಂಡುಬರುತ್ತವೆ. ಶ್ರೀಗಂಧ ಕರ್ನಾಟಕದ ರಾಜ್ಯ ಮರವಾಗಿದೆ, ಆದರೆ ನೆಡುವಿಕೆ ಮತ್ತು ಗುಣಮಟ್ಟವನ್ನು ಹೆಚ್ಚಿಸಲು ಹೆಚ್ಚಿನ ಕೆಲಸ ನಡೆಯುತ್ತಿಲ್ಲ ಎಂದು ಕೆಎಸ್ ಡಿಎಲ್ ಅಧಿಕಾರಿಗಳು ತಿಳಿಸಿದ್ದಾರೆ.

## ಗೃಹಲಕ್ಷ್ಮಿ ಯೋಜನೆಯಿಂದ 52 ಸಾವಿರ ಮಹಿಳೆಯರು ಹೊರಕ್ಕೆ!



ಬೆಂಗಳೂರು, ಫೆ.3– ರಾಜ್ಯಾದ್ಯಂತ 1.26 ಕೋಟಿ ಫಲಾನುಭವಿಗಳಲ್ಲಿ 52,000 ಕ್ಕೂ ಹೆಚ್ಚು ಮಹಿಳೆಯರನ್ನು ಗೃಹಲಕ್ಷ್ಮಿ ಯೋಜನೆಯಿಂದ ತೆಗೆದು ಹಾಕಲಾಗಿದೆ. ಗೃಹಲಕ್ಷ್ಮಿ ಯೋಜನೆಗೆ ನೋಂದಣಿಯಾದರೂ 52 ಸಾವಿರ ಮಹಿಳೆಯರಿಗೆ ಹಣ ಜಮೆ ಆಗುತ್ತಿರಲಿಲ್ಲ. ವಿಧಾನ ಪರಿಷತ್ ಕಲಾಪದಲ್ಲಿ ಸದಸ್ಯ ಪಿಎಚ್ ಪೂಜಾರ ಅವರ ಪ್ರಶ್ನೆಗೆ ಪ್ರತಿಕ್ರಿಯಿಸಿದ ಸಚಿವೆ ಲಕ್ಷ್ಮೀಹೆಬ್ಬಾಳ್ಕರ್, ಜಿಎಸ್‌ಟಿ ಹಾಗೂ ಆದಾಯ ತೆರಿಗೆ ಕಟ್ಟುತ್ತಿದ್ದಾರೆ ಎಂದು ಸುಮಾರು 52 ಸಾವಿರ ಮಹಿಳೆಯರಿಗೆ ಗೃಹಲಕ್ಷ್ಮಿ ಯೋಜನೆಯ ಹಣ ಸಿಗುತ್ತಿಲ್ಲ. ಈ ಪೈಕಿ ಸುಮಾರು 20 ಸಾವಿರ ಫಲಾನುಭವಿಗಳ ಸಮಸ್ಯೆಯನ್ನು ಇತ್ಯರ್ಥಪಡಿಸಲಾಗಿದ್ದು, ಇನ್ನು ಉಳಿದವರ ಸಮಸ್ಯೆಯನ್ನು ಸರಿಪಡಿಸಲು ಪ್ರಯತ್ನಿಸುತ್ತಿದ್ದೇವೆ ಎಂದು ಮಾಹಿತಿ ನೀಡಿದರು.

### ಪ್ರಧಾನಿ ಮೋದಿ ವಿರುದ್ಧ ಅವಹೇಳನಕಾರಿ ಹೇಳಿಕೆ

## ಪರಿಷತ್‌ನಲ್ಲಿ ಕೋಲಾಹಲ

ಬೆಂಗಳೂರು, ಫೆ.3– ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ಎಂಎಲ್‌ಸಿ ನಜೀರ್ ಅಹ್ಮದ್ ನೀಡಿದ ಅವಹೇಳನಕಾರಿ ಹೇಳಿಕೆಗಳ ಹಿನ್ನೆಲೆಯಲ್ಲಿ ಮಂಗಳವಾರ ಕರ್ನಾಟಕ ವಿಧಾನ ಪರಿಷತ್ತಿನಲ್ಲಿ ಕೋಲಾಹಲದ ವಾತಾವರಣ ನಿರ್ಮಾಣವಾಯಿತು.

ಕಾಂಗ್ರೆಸ್ ಪರಿಷತ್ ಸದಸ್ಯ ನಜೀರ್ ಅಹ್ಮದ್ ಅವರು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಆಕ್ಷೇಪಾರ್ಹ ಹೇಳಿಕೆ ನೀಡಿದ್ದರಿಂದ ಕೆರಳಿದ ಬಿಜೆಪಿ ಸದಸ್ಯರು, ಸದನದ ಬಾವಿಗಿಳಿದು ಪ್ರತಿಭಟನೆ ನಡೆಸಿ, ಆಕ್ರೋಶ ಹೊರಹಾಕಿದರು. ನಜೀರ್ ಅಹ್ಮದ್ ಬೇಷರತ್ ಕ್ಷಮೆಯಾಚಿಸಬೇಕು ಎಂದು ಪಟ್ಟು ಹಿಡಿದರು.

ಮಂಗಳವಾರವೂ ಕೂಡ ಇದೇ ಗದ್ದಲ ಮುಂದುವರೆಯಿತು. ಬಿಜೆಪಿ ಸದಸ್ಯರು ಸದನದ ಬಾವಿಗೆ ಇಳಿದು ನಜೀರ್ ಅಹ್ಮದ್ ವಿರುದ್ಧ ಘೋಷಣೆಗಳನ್ನು ಕೂಗಿದರು. ಸಭಾಪತಿ ಬಸವರಾಜ ಹೊರಟ್ಟಿ ಕೂಡ ನಜೀರ್ ಅಹ್ಮದ್ ಬೇಷರತ್ ಕ್ಷಮೆಯಾಚಿಸಬೇಕು ಎಂದರು.

## ಅಭಿನಯ ಕಾರ್ಯಾಗಾರ

ಮೈಸೂರು,ಫೆ.3–ನಗರದ ರಂಗ ಭೂಮಿ ಕ್ಷೇತ್ರದಲ್ಲಿ ಸಕ್ರಿಯವಾಗಿ ಗುರುತಿಸಿ ಕೊಂಡಿರುವ ಅದಮ್ಯ ರಂಗ ಶಾಲೆಯು ಒಂದು ತಿಂಗಳ ಅವಧಿಯ ಅಭಿನಯ ಕಾರ್ಯಾಗಾರ ಆಯೋಜಿಸಿದ್ದು, ಅಭಿನಯ ಕಲಿಯಲು ಇಚ್ಛಿಸುವ ಆಸಕ್ತರಿಂದ ಅರ್ಜಿ ಆಹ್ವಾನಿಸಿದೆ. ಅಭಿನಯ ಕಾರ್ಯಾಗಾರ ಮೈಸೂರಿನ ವಿಜಯನಗರದಲ್ಲಿರುವ ವಿ.ಕೆ.ಪಬ್ಲಿಕ್ ಸ್ಕೂಲ್‌ನಲ್ಲಿ ಫೆ.16ರಿಂದ ಮಾ.14 ರವರೆಗೆ ಪ್ರತಿದಿನ ಸಂಜೆ 6ರಿಂದ ರಾತ್ರಿ 9ರವರೆಗೆ ನಡೆಯಲಿದೆ. ಅಭಿನಯ ಕಲಿಕೆಯಲ್ಲಿ ಆಸಕ್ತರು ಫೆ.15ರೊಳಗೆ ತಮ್ಮ ಹೆಸರನ್ನು ನೋಂದಾಯಿಸಿಕೊಳ್ಳಬಹುದು. ಗರಿಷ್ಠ 30 ಮಂದಿಗೆ ಮಾತ್ರ ಅವಕಾಶ. ಮಾಹಿತಿಗೆ ಮೊ. 8660103141 ಸಂಪರ್ಕಿಸಿ.

## ಅವಧಿ ವಿಸ್ತರಣೆ

**ಮೈಸೂರು:** 2026ನೇ ಸಾಲಿನ ವಸತಿ ಶಾಲೆಗಳ 6ನೇ ತರಗತಿ ಪ್ರವೇಶಾತಿಗೆ ಪರಿಶಿಷ್ಟ ಜಾತಿಗೆ ಸೇರಿದ ಒಳಮೀಸಲಾತಿ ಕಲ್ಪಿಸಿರುವ ಪ್ರವರ್ಗ ಎ, ಬಿ ಮತ್ತು ಸಿ ವರ್ಗೀಕರಣ ಮಾಡಿರುವ ಅಭ್ಯರ್ಥಿಗಳು ಅರ್ಜಿ ಸಲ್ಲಿಸುವಾಗ ಒಳಮೀಸಲಾತಿ ವಿವರಗಳನ್ನು ತಮ್ಮ ಜಾತಿ ಪ್ರಮಾಣ ಪತ್ರದಲ್ಲಿ ಮುದ್ರಿತವಾಗಿರುವ ಆರ್‌ಡಿ ಸಂಖ್ಯೆಯನ್ನು ಆನ್‌ಲೈನ್‌ನಲ್ಲಿ ಅರ್ಜಿ ಸಲ್ಲಿಸುವ ಅವಧಿಯನ್ನು ಫೆ7ರವರೆಗೆ ವಿಸ್ತರಿಸಲಾಗಿದೆ.

# ಪೂರ್ವ ತಯಾರಿ ಇಲ್ಲದೆ ಇ-ಖಾತಾ ಕಡ್ಡಾಯ; ಆಸ್ತಿ ಮಾಲೀಕರ ಸಂಕಷ್ಟ ನಿವಾರಣೆಗೆ ಆಗ್ರಹ

- ರಾಜ್ಯಾದ್ಯಂತ ಸರ್ವರ್ ಡೌನ್ ಸಮಸ್ಯೆಗೆ ಮಾಜಿ ಮೇಯರ್ ಶಿವಕುಮಾರ್ ಆಕ್ರೋಶ
- ಆಸ್ತಿ ಮಾರಾಟ ಮಾಡುವವರಿಗೆ ಸಮಸ್ಯೆ ತಂದಿಟ್ಟ ರಾಜ್ಯ ಸರ್ಕಾರದ ವರ್ತನೆಗೆ ಖಂಡನೆ



ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾಜಿ ಮೇಯರ್ ಶಿವಕುಮಾರ್ ಮಾತನಾಡಿದರು. ಪಾಲಿಕೆ ಮಾಜಿ ಸದಸ್ಯರಾದ (ಎಡದಿಂದ) ಸುಬ್ಬಯ್ಯ, ರಂಗಸ್ವಾಮಿ, ಬಿ.ವಿ.ಮಂಜುನಾಥ್ ಉಪಸ್ಥಿತರಿದ್ದರು.

ಮೈಸೂರು, ಫೆ.3(ಎಂಕೆ)– ಸರ್ವೇ, ದತ್ತಾಂಶ ಸಂಗ್ರಹಣೆ ಹಾಗೂ ಪ್ರಾಯೋಗಿಕ ಪ್ರಯೋಗ ನಡೆಸದೆ ಅವ್ಯವಸ್ಥಿತ ಇ-ಖಾತಾ ಕಡ್ಡಾಯ ಆದೇಶವನ್ನು ರಾಜ್ಯ ಸರ್ಕಾರ ಕೂಡಲೇ ಹಿಂಪಡೆದು ಸಾಫ್ಟ್‌ವೇರ್ ಸಮಸ್ಯೆಯಿಂದ ತೀವ್ರ ಸಂಕಷ್ಟಕ್ಕೆ ಸಿಲುಕಿರುವ ಆಸ್ತಿ ಮಾಲೀಕರಿಗೆ ಅನುಕೂಲ ಮಾಡಿಕೊಡಬೇಕು ಎಂದು ಮಾಜಿ ಮೇಯರ್ ಶಿವಕುಮಾರ್ ಆಗ್ರಹಿಸಿದರು.

ಮೈಸೂರಿನ ಖಾಸಗಿ ಹೋಟೆಲ್‌ನಲ್ಲಿ ಮಂಗಳವಾರ ಪತ್ರಿಕಾಗೋಷ್ಠಿಯನ್ನುದ್ದೇಶಿಸಿ ಮಾತನಾಡಿದ ಅವರು, ಕಳೆದ ಎರಡು ತಿಂಗಳಿಂದ ರಾಜ್ಯಾದ್ಯಂತ ಸರ್ವರ್ ಡೌನ್ ಸಮಸ್ಯೆಯಿಂದ ಇ-ಖಾತಾ ಮಾಡಿಸಲು ಸಾಧ್ಯವಾಗದೆ ಆಸ್ತಿಗಳ ಮಾರಾಟ ಮತ್ತು ಕೊಂಡುಕೊಳ್ಳಲು ತೀವ್ರ ತೊಂದರೆಯಾಗುತ್ತಿದೆ. ಡಿಜಿಟಲ್ ಯುಗದಲ್ಲಿಯೂ ವ್ಯವಸ್ಥಿತವಾಗಿ ಇ-ಖಾತಾ ನೀಡಲು ಸರ್ಕಾರ ಅಸಮರ್ಥವಾಗಿರುವುದು ಸ್ಪಷ್ಟವಾಗಿದೆ.

ಮೊದಲು ಆಸ್ತಿಗಳ ಸರ್ವೇ ಮಾಡಿ, ದತ್ತಾಂಶ ಸಂಗ್ರಹಿಸಿದ ಬಳಿಕ ಪ್ರಾಯೋಗಿಕ ಪ್ರಯೋಗ ನಡೆಸಿ, ಯಶಸ್ವಿಯಾದ ಬಳಿಕವೇ ಜಾರಿಗೊಳಿಸಬೇಕಿತ್ತು. ಆದರೆ, ರಾಜ್ಯ ಸರ್ಕಾರ ಏಕಾಏಕಿ ಇ-ಖಾತಾ ಕಡ್ಡಾಯ ಎಂಬ ಆದೇಶದಿಂದ ಆಸ್ತಿ ಮಾಲೀಕರು ಸಂಕಷ್ಟಕ್ಕೆ ಸಿಲುಕಿದ್ದಾರೆ. ಸಾಫ್ಟ್‌ವೇರ್ ಸಮಸ್ಯೆಯಿಂದ ಆಸ್ತಿ ಮಾರಾಟ ಮಾಡಲಾಗದೆ ಪರಿತಪಿಸುವಂತಾಗಿದೆ. ಅಲ್ಲದೆ ಇ-ಖಾತಾ ನೀಡಲು ಅಭಿವೃದ್ಧಿ ಮಾಡಿರುವ ಕಾವೇರಿ ಸಾಫ್ಟ್‌ವೇರ್‌ನಲ್ಲಿಯೇ ಸಮಸ್ಯೆ ಇದ್ದು, ಸ್ಥಳೀಯ ಸಂಸ್ಥೆಗಳ ಆದಾಯಕ್ಕೂ ಕುತ್ತು ಬಿದ್ದಿದೆ ಎಂದರು.

ಇಂದೋರ್, ಅಹಮದಾಬಾದ್, ಮುಂಬೈ ಸೇರಿದಂತೆ ದೇಶದ ಇನ್ನಿತರೆ ಹಲವು ರಾಜ್ಯಗಳಲ್ಲಿ ತಂತ್ರಜ್ಞಾನವನ್ನು ವ್ಯವಸ್ಥಿತವಾಗಿ ಸದ್ಬಳಕೆ ಮಾಡಿಕೊಂಡು, ಸಾಫ್ಟ್‌ವೇರ್‌ಗಳನ್ನು ಅಭಿವೃದ್ಧಿಪಡಿಸಿ, ಸರ್ವೇ ನಡೆಸುವ ಮೂಲಕ ಇ-ಸ್ವತ್ತು ಸೇರಿದಂತೆ ಇನ್ನಿತರೆ ಸೇವೆಗಳನ್ನು ಕೇವಲ ಒಂದೇ ಒಂದು ಕ್ಲಿಕ್ ಮೂಲಕ ನೀಡಲಾಗುತ್ತಿದೆ. ಆದರೆ, ರಾಜ್ಯದಲ್ಲಿ ಮಾತ್ರ ಹಿನ್ನಡೆ ಏಕೆ ಎಂದು ಪ್ರಶ್ನಿಸಿದರು.

ಬೆಂಗಳೂರಿನಲ್ಲಿ 22 ಲಕ್ಷ ಕಂದಾಯ ಆಸ್ತಿಗಳಿದ್ದು, 22 ಸಾವಿರ ಕೋಟಿಯಷ್ಟು ತೆರಿಗೆ ವಸೂಲಿಯಾಗಬೇಕು. ಆದರೆ, ಅಲ್ಲಿಯೂ ಸುಮಾರು 4 ಸಾವಿರ ಕೋಟಿ ರೂ.ಕಂದಾಯ ಸೋರಿಕೆಯಾಗುತ್ತಿದೆ. ಮೈಸೂರು ನಗರಪಾಲಿಕೆಯಲ್ಲಿ ಈ ಮೊದಲು 100–110 ಕೋಟಿ ರೂ.ತೆರಿಗೆ ವಸೂಲಿ ಮಾಡಲಾಗುತ್ತಿತ್ತು. ನಾನು ಮೇಯರ್ ಆಗಿದ್ದ ಸಂದರ್ಭದಲ್ಲಿ ಕಿಯೋನಿಕ್ಸ್ ಸಾಫ್ಟ್‌ವೇರ್ ಮೂಲಕ ಡಿಜಿಟಲ್‌ಗೆ ಹೊತ್ತು ನೀಡಿದ್ದರ ಫಲವಾಗಿ ಇಂದು 200 ಕೋಟಿ ರೂಗೂ ಅಧಿಕ ತೆರಿಗೆ ಸಂಗ್ರಹವಾಗುತ್ತಿದೆ. ಆದ್ದರಿಂದ ತಂತ್ರಜ್ಞಾನದ ವ್ಯವಸ್ಥಿತ ಬಳಕೆಯಾಗಬೇಕು. ಮೊಬೈಲ್‌ನಲ್ಲಿಯೇ ಎಲ್ಲವೂ ಸಾಧ್ಯವಾಗುತ್ತಿದ್ದರೂ ಮಧ್ಯವರ್ತಿಗಳ ಬಳಿಯೇ ಹೋಗಿ ಬೇರೆ ದಾರಿ ಇಲ್ಲದೆ ಲಂಚ ಕೊಡುವ ಪರಿಸ್ಥಿತಿಯನ್ನು ರಾಜ್ಯ ಸರ್ಕಾರ ಸೃಷ್ಟಿ ಮಾಡುತ್ತಿದೆ ಎಂದು ಆಕ್ಷೇಪಿಸಿದರು.

**ಅಡ್ಡದಾರಿ:** ಕಡ್ಡಾಯ ಇ-ಖಾತಾ ಆದೇಶದಿಂದ ಕೆಲವರು ಅಡ್ಡದಾರಿ ಹಿಡಿಯುತ್ತಿದ್ದಾರೆ. ನಕಲಿ ಇ-ಖಾತಾ ಪ್ರಕರಣಗಳು ಹೆಚ್ಚಾಗುತ್ತಿವೆ. ಮಂಡ್ಯದ ಕೆಲವೆಡೆ ನಕಲಿ ಇ-ಖಾತಾ ಪ್ರಕರಣ ಬೆಳಕಿಗೆ ಬಂದಿದೆ. ಆಸ್ತಿ ಮಾರಾಟ ಮತ್ತು ಮಾರಾಟ ಸಾಧ್ಯವಾಗದ ಗಲಾಟೆಗಳು ನಡೆಯುತ್ತಿದ್ದು, ಪೊಲೀಸ್ ಠಾಣೆ ಮತ್ತು ಕೋರ್ಟ್ ಅಲೆಯುವವರ ಸಂಖ್ಯೆಯೂ ಹೆಚ್ಚಾಗುತ್ತಿದೆ ಎಂದು ಆತಂಕ ವ್ಯಕ್ತಪಡಿಸಿದರು.

**ಅಸಮರ್ಥ ಸಚಿವ:** ಪ್ರಧಾನಿ ನರೇಂದ್ರ ಮೋದಿ ಸೇರಿದಂತೆ ಕೇಂದ್ರ ಬಿಜೆಪಿ ನಾಯಕರ ಬಗ್ಗೆ ಮಾತನಾಡುವ ಸಚಿವ ಪ್ರಿಯಾಂಕ್ ಖರ್ಗೆ ಅವರು, ಐಟಿ-ಬಿಟಿ ಸಚಿವರಾದ ಬಳಿಕ ಪ್ರತಿಷ್ಠಿತ ಕಂಪನಿಗಳೆರಡು ರಾಜ್ಯವನ್ನು ಬಿಟ್ಟು ಹೋಗಿವೆ. ಗೂಗಲ್ ರಿಸರ್ಚ್ ಮತ್ತು ಮೈಕ್ರೋ ಸಾಫ್ಟ್ ಕಂಪನಿ ಬೇರೆ ಬೇರೆ ರಾಜ್ಯಕ್ಕೆ ಹೋಗಿದ್ದರಿಂದ ಸುಮಾರು 75 ಸಾವಿರ ಉದ್ಯೋಗ ನಷ್ಟದ ಜೊತೆಗೆ 3 ಸಾವಿರ ಬಿಲಿಯನ್ ವಹಿವಾಟು ತಪ್ಪಿದೆ. ಡಿಜಿಟಲ್ ಕ್ಷೇತ್ರದಲ್ಲಿ ತೀವ್ರ ಹಿನ್ನಡೆಯಾಗಿರುವುದು ಪ್ರಿಯಾಂಕ್ ಖರ್ಗೆ ಅಸಮರ್ಥ ಸಚಿವರೆಂಬುದು ಸ್ಪಷ್ಟವಾಗಿದೆ ಎಂದು ಶಿವಕುಮಾರ್ ಹೇಳಿದರು.

**ಮತಕ್ಕಾಗಿ 3 ಸಾವಿರ!:** ರಾಜ್ಯ ಸರ್ಕಾರ ಯುವನಿಧಿ ಯೋಜನೆಯಡಿ ಡಿಪ್ಲೊಮಾ ಮತ್ತು ಪದವಿ ವಿದ್ಯಾರ್ಥಿಗಳಿಗೆ 3 ಸಾವಿರ ರೂ.ಕೊಟ್ಟು ಅವರ ಮತಗಳನ್ನು ಪಡೆಯುತ್ತಿದೆಯೇ ಹೊರತು ಉದ್ಯೋಗ ಸೃಷ್ಟಿಸಿ, ವಿದ್ಯಾರ್ಥಿಗಳು ಉನ್ನತ ಹುದ್ದೆಗಳ ಪಡೆದು ಆರ್ಥಿಕವಾಗಿ ಬೆಳೆಯಬೇಕೇಂಬ ಉದ್ದೇಶವನ್ನು ಹೊಂದಿಲ್ಲ ಎಂದು ದೂರಿದರು. ಪತ್ರಿಕಾಗೋಷ್ಠಿಯಲ್ಲಿ ನಗರಪಾಲಿಕೆ ಮಾಜಿ ಸದಸ್ಯರಾದ ಬಿ.ವಿ.ಮಂಜುನಾಥ್, ಸುಬ್ಬಯ್ಯ, ರಂಗಸ್ವಾಮಿ ಉಪಸ್ಥಿತರಿದ್ದರು.

### ಸಿಎಂ ಮಧ್ಯಪ್ರವೇಶ ಅನಿವಾರ್ಯ...!

"ಮುಖ್ಯಮಂತ್ರಿ ಸಿದ್ದರಾಮಯ್ಯ ಅವರೇ ಮಧ್ಯ ಪ್ರವೇಶ ಮಾಡಿ, ಸಾಫ್ಟ್‌ವೇರ್ ಸಮಸ್ಯೆ ಹಾಗೂ ಸರ್ವೇ ಮಾಡಿ ದತ್ತಾಂಶ ಸಂಗ್ರಹಿಸದೆ ಮಾಡಿರುವ ಇ-ಖಾತಾ ಕಡ್ಡಾಯವನ್ನು ಆದೇಶವನ್ನು ಕೂಡಲೇ ವಾಪಸ್ ಪಡೆಯಬೇಕು. ಮ್ಯಾನುಯಲ್ ಮೂಲಕವೇ ಆಸ್ತಿ ದಾಖಲೆಗಳನ್ನು ಪಡೆದುಕೊಳ್ಳಲು ಅವಕಾಶ ಮಾಡಿಕೊಡಬೇಕು. ಮುಂದಿನ ಒಂದು ವಾರದಲ್ಲಿ ಇ-ಖಾತಾ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸದಿದ್ದಲ್ಲಿ ಸಾರ್ವಜನಿಕರೊಂದಿಗೆ ಸೇರಿ ಪ್ರತಿಭಟನಾ ಹೋರಾಟಗಳನ್ನು ನಡೆಸಬೇಕಾಗುತ್ತದೆ.

–ಶಿವಕುಮಾರ್, ಮಾಜಿ ಮೇಯರ್

# ವಾದ್ಯ ಪರಿಕರಗಳ ಸಹಾಯಧನಕ್ಕೆ ವಯಸ್ಸಿನ ಮಿತಿ ಬೇಡ

### ಹಿರಿಯ ವೃತ್ತಿ ಕಲಾವಿದರ ಒಕ್ಕೂಟ ಆಗ್ರಹ

ಮೈಸೂರು,ಫೆ.3(ಜಿಎ)–ಕನ್ನಡ ಮತ್ತು ಸಂಸ್ಕೃತಿ ಇಲಾಖೆ ವತಿಯಿಂದ ನೀಡುವ ವಾದ್ಯ ಪರಿಕರಗಳ ಧನ ಸಹಾಯಕ್ಕೆ 50 ವರ್ಷದೊಳಗಿನವರು ಮಾತ್ರ ಅರ್ಜಿ ಸಲ್ಲಿಸಬೇಕೆಂದು ನಿಯಮವಿಧಿಸಿರುವುದು ಸರಿಯಲ್ಲ. ಹಲವಾರು ದಶಕಗಳಿಂದ ಸೇವೆ ಸಲ್ಲಿಸುತ್ತಿರುವ ಹಿರಿಯ ಕಲಾವಿದರಿಗೂ ಈ ಸೌಲಭ್ಯ ನೀಡಬೇಕೆಂದು ಹಿರಿಯ ವೃತ್ತಿ ಕಲಾವಿದರ ಒಕ್ಕೂಟದ ಅಧ್ಯಕ್ಷ ಎಂ. ಪುಟ್ಟಸ್ವಾಮಿ ಆಗ್ರಹಿಸಿದ್ದಾರೆ.

ಮೈಸೂರು ಜಿಲ್ಲಾ ಪತ್ರಕರ್ತರ ಭವನದಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ನಾವು ಗಾಯನ, ನಟನೆ ಮೊದಲಾದ ಕಲಾ ವೃತ್ತಿಯನ್ನೇ ಅವಲಂಬಿಸಿಕೊಂಡು ಬಂದಿದ್ದೇವೆ. ಬಹಳಷ್ಟು ಮಂದಿಗೆ 50 ವರ್ಷ ಮೀರಿದೆ. ಹಾಗಾದರೆ ಇವರು ಎಲ್ಲಿಗೆ ಹೋಗಬೇಕು, ಬೇರೆ ಉದ್ಯೋಗ ಮಾಡಲು ಸಾಧ್ಯವಿಲ್ಲ. ಹೀಗಾಗಿ ಕನ್ನಡ-ಸಂಸ್ಕೃತಿ ಇಲಾಖೆ ಸಚಿವ ಶಿವರಾಜ್ ತಂಗಡಗಿ, ಜಿಲ್ಲಾ ಉಸ್ತುವಾರಿ ಸಚಿವ ಡಾ.ಹೆಚ್.ಸಿ.ಮಹದೇವಪ್ಪ ಹಿರಿಯ ಕಲಾವಿದರ ನೆರವಿಗೆ ನಿಲ್ಲಬೇಕೆಂದು ಕೋರಿದರು.

ಈ ಹಿಂದೆ ಇಲಾಖೆ ಆಯೋಜಿಸಿದ್ದ ಪ್ರಾಯೋಜಿತ ಕಾರ್ಯಕ್ರಮದ ಹಣವನ್ನು ಸುಮಾರು 3 ವರ್ಷಗಳಾದರೂ ನೀಡಿಲ್ಲ. ಹೀಗಾದರೆ ಬಡತನದಲ್ಲಿಯೇ ಇರುವ ಈ ಕಲಾವಿದರು ಜೀವನ ನಡೆಸುವುದಾದರೂ ಹೇಗೆ? ಕೂಡಲೇ ಹಣ ನೀಡಬೇಕು ಹಾಗೂ ಇಲಾಖೆ ವತಿಯಿಂದ ಪ್ರಾಯೋಜಿತ ಕಾರ್ಯಕ್ರಮ ಮುಂದುವರಿಸಬೇಕು ಎಂದು ಒತ್ತಾಯಿಸಿದರು.

ದಸರಾ ವೇಳೆಯ ವಸ್ತು ಪ್ರದರ್ಶನದಲ್ಲಿ ಮೂರು ತಿಂಗಳು ಕಾರ್ಯಕ್ರಮ ನಡೆಸಬೇಕಾಗಿತ್ತು. ಆದರೆ ಇದನ್ನು ಒಂದು ತಿಂಗಳಿಗೆ ಸೀಮಿತಗೊಳಿಸಿರುವುದರಿಂದ ವೃತ್ತಿ ಕಲಾವಿದರಿಗೆ ಬರುತ್ತಿದ್ದ ಅಲ್ಪ ಸ್ವಲ್ಪ ಹಣವೂ ನಿಂತಿದೆ. ಹೀಗಾಗಿ ಕಾರ್ಯಕ್ರಮ 3 ತಿಂಗಳು ನಡೆಯುವಂತೆ ನೋಡಿಕೊಳ್ಳಬೇಕು, ಕಲಾವಿದರಿಗೆ ಇದುವರೆಗೂ ಗುರುತಿನ ಚೀಟಿ ನೀಡದಿರುವುದು ಸರಿಯಲ್ಲ. ಅದನ್ನು ಕೂಡಲೇ ದೊರಕಿಸಿಕೊಡಬೇಕೆಂದು ಕೋರಿದರು.

ಗೋಷ್ಠಿಯಲ್ಲಿ ರಾಘವೇಂದ್ರ ಪ್ರಸಾದ್, ಲೋಕೇಶ್, ಆಲ್ಬರ್ಟ್, ಜನಾರ್ಧನ್, ಲೋಕೇಶ್, ನಿಂಗರಾಜು, ರಾಜಗೋಪಾಲ್, ಧ್ರುವ, ನಾಗೇಶ್, ಎಂ.ಸಿ.ಜಗದೀಶ್, ಉದಯಕುಮಾರ್, ರಾಮಮೂರ್ತಿ, ಸತ್ಯ ಮತ್ತಿತರರು ಉಪಸ್ಥಿತರಿದ್ದರು.

# ಸರ್ಕಾರ ಮಕ್ಕಳಿಗೆ ವೈಚಾರಿಕ ಶಿಕ್ಷಣ ನೀಡಲಿ

### ಹಿರಿಯ ಸಾಹಿತಿ ಪ್ರೊ.ಭಗವಾನ್ ಸಲಹೆ



ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ, ಲೇಖನಿ ಸಾಮಗ್ರಿಗಳನ್ನು ನೀಡಿ, ದಿವಂಗತ ಪ್ರೊ.ಮಹೇಶ್‌ಚಂದ್ರಗುರು ಅವರ 69ನೇ ಹುಟ್ಟುಹಬ್ಬ ಆಚರಿಸಲಾಯಿತು.

ಮೈಸೂರು, ಫೆ.3–ಸರ್ಕಾರ ಸರ್ಕಾರಿ ಶಾಲೆಗಳ ಮುಚ್ಚುವ ಬದಲು, ಉನ್ನತೀಕರಣಗೊಳಿಸಿ ವೈಚಾರಿಕ ಶಿಕ್ಷಣ ನೀಡುವಂತಾಗಲಿ ಎಂದು ಹಿರಿಯ ಸಾಹಿತಿ ಕೆ.ಎಸ್.ಭಗವಾನ್ ಸಲಹೆ ನೀಡಿದರು.

ಸರ್ಕಾರಿ ಶಾಲೆಗಳಲ್ಲಿ ವ್ಯಾಸಂಗ ಮಾಡುವ ಮಕ್ಕಳು ಸರ್ಕಾರ ಹಾಗೂ ದಾನಿಗಳು ನೀಡುವ ಸವಲತ್ತುಗಳನ್ನು ಸದುಪಯೋಗಪಡಿಸಿಕೊಂಡು ಶೈಕ್ಷಣಿಕವಾಗಿ ಪ್ರಗತಿ ಸಾಧಿಸುವಂತೆಯೂ ಕರೆ ನೀಡಿದರು.

ಗುರು ನಮನ ಸಮಿತಿ ವತಿಯಿಂದ ಪ್ರೊ.ಬಿ.ಪಿ.ಮಹೇಶ್‌ಚಂದ್ರ ಗುರು ಅವರ 69ನೇ ಹುಟ್ಟುಹಬ್ಬದ ಸ್ಮರಣಾರ್ಥ ಜಯದೇವನಗರದ ಸರ್ಕಾರಿ ಹಿರಿಯ ಪ್ರಾಥಮಿಕ ಶಾಲೆ ವಿದ್ಯಾರ್ಥಿಗಳಿಗೆ ನೋಟ್ ಪುಸ್ತಕ ಮತ್ತು ಲೇಖನಿ ಸಾಮಗ್ರಿಗಳನ್ನು ನೀಡುವ ಮೂಲಕ ಆಚರಿಸಲಾಯಿತು. ಉತ್ತಮ ಶಿಕ್ಷಣ ಪಡೆಯುವ ಮಕ್ಕಳು ದೇಶಕ್ಕೆ ಆಸ್ತಿಯಾಗುವ ರೀತಿಯಲ್ಲಿ ಬೆಳೆಯಬೇಕು ಎಂದು ಪ್ರೊ.ಭಗವಾನ್ ತಿಳಿಸಿದರು.

ಕರ್ನಾಟಕ ಮಾಲಿನ್ಯ ನಿಯಂತ್ರಣ ಮಂಡಳಿ ನಿವೃತ್ತ ಅಧಿಕಾರಿ ಡಾ.ಸುಧಾ ಮಾತನಾಡಿ, ಪ್ರತಿಯೊಬ್ಬ ವಿದ್ಯಾರ್ಥಿಯೂ ಹುಟ್ಟುಹಬ್ಬದ ದಿನದಂದು ಒಂದು ಗಿಡ ನೆಡುವುದರ ಮೂಲಕ ಆಚರಿಸಿಕೊಳ್ಳಬೇಕು. ಮಕ್ಕಳು ಮೊಬೈಲ್ ನೋಡುವ ಗೀಳಿಗೆ ಬೀಳಬಾರದು, ಬದಲಾಗಿ ಪರಿಸರ ಸಂರಕ್ಷಣೆ ಮಾಡಲು ಹೆಚ್ಚು ಆಸಕ್ತಿ ಬೆಳೆಸಿಕೊಳ್ಳಬೇಕು ಎಂದು ತಿಳಿಸಿದರು.

ಪ್ರಾಸ್ತಾವಿಕ ನುಡಿಗಳನ್ನಾಡಿದ ಡಾ.ದಿಲೀಪ್ ನರಸಯ್ಯ, ಪ್ರೊ.ಮಹೇಶ್‌ಚಂದ್ರ ಗುರು ಅವರು ಬದುಕಿರುವವರೆಗೂ ಶೈಕ್ಷಣಿಕ ಮತ್ತು ಸಾಮಾಜಿಕ ಹೋರಾಟದ ಮೂಲಕ ವಿದ್ಯಾರ್ಥಿ ಸಮೂಹ ಮತ್ತು ಸಮಾಜವನ್ನು ಎಚ್ಚರಿಸುತ್ತಿದ್ದರು. ಸಮಾಜದಲ್ಲಿ ಉತ್ತಮ ವ್ಯಕ್ತಿಯಾಗಲು ಓದು, ಬರಹ ಮತ್ತು ಕಠಿಣ ಶ್ರಮವಿದ್ದರೆ ಮಾತ್ರ ವಿದ್ಯಾರ್ಥಿಗಳು ಉತ್ತಮ ಸಾಧನೆ ಮಾಡಲು ಸಾಧ್ಯ ಎಂದು ತಿಳಿಸಿದರು.

ಪ್ರೊ.ಗುರು ಅವರ ಪತ್ನಿ ಪ್ರೊ.ಹೇಮಾವತಿ, ಎಸ್‌ಡಿಎಂಸಿ ಅಧ್ಯಕ್ಷ ಪುಟ್ಟರಾಜು, ವಿಶ್ವಜ್ಞಾನಿ ಅಂಬೇಡ್ಕರ್ ಸಂಘದ ಅಧ್ಯಕ್ಷ ಕೃಷ್ಣ, ಲಕ್ಷ್ಮಿ, ಶಾಲಾ ಮುಖ್ಯಸ್ಥೆ ಜಯಂತಿ ಮತ್ತಿತರರು ಉಪಸ್ಥಿತರಿದ್ದರು.

## ಹಿರಿಯ ನಟಿ ಜಯಮಾಲಾರಿಗೆ ಅಭಿನಂದನೆ



ಕರ್ನಾಟಕ ಚಲನಚಿತ್ರ ವಾಣಿಜ್ಯ ಮಂಡಳಿಯ ನೂತನ ಅಧ್ಯಕ್ಷರಾದ ಹಿರಿಯ ನಟಿ ಜಯಮಾಲಾ ಅವರನ್ನು ಚಿತ್ರನಟ ಜಯಪ್ರಕಾಶ್(ಜೆಪಿ) ಮಂಡಳಿ ಆವರಣದಲ್ಲಿ ಹೂಗುಚ್ಛ ನೀಡಿ, ಆತ್ಮೀಯವಾಗಿ ಅಭಿನಂದಿಸಿದರು. ಈ ವೇಳೆ ಬಾಲಿವುಡ್ ಕ್ಯಾಮರಾ ಮ್ಯಾನ್ ಮಹೇಶ್ ಮತ್ತಿತರರು ಉಪಸ್ಥಿತರಿದ್ದರು.

## ನಾಟ್ಯ ನೃತ್ಯ ಸಂಸ್ಥೆಯ ವಿದ್ಯಾರ್ಥಿಗಳ ಸಾಧನೆ



ಇತ್ತೀಚೆಗೆ ಪಾಂಡಿಚೇರಿಯಲ್ಲಿ ನಡೆದ 11ನೇ ರಾಷ್ಟ್ರೀಯ ಸ್ಪೋರ್ಟ್ಸ್ ಡ್ಯಾನ್ಸ್ ಚಾಂಪಿಯನ್ ಶಿಪ್‌ನಲ್ಲಿ ಭಾಗವಹಿಸಿ 8 ಚಿನ್ನದ ಪದಕ ಮತ್ತು 3 ಬೆಳ್ಳಿ ಪದಕದೊಂದಿಗೆ ಓವರ್ ಹಾಲ್ ಚಾಂಪಿಯನ್ ಶಿಪ್ ರನ್ನರ್ ಅಪ್ ಆಗಿ ಅಂತಾರಾಷ್ಟ್ರೀಯ ಮಟ್ಟಕ್ಕೆ ಆಯ್ಕೆಯಾಗಿದ್ದಾರೆ. ನರ್ತನ್ ಎಸ್ ಕಲಾವಿದ 2 ಚಿನ್ನ, ಯಾಲಿನಿ ಕ್ರಿಶ.ಪಿ 2 ಚಿನ್ನ, ನೃತ್ಯಂಶ್.ಎಸ್ ಕಲಾವಿದ 1 ಚಿನ್ನ, ದೀಕ್ಷಾ, ತ್ರಿಷಾ, ಮೀರಾ (ಚಿನ್ನ), ವಿಹಾನಿ ಪ್ರಶಾಂತ್ ಚಿನ್ನ, ಅಭಿವಂತ್ ಮನು ಮತ್ತು ಅದಿದೇವ್ ಮನು ಬೆಳ್ಳಿ ಪದಕ, ರಮ್ಯ ಬೆಳ್ಳಿ ಪದಕ ಗಳಿಸಿದ್ದಾರೆ. ನೃತ್ಯಶಾಲೆಯ ಶಿಕ್ಷಕರಾದ ಸಂತೋಷ್ ಹಾಗೂ ಕೀರ್ತಿ ಅವರು ತರಬೇತಿ ನೀಡಿದ್ದಾರೆ.

## ಕರ್ನಾಟಕ ಗೋಜು-ರಿಯೋ ಕರಾಟೆ-ಡು ಅಕಾಡೆಮಿಯಲ್ಲಿ ಉತ್ತೀರ್ಣ



ಕರ್ನಾಟಕ ಗೋಜು-ರಿಯೋ ಕರಾಟೆ-ಡು ಅಕಾಡೆಮಿಯಿಂದ ನಡೆದ ಕರಾಟೆ ಬೆಲ್ಟ್ ಪರೀಕ್ಷೆಯಲ್ಲಿ ಮೈಸೂರು ಶ್ರೀರಾಂಪುರ ನಿರ್ಮಲ ಶಾಲೆ ವಿದ್ಯಾರ್ಥಿಗಳು ಶೇ.100 ಫಲಿತಾಂಶ ಪಡೆದು ಉತ್ತೀರ್ಣರಾಗಿದ್ದಾರೆ. 25 ಎಲ್ಲೋ ಬೆಲ್ಟ್ ಮಾದರಿ,11 ಆರೆಂಜ್ ಬೆಲ್ಟ್ ಮಾದರಿ, 5 ಬ್ಲೂ ಬೆಲ್ಟ್ ಮಾದರಿಯಲ್ಲಿ ಉತ್ತೀರ್ಣರಾದ ವಿದ್ಯಾರ್ಥಿಗಳನ್ನು ಶಾಲಾ ವತಿಯಿಂದ ಅಭಿನಂದಿಸಲಾಯಿತು. ನಿರ್ಮಲ ಶಾಲೆಯ ಮುಖ್ಯಶಿಕ್ಷಕಿ ಸಿಸ್ಟರ್ ಜೂಲಿ, ಗೋಜು-ರಿಯೂ ಕರಾಟೆ-ಡು ಅಕಾಡೆಮಿ ಮುಖ್ಯಸ್ಥ ಸನ್ ಸೈ ಮಹೇಶ್, ಸನ್ ಸೈ ವೆಂಕಟೇಶ್, ಸನ್ ಸೈ ನಂದೀಶ್, ಶಾಲಾ ಶಿಕ್ಷಕರು, ಅಕಾಡೆಮಿ ಸದಸ್ಯರು ಉಪಸ್ಥಿತರಿದ್ದರು.

# ಸಿದ್ದರಾಮಯ್ಯ, ಮಹದೇವಪ್ಪನವರ ಊರಿನ ಗಲ್ಲಿ ಗಲ್ಲಿಯಲ್ಲಿ ಗಾಂಜಾ ಸಿಗುತ್ತಿದೆ

### ಆಮ್ ಆದ್ಮಿ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಆರೋಪ

ಮೈಸೂರು, ಫೆ.3(ಜಿಎ)–ಶಾಸಕಾಂಗ ಹಾಗೂ ಕಾರ್ಯಾಂಗದ ಸಹಕಾರದಿಂದ ಸರ್ಕಾರ ನಿಷೇಧ ಮಾಡಿರುವ ಪದಾರ್ಥಗಳು ಮಾರುಕಟ್ಟೆಯಲ್ಲಿ ಸಿಗುತ್ತಿವೆ ಎಂದು ಆಮ್ ಆದ್ಮಿ ಪಕ್ಷದ ಮೈಸೂರು ಜಿಲ್ಲಾಧ್ಯಕ್ಷ ಎಲ್.ರಂಗಯ್ಯ ಆರೋಪಿಸಿದ್ದಾರೆ.



ವಿಶ್ವ ವಿಖ್ಯಾತ ಮೈಸೂರು ಇಂದು ಡ್ರಗ್ಸ್ ತಯಾರಿಕೆಯಿಂದ ಕುಖ್ಯಾತಿ ಪಡೆಯುತ್ತಿದೆ. ಸರ್ವರೂ ಆರ್ಥಿಕವಾಗಿ ಸಮಾನತೆ ಪಡೆಯಬೇಕೆಂಬ ಕನಸನ್ನು ಹೊತ್ತಿರುವ ಸಮಾಜವಾದಿ ಸಿದ್ದರಾಮಯ್ಯನವರು, ಮಕ್ಕಳು ಬೆಳೆಯಬೇಕೆಂಬ ಛಲವನ್ನು ಹೊಂದಿರುವ ಉಸ್ತುವಾರಿ ಸಚಿವ ಮಹದೇವಪ್ಪನವರ ಆಳ್ವಿಕೆಯಲ್ಲಿ ನಿಷೇಧಿತ ಗಾಂಜಾ, ಡ್ರಗ್ಸ್ ಮೈಸೂರಿನ ಗಲ್ಲಿ ಗಲ್ಲಿಗಳಲ್ಲಿ ಹೇರಳವಾಗಿ ಸಿಗುತ್ತಿದೆ. ಇವರ ಸಹಕಾರವಿಲ್ಲದೆ ಇವೆಲ್ಲಾ ನಡೆಯುತ್ತಿದೆಯಾ ಎಂಬ ಅನುಮಾನ ಮೈಸೂರಿನ ನಾಗರಿಕರಲ್ಲಿ ಮೂಡಿದೆ ಎಂದು ಹೇಳಿದ್ದಾರೆ.

ಸರ್ಕಾರ ನಿಷೇಧ ಮಾಡಿರುವ ಬೆಳೆ ಮತ್ತು ಪದಾರ್ಥಗಳು ಮಾರುಕಟ್ಟೆಯಲ್ಲಿ ಸಿಗುತ್ತವೆ ಎಂದರೆ ಅದು ಸರ್ಕಾರದ ಮುಖ್ಯ ಅಂಗಗಳಾದ ಶಾಸಕಾಂಗ ಮತ್ತು ಕಾರ್ಯಾಂಗದ ಸಹಕಾರದಿಂದಲೇ ನಡೆಯುತ್ತಿದೆ ಎಂಬುದರಲ್ಲಿ ಯಾವುದೇ ಅನುಮಾನವಿಲ್ಲ. ಏಕೆಂದರೆ ಅವರಿಗೆ ಕಾನೂನಿನ ಭಯವಿಲ್ಲ. ಕಾನೂನಿನ ಭಯವಿರುವವರು ಈ ಕೆಲಸವನ್ನು ಉಪವಾಸವಿದ್ದರೂ ಮಾಡುವುದಿಲ್ಲ. ಇಂದಿನ ಯುವಕರು ಮುಂದಿನ ಪ್ರಜೆಗಳು, ಅವರ ರಕ್ಷಣೆಯ ಜವಾಬ್ದಾರಿ ಸರ್ಕಾರದ ಮೇಲೆ ಇದೆ ಎಂದರು.

ನಮ್ಮ ಕೈಯ್ಯಲ್ಲಿ ಇವರನ್ನು ತಡೆಯಲು ಸಾಧ್ಯವಿಲ್ಲ. ನಿಮ್ಮ ಆರೋಗ್ಯವನ್ನು ನೀವೇ ಕಾಪಾಡಿಕೊಳ್ಳಿ ಎಂದು ಸಾರ್ವಜನಿಕರಿಗೆ ಹೇಳಿ ಹಾಗೂ ನಿಷೇಧ ಮಾಡಿರುವ ಗಾಂಜಾವನ್ನು ಮುಕ್ತ ಮಾರುಕಟ್ಟೆಯಲ್ಲಿ ಸಿಗುವ ವ್ಯವಸ್ಥೆ ಮಾಡಿಬಿಡಿ. ಹೇಗೆ ಮದ್ಯಪಾನ, ಧೂಮಪಾನದಿಂದ ಅತೀ ಹೆಚ್ಚು ತೆರಿಗೆ ಬರುತ್ತದೆಯೋ ಹಾಗೆಯೇ ಇದಕ್ಕೂ ತೆರಿಗೆ ಬಂದು ಸರ್ಕಾರದ ಬೊಕ್ಕಸ ತುಂಬಿಸಬಹುದು ಎಂದು ವ್ಯಂಗ್ಯವಾಡಿದ್ದಾರೆ.

# ಲಯನ್ಸ್ ಕ್ಲಬ್‌ನಿಂದ ವಿಶೇಷಚೇತನರಿಗೆ ಕೃತಕ ಅಂಗಗಳ ವಿತರಣೆ



ವಿಶೇಷಚೇತನರಿಗೆ ಉಚಿತವಾಗಿ ಕೃತಕ ಅಂಗಗಳನ್ನು ವಿತರಿಸಲಾಯಿತು.

ಮೈಸೂರು,ಫೆ.3–ಮೈಸೂರಿನ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಮೈಸೂರು ಲಯನ್ಸ್ ಕ್ಲಬ್ ವತಿಯಿಂದ 40 ವಿಶೇಷಚೇತನರಿಗೆ ಉಚಿತವಾಗಿ ಕೃತಕ ಅಂಗಗಳನ್ನು ವಿತರಿಸಲಾಯಿತು.

ಜೆಎಸ್‌ಎಸ್ ಆಸ್ಪತ್ರೆಯ ಸಂದರ್ಶಕ ಸಮಿತಿ ಸದಸ್ಯ ಲಯನ್ ಜೈ ಪ್ರಕಾಶ್ ಮಾತನಾಡಿ, ಲಯನ್ಸ್ ಕ್ಲಬ್ ವತಿಯಿಂದ ಸಮಾಜಮುಖಿ ಕಾರ್ಯಕ್ರಮಗಳನ್ನು ಮಾಡಲಾಗುತ್ತಿದೆ. ಈ ಬಾರಿ ಲಯನ್ಸ್ ಸಂಸ್ಥೆಯ ಸದಸ್ಯರು ಮತ್ತು ದಾನಿಗಳಿಂದ ಅರ್ಹ ಫಲಾನುಭವಿಗಳಿಗೆ ಜೆಎಸ್‌ಎಸ್ ಆಸ್ಪತ್ರೆಯಲ್ಲಿ ಕೃತಕಾಂಗಗಳನ್ನು ತಯಾರಿಸಿ ವಿಶೇಷಚೇತನರಿಗೆ ಉಚಿತವಾಗಿ ನೀಡಲು ತೀರ್ಮಾನಿಸಿದ್ದೆವು. ದಾನಿಗಳ ಸಹಾಯದಿಂದ 40 ಮಂದಿಗೆ ಕೃತಕ ಕಾಲುಗಳನ್ನು ನೀಡಿದ್ದೇವೆ ಎಂದರು.

ಜೆಎಸ್‌ಎಸ್ ಮಹಾವಿದ್ಯಾಪೀಠದ ವೈದ್ಯಕೀಯ ವಿಭಾಗದ ನಿರ್ದೇಶಕ ಆರ್.ಮಹೇಶ್ ಮಾತನಾಡಿ, ಮೈಸೂರಿನ ಲಯನ್ಸ್ ಕ್ಲಬ್‌ವತಿಯಿಂದ ಅರ್ಹರಿಗೆ ಕೃತಕ ಅಂಗಗಳನ್ನು ನೀಡುತ್ತಿರುವುದು ಸಂತೋಷದ ಸಂಗತಿ. ಲಯನ್ಸ್ ಸಂಸ್ಥೆಯವರು ಮಾಡುತ್ತಿರುವ ಸಮಾಜ ಸೇವೆ ಶ್ಲಾಘನೀಯ. ಕೋವಿಡ್ ಸಮಯದಲ್ಲಿ ಆಹಾರ ಕಿಟ್ ವಿತರಣೆ, ಪ್ರತಿ ತಿಂಗಳು ಉಚಿತ ಆರೋಗ್ಯ ತಪಾಸಣಾ ಶಿಬಿರ ಮತ್ತು ಇನ್ನು ಮುಂತಾದ ಉತ್ತಮ ಸಮಾಜಮುಖಿ ಕಾರ್ಯಕ್ರಮಗಳನ್ನು ನಡೆಸಿಕೊಂಡು ಬರುತ್ತಿದ್ದಾರೆ. ಇವರ ಸೇವೆ ಹೀಗೆ ಮುಂದುವರೆಯಲಿ ಎಂದರು.

ಬನ್ನಾಲಿ ಗ್ರೂಪ್‌ನ ಹೇಮಂತ್ ಕುಮಾರ್ ಬನ್ನಾಲಿ ಮಾತನಾಡಿದರು.

ಜೆಎಸ್‌ಎಸ್ ಆಸ್ಪತ್ರೆ ಮುಖ್ಯ ಹಣಕಾಸು ಅಧಿಕಾರಿ ಕೆ.ಎಂ.ಭಗವಾನ್, ಲಯನ್ಸ್ ಸಂಸ್ಥೆಯ ಪುಟ್ಟೇಗೌಡ, ಪಿ. ಹೊನ್ನರಾಜು, ಹೆಚ್.ಎಸ್.ರಾಜು, ಜಯಕುಮಾರ್, ಧನಂಜಯ್, ದಾನಿಗಳಾದ ಡಾ.ರಮೇಶ್, ಆಸ್ಪತ್ರೆಯ ಪ್ರಭಾರ ಆಡಳಿತಾಧಿಕಾರಿ ಭಾನುಮೂರ್ತಿ, ಸಾರ್ವಜನಿಕ ಸಂಪರ್ಕಾಧಿಕಾರಿ ಜೀವನ್, ಕೃತಕ ಅಂಗಗಳ ವಿಭಾಗದ ಮುಖ್ಯಸ್ಥ ಸಂಜೀವ್‌ಕುಮಾರ್ ಇದ್ದರು.

# ದೇಶ - ವಿದೇಶ

## ನಾಗರಿಕರ ಗೌಪ್ಯತೆ ಹಕ್ಕು ಉಲ್ಲಂಘನೆ ಆರೋಪ; ವಾಟ್ಸಾಪ್‌ಗೆ ಸುಪ್ರೀಂ ತರಾಟೆ

**ನವದೆಹಲಿ:** ನಾಗರಿಕರ ಗೌಪ್ಯತೆಯ ಹಕ್ಕನ್ನು ಉಲ್ಲಂಘಿಸಲಾಗಿದೆ ಎಂಬ ಆರೋಪದ ಹಿನ್ನೆಲೆಯಲ್ಲಿ ವಾಟ್ಸಾಪ್ ಮತ್ತು ಅದರ ಮೂಲ ಕಂಪನಿ ಮೆಟಾವನ್ನು ಸುಪ್ರೀಂಕೋರ್ಟ್ ಮಂಗಳವಾರ ತೀವ್ರ ತರಾಟೆಗೆ ತೆಗೆದುಕೊಂಡು, ಡೇಟಾ ಹಂಚಿಕೆ ಹೆಸರಿನಲ್ಲಿ ಬಳಕೆದಾರರ ಖಾಸಗಿ ಮಾಹಿತಿ ದುರ್ಬಳಕೆಯಾಗಬಾರದು ಎಂದು ತಾಕೀತು ಮಾಡಿದೆ.



ವಾಟ್ಸಾಪ್‌ನ 'ಟೇಕ್ ಇಟ್ ಆರ್ ಲೀವ್ ಇಟ್(take it or leave it)' ಗೌಪ್ಯತಾ ನೀತಿಯ ಮೇಲೆ 213.14 ಕೋಟಿ ರೂ. ದಂಡ ವಿಧಿಸುವ ಭಾರತೀಯ ಸ್ಪರ್ಧಾತ್ಮಕ ಆಯೋಗದ ಆದೇಶದ ವಿರುದ್ಧ ವಾಟ್ಸಾಪ್ ಮತ್ತು ಮೆಟಾ ಸಲ್ಲಿಸಿದ ಮೇಲ್ಮನವಿಗಳನ್ನು ಆಲಿಸಿದ ಮುಖ್ಯ ನ್ಯಾಯಮೂರ್ತಿ ಸೂರ್ಯಕಾಂತ್ ಮತ್ತು ನ್ಯಾಯಮೂರ್ತಿ ಜಾಯ್ಮಲ್ಯ ಬಾಗ್ಚಿ ಅವರನ್ನೊಳಗೊಂಡ ನ್ಯಾಯಪೀಠ ಬಳಕೆದಾರರಿಗೆ ಅರ್ಥಪೂರ್ಣ ಆಯ್ಕೆಯ ಕಾರ್ಯವಿಧಾನ ಇಲ್ಲದಿರುವುದನ್ನು ಪ್ರಶ್ನಿಸಿದೆ.

ಆಯ್ಕೆಯಿಂದ ಹೊರಗುಳಿಯುವ ಪ್ರಶ್ನೆ ಎಲ್ಲಿದೆ? ಇದು ಖಾಸಗಿ ಮಾಹಿತಿಯ ಕಳ್ಳತನಕ್ಕೆ ಸುಗಮವಾದ ಮಾರ್ಗವಾಗಿದೆ. ಗೌಪ್ಯತೆಯ ಹಕ್ಕನ್ನು ಈ ದೇಶದಲ್ಲಿ ತುಂಬಾ ಉತ್ಸಾಹದಿಂದ ಕಾಪಾಡಲಾಗಿದೆ. ಬಲವಂತದಿಂದ ಗ್ರಾಹಕರ ಡೇಟಾವನ್ನು ಹಂಚಿಕೊಳ್ಳಲು ಟೆಕ್ ಕಂಪನಿಗಳಿಗೆ ಅನುಮತಿ ನೀಡುವುದಿಲ್ಲ ಎಂದು ನ್ಯಾಯಾಲಯ ಸ್ಪಷ್ಟವಾಗಿ ಹೇಳಿದೆ.

## ಕೆನಡಾದಲ್ಲಿ ಗುಂಡಿನ ದಾಳಿ: ಮೂವರು ಭಾರತೀಯರ ಸೆರೆ

**ಕೆನಡಾ:** ಇತ್ತೀಚೆಗೆ ಕೆನಡಾದ ಸರ್‍ರೆ ಪ್ರದೇಶದ ಬಳಿ ನಿವಾಸವೊಂದರ ಹೊರಗೆ ನಡೆದ ಗುಂಡಿನ ದಾಳಿ ಪ್ರಕರಣಕ್ಕೆ ಸಂಬಂಧಿಸಿದಂತೆ 3 ಭಾರತೀಯ ಯುವಕರನ್ನು ಬಂಧಿಸಲಾಗಿದೆ.



ಫೆ.1ರಂದು ಮುಂಜಾನೆ ವೇಳೆಯಲ್ಲಿ ಬ್ರಿಟಿಷ್ ಕೊಲಂಬಿಯಾದ ಸರ್‍ರೆ ಪಟ್ಟಣದ ಕ್ರೆಸೆಂಟ್ ರಸ್ತೆಯ ಬಳಿಯಲ್ಲಿನ ನಿವಾಸವೊಂದರ ಬಳಿ ಗುಂಡು ಹಾರಿಸಿದ್ದರಿಂದ ಬೆಂಕಿ ಕಾಣಿಸಿಕೊಂಡಿತ್ತು. ಈ ಗಸ್ತು ತಿರುಗುತ್ತಿದ್ದ ಸ್ಥಳೀಯ ಪೊಲೀಸ್ ಅಧಿಕಾರಿಗಳು ಭಾರತೀಯ ಮೂಲದ ಹರ್ಜೋತ್ ಸಿಂಗ್(21), ತರಣ್‌ವೀರ್ ಸಿಂಗ್(19) ಮತ್ತು ದಯಾಜೀತ್ ಸಿಂಗ್ ಬಿಲ್ಲಿಂಗ್ (21) ಎಂಬುವವರನ್ನು ಬಂಧಿಸಿ, ಫೆ.5ರವರೆಗೆ ಪೊಲೀಸ್ ಕಸ್ಟಡಿಗೆ ಕಳುಹಿಸಲಾಗಿದೆ. ಈ ಆರೋಪಿಗಳು ವಿದೇಶಿ ಪ್ರಜೆಗಳಾಗಿರುವುದರಿಂದ ಈ ಪ್ರಕರಣದಲ್ಲಿ ಕೆನಡಾ ಬಾರ್ಡರ್ ಸರ್ವೀಸಸ್ ಏಜೆನ್ಸಿ ಕೂಡ ಈ ವಿಷಯದಲ್ಲಿ ಭಾಗಿಯಾಗಿದೆ. ಹೆಚ್ಚಿನ ತನಿಖೆಗಾಗಿ ಸಿಸಿಟಿವಿ ಅಥವಾ ಡ್ಯಾಶ್ ಕ್ಯಾಮ್ ದೃಶ್ಯಾವಳಿ ಗಳು ಸೇರಿದಂತೆ ಘಟನೆಯ ಇತರೆ ಮಾಹಿತಿಯನ್ನು ಹಂಚಿಕೊಳ್ಳುವಂತೆ ಸಾರ್ವಜನಿಕರಲ್ಲಿ ಮನವಿ ಮಾಡಿದೆ. 2 ವಾರಗಳ ಹಿಂದಷ್ಟೇ ನಡೆದ ಶೂಟೌಟ್ ಪ್ರಕರಣದಲ್ಲಿ ಭಾರತೀಯ ಮೂಲದ ಇಬ್ಬರನ್ನು ಬಂಧಿಸಿ ಬಂದೂಕುಗಳನ್ನು ವಶಪಡಿಸಿಕೊಳ್ಳಲಾಗಿತ್ತು.

## ರೀಲ್ಸ್‌ಗಾಗಿ ರೈಲು ಹಳಿ ಮೇಲೆ ಮಲಗಿ ಯುವಕನ ಹುಚ್ಚಾಟ

**ತೆಲಂಗಾಣ:** ಯುವ ಜನತೆ ರೀಲ್ಸ್ ವಿಡಿಯೋ ಗೀಳಿಗೆ ಬಿದ್ದು, ಎಂಥಹ ಅಪಾಯಕಾರಿ ಕೆಲಸಕ್ಕೂ ಹಿಂಜರಿಯುವುದಿಲ್ಲ.




ಇಂತಹದ್ದೇ ಒಂದು ಘಟನೆ ಇತ್ತೀಚೆಗೆ ತೆಲಂಗಾಣದಲ್ಲಿ ನಡೆದಿದ್ದು, ಆ ವಿಡಿಯೋ ನೋಡಿ ಸ್ವತಃ ಹೈದರಾಬಾದ್ ಪೊಲೀಸ್ ಕಮಿಷನರ್, ಹಿರಿಯ ಐಪಿಎಸ್ ಅಧಿಕಾರಿ ಕನ್ನಡಿಗ ವಿ.ಸಿ.ಸಜ್ಜನವರ ಆತಂಕ ವ್ಯಕ್ತಪಡಿಸಿದ್ದಾರೆ. ಯುವಕನೊಬ್ಬ ರೀಲ್ಸ್ ವಿಡಿಯೋಗಾಗಿ ವೇಗವಾಗಿ ರೈಲು ಸಂಚರಿಸುವಾಗ ಹಳಿಯ ಮೇಲೆ ಮಲಗಿ ಹುಚ್ಚಾಟ ಮೆರೆದಿದ್ದು, ಈ ವಿಡಿಯೋ ಸಾಮಾಜಿಕ ಜಾಲತಾಣದಲ್ಲಿ ಭಾರೀ ವೈರಲ್ ಆಗಿದೆ.

ಈ ವಿಡಿಯೋ ಹಂಚಿಕೊಂಡಿರುವ ಪೊಲೀಸ್ ಅಧಿಕಾರಿ ಸಜ್ಜನವರ, ವೈರಲ್ ಆಗಲು ಇಂತಹ ಸಾಹಸಗಳನ್ನು ಮಾಡುವುದು ನಿಮ್ಮ ಧೈರ್ಯ ತೋರಿಸುವುದಿಲ್ಲ. ಅಂತಹವರನ್ನು ಹುಚ್ಚರು ಎನ್ನುತ್ತಾರೆ. ಒಂದು ಕ್ಷಣದ ತಪ್ಪು ಸಹ ಅವರ ಜೀವನವನ್ನೇ ಮುಗಿಸಿಬಿಡುತ್ತವೆ ಎಂದು ಎಚ್ಚರಿಸಿದ್ದಾರೆ. ಇದಕ್ಕೆ ಕಾಮೆಂಟ್ ಮಾಡಿರುವ ಹಲವರು, ಇಂತಹವರನ್ನು ಜೈಲಿಗೆ ಕಳುಹಿಸಬೇಕು, ರೈಲ್ವೆ ಇಲಾಖೆ ನಿಗಾ ವಹಿಸಬೇಕು ಎಂದು ಆಗ್ರಹಿಸಿದ್ದಾರೆ.

## ಸಿಂಧೂ ಜಲ ಒಪ್ಪಂದ ವಿವಾದ; ವಿಚಾರಣೆಗೆ ಭಾರತ ನಕಾರ


**ಹೇಗ್:** ಸಿಂಧೂ ಜನ ಒಪ್ಪಂದ ವಿವಾದ ರದ್ದತಿ ಕುರಿತ ಅಂತಾರಾಷ್ಟ್ರೀಯ ನ್ಯಾಯಾಲಯದ ಯಾವುದೇ ವಿಚಾರಣಾ ಪ್ರಕ್ರಿಯೆಗಳಲ್ಲಿ ಭಾಗವಹಿಸವುದಿಲ್ಲ ಎಂದು ಭಾರತ ಸ್ಪಷ್ಟಪಡಿಸಿದೆ.



ಈ ಒಪ್ಪಂದದ ಕುರಿತ ಹೇಗ್ ವಿಚಾರಣಾ ಪ್ರಕ್ರಿಯೆಗಳ ನ್ಯಾಯಸಮ್ಮತೆಯನ್ನು ಭಾರತ ಪ್ರಶ್ನಿಸಿದೆ. ಸಿಂಧೂ ಜಲ ಒಪ್ಪಂದ ಅಡಿಯಲ್ಲಿ ರಚಿಸಲಾದ ಕೋರ್ಟ್ ಆಫ್ ಆರ್ಬಿಟ್ರೇಷನ್ ಕಳೆದ ವಾರ ಹೊರಡಿಸಿದ ಆದೇಶ, ಭಾರತದ ಕಣ್ಣನ್ನು ಕೆಂಪಾಗಿಸಿದೆ. ಭಾರತೀಯ ಜಲವಿದ್ಯುತ್ ಸ್ಥಾವರಗಳಿಂದ ಕಾರ್ಯಾಚರಣೆಯ ಪಾಂಡೇಜ್ ಲಾಗ್‌ಬುಕ್‌ಗಳನ್ನು ಅರ್ಹತೆಗಳ 2ನೇ ಹಂತ ಎಂದು ಕರೆಯುವ ಭಾಗವಾಗಿ ಉತ್ಪಾದಿಸಬೇಕೆಂದು, ಐಸಿಜೆ ವಿಚಾರಣೆ ನಿರ್ದೇಶಿಸುತ್ತದೆ.

ನ್ಯಾಯಾಲಯವು ಫೆ.2–3ರಂದು ಹೇಗ್‌ನಲ್ಲಿರುವ ಪೀಸ್ ಪ್ಯಾಲೇಸ್‌ನಲ್ಲಿ ವಿಚಾರಣೆ ನಿಗದಿಪಡಿಸಿದ್ದು, ಭಾರತವು ಯಾವುದೇ ಪ್ರತಿ-ಜ್ಞಾಪಕ ಪತ್ರ ಸಲ್ಲಿಸಿಲ್ಲ. ಹಾಗೇ ವಿಚಾರಣೆಯಲ್ಲಿ ಭಾಗವಹಿಸುವಿಕೆಯನ್ನೂ ಖಚಿತಪಡಿಸಿಲ್ಲ. ಈ ವಿಚಾರಣೆಯೇ ವಿವಾದಾಸ್ಪದವಾಗಿದೆ ಎಂದು ಭಾರತ ಹೇಳಿದೆ. ಸಿಎಪಿ ರಚನೆಯನ್ನೇ ಅಕ್ರಮ ಎಂದಿರುವ ಭಾರತ, ತಟಸ್ಥ ತಜ್ಞರ ಜೊತೆಗಿನ ವಿಚಾರಣೆಗಳನ್ನು ಹೊರತು ಪಡಿಸಿ ಬೇರೆ ಸಮಾನಾಂತರ ವಿಚಾರಣೆಗಳನ್ನು ನಡೆ ಸುತ್ತಿರುವುದರಿಂದ ಅದರ ಯಾವುದೇ ಸಂವಹನಗಳಿಗೆ ಪ್ರತಿಕ್ರಿಯಿಸುವುದಿಲ್ಲ ಎಂದು ಭಾರತೀಯ ಅಧಿಕಾರಿಗಳು ಸ್ಪಷ್ಟಪಡಿಸಿದ್ದಾರೆ.

## ಕಂದಕಕ್ಕೆ ಉರುಳಿದ ಸರ್ಕಾರಿ ಬಸ್; ನಾಲ್ವರ ದುರ್ಮರಣ



**ಡೆಹ್ರಾಡೂನ್:** ಹಿಮಾಚಲ ಪ್ರದೇಶದ ಡೆಹ್ರಾಡೂನ್‌ನ ಕಲ್ಸಿ ಪ್ರದೇಶದಲ್ಲಿ ಮಂಗಳವಾರ(ಫೆ.3) ಬೆಳಗ್ಗೆ ಸರ್ಕಾರಿ ಬಸ್‌ವೊಂದು ಕಂದಕಕ್ಕೆ ಉರುಳಿ ಬಿದ್ದಿದ್ದು, ಘಟನೆಯಲ್ಲಿ ನಾಲ್ವರು ಮೃತಪಟ್ಟು 7ಕ್ಕೂ ಹೆಚ್ಚು ಮಂದಿ ಗಂಭೀರವಾಗಿ ಗಾಯಗೊಂಡಿದ್ದಾರೆ. ಮೃತರನ್ನು ಬಸ್ ಚಾಲಕ ದಿನೇಶ್ ಕುಮಾರ್(54), ವಿಜ್ಮಲ್ ಗ್ರಾಮದ ಯಾಸ್ಮಿನ್ ಬೇಗಂ (46), ರಿಚಾ(30) ಹಾಗೂ ಕ್ಯಾಲ್ರ್ ನೆರ್ವಾ ನಿವಾಸಿ ಧನ್ ಬಹದ್ದೂರ್ ಎಂದು ಗುರುತಿಸಲಾಗಿದೆ. 30ಕ್ಕೂ ಹೆಚ್ಚು ಪ್ರಯಾಣಿಕರನ್ನು ಹೊತ್ತೊಯ್ಯುತ್ತಿದ್ದ ಸರ್ಕಾರಿ ಬಸ್, ಕ್ಲಿಷ್ಟಕರ ತಿರುವುಗಳಿರುವ ಮೀನಕ್ ರಸ್ತೆಯ ಕುವಾನು ಬಳಿ ಸಂಚರಿಸುವಾಗ ಈ ದುರ್ಘಟನೆ ಸಂಭವಿಸಿದೆ. ಎಸ್‌ಡಿಆರ್‌ಎಫ್ ತಂಡ ರಕ್ಷಣಾ ಕಾರ್ಯಕೈಗೊಂಡು, ಪ್ರಯಾಣಿಕರನ್ನು ರಕ್ಷಿಸುತ್ತಿದೆ. ರಕ್ಷಣಾ ಕಾರ್ಯಾಚರಣೆ ಇನ್ನೂ ಪ್ರಗತಿಯಲ್ಲಿದ್ದು, ತಂಡಗಳು ಕಮರಿಯ ಆಳವಾದ ಭಾಗಗಳನ್ನು ತಲುಪಿ ಪರಿಶೀಲಿಸಿದ ಬಳಿಕ ಸಾವಿನ ಸಂಖ್ಯೆ ನಿಖರವಾಗಿ ತಿಳಿಯಲಿದೆ.

ಮೈಸೂರು ಮಿತ್ರ ಬುಧವಾರ 4 ಫೆಬ್ರವರಿ 2026

# ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದಂತೆ ಎಚ್ಚರ ವಹಿಸಿ


ಶಾಲಾ, ಕಾಲೇಜುಗಳ ಮುಖ್ಯಸ್ಥರ ಸಭೆಯಲ್ಲಿ ಡಿವೈಎಸ್‌ಪಿ ಮಹೇಶ್ ಕುಮಾರ್ ಮಾತನಾಡಿದರು

ವಿರಾಜಪೇಟೆ, ಫೆ.3–ವಿದ್ಯಾರ್ಥಿಗಳು ದುಶ್ಚಟಗಳಿಗೆ ಬಲಿಯಾಗದಂತೆ ಎಚ್ಚರ ವಹಿಸುವ ನಿಟ್ಟಿನಲ್ಲಿ ಶಾಲಾ ಶಿಕ್ಷಕರು ಮತ್ತು ಕಾಲೇಜು ಉಪನ್ಯಾಸಕರುಗಳು ಪೊಲೀಸರೊಂದಿಗೆ ಸಹಕಾರ ನೀಡುವಂತಾಗಬೇಕು ಎಂದು ಡಿವೈಎಸ್‌ಪಿ ಮಹೇಶ್‌ಕುಮಾರ್ ಹೇಳಿದ್ದಾರೆ. ಮಾದಕ ವಸ್ತುಗಳನ್ನು ತಡೆಗಟ್ಟುವ ನಿಟ್ಟಿನಲ್ಲಿ ವೃತ್ತ ನಿರೀಕ್ಷಕರ ಕಚೇರಿಯಲ್ಲಿ ನಡೆದ ತಾಲೂಕಿನ ಶಾಲಾ ಮತ್ತು ಕಾಲೇಜುಗಳ ಮುಖ್ಯಸ್ಥರ ಸಭೆಯಲ್ಲಿ ಮಾತನಾಡಿದ ಅವರು, ಮನುಷ್ಯನಿಗೆ ಹಾನಿಕರವಾದ ಮಾದಕ ವಸ್ತುಗಳನ್ನು ಯಾವುದೇ ಕಾರಣಕ್ಕೂ ವಿದ್ಯಾರ್ಥಿಗಳು ಸೇವನೆ ಮಾಡಬಾರದು. ಗಾಂಜಾ ಇತ್ಯಾದಿ ಮಾದಕ ವಸ್ತುಗಳನ್ನು ಮಾರಾಟ ಮಾಡುವುದಾಗಲಿ, ಸೇವನೆ ಮಾಡುವುದಾಗಲಿ ಅಪರಾಧ ಇದರ ಬಗ್ಗೆ ಹೆಚ್ಚು ಜಾಗೃತಿ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳಲು ಶಿಕ್ಷಕರು ಪೊಲೀಸರೊಂದಿಗೆ ಕೈಜೋಡಿಸಬೇಕು ಎಂದರು.

ವಾಹನ ಚಾಲನೆ ಮಾಡುವಾಗ ಸಂಚಾರ ಪ್ರಜ್ಞೆ ಇರಬೇಕು. ವಾಹನ ಮಾಲೀಕರು 18 ವರ್ಷದೊಳಗಿನ ಮಕ್ಕಳಿಗೆ ವಾಹನವನ್ನು ನೀಡಿ ಚಾಲನೆ ಮಾಡುವುದು ಕಂಡಲ್ಲಿ ವಾಹನ ಮಾಲಿಕರ ವಿರುದ್ಧ ಪ್ರಕರಣ ದಾಖಲಿಸಲಾಗುವುದು ಪ್ರತಿಯೊಬ್ಬರು ಸಂಚಾರ ನಿಯಮವನ್ನು ಪಾಲಿಸುವಂತಾಗಬೇಕು ಎಂದು ಹೇಳಿದರು. ಸಭೆಯನ್ನುದ್ದೇಶಿಸಿ ವೃತ್ತನಿರೀಕ್ಷಕ ಅನೂಪ್ ಮಾದಪ್ಪ ಮಾತನಾಡಿದರು.

ವೇದಿಕೆಯಲ್ಲಿ ನಗರ ಹಾಗೂ ಗ್ರಾಮಾಂತರ ಠಾಣಾಧಿಕಾರಿಗಳಾದ ಎಚ್.ಎಸ್. ಪ್ರಮೋದ್ ಮತ್ತು ಲತಾ, ವಾಣಿಶ್ರೀ ಉಪಸ್ಥಿತರಿದ್ದರು.

# ನಾಪೋಕ್ಲು ವ್ಯಾಪ್ತಿಯಲ್ಲಿ ಮಳೆ: ಆತಂಕದಲ್ಲಿ ರೈತರು

ನಾಪೋಕ್ಲು, ಫೆ.3 (ದುಗ್ಗಳ)– ನಾಪೋಕ್ಲು ವ್ಯಾಪ್ತಿಯಲ್ಲಿ ಮಂಗಳವಾರ ಸಂಜೆ ಅಲ್ಪ ಪ್ರಮಾಣದಲ್ಲಿ ಮಳೆ ಸುರಿದಿದ್ದು, ರೈತರಲ್ಲಿ ಬೆಳೆ ರಕ್ಷಣೆ ಸಂಬಂಧ ಆತಂಕದ ಕಾರ್ಮೋಡ ಕವಿದಿದೆ.

ಪಟ್ಟಣ ವ್ಯಾಪ್ತಿಯಲ್ಲಿ 30ಮಿಮಿ, ಕಕ್ಕಬೆಯಲ್ಲಿ 20ಮಿಮಿ, ಬಲ್ಲಮಾವಟ್ಟಿ, ನೆಲಜಿ, ಎಮ್ಮೆ ಮಾಡು ಸೇರಿದಂತೆ ಹಲವು ಕಡೆಗಳಲ್ಲಿ ಮಳೆಯಾಗಿ ಬೆಳೆಗಾರರು ಆತಂಕಕ್ಕೀಡಾದರು. ಜಿಲ್ಲೆಯಲ್ಲಿ ಕಾಫಿ ಕೊಯ್ಲು ಭರದಿಂದ ಸಾಗುತ್ತಿರುವ ಈ ದಿನಗಳಲ್ಲಿ ಮಳೆ ರೈತರಲ್ಲೇ ಆತಂಕ ತಂದೊಡ್ಡಿದೆ. ಭತ್ತದ ಬೆಳೆ ಕೊಯ್ಲು ಪೂರ್ಣಗೊಳ್ಳುವ ಹಂತದಲ್ಲಿದೆ. ಕಾಫಿ ಕೊಯ್ಲು ಇದೀಗ ಭರದಿಂದ ಸಾಗುತ್ತಿದೆ. ಕೊಯ್ಲು ಮಾಡಿದ ಕಾಫಿಯನ್ನು ಕಣದಲ್ಲಿ ಹರವಿ ಒಣಗಿಸಲಾಗುತ್ತಿದೆ ಮೋಡ ಕವಿದ ವಾತಾವರಣದಿಂದ ಕಾಫಿ ಒಣಗಿಸಲು ತೊಡಕಾಗಿದೆ ಎಂದು ಬೆಳೆಗಾರರು ಅವಲತ್ತು ತೋಡಿಕೊಂಡರು.


ನಾಪೋಕ್ಲು ವ್ಯಾಪ್ತಿಯಲ್ಲಿ ಮಂಗಳವಾರ ಸಂಜೆ ಸಾಧಾರಣ ಮಳೆಯಾಗಿ ಬೆಳೆಗಾರರು ಒಣಗಲು ಹಾಕಿದ, ಕಾಫಿಗಳನ್ನು ಪ್ಲಾಸ್ಟಿಕ್ ತಾಟುಗಳಿಂದ ಮುಚ್ಚಿ ರಕ್ಷಿಸಲಾಯಿತು

ನಾಪೋಕ್ಲು ವ್ಯಾಪ್ತಿಯ ಗ್ರಾಮಗಳಲ್ಲಿ ಮಂಗಳವಾರ ಸಂಜೆ ಅಲ್ಲಲ್ಲಿ ಸಾಧಾರಣ ಮಳೆಯಾಯಿತು. ಬೆಳೆಗಾರರು ಒಣಗಲು ಹಾಕಿದ್ದ, ಕಾಫಿಗಳನ್ನು ಪ್ಲಾಸ್ಟಿಕ್ ತಾಟುಗಳಿಂದ ಮುಚ್ಚಿ ರಕ್ಷಿಸಲಾದರೂ ಬಹುತೇಕ ಕಾಫಿ ಮಳೆಗೆ ಒದ್ದೆಯಾಗಿ ಸಮಸ್ಯೆ ಎದುರಾಗಿದೆ. 15 ದಿನಗಳ ಹಿಂದೆ ಮಳೆಯಾಗಿ ನಾಪೋಕ್ಲು ವ್ಯಾಪ್ತಿಯ ಕಾಫಿ ತೋಟದಲ್ಲಿ ಅಲ್ಪ ಪ್ರಮಾಣದಲ್ಲಿ ಹೂವುಗಳು ಅರಳಿದ ಹೂವು ಇದೀಗ ಮತ್ತೆ ಮಳೆಯಾಗಿದ್ದು ಮತ್ತೆ ಅಲ್ಪ ಪ್ರಮಾಣದಲ್ಲಿ ಹೂಗಳು ಅರಳಲಿವೆ. ಈಗ ಮಳೆಯಾದಲ್ಲಿ ಕೊಯ್ಲು ಮಾಡಿದ ಕಾಫಿಗೂ ಹಾನಿಯಾಗುವುದಲ್ಲದೆ ಮುಂದಿನ ವರ್ಷದ ಫಸಲಿಗೂ ಧಕ್ಕೆ ಆಗಲಿದೆ ಎಂದು ರೈತರ ಅಭಿಪ್ರಾಯ.


# ಇಂದು ಬೀದಿ ನಾಟಕ ಮೂಲಕ ಜಾಗೃತಿ ಅಭಿಯಾನ

ಮಡಿಕೇರಿ ಫೆ.3–ಮದ್ಯ ಹಾಗೂ ಮಾದಕ ವಸ್ತುಗಳ ಸೇವನೆಯಿಂದ ಉಂಟಾಗುವ ದುಷ್ಪರಿಣಾಮ ಕುರಿತು ಬೀದಿ ನಾಟಕ ಮೂಲಕ ಜಾಗೃತಿ ಅಭಿಯಾನವು ನಾಳೆ (ಬುಧವಾರ)

ಬೆಳಿಗ್ಗೆ 10.30 ಗಂಟೆಗೆ ನಗರದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ನಡೆಯಲಿದೆ. ಜಿಲ್ಲಾಡಳಿತ, ಜಿಲ್ಲಾ ಪಂಚಾಯಿತಿ, ಜಿಲ್ಲಾ ಪೊಲೀಸ್ ಘಟಕ, ರಾಜೀವ್ ಗಾಂಧಿ ಆರೋಗ್ಯ ವಿಜ್ಞಾನಗಳ ವಿಶ್ವವಿದ್ಯಾಲಯ, ಕೊಡಗು ವೈದ್ಯಕೀಯ ವಿಜ್ಞಾನ ಸಂಸ್ಥೆ, ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆ, ಸರ್ಕಾರಿ ಪದವಿ ಪೂರ್ವ ಕಾಲೇಜು, ಮದ್ಯಪಾನ ಸಂಯಮ ಮಂಡಳಿ, ಬೆಂಗಳೂರು ಹಾಗೂ ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಇವರ ವತಿಯಿಂದ ಫೆ.4 ರಂದು ಬೀದಿ ನಾಟಕ ಮೂಲಕ ಜಾಗೃತಿ ಅಭಿಯಾನವು ಫೆ.4ರ ಬೆಳಗ್ಗೆ 10.30 ಗಂಟೆಗೆ ನಗರದ ಸರ್ಕಾರಿ ಜೂನಿಯರ್ ಕಾಲೇಜು ಆವರಣದಲ್ಲಿ ನಡೆಯಲಿದೆ.

## ಅಪರಾಧ ಸುದ್ದಿಗಳು

### ಬೈಕ್ ಹರಿದು ಓರ್ವನ ಸಾವು; ಇಬ್ಬರಿಗೆ ತೀವ್ರ ಗಾಯ



ಕುಶಾಲನಗರ, ಫೆ.3– ಗಾಪಂ ಎದುರು ಪಾದಚಾರಿಮೇಲೆ ಬೈಕ್ ಹರಿದ ಪರಿಣಾಮವಾಗಿ ಆತ ಸ್ಥಳದಲ್ಲಿ ಮೃತಗೊಂಡ ಘಟನೆ ಕೂಡುಮಂಗಳೂರು ಗ್ರಾಪಂ ಎದುರು ನಡೆದಿದೆ.

ಹಾಸನ ಹೆದ್ದಾರಿಯ ಕುಶಾಲನಗರ–ಕೊಡಿಗೆ ರಸ್ತೆಯ ಕೂಡುಮಂಗಳೂರು ಬಳಿ ರಂಜತ್ ನಡೆದು ಹೋಗುತ್ತಿದ್ದಾಗ ಬೈಕ್‌ನಲ್ಲಿ (ಕೆ.ಎ. 12, ಯು– 8275) ಬಂದ ಸವಾರರಿಬ್ಬರು ಪಾದಚಾರಿ ರಂಜತ್ ಮೇಲೆ ಹರಿಸಿದ ಪರಿಣಾಮ ಆತನ ಕುತ್ತಿಗೆ ಭಾಗ ಮುರಿದು ಸ್ಥಳದಲ್ಲೇ ಅಸುನೀಗಿದ್ದಾನೆ

ಬೈಕ್ ಸವಾರರಾದ ರಘು, ಮತ್ತು ಕಾರ್ತಿಕ್ ಎಂಬುವರಿಗೆ ತೀವ್ರವಾಗಿ ಗಾಯಗಳಾಗಿದ್ದು, ಪಟ್ಟಣದ ಸಮುದಾಯ ಆಸ್ಪತ್ರೆಯಲ್ಲಿ ಪ್ರಾಥಮಿಕ ಚಿಕಿತ್ಸೆ ಕೊಡಿಸಿ ನಂತರ ಹೆಚ್ಚಿನ ಚಿಕಿತ್ಸೆಗಾಗಿ ಒಬ್ಬರನ್ನು ಮಡಿಕೇರಿಗೆ, ಮತ್ತು ಇನ್ನೊಬ್ಬರನ್ನು ಮೈಸೂರಿನ ಆಸ್ಪತ್ರೆಗೆ ದಾಖಲು ಮಾಡಲಾಗಿದೆ. ಕುಶಾಲನಗರ ಸಂಚಾರಿ ಪೋಲಿಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

### ಗಾಂಜಾ ಸೇವನೆ: ತಿಂಗಳಲ್ಲಿ 63 ಪ್ರಕರಣಗಳು ದಾಖಲು

ಮಡಿಕೇರಿ, ಫೆ.3–ಜನವರಿ ತಿಂಗಳಿನಲ್ಲಿ ಜಿಲ್ಲೆಯ ವಿವಿಧ ಪೊಲೀಸ್ ಠಾಣೆಗಳಲ್ಲಿ ನಿಷೇಧಿತ ಮಾದಕ ವಸ್ತು ಗಾಂಜಾ ಸರಬರಾಜು ಮತ್ತು ಸೇವನೆ ಕುರಿತು ಒಟ್ಟು 63 ಪ್ರಕರಣಗಳು ದಾಖಲಾಗಿವೆ. ಆರೋಪಿಗಳ ಬಳಿಯಿದ್ದ ಒಟ್ಟು 2 ಕೆ.ಜಿ. 692 ಗ್ರಾಂ ಗಾಂಜಾವನ್ನು ಪೊಲೀಸರು ವಶಪಡಿಸಿಕೊಂಡಿದ್ದಾರೆ. ಈ ಪೈಕಿ ಗಾಂಜಾ ಮಾರಾಟ ಅಥವಾ ಸರಬರಾಜು ಕುರಿತು 9 ಪ್ರಕರಣಗಳು ದಾಖಲಾಗಿದ್ದರೆ, ಗಾಂಜಾ ಸೇವನೆ ಕುರಿತು 54 ಪ್ರಕರಣಗಳು ದಾಖಲಾಗಿವೆ ಎಂದು ಜಿಲ್ಲಾ ಪೊಲೀಸ್ ವರಿಷ್ಠಾಧಿಕಾರಿ ಆರ್.ಎನ್.ಬಿಂದು ಮಣಿ ತಿಳಿಸಿದ್ದಾರೆ. ಯಾರಾದರೂ ಗಾಂಜಾ ಮಾರಾಟ, ಸರಬರಾಜು ಇಲ್ಲವೇ ಗಾಂಜಾ ಸೇವನೆ ಮಾಡುತ್ತಿರುವುದು ಕಂಡುಬಂದರೆ ಕೂಡಲೆ ತುರ್ತು ಸಹಾಯವಾಣಿ 112ಗೆ ಕರೆ ಮಾಡಿ ಮಾಹಿತಿ ನೀಡುವಂತೆ ಅವರು ಮನವಿ ಮಾಡಿದ್ದಾರೆ.

### ಕರ್ಕಶ ಶಬ್ದದ ಸೈಲೆನ್ಸರ್ ಅಳವಡಿಸಿದ್ದ ಜಿಪ್ಸಿ ವಾಹನ ವಶ



ಮಡಿಕೇರಿ, ಫೆ.3– ಸಾರ್ವಜನಿಕರಿಗೆ ಅನಾನುಕೂಲ ಆಗುವ ರೀತಿಯಲ್ಲಿ ಕರ್ಕಶ ಶಬ್ದದ ಸೈಲೆನ್ಸರ್ ಅಳವಡಿಸಿ ಚಾಲನೆ ಮಾಡಿದವನ ವಿರುದ್ಧ ಸಂಚಾರಿ ಪೊಲೀಸ್ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

ನಗರದಲ್ಲಿ ಜಿಪ್ಸಿ ವಾಹನದ (ಕೆ.ಎ.01 ಎನ್.ಜಿ. 2730) ಚಾಲಕ ಪ್ರಾದೇಶಿಕ ಸಾರಿಗೆ ಇಲಾಖೆಯ ಅನುಮತಿ ಪಡೆಯದೆ ಅದರ ಮೂಲ ಸ್ವರೂಪವನ್ನು ಬದಲಾಯಿಸಿದ್ದು ಮಾತ್ರವಲ್ಲದೇ ಕರ್ಕಶ ಶಬ್ದದ ಸೈಲೆನ್ಸರ್ ಅಳವಡಿಸಿ ರೇಸಿಂಗ್ ವೇಗದಲ್ಲಿ ಅಪಾಯಕಾರಿಯಾಗಿ ವಾಹನ ಚಾಲನೆ ಮಾಡುತ್ತಿದ್ದ. ಈ ಕುರಿತು ಸಂಚಾರಿ ಪೊಲೀಸ್ ಠಾಣೆಗೆ ಸಾರ್ವಜನಿಕರು ದೂರು ನೀಡಿದ್ದರು.

ಮೈತ್ರಿ ಹಾಲ್ ಸಮೀಪ ಫೀಲ್ಡ್ ಮಾರ್ಷಲ್ ಕೆ.ಎಂ. ಕಾರ್ಯಪ್ಪ ಕಾಲೇಜು ಮಾರ್ಗದಿಂದ ಕರ್ಕಶ ಶಬ್ದದೊಂದಿಗೆ ಅತಿ ವೇಗ ದಲ್ಲಿ ಜಿಪ್ಸಿ ವಾಹನ ಆಗಮಿಸಿದೆ. ಕೂಡಲೇ ಪೊಲೀಸರು ವಾಹನವನ್ನು ತಡೆದು ಚಾಲಕನ ವಿರುದ್ಧ ಪ್ರಕರಣ ದಾಖಲಿಸಿ ಜಿಪ್ಸಿಯನ್ನು ವಶಕ್ಕೆ ಪಡೆದುಕೊಂಡಿದ್ದಾರೆ.

### ಜಿ.ಎಂ.ಹೇಮಲತಾರಿಗೆ ಪಿಎಚ್‌ಡಿ ಪದವಿ

ಮಡಿಕೇರಿ ಫೆ.3–ಜಿಲ್ಲೆಯ ಕುಶಾಲನಗರದ ಜಿ.ಎಂ.ಹೇಮಲತ ಅವರಿಗೆ ದಾವಣಗೆರೆ ವಿಶ್ವವಿದ್ಯಾಲಯವು ಪಿಎಚ್.ಡಿ ಪದವಿ ನೀಡಿ ಗೌರವಿಸಿದೆ. ದಾವಣಗೆರೆ ವಿಶ್ವವಿದ್ಯಾಲಯ ಕನ್ನಡ ಅಧ್ಯಯನ ವಿಭಾಗದ ಪ್ರಾಧ್ಯಾಪಕ ಡಾ.ಎಚ್. ವಿಶ್ವನಾಥ್ ಮಾರ್ಗದರ್ಶನದಲ್ಲಿ "ವೀಣಾ ಶಾಂತೇಶ್ವರ ಮತ್ತು ದು.ಸರಸ್ವತಿಯವರ ಸಾಹಿತ್ಯದಲ್ಲಿ ಪ್ರತಿಭಟನಾತ್ಮಕ ನೆಲೆಗಳು" ಎಂಬ ವಿಷಯದ ಬಗ್ಗೆ ಮಹಾಪ್ರಬಂಧವನ್ನು ಮಂಡಿಸಿದ್ದರು. ಇತ್ತೀಚೆಗೆ ನಡೆದ ಘಟಿಕೋತ್ಸವದಲ್ಲಿ, ಗೌರವಾನ್ವಿತ ರಾಜ್ಯಪಾಲರ ಉಪಸ್ಥಿತಿಯಲ್ಲಿ ಹೇಮಲತ ಅವರಿಗೆ ಪಿಎಚ್.ಡಿ ಪದವಿ ಪ್ರಧಾನ ಮಾಡಲಾಗಿದೆ. ಈಕೆ ಗುಮ್ಮನಕೊಲ್ಲಿ, ಗ್ರಾಮದ ನಿವಾಸಿ ವಿಶಾಲಾಕ್ಷಮ್ಮ ಅವರ ಪುತ್ರಿ

# ನಾಳೆ ಬಹುರೂಪಿ ಕೃತಿ ಅನಾವರಣ



ಮಡಿಕೇರಿ, ಫೆ.3–ಹಲವು ಲೇಖನಗಳ ಸಂಕಲನ 'ಬಹುರೂಪಿ'ಯ ಅನಾವರಣ ಕಾರ್ಯಕ್ರಮ ಫೆ.5ರ ಬೆಳಿಗ್ಗೆ 10 ಗಂಟೆಗೆ ನಗರದ ಗಾಂಧಿ ಭವನದಲ್ಲಿ ನಡೆಯಲಿದೆ.

ಸುಮಾರು 56 ಲೇಖನಗಳನ್ನು ಒಳಗೊಂಡ 300 ಪುಟಗಳ ಬಹುರೂಪಿ ಪುಸ್ತಕದಲ್ಲಿ ಎ.ಕೆ.ಸುಬ್ಬಯ್ಯ ಅವರು 2018ರಲ್ಲಿ ತಮಗೆ ಬರೆದು ಕೊಟ್ಟಿರುವ ವಿಚಾರವನ್ನು ಪುಸ್ತಕದ ಆರಂಭದಲ್ಲೆ ಬಳಸಿಕೊಳ್ಳಲಾಗಿದೆ. ಪುಸ್ತಕದ ಮುನ್ನುಡಿಯನ್ನು ಕನ್ನಡ ವಿಶ್ವವಿದ್ಯಾನಿಲಯದ ಕುಲಸಚಿವ ತಂಬಂಡ ವಿಜು ಪೂಣಚ್ಚ ಬರೆದಿದ್ದಾರೆ. ಬೆನ್ನುಡಿಯನ್ನು ವಿಮರ್ಶಕ ಓ.ಎಲ್.ನಾಗಭೂಷಣ ಸ್ವಾಮಿ ಬರೆದಿದ್ದಾರೆ ಎಂದು ಲೇಖಕ ಅಲ್ಲಾರಂಡ ವಿಠಲ ನಂಜಪ್ಪ ಸುದ್ದಿಗೋಷ್ಠಿಯಲ್ಲಿ ಮಾಹಿತಿ ನೀಡಿದರು.

ಬಹುರೂಪಿಯ ಮೊದಲ ಪ್ರತಿಯನ್ನು ಎ.ಕೆ.ಸುಬ್ಬಯ್ಯ ಅವರ ಪುತ್ರ ಅಜ್ಜಿಕುಟ್ಟೀರ ನರೇನ್ ಕಾರ್ಯಪ್ಪ ಅವರಿಗೆ ನೀಡಲಾಗುತ್ತದೆ. ಎಕೆಎಸ್ ಅವರ ಮತ್ತೋರ್ವ ಪುತ್ರ ಶಾಸಕ ಎ.ಎಸ್.ಪೊನ್ನಣ್ಣ ಪಾಲ್ಗೊಳ್ಳಲಿದ್ದಾರೆ ಎಂದರು. ಮುಖ್ಯ ಅತಿಥಿಗಳಾಗಿ ಪಾಲ್ಗೊಳ್ಳಲಿರುವ ಸಾಹಿತಿಗಳಾದ ಕೆ.ಪಿ.ಬಾಲಸುಬ್ರಮಣ್ಯ, ಹಿರಿಯ ಪತ್ರಕರ್ತರಾದ ಯು.ಎಂ.ಪೂವಯ್ಯ, ಮೈಸೂರಿನ ಬಿ.ಆರ್.ರಂಗಸ್ವಾಮಿ, ಸಂಸ್ಕೃತಿ ಚಿಂತಕ ಪ್ರೊ. ಟಿ.ರಂಗಪ್ಪ ಮಾತನಾಡಲಿದ್ದಾರೆ ಎಂದು ಹೇಳಿದರು.

ಕೊಡವ ಸಾಹಿತ್ಯಕ್ಕೆ, ಅದರ ಪ್ರಕಟಣೆಗೆ ಶ್ರಮಿಸುತ್ತಿರುವ ಯು.ಎಂ.ಪೂವಯ್ಯ, ನಿವೃತ್ತ ಪ್ರಾಂಶುಪಾಲೆ ಕಲ್ಲು ಮಾಡಂಡ ಸರಸ್ವತಿ, ಕೊಡವ ತಕ್ಕ್ ಎಳ್ತ್ ಕಾರಡ ಕೂಟದ ಚೆಂಬಾಂಡ ಶಿವಿ ಭೀಮಯ್ಯ, ಕೊಡವ ಮಕ್ಕಡ ಕೂಟದ ಅಧ್ಯಕ್ಷ ಬೊಳ್ಳಜಿರ ಅಯ್ಯಪ್ಪ, ಶ್ರೀ ಕೃಷ್ಣ ಕಂಪ್ಯೂಟರ್ಸ್‌ನ ಉಣ್ಣಿಕೃಷ್ಣ ಅವರನ್ನು ಗೌರವಿಸಲಾಗುವುದು ಎಂದು ತಿಳಿಸಿದರು.

# ಪ್ರಶಸ್ತಿಗೆ ಅರ್ಜಿ ಆಹ್ವಾನ

**ಮಡಿಕೇರಿ:** ರಾಜ್ಯ ಬಾಲವಿಕಾಸ ಅಕಾಡೆಮಿಯಿಂದ ರಾಜ್ಯ, ರಾಷ್ಟ್ರ ಮತ್ತು ಅಂತಾರಾಷ್ಟ್ರಮಟ್ಟದಲ್ಲಿ ವಿಶೇಷ ಸಾಧನೆಗೈದ 18 ವರ್ಷದೊಳಗಿನ ಮಕ್ಕಳಿಂದ ಬಾಲ ಗೌರವ ಪ್ರಶಸ್ತಿಗೆ ಅರ್ಜಿ ಆಹ್ವಾನಿಸಲಾಗಿದೆ.

ಮಕ್ಕಳ ಕ್ರೀಡೆ, ಸಂಗೀತ, ನೃತ್ಯ, ಬಹುಮುಖ ಪ್ರತಿಭೆ, ನಟನೆ, ಚಿತ್ರಕಲೆ, ಹಾಗೂ ವಿಜ್ಞಾನ ಮತ್ತು ಸಂಶೋಧನೆಗಳಲ್ಲಿ ಯಾವು ದಾದರೂ ಒಂದು ವಿಶೇಷ ಕ್ಷೇತ್ರ ಗಳಲ್ಲಿ ಅಸಾಧಾರಣ ಸಾಧನೆ ಮಾಡಿ ಪ್ರಶಸ್ತಿ ಪಡೆದ ಪುರಸ್ಕೃತ ಮಗುವಾಗಿರಬೇಕು. ಇಂಥ ಮಕ್ಕಳು ಅಕಾಡೆಮಿ ಪ್ರಶಸ್ತಿಗಾಗಿ ತಮ್ಮ ಸ್ವಯಂ ದೃಢೀಕೃತ ನಕಲು ದಾಖಲೆಗಳೊಂದಿಗೆ ಹಾಗೂ ಸ್ವವಿವರ ಒಳಗೊಂಡ ಮನವಿ ಯೊಂದಿಗೆ ಅರ್ಜಿಯನ್ನು ಫೆ.20 ರೊಳಗೆ ಅಕಾಡೆಮಿಯ ಕೇಂದ್ರ ಕಚೇರಿ ವಿಳಾಸಕ್ಕೆ ಅಂಚೆ ಮುಖಾಂತರ ತಲುಪುವಂತೆ ಕಳುಹಿಸುವುದು. ಅರ್ಜಿಯನ್ನು ಉಪ ನಿರ್ದೇಶಕರ ಕಚೇರಿ, ಮಹಿಳಾ ಮತು ಮಕ್ಕಳ ಅಭಿವೃದ್ಧಿ ಇಲಾಖೆಯಲ್ಲಿ ಪಡೆಯಬಹುದಾಗಿದೆ. ಹೆಚ್ಚಿನ ಮಾಹಿತಿಗಾಗಿ ದೂರವಾಣಿ ಸಂಖ್ಯೆ: 08272–228010ಗೆ ಸಂಪರ್ಕಿಸ ಬಹುದು.

# ಹಾಕಿ ಪಂದ್ಯಾವಳಿ: ಆಂಗ್ಲ ಮಾಧ್ಯಮ ವಿದ್ಯಾರ್ಥಿಗಳ ಸಾಧನೆ



ನಾಪೋಕ್ಲು, ಫೆ.3 (ದುಗ್ಗಳ)–ಇಲ್ಲಿಗೆ ಸಮೀಪದ ಕಕ್ಕಬೆ ಕೇಂದ್ರ ಪ್ರಾಥಮಿಕ ಆಂಗ್ಲ ಮಾಧ್ಯಮ ಶಾಲೆಯ ವಿದ್ಯಾರ್ಥಿಗಳು ಹಾಕಿ ಪಂದ್ಯಾವಳಿಯಲ್ಲಿ ಉತ್ತಮ ಸಾಧನೆ ಮಾಡಿ ಪ್ರಶಸ್ತಿಯನ್ನು ಪಡೆದುಕೊಂಡಿದ್ದಾರೆ.

ಗೋಣಿಕೊಪ್ಪದಲ್ಲಿ ನಡೆದ ಲಯನ್ಸ್ ಸಂಸ್ಥೆ ಆಯೋಜಿಸಿದ್ದ 6(ಎ) ಸೈಡ್ ಹಾಕಿ ಪಂದ್ಯಾವಳಿಯಲ್ಲಿ ಈ ಶಾಲೆಯ ವಿದ್ಯಾರ್ಥಿಗಳು ದ್ವಿತೀಯ ಸ್ಥಾನವನ್ನು ಪಡೆದು ಪ್ರಶಸ್ತಿಯನ್ನು ತಮ್ಮ ಮುಡಿಗೇರಿಸಿಕೊಂಡಿದ್ದಾರೆ. ವಿದ್ಯಾರ್ಥಿಗಳ ಸಾಧನೆಗೆ ಶಾಲೆಯ ಆಡಳಿತ ಮಂಡಳಿ ಹಾಗೂ ಶಿಕ್ಷಕ ವೃಂದದವರು ಪ್ರೋತ್ಸಾಹ ನೀಡಿದ್ದರು.

# ಆಹಾರ ಭದ್ರತೆ, ಸುರಕ್ಷತೆ ಕಾಯ್ದೆ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ

## ಅಧಿಕಾರಿಗಳಿಗೆ ಆಯೋಗದ ಅಧ್ಯಕ್ಷರ ಎಚ್ಚರಿಕೆ

ಚಾಮರಾಜನಗರ, ಫೆ. 3–ಜಿಲ್ಲೆಯಲ್ಲಿ ಆಹಾರ ಭದ್ರತೆ ಹಾಗೂ ಆಹಾರ ಸುರಕ್ಷತಾ ಕಾಯ್ದೆ ನಿಯಮಗಳ ಉಲ್ಲಂಘನೆ ವಿರುದ್ಧ ಕಠಿಣ ಕ್ರಮ ಜರುಗಿಸಲಾಗುವುದು ಎಂದು ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ. ಹೆಚ್. ಕೃಷ್ಣ ಎಚ್ಚರಿಕೆ ನೀಡಿದ್ದಾರೆ.

ಸಾರ್ವಜನಿಕ ಆಹಾರ ವಿತರಣಾ ವ್ಯವಸ್ಥೆಯಡಿ ಬಡವರು, ದುರ್ಬಲರು, ಮಹಿಳೆಯರು, ಅಂಗವಿಕಲರು, ವೃದ್ಧರು ಸೇರಿದಂತೆ ಪ್ರತಿಯೊಬ್ಬರಿಗೂ ಸಮರ್ಪಕ ಆಹಾರ ಒದಗಿಸುವುದು ಕೇಂದ್ರ ಹಾಗೂ ರಾಜ್ಯ ಸರ್ಕಾರಗಳ ಪ್ರಮುಖ ಉದ್ದೇಶ. ಈ ಕಾರ್ಯಕ್ರಮಗಳ ಪರಿಶೀಲನೆಗಾಗಿ ವಿವಿಧ ಜಿಲ್ಲೆಗಳಲ್ಲಿ ಪ್ರವಾಸ ಕೈಗೊಂಡಿರುವುದಾಗಿ ಪತ್ರಿಕಾಗೋಷ್ಠಿಯಲ್ಲಿ ತಿಳಿಸಿದರು.


ರಾಜ್ಯ ಆಹಾರ ಆಯೋಗದ ಅಧ್ಯಕ್ಷ ಡಾ. ಹೆಚ್. ಕೃಷ್ಣ ಅಧಿಕರಿಗಳೊಂದಿಗೆ ಪ್ರಗತಿ ಪರಿಶೀಲನಾ ಸಭೆ ನಡೆಸಿದರು.

ಅಂಗನವಾಡಿ ಮೂಲಕ ಗರ್ಭಿಣಿಯರಿಗೆ, ತಾಯಂದಿರಿಗೆ ಪೌಷ್ಠಿಕ ಆಹಾರವನ್ನು ತಲುಪಿಸಬೇಕು. ಯಾವುದೇ ಕಾರಣಕ್ಕೂ ಪೋಷಣಾ ಹಕ್ಕುಗಳ ಉಲ್ಲಂಘನೆ ಆಗ ಬಾರದು. ಆಸ್ಪತ್ರೆಗಳಲ್ಲಿ ರೋಗಿಗಳಿಗೆ ಮತ್ತು ವೃದ್ಧಾಶ್ರ ಮಗಳಲ್ಲಿ ಗುಣಮಟ್ಟದ ಆಹಾರ ನೀಡಬೇಕು. ಪ್ರತಿಯೊಬ್ಬರ ಅಹಾರದ ಹಕ್ಕುಗಳಿಗೂ ಕಾನೂನಿ ನಾತ್ಮಕ ರಕ್ಷಣೆ ಇದೆ. ಬಡವರಿಗೆ ಹಾಗೂ ದುರ್ಬಲ ವರ್ಗದವರಿಗೆ ಯಾವುದೇ ಕಾರಣಕ್ಕೂ ಅನ್ಯಾಯವಾಗ ಬಾರದು. ಈ ರೀತಿ ಪ್ರಕರಣಗಳೇನಾದರೂ ಕಂಡುಬಂದಲ್ಲಿ ಅಧಿಕಾರಿಗಳ ವಿರುದ್ಧ ಕಠಿಣ ಕ್ರಮ ಜರುಗಿಸುವುದಾಗಿ ಹೇಳಿದರು.

ತಾವು ವಿವಿಧ ಜಿಲ್ಲೆಗಳಿಗೆ ಭೇಟಿ ನೀಡಿದ ಸಂದರ್ಭದಲ್ಲಿ ಆಹಾರ ಪೂರೈಕೆ ಸಂಬಂಧ ಲೆಕ್ಕ ಪರಿಶೋಧನೆ, ಗ್ರಾಮಸಭೆ ಹಾಗೂ ವಾರ್ಡ್ ಸಭೆಗಳಲ್ಲಿ ದಾಖಲಾಗುವ ದೂರು ಗಳು ಹಾಗೂ ಆಹಾರ ಉಗ್ರಾಣಗಳಲ್ಲಿ ಸ್ವಚ್ಛತೆ ಸೇರಿದಂತೆ ಮೂಲಸೌಲಭ್ಯಗಳ ಪರಿಶೀಲನೆ, ಅರ್ಹರಿಗೆ ಪಡಿತರ ಚೀಟಿ ವಿತರಣೆ, ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ಸಮರ್ಪಕ ವಿತರಣೆ, ಬಯೋಮೆಟ್ರಿಕ್ ನಿರ್ವಹಣೆಯಲ್ಲಿ ಸಾರ್ವಜನಿಕ ದೂರುಗಳನ್ನು ಆಯೋಗ ಪರಿಶೀಲಿಸುತ್ತಿದೆ. ಸಮಸ್ಯೆಗಳನ್ನು ಆದ್ಯತೆ ಮೇರೆಗೆ ಪರಿಹರಿಸಲು ಮುಂದಾಗುವಂತೆ ಅಧಿಕಾರಿಗಳಿಗೆ ಸೂಚಿಸಲಾಗಿದೆ ಎಂದರು.

ಶಾಲೆಗಳಲ್ಲಿ ಮಧ್ಯಾಹ್ನ ಬಿಸಿಯೂಟ ಉತ್ತಮವಾಗಿರಬೇಕು. ಅದಕ್ಕಾಗಿ ಗುಣಮಟ್ಟದ ಅಕ್ಕಿ, ತರಕಾರಿ, ಕಾಳು, ಮೊಟ್ಟೆಯನ್ನೇ ಖರೀದಿಸಬೇಕು. ಬಿಸಿಯೂಟವನ್ನು ಮೆನು ಪ್ರಕಾರವೇ ನೀಡಬೇಕು. ಈ ಬಗ್ಗೆ ಮಕ್ಕಳಿಂದ ಯಾವುದೇ ದೂರುಗಳು ಬರಬಾರದು. ಬಿಸಿಯೂಟದ ಹಣ ದುರುಪಯೋಗವಾಗದಂತೆ ನೋಡಿಕೊಳ್ಳಬೇಕು. ಅಂಗನವಾಡಿಗಳಲ್ಲಿ ಮಕ್ಕಳಿಗೆ ಪೌಷ್ಠಿಕಾಂಶಯುಕ್ತ ಆಹಾರವನ್ನು ನೀಡಬೇಕು. ಶಾಲೆ, ವಿದ್ಯಾರ್ಥಿನಿಲಯ, ಅಂಗನವಾಡಿಗಳಲ್ಲಿ ಗುಣಮಟ್ಟದ ಆಹಾರ ಶುದ್ಧ ಕುಡಿಯುವ ನೀರು, ಸ್ವಚ್ಛತೆ, ಶೌಚಾಲಯ ನಿರ್ವಹಣೆ ಸಮರ್ಪಕ ವಾಗಿರುವಂತೆ ಅಧಿಕಾರಿಗಳಿಗೆ ನಿರ್ದೇಶನ ನೀಡಲಾಗಿದೆ ಎಂದರು.

ಆಹಾರ ಮತ್ತು ನಾಗರಕ ಸರಬರಾಜು ಇಲಾಖೆಯ ಉಪನಿರ್ದೇಶಕಿ ಡಾ. ವಸುಂಧರಾ ಹೆಗಡೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆಯ ನಿರೂಪಣಾ ಅಧಿಕಾರಿ ಮಂಜುಳಾ ದೇವಿ, ಜಿಲ್ಲಾ ಆರೋಗ್ಯ ಮತ್ತು ಕುಟುಂಬ ಕಲ್ಯಾಣಾಧಿಕಾರಿ ಡಾ.ಎಸ್.ಚಿದಂಬರ ಸೇರಿದಂತೆ ಜಿಲ್ಲಾಮಟ್ಟದ ಅಧಿಕಾರಿಗಳು ಅಧ್ಯಕ್ಷರೊಂದಿಗೆ ಉಪಸ್ಥಿತದ್ದರು.

# ಚಾ.ನಗರ ಜಿಲ್ಲೆಗೆ ಈ ತಿಂಗಳಲ್ಲಿ ಹೆಚ್ಚುವರಿ 50 ಬಸ್

ಯಳಂದೂರು, ಫೆ.3– ತಾಲೂಕು ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿಯ ಅಧ್ಯಕ್ಷ ಪ್ರಭುಪ್ರಸಾದ್ ಅಧ್ಯಕ್ಷತೆಯಲ್ಲಿ ತಾಲೂಕು ಮಟ್ಟದ ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಪ್ರಗತಿ ಪರಿಶೀಲನಾ ಸಭೆ ನಡೆಯಿತು.


ಪ್ರಭುಪ್ರಸಾದ್ ತಾಲೂಕು ಪ್ರಗತಿ ಪರಿಶೀಲನಾ ಸಭೆ ನಡೆಸಿದರು

ಗೃಹಲಕ್ಷ್ಮಿ ಫಲಾನುಭವಿಗಳು ಈಗಾಗಲೇ ತಾಲೂಕಿನಲ್ಲಿ 22,641 ನೊಂದಣಿಯಾಗಿದ್ದಾರೆ. ಸೆ.ತಿಂಗಳಲ್ಲಿ 22031 ಮಂದಿ ಫಲಾನುಭವಿಗಳ ಖಾತೆಗೆ ಹಣ ಜೋಡಣೆಯಾಗಿದೆ. ಗೃಹಜ್ಯೋತಿ ಯೋಜನೆ ಅಡಿಯಲ್ಲಿ 21302 ಫಲಾನುಭವಿಗಳಿದ್ದಾರೆ. ಅದರಲ್ಲಿ 20,512 ಮಂದಿ ವಿದ್ಯುತ್ ಸಂಪರ್ಕ ಪ್ರಯೋಜನ ಪಡೆದಿದ್ದಾರೆ. ಉಳಿದಂತೆ 79 ಮಂದಿ ಉಚಿತ ವಿದ್ಯುತ್ ಸಂಪರ್ಕಕ್ಕೆ ನೊಂದಣಿಯಾಗಿಲ್ಲ ಅದರಲ್ಲಿ ಕೆಲವರು ವಲಸೆ ಹೋಗಿದ್ದಾರೆ ಇನ್ನು ಕೆಲವರು ನೊಂದಾಯಿಸಿಲ್ಲ ಎಂದರು.

ಅನ್ನಭಾಗ್ಯ ಯೋಜನೆ ಅಡಿಯಲ್ಲಿ ಒಟ್ಟು 2199 ಅದರಲ್ಲಿ ಎಪಿಎಲ್ ಬಿಪಿಎಲ್ ಸೇರಿ ಒಟ್ಟು 20204 ಮಂದಿ ಪ್ರಯೋಜನ ಪಡೆದುಕೊಳ್ಳುತ್ತಿದ್ದಾರೆ. 800 ಮಂದಿ ನಿಧಾನವಾಗಿರುವರು ಹಾಗೂ ಬೇರೆ ಬೇರೆ ಜಿಲ್ಲೆಗಳಿಗೆ ವಲಸೆ ಹೋಗಿದ್ದಾರೆ ಎಂದು ತಿಳಿಸಿದರು. ಶಕ್ತಿ ಯೋಜನೆಯಡಿ ತಾಲೂಕಿನ ಶಾಲಾ ಕಾಲೇಜು ಮಕ್ಕಳ ಸಂಚಾರಕ್ಕಾಗಿ ಬಳಕೆ ಹಾಗೂ ಸಂಜೆ ಸಮಯದಲ್ಲಿ ಹೆಚ್ಚುವರಿಯಾಗಿ ಬಸ್ ಬಿಡುವಂತೆ ಯೋಜನೆ ಅಧ್ಯಕ್ಷರು ಕೆಎಸ್‌ಆರ್‌ಟಿಸಿ ಡಿಪೋ ವ್ಯವಸ್ಥಾಪಕರಿಗೆ ತಿಳಿಸಿದ್ದಾರೆ. ಈ ತಿಂಗಳಲ್ಲಿ ಜಿಲ್ಲೆಗೆ ಹೆಚ್ಚುವರಿಯಾಗಿ 50 ಬಸ್‌ಗಳನ್ನು ಬಿಡಲಿದ್ದಾರೆ ಆನಂತರ ಶಾಲಾ ಮಕ್ಕಳಿಗೆ ತೊಂದರೆ ಆಗದಂತೆ ಬಸ್‌ಗಳನ್ನು ಬಿಡಲಾಗುತ್ತದೆ ಎಂದು ತಿಳಿಸಿದರು.

ಕೆಲ ಫಲಾನುಭವಿಗಳು ಉಚಿತ ವಿದ್ಯುತ್ ಸಂಪರ್ಕ ನೀಡಲ್ಲ ಎಂದು ದೂರು ನೀಡಿದ್ದಾರೆ. ಆದ್ದರಿಂದ ಇಲಾಖೆಗೆ ಅರ್ಜಿ ಸಲ್ಲಿಸಿದರೆ ಉಚಿತ ವಿದ್ಯುತ್ ಸಂಪರ್ಕ ನೀಡಲಾಗುವುದು ಎಂದರು. ಗೃಹಲಕ್ಷ್ಮಿ ಯೋಜನೆ ಅಡಿ ನೊಂದಣಿಯಾಗಿ ಹಣ ಜಮೆಯಾಗದೇ ಇರುವ ಫಲಾನುಭವಿಗಳಿಗೆ ಅಂಗನವಾಡಿ ಕಾರ್ಯಕರ್ತೆಯರ ಮುಖಾಂತರ ಫಲಾನುಭವಿಗಳನ್ನು ಸಂಪರ್ಕಿಸಿ ನೊಂದಣಿ ಮಾಡಿಸಲು ಕ್ರಮ ವಹಿಸಲಾಗುವುದು ಎಂದು ಸಿಡಿಪಿಓ ಜಯಶೀಲ ತಿಳಿಸಿದರು

ಗ್ಯಾರಂಟಿ ಯೋಜನಾ ಅಧ್ಯಕ್ಷ ಪ್ರಭುಪ್ರಸಾದ್ ಮಾತನಾಡಿ, ಸರ್ಕಾರ ಜನರಿಗೆ ಅನುಕೂಲವಾಗುವಂತೆ ಇಷ್ಟೆಲ್ಲ ಉಚಿತವಾಗಿ ಐದು ಗ್ಯಾರಂಟಿ ಯೋಜನೆ ನೀಡಲಾಗುತ್ತಿದೆ ಆದರೆ ಇಲಾಖೆ ಅಧಿಕಾರಿಗಳು ಪ್ರತಿಯೊಂದು ಕುಟುಂಬಕ್ಕೂ ಯೋಜನೆ ಸಿಗುವಂತೆ ಕ್ರಮ ವಹಿಸಬೇಕು ಎಂದು ತಿಳಿಸಿದರು. ತಾಪಂ ಇಓ ಉಮೇಶ್, ಗ್ಯಾರಂಟಿ ಸದಸ್ಯರಾದ ಶಿವಣ್ಣ ನಂಜುಂಡಸ್ವಾಮಿ, ಭಾಗ್ಯ, ಅನಿತಾ ಶಿವರಾಜು ವಿರೂಪಾಕ್ಷ ಮಂಜುನಾಥ್ ವಿಶ್ವ ಸೇರಿದಂತೆ 5 ಇಲಾಖೆ ಅಧಿಕಾರಿಗಳು ಹಾಜರಿದ್ದರು.

# ವಿಜೃಂಭಣೆಯ ಶ್ರೀ ಲಕ್ಷ್ಮೀನಾರಾಯಣಸ್ವಾಮಿ ರಥೋತ್ಸವ



ಕೊಳ್ಳೇಗಾಲ, ಫೆ.3– ಇಲ್ಲಿನ ಶ್ರೀ ಲಕ್ಷ್ಮೀನಾರಾಯಣ ಸ್ವಾಮಿ ರಥೋತ್ಸವ ಮಂಗಳವಾರ ಸಾವಿರಾರು ಭಕ್ತರ ಸಮ್ಮುಖದಲ್ಲಿ ವಿಜೃಂಭಣೆಯಿಂದ ಜರುಗಿತು.

ಪಟ್ಟಣದ ಕಾವೇರಿ ರಸ್ತೆಯಲ್ಲಿರುವ ಶ್ರೀ ಲಕ್ಷ್ಮೀ ನಾರಾಯಣ ಸ್ವಾಮಿ ದೇವಸ್ಥಾನದಲ್ಲಿ ವಿಶೇಷ ಪೂಜೆ ನಡೆಸಿ ಮೀನಾ ಲಗ್ನದಲ್ಲಿ ನಡೆದ ರಥೋತ್ಸವಕ್ಕೆ ಶಾಸಕ ಎ.ಆರ್.ಕೃಷ್ಣಮೂರ್ತಿ ಚಾಲನೆ ನೀಡಿದರು. ಮಂಗಳವಾದ್ಯದೊಂದಿಗೆ ರಾಜಬೀದಿಗಳಲ್ಲಿ ರಥೋತ್ಸವ ನಡೆದಾಗ ದಾಸರುಗಳು ಜಾಗಟೆ ಹಾಗೂ ಶಂಖನಾದ ಮೊಳಗಿಸಿದರು.

ಮಾಂಬಳ್ಳಿಯ ದಾಸರು ಪಾರ್ವತಿ ಸತ್ತಿಗೆಯನ್ನು ಪೂಜೆ ಸಲ್ಲಿಸಿ ಆಗಮಿಸಿ ರಥೋತ್ಸವದಲ್ಲಿ ಪಾಲ್ಗೊಂಡಿದ್ದರು. ನೆರೆದಿದ್ದ ಭಕ್ತರು ಹರಕೆ ಹೊತ್ತು ಹಣ್ಣು ಜವನ ಎಸೆದರು. ನಂತರ ದೇವಸ್ಥಾನಕ್ಕೆ ತೆರಳಿ ಪೂಜೆ ಸಲ್ಲಿಸಿ, ಮಹಾಮಂಗಳಾರತಿ ಸ್ವೀಕರಿಸಿದರು. ರಥೋತ್ಸವದಲ್ಲಿ ಸೇವಾರ್ಥದಾರರು ಬಾಳೆ ಹಣ್ಣು, ಮಜ್ಜಿಗೆ, ಪಾನಕ ಹಾಗೂ ಕೊಸಂಬರಿಯನ್ನು ಭಕ್ತರಿಗೆ ವಿತರಿಸಿದರು. ದೇವಸ್ಥಾನದ ಪ್ರಧಾನ ಅರ್ಚಕರು ಶೇಷಾದ್ರಿ ಭಟ್ಟರು, ಸುದರ್ಶನ್ ನಡೆಸಿದರು. ವೀರಾಂಜನೇಯಸ್ವಾಮಿ ದೇವಸ್ಥಾನದ ಅರ್ಚಕ ಟಿ.ವಿ.ಎಸ್.ರಾಘವನ್, ನಂದಕುಮಾರ್ ಪೂಜಾದಿ ಕಾರ್ಯಗಳ ನೇತೃತ್ವ ವಹಿಸಿದ್ದರು.

ಗ್ಯಾರಂಟಿ ಯೋಜನೆಗಳ ಅನುಷ್ಠಾನ ಸಮಿತಿ ಜಿಲ್ಲಾಧ್ಯಕ್ಷ ಚಂದ್ರು, ಮಾಜಿ ಸಚಿವ ಎನ್.ಮಹೇಶ್, ಮಾಜಿ ಶಾಸಕರಾದ ಜಿ.ಎನ್.ನಂಜುಂಡಸ್ವಾಮಿ, ಎಸ್.ಬಾಲರಾಜು, ಅಪರ ಪೊಲೀಸ್ ವರಿಷ್ಠಾಧಿಕಾರಿ ಶಶಿಧರ್, ತಹಸೀಲ್ದಾರ್ ಬಸವರಾಜು, ನಗರಸಭೆ ಪೌರಾಯುಕ್ತರಾದ ರುದ್ರಮ್ಮ ಶರಣಯ್ಯ, ಮಾಜಿ ಸದಸ್ಯರು, ಮುಖಂಡರಾದ ಕಂದಹಳ್ಳಿ ನಂಜುಂಡಸ್ವಾಮಿ, ಕೊಪ್ಪಾಳಿ ಮಹದೇವ ನಾಯಕ ಹಾಗೂ ಭಕ್ತರು ಹೆಚ್ಚಿನ ಸಂಖ್ಯೆಯಲ್ಲಿ ಸೇರಿದ್ದರು. ರಥೋತ್ಸವದಲ್ಲಿ ಡಿವೈಎಸ್ಪಿ ಧರ್ಮೇಂದ್ರ ನೇತೃತ್ವದಲ್ಲಿ ಸೂಕ್ತ ಬಂದೋಬಸ್ತ್ ಒದಗಿಸಲಾಗಿತ್ತು.

# ಹಾಡಿನ ಬಿಡುಗಡೆ ಮುಖಾಂತರ ಭ್ರಮರಾಂಬ ಚಿತ್ರಮಂದಿರದ ಅಮೃತ ಮಹೋತ್ಸವ ಸಮಾರಂಭ

## ಹೂಮಳೆ ಸುರಿಸುವ ಮೂಲಕ ಧನ್ವೀರ್‌ಗೆ ಅದ್ದೂರಿ ಸ್ವಾಗತ, ಸಂಭ್ರಮಿಸಿದ ಅಭಿಮಾನಿಗಳು

ಚಾಮರಾಜನಗರ, ಫೆ.3–ಧನ್ವೀರ್ ಗೌಡ ಹಾಗೂ ಸಂಜನಾ ಆನಂದ್ ನಟನೆಯ 'ಹಯಗ್ರೀವ' ಚಿತ್ರದ 'ಮೊದಲನೆಯ ಮಾತು' ಹಾಡಿನ ಬಿಡುಗಡೆ ಮೂಲಕ ಭ್ರಮರಾಂಬ ಚಿತ್ರಮಂದಿರದ 75ನೇ ವಾರ್ಷಿಕೋತ್ಸವ ಕಾರ್ಯಕ್ರಮ ನಡೆಯಿತು.

ಸಮೃದ್ಧಿ ಮಂಜುನಾಥ್ ಅವರ ಕೆವೆಸಿ ಪ್ರೊಡಕ್ಷನ್ಸ್ ಅಡಿಯಲ್ಲಿ ನಿರ್ಮಾಣವಾದ ಈ ಚಿತ್ರವನ್ನು ರಘುಕುಮಾರ್ ಅವರು ನಿರ್ದೇಶಿಸಿದ್ದಾರೆ. 'ಹಯಗ್ರೀವ' ಚಿತ್ರದ ಟೀಸರ್ ಬಿಡುಗಡೆಯಾಗಿ ಪ್ರೇಕ್ಷಕರ ಗಮನ ಸೆಳೆದಿದೆ. ಚಿತ್ರದಲ್ಲಿ ಧನ್ವೀರ್ ಗೌಡ ಮಾಸ್ ಲುಕ್‌ನಲ್ಲಿ ಕಾಣಿಸಿಕೊಂಡಿದ್ದಾರೆ. ಚಿತ್ರಮಂದಿರಕ್ಕೆ ಧನ್ವೀರ್ ಆಗಮಿಸುತ್ತಿದ್ದಂತೆ ಅಭಿಮಾನಿಗಳು ಪಟಾಕಿ ಸಿಡಿಸಿ, ಪುಷ್ಪವೃಷ್ಟಿ ಮೂಲಕ ಅದ್ದೂರಿ ಸ್ವಾಗತ ಕೋರಿ ಬರಮಾಡಿಕೊಂಡರು. ಅಭಿಮಾನಿಗಳು ಡಿ ಬಾಸ್, ಡಿಬಾಸ್ ಘೋಷಣೆ ಕೂಗಿ ಸಂಭ್ರಮಿಸಿದರು.



ಕಾರ್ಯಕ್ರಮದಲ್ಲಿ ಭಾಗವಹಿಸಿದ ನಟ ಧನ್ವೀರ್ ಗೌಡ, ನಾಯಕ ನಟಿ ಸಂಜನಾ ಆನಂದ್, ನಿರ್ದೇಶಕ ರಘುಕುಮಾರ್ ಮಾತನಾಡಿ, ಹಯಗ್ರೀವ್ ಚಿತ್ರ ಚೆನ್ನಾಗಿ ಮೂಡಿಬಂದಿದ್ದು ಇದೊಂದು ಉತ್ತಮ ಚಿತ್ರವಾಗಿದೆ ಸುಮಧುರ ಹಾಡುಗಳು, ಫೈಟ್, ಡೈಲಾಗ್, ಕಾಮಿಡಿ ಒಳಗೊಂಡಿದೆ ಫೆ.27 ರಂದು ಸಿನಿಮಾ ಬಿಡುಗಡೆಯಾಗಲಿದ್ದು, ಚಿತ್ರಮಂದಿರಕ್ಕೆ ಬಂದು ನೋಡುವ ಮೂಲಕ ಜಿಲ್ಲೆಯ ಜನತೆ ಪ್ರೋತ್ಸಾಹಿಸಬೇಕು ಎಂದು ಮನವಿ ಮಾಡಿದರು.

ಚಿತ್ರಮಂದಿರದ ಮಾಲೀಕ ರೇವಂತ್ ದೇವರು ಮಾತನಾಡಿ, ಧನ್ವೀರ್ ಗೌಡ ಹಾಗೂ ಸಂಜನಾ ಆನಂದ್ ನಟನೆಯ 'ಹಯಗ್ರೀವ' ಚಿತ್ರದ 'ಮೊದಲನೆಯ ಮಾತು' ಹಾಡಿನ ಬಿಡುಗಡೆ ನಮ್ಮ ಚಿತ್ರಮಂದಿರದಲ್ಲಿ ಮಾಡಿರುವುದು ತುಂಬಾ ಖುಷಿಯಾಗಿದೆ. ಚಿತ್ರವು ಶತಮಾನೋತ್ಸವ ಆಚರಿಸಲಿ ಎಂದು ಶುಭ ಕೋರಿದರು. ನಮ್ಮ ತಾತನವರಾದ ಮಾಂಬಳ್ಳಿ ಸಾಹುಕಾರ್ ಎಂ.ಎಸ್ .ರೇವಣ್ಣ ದೇವರು ಅವರು 1950 ರಲ್ಲಿ ಚಿತ್ರಮಂದಿರ ನಿರ್ಮಾಣ ಮಾಡಿದರು. ಚಿತ್ರಮಂದಿರ ನವೀಕರಣ, ಅಭಿವೃದ್ಧಿಗೆ ಮತ್ತೋರ್ವ ತಾತ ವಕೀಲರಾದ ಕೊಳ್ಳೇಗಾಲ ಎಸ್ ಪಿ.ಪಶುಪತಿ ಅವರ ಕೊಡುಗೆ ಅಪಾರವಾಗಿದೆ. ಹಲವಾರು ಚಿತ್ರಗಳು ಯಶಸ್ವಿ ಪ್ರದರ್ಶನ ಕಂಡಿದೆ. ಅದಕ್ಕಾಗಿ ನಮ್ಮ ಕುಟುಂಬದ ವತಿಯಿಂದ ಜಿಲ್ಲೆಯ ಜನತೆಯ, ಸಿನಿ ಪೇಕ್ಷಕರಿಗೆ ಈ ಮೂಲಕ ಅಭಿನಂದಿಸಿದರು. ಚಿತ್ರಮಂದಿರದ ಮಾಲೀಕ ಸುಂದರೇಶ್ ಮೂರ್ತಿ, ಶಿವಬಸವಸ್ವಾಮಿ, ರೇವಂತ್ ದೇವರು, ರಕ್ಷಿತ್ ಮಾಂಬಳ್ಳಿ ಇತರರು ಉಪಸ್ಥಿತರಿದ್ದರು.

# ವಿಜೃಂಭಣೆಯಿಂದ ನಡೆದ ಉಯ್ಯಂಬಳ್ಳಿ ಮಾರಮ್ಮನ ಜಾತ್ರೆ



ಚಾಮರಾಜನಗರ, ಫೆ.3–ತಾಲೂಕಿನ ನಂಜೇದೇವನಪುರ ಗ್ರಾಮದ ಗ್ರಾಮದೇವತೆ ಉಯ್ಯಂಬಳ್ಳಿ ಮಾರಮ್ಮನ ಜಾತ್ರೆಯು ಭಾನುವಾರ ಮತ್ತು ಸೋಮವಾರ ರಾತ್ರಿ ಬಾಣಬಿರುಸು, ಸತ್ತಿಗೆ ಸೂರಪಾನಿ, ವಾದ್ಯ ಮೇಳ, ಕೇಲು ತರುವುದರ ಜೊತೆ ವಿಜೃಂಭಣೆಯಿಂದ ನಡೆಯಿತು.

ಭಾನುವಾರ ನಡುರಾತ್ರಿ, ಮಾರಮ್ಮನ ಬೆಳ್ಳಿ ವಿಗ್ರಹಕ್ಕೆ ಚಿನ್ನಾಭರಣ ತೊಡಿಸಿ, ವಿಶೇಷ ಪೂಜೆ ಸಲ್ಲಿಸಿ, ಮಹಾಮಂಗಳಾರತಿ ಮಾಡಿ, ಅಲಂಕೃತ ಮಂಟಪದಲ್ಲಿಟ್ಟು ಸತ್ತಿಗೆ ಸೂರಪಾನಿ, ವಾದ್ಯ ಮೇಳಗಳೊಂದಿಗೆ ನಾಯಕರ ಬೀದಿಯಿಂದ ಹೊರಟು ಗ್ರಾಮದ ಪ್ರಮುಖ ಬೀದಿಗಳಲ್ಲಿ ಭವ್ಯ ಮೆರವಣಿಗೆಯೊಂದಿಗೆ ಊರ ಹೊರಗಿರುವ ಮಾರಮ್ಮನ ದೇವಸ್ಥಾನಕ್ಕೆ ಕೊಂಡೊಯ್ದು ಅಲ್ಲಿ ವಿಶೇಷ ಅಲಂಕಾರ ಮಾಡಿ ಇಡಲಾಯಿತು.

ಸೋಮವಾರ ಬೆಳಗ್ಗೆಯಿಂದಲೇ ಮಾರಮ್ಮನಿಗೆ ವಿಶೇಷ ಪೂಜೆಗಳು ನಡೆದವು, ರಾತ್ರಿಯಾಗುತ್ತಲೇ, ಪಕ್ಕದ ವೀರನಪುರ ಗ್ರಾಮಸ್ಥರು ಸೇರಿದಂತೆ ಸುತ್ತಮುತ್ತಲ ವಿವಿಧ ಗ್ರಾಮಗಳ ಹರಕೆ ಹೊತ್ತ ಭಕ್ತರು ಬಂದು ಜಾತ್ರೆಯ ಅಂಗಳದಲ್ಲಿ ಸೌದೆ ಒಲೆ ಒಡ್ಡಿ ಅಕ್ಕಿ ಬೆಲ್ಲದ ಮಡೆ ಅನ್ನ ಮಾಡಿದರು. ಈ ಸಂದರ್ಭದಲ್ಲಿ ಬಾಣ ಬಿರುಸು ಕಂಗೊಳಿಸಿತು. ನಂತರ ಮಡೆ ಅನ್ನವನ್ನು ತಲೆ ಮೇಲೆ ಹೊತ್ತು ಭಕ್ತರು ತಮ್ಮ ತಮ್ಮ ಮನೆಗಳಿಗೆ ತೆರಳಿದರು. ಹರಕೆ ಹೊತ್ತ ಭಕ್ತರು ಕಾಣಿಕೆಗಳನ್ನು ಮಾರಮ್ಮನಿಗೆ ಅರ್ಪಿಸಿದರು.

ಜಾತ್ರೆಯ ಅಂಗವಾಗಿ ಮುಖ್ಯ ದೇವಸ್ಥಾನ ಸೇರಿದಂತೆ ಜಾತ್ರಾ ಅಂಗಳದಲ್ಲಿರುವ ಶಂಕರೇಶ್ವರ, ಬಸವೇಶ್ವರ, ಕೇಲು ಮನೆಗಳಿಗೆ ವಿದ್ಯುತ್ ದೀಪಾಲಂಕಾರ ಮಾಡಲಾಗಿತ್ತು. ಮಂಗಳವಾರದಿಂದ ಗುರುವಾರದವರೆಗೂ ಚಿನ್ನಾಭರಣ ತೊಟ್ಟ ಬೆಳ್ಳಿ ಮಾರಮ್ಮನ ವಿಗ್ರಹವು ದೇವಸ್ಥಾನದಲ್ಲಿ ಇರಲಿದ್ದು, ಮೂರು ದಿನವು ಭಕ್ತರು ಆಗಮಿಸಿ ವಿಶೇಷ ಪೂಜೆ ಸಲ್ಲಿಸಲಿದ್ದಾರೆ, ಶುಕ್ರವಾರ ಬೆಳಗ್ಗೆ ಮಾಮೂಲಿನಂತೆ ಭವ್ಯ ಮೆರವಣಿಗೆಯೊಂದಿಗೆ ಬೆಳ್ಳಿ ಮಾರಮ್ಮನ ವಿಗ್ರಹವು ನಾಯಕರ ಬೀದಿಯಲ್ಲಿರುವ ದೇವಸ್ಥಾನಕ್ಕೆ ತರುವುದರೊಂದಿಗೆ ಜಾತ್ರೆಗೆ ತೆರೆ ಬೀಳಲಿದೆ.

# 'ಲ್ಯಾಂಡ್‌ಲಾರ್ಡ್' ಚಿತ್ರಕ್ಕೆ ತೆರಿಗೆ ವಿನಾಯಿತಿ



**ಬೆಂಗಳೂರು:** ಜಡೇಶ್ ಕೆ. ಹಂಪಿ ನಿರ್ದೇಶನದಲ್ಲಿ ಮೂಡಿಬಂದಿರುವ 'ಲ್ಯಾಂಡ್‌ಲಾರ್ಡ್' ಚಿತ್ರ ತೆರೆಕಂಡಿದ್ದು, ಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡುವುದಾಗಿ ಮುಖ್ಯಮಂತ್ರಿ ಸಿದ್ದರಾಮಯ್ಯ ಮಂಗಳವಾರ ತಿಳಿಸಿದ್ದಾರೆ.

ದುನಿಯಾ ವಿಜಯ್ ಮತ್ತು ನಟಿ ರಚಿತಾ ರಾಮ್ ನಟಿಸಿರುವ ಚಿತ್ರವು ಜನವರಿ 23ರಂದು ರಾಜ್ಯದಾದ್ಯಂತ ಚಿತ್ರ ಮಂದಿರಗಳಲ್ಲಿ ತೆರೆಕಂಡಿದ್ದು, ಎಲ್ಲೆಡೆ ಸಕಾರಾತ್ಮಕ ಪ್ರತಿಕ್ರಿಯೆ ಪಡೆದಿದೆ.

ಸಾಮಾಜಿಕ ಅಸಮಾನತೆ ಮತ್ತು ಜಾತಿಯಾಧಾರಿತ ಶೋಷಣೆಯ ವಿಷಯಾಧಾರಿತ ದುನಿಯಾ ವಿಜಯ್ ನಟನೆಯ 'ಲ್ಯಾಂಡ್ ಲಾರ್ಡ್' ಚಿತ್ರಕ್ಕೆ ತೆರಿಗೆ ವಿನಾಯಿತಿ ನೀಡುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಿದ್ದೇನೆ ಎಂದು ಸಿದ್ದರಾಮಯ್ಯ ಎಕ್ಸ್‌ನಲ್ಲಿನ ಪೋಸ್ಟ್‌ನಲ್ಲಿ ತಿಳಿಸಿದ್ದಾರೆ.

ಮೌಲ್ಯಯುತ ಸಂದೇಶವನ್ನು ಜನರಿಗೆ ತಲುಪಿಸಿ, ಸಾರ್ವತ್ರಿಕ ಅಭಿಪ್ರಾಯ ರೂಪಿಸಲು ಹಾಗೂ ಸಾಮಾಜಿಕ ಪರಿವರ್ತನೆಯನ್ನು ಸಾಧಿಸಲು ಸಿನೆಮಾಗಳು ಅತ್ಯಂತ ಪರಿಣಾಮಕಾರಿ ಮಾಧ್ಯಮ ಎನ್ನುವುದು ನನ್ನ ಭಾವನೆ. ಸಾಮಾಜಿಕ ಕಳಕಳಿಯ ಸಿನೆಮಾವನ್ನು ಮಾಡಿದಾಗ ಅಂಥವರ ಜೊತೆ ನಿಂತು ಬೆನ್ನು ತಟ್ಟಬೇಕಿರುವುದು ಕೂಡ ಸರ್ಕಾರವಾಗಿ ನಮ್ಮ ನೈತಿಕ ಹೊಣೆ ಎಂದಿದ್ದಾರೆ.

ಮುಂದಿನ ದಿನಗಳಲ್ಲಿ ಸಾಮಾಜಿಕ ವ್ಯವಸ್ಥೆಯ ಮೇಲೆ ಬೆಳಕು ಚೆಲ್ಲುವ ಲ್ಯಾಂಡ್ ಲಾರ್ಡ್‌ನಂತಹ ಇನ್ನಷ್ಟು ಚಿತ್ರಗಳು ಮೂಡಿಬರಲು ನಮ್ಮ ಈ ನಿರ್ಧಾರ ಸ್ಫೂರ್ತಿಯಾಗಲಿದೆ ಎಂದು ನಂಬಿದ್ದೇನೆ ಎಂದು ಅವರು ಹೇಳಿದ್ದಾರೆ.

# ಮಣಿಪುರದಲ್ಲಿ ಮತ್ತೆ ಬಿಜೆಪಿ ಸರ್ಕಾರ: ರಾಷ್ಟ್ರಪತಿ ಆಡಳಿತ ಅಂತ್ಯ

## ಸಿಎಂ ಆಗಿ ಖೇಮ್‌ಚಂದ್ ಸಿಂಗ್ ಆಯ್ಕೆ



**ಇಂಫಾಲ್ (ಮಣಿಪುರ):** ಹಿಂಸಾಚಾರದಿಂದ ಪೀಡಿತ ಮಣಿಪುರಕ್ಕೆ ಹೊಸ ಮುಖ್ಯಮಂತ್ರಿ ನೇಮಕವಾಗಿದ್ದು, ರಾಜಧಾನಿ ಇಂಫಾಲ್‌ನಲ್ಲಿ ನಡೆದ ಭಾರತೀಯ ಜನತಾ ಪಕ್ಷದ ಶಾಸಕಾಂಗ ಪಕ್ಷದ ಸಭೆಯು ಹಿರಿಯ ನಾಯಕ ಯುಮ್ನಾಮ್ ಖೇಮ್‌ಚಂದ್ ಸಿಂಗ್ ಅವರನ್ನು ಹೊಸ ಮುಖ್ಯಮಂತ್ರಿಯಾಗಿ ಆಯ್ಕೆ ಮಾಡಲಾಗಿದೆ. ಮೈತೇಯಿ ಸಮುದಾಯಕ್ಕೆ ಸೇರಿರುವ 62 ವರ್ಷದ ಖೇಮ್‌ಚಂದ್ ಸಿಂಗ್ ಅವರು, 2017 ರಿಂದ ಸಿಂಗ್ಜಮೇಯಿ ವಿಧಾನಸಭಾ ಕ್ಷೇತ್ರದಿಂದ ಶಾಸಕರಾಗಿದ್ದು, ಈ ಹಿಂದೆ, ಬಿರೇನ್ ಸರ್ಕಾರದಲ್ಲಿ ಪುರಸಭೆ ಆಡಳಿತ ಮತ್ತು ವಸತಿ ಸಚಿವರಾಗಿ ಸೇವೆ ಸಲ್ಲಿಸಿದ್ದರು.

ಇಂಫಾಲ್‌ದಲ್ಲಿ ನಡೆದ ಪಕ್ಷದ ಸಭೆಯಲ್ಲಿ ಈಶಾನ್ಯ ರಾಜ್ಯ ಸಂಯೋಜಕ ಸಂಬಿತ್ ಪಾತ್ರ, ಮಣಿಪುರ ಬಿಜೆಪಿ ಉಸ್ತುವಾರಿ ಅಜಿತ್ ಗೋಪ್ಚಡ್ಡೆ ಮತ್ತು ವೀಕ್ಷಕ ತರುಣ್ ಚುಗ್ ಸಮುಖದಲ್ಲಿ ಈ ನಿರ್ಧಾರ ತೆಗೆದುಕೊಳ್ಳಲಾಗಿದ್ದು, ಇದರೊಂದಿಗೆ ಈ ಹೆಜ್ಜೆಯು ಸುಮಾರು ಒಂದು ವರ್ಷದ ರಾಷ್ಟ್ರಪತಿ ಆಳ್ವಿಕೆಯ ನಂತರ ಚುನಾಯಿತ ಸರ್ಕಾರವನ್ನು ಪುನಃ ಸ್ಥಾಪಿಸುವತ್ತ ಮಹತ್ವದ ಹೆಜ್ಜೆಯಾಗಿದೆ.

ರಾಷ್ಟ್ರಪತಿ ಆಳ್ವಿಕೆ ಫೆಬ್ರವರಿ 12ರವರೆಗೆ ವಿಸ್ತರಣೆ: ಕಳೆದ ವರ್ಷ ಫೆಬ್ರವರಿ 13ರಂದು, ಮುಖ್ಯಮಂತ್ರಿ ಹುದ್ದೆಯಿಂದ ಬಿರೇನ್ ಸಿಂಗ್ ರಾಜೀನಾಮೆ ನೀಡಿದ ನಾಲ್ಕು ದಿನಗಳ ನಂತರ, ಕೇಂದ್ರ ಸರ್ಕಾರ ಮಣಿಪುರದಲ್ಲಿ ರಾಷ್ಟ್ರಪತಿ ಆಳ್ವಿಕೆಯನ್ನು ಜಾರಿಗೊಳಿಸಿತ್ತು. ಪ್ರಸ್ತುತ ಜಾರಿಯಲ್ಲಿರುವ ಈ ರಾಷ್ಟ್ರಪತಿ ಆಳ್ವಿಕೆಯು ಫೆಬ್ರವರಿ 12ರಂದು ಮುಕ್ತಾಯಗೊಳ್ಳಲಿದೆ. ಇನ್ನು, ಮುಂದಿನ ವರ್ಷ ಮಣಿಪುರದಲ್ಲಿ ವಿಧಾನಸಭಾ ಚುನಾವಣೆ ನಡೆಯುವುದರಿಂದ ಬಿಜೆಪಿಯು ಈ ನಿರ್ಧಾರ ಮಹತ್ವದ್ದಾಗಿದೆ.

ಹೇಗಿದೆ ವಿಧಾನಸಭಾ ಬಲಾಬಲ: ಮಣಿಪುರ ವಿಧಾನಸಭೆಯಲ್ಲಿ ಬಿಜೆಪಿ ಒಟ್ಟು 37 ಶಾಸಕರನ್ನು ಹೊಂದಿದೆ. ಅದರ ಎನ್‌ಡಿಎ ಮಿತ್ರಪಕ್ಷಗಳಾದ ನ್ಯಾಷನಲ್ ಪೀಪಲ್ಸ್ ಪಾರ್ಟಿಗೆ ಆರು ಶಾಸಕರು ಹಾಗೂ ನಾಗಾ ಪೀಪಲ್ಸ್ ಫ್ರಂಟ್‌ಗೆ ಐದು ಶಾಸಕರ ಬೆಂಬಲ ಇದೆ. ಇದಲ್ಲದೆ, ಮೂವರು ಸ್ವತಂತ್ರ ಶಾಸಕರು ಕೂಡ ಬಿಜೆಪಿ ನೇತೃತ್ವದ ಎನ್‌ಡಿಎ ಮೈತ್ರಿಕೂಟಕ್ಕೆ ಬೆಂಬಲ ನೀಡುತ್ತಿದ್ದಾರೆ. ಇದರಿಂದ ವಿಧಾನಸಭೆಯಲ್ಲಿ ಎನ್‌ಡಿಎಗೆ ಸ್ಪಷ್ಟ ಬಹುಮತದ ಸ್ಥಿತಿ ನಿರ್ಮಾಣವಾಗಿದೆ. ಮತ್ತೊಂದೆಡೆ, ವಿರೋಧ ಪಕ್ಷ ಕಾಂಗ್ರೆಸ್ ಏಳು ಶಾಸಕರ ಬಲವೊಂದಿದೆ.

# ಎಲಿಮಿನೇಟರ್‌ನಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ಫೈನಲ್‌ಗೆ

## ನಾಳೆ ಆರ್‌ಸಿಬಿ–ಡಿಸಿ ಹಣಾಹಣಿ




ವಿಕೆಟ್ ಕಿತ್ತ ಸಂಭ್ರಮದಲ್ಲಿ ಡೆಲ್ಲಿ ಕ್ಯಾಪಿಟಲ್ಸ್ ತಂಡದ ಆಟಗಾರರು

ನವಿ ಮುಂಬೈ, ಫೆ.3(ವಿವಿಹೆಚ್)– ಸಂಘಟಿತ ಬ್ಯಾಟಿಂಗ್ ಮತ್ತು ಬೌಲಿಂಗ್ ಪ್ರದರ್ಶನದಿಂದ ಮಹಿಳಾ ಪ್ರೀಮಿಯರ್ ಲೀಗ್ ಸೀಸನ್–4ರ ಟಿ20 ಕ್ರಿಕೆಟ್ ಟೂರ್ನಿಯ ಎಲಿಮಿನೇಟರ್‌ನಲ್ಲಿ ಗುಜರಾತ್ ಜೈಂಟ್ಸ್ ತಂಡವನ್ನು 7 ವಿಕೆಟ್‌ಗಳಿಂದ ಮಣಿಸಿದ ಡೆಲ್ಲಿ ಕ್ಯಾಪಿಟಲ್ಸ್ ಫೈನಲ್ಸ್ ತಲುಪಿತು. ಇದೇ ಗುರುವಾರ ನಡೆಯಲಿರುವ ಫೈನಲ್ಸ್‌ನಲ್ಲಿ ಟ್ರೋಫಿಗಾಗಿ ಆರ್‌ಸಿಬಿ ತಂಡದೊಂದಿಗೆ ಕಾದಾಡಲಿದೆ.

ಇಲ್ಲಿನ ಕೋಟಂಬಿ ಕ್ರೀಡಾಂಗಣದಲ್ಲಿ ಟಾಸ್ ಗೆದ್ದ ಡೆಲ್ಲಿ ಕ್ಯಾಪಿಟಲ್ಸ್ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. ಮೊದಲು ಬ್ಯಾಟ್ ಮಾಡಿದ ಗುಜರಾತ್ 20 ಓವರ್‌ಗಳಲ್ಲಿ 7 ವಿಕೆಟ್‌ಗಳಿಗೆ 168 ರನ್ ಗಳಿಸಿತು. ಈ ಮೊತ್ತ ಬೆನ್ನತ್ತಿದ ಡೆಲ್ಲಿ 15.4 ಓವರ್‌ಗಳಲ್ಲಿ 3 ಕೇವಲ 3 ವಿಕೆಟ್‌ಗೆ 169 ರನ್ ಗಳಿಸಿ ಗೆಲುವಿನ ನಗೆ ಬೀರಿತು.

ಡೆಲ್ಲಿ ಕ್ಯಾಪಿಟಲ್ಸ್‌ನ ಪರಿಣಾಮಕಾರಿ ದಾಳಿಯಿಂದಾಗಿ ಗುಜರಾತ್ ತಂಡವು ಆರಂಭಿಕ ಆಘಾತ ಎದುರಿಸಿತು. 59ರನ್‌ಗಳಿಗೆ ಪ್ರಮುಖ 4 ವಿಕೆಟ್ ಕಳೆದುಕೊಂಡು ಸಂಕಷ್ಟ ಎದುರಿಸಿತು. ಈ ಹಂತದಲ್ಲಿ ಕ್ರೀಸ್‌ನಲ್ಲಿದ್ದ ಮೂನಿ ಔಟಾಗದೇ 51ಎ, 6ಬೌಂಡರಿ ಸಹಿತ 62 ಭಾರಿಸಿ ತಂಡದ ಮೊತ್ತ ನೂರೈವತ್ತರ ಗಡಿ ದಾಟಲು ಸಹಕರಿಸಿದರು.

ಮತ್ತೊಂದೆಡೆ ಜಾರ್ಜಿಯಾ ವರ್ಹಾಮ್ 25 ಎಸೆತಗಳಲ್ಲಿ 35 ರನ್ ಕಲೆ ಹಾಕಿದರು. ಕೊನೆಯಲ್ಲಿ ಅಬ್ಬರಿಸಿದ ಕಾಶ್ವಿ ಗೌತಮ್ 18 ರನ್ ಚಚ್ಚಿದರು. ಉಳಿದಂತೆ ಸೋಫಿ ಡಿವೈನ್ 6ರನ್, ಕನಿಕಾ ಅಹುಜಾ 6, ಹಾಗೂ ಅನುಷ್ಕಾ ಶರ್ಮಾ 16, ನಾಯಕಿ ಗಾರ್ಡನರ್ ಹಾಗೂ ಭಾರತಿ ಫಲಾಲಿ ಡಕ್‌ಔಟ್ ಆಗುವ ಮೂಲಕ ನಿರಾಸೆ ಮೂಡಿಸಿದರು. ಡೆಲ್ಲಿ ಪರ ಶಿನಲಿ ಹೆನ್ರಿ 3, ನಂದನಿ ಶರ್ಮಾ 2, ಮಿನು ಮಣಿ ಒಂದು ವಿಕೆಟ್ ಪಡೆದರು.

ಈ ಸಾಧಾರಣ ಮೊತ್ತ ಬೆನ್ನತ್ತಿದ ಡೆಲ್ಲಿಗೆ ಉತ್ತಮ ಆರಂಭ ದೊರೆಯಿತು. ಆರಂಭಿಕ ಆಟಗಾರ್ತಿ ಲಿಜೆಲ್ ಲೀ ಹಾಗೂ ಶಫಾಲಿ ವರ್ಮಾ 89ರನ್‌ಗಳ ಭರ್ಜರಿ ಜೊತೆಯಾಟ ನೀಡಿ ತಂಡಕ್ಕೆ ಭದ್ರ ಬುನಾದಿ ಹಾಕಿದರು. ಲಿಜೆಲ್ ಲೀ 28 ಎಸೆತಗಳಲ್ಲಿ 43 ರನ್ ಗಳಿಸಿದರೆ, ಶಫಾಲಿ ವರ್ಮಾ 21 ಎಸೆತಗಳಲ್ಲಿ 31 ರನ್ ಬಾರಿಸಿ ನಿರ್ಗಮಿಸಿದರು.

ಬಳಿಕ ಬಂದ ಜೆಮಿಯಾ ರೋಡ್ರಿಗಸ್ 23 ಎಸೆತಗಳಲ್ಲಿ 41ರನ್ ಚಚ್ಚಿ ತಂಡದ ಗೆಲುವು ಸುಲಭಗೊಳಿಸಿದರು. ಕೊನೆಯಲ್ಲಿ ಅಬ್ಬರಿಸಿದ ಲಾರಾ ವೋಲ್ವಾರ್ಡ್ 24 ಎಸೆತಗಳಲ್ಲಿ 32 ರನ್ ಗಳಿಸಿ ಔಟಾಗದೇ ಉಳಿದು ತಂಡಕ್ಕೆ ಗೆಲುವು ತಂದುಕೊಟ್ಟರು. ಮಾರಿಜೆನ್ನೆ ಕೇಪ್ 4 ರನ್ ಗಳಿಸಿ ಕ್ರೀಜ್‌ನಲ್ಲಿದ್ದರು. ಗುಜರಾತ್ ಪರ ಜಾರ್ಜಿಯಾ 2, ರಾಜೇಶ್ವರಿ ಗಾಯಕ್ವಾಡ್ ಒಂದು ವಿಕೆಟ್ ಪಡೆದರು.

# ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್‌ನ ಅನಧಿಕೃತ ಕಟ್ಟಡ ತೆರವಿಗೆ ಮೈಸೂರು ಪಾಲಿಕೆ ಸೂಚನೆ

- ತಪ್ಪಿದ್ದಲ್ಲಿ ತೆರವುಗೊಳಿಸಿ, ಅದರ ವೆಚ್ಚ ವಸೂಲಿ ಮಾಡುವ ಎಚ್ಚರಿಕೆ
- ಈ ಮೊದಲು ಎಂಆರ್‌ಸಿಗೆ; ಈಗ ಗಾಲ್ಫ್ ಕ್ಲಬ್‌ಗೆ ತಾಕೀತು!



ಮೈಸೂರು, ಫೆ.3– ಮೈಸೂರು ರೇಸ್ ಕ್ಲಬ್(ಎಂಆರ್‌ಸಿ) ಅಧೀನದಲ್ಲಿ ಬರುವ ಜಯಚಾಮರಾಜ ಒಡೆಯರ್ ಗಾಲ್ಫ್ ಕ್ಲಬ್(ಜೆಡಬ್ಲ್ಯೂಜಿಸಿ)ನಲ್ಲಿ ನಿಯಮಾವಳಿ ಧಿಕ್ಕರಿಸಿ ನಿರ್ಮಿಸಿರುವ ಕಟ್ಟಡವನ್ನು ಕೂಡಲೇ ತೆರವುಗೊಳಿಸುವಂತೆ ಮೈಸೂರು ಮಹಾನಗರ ಪಾಲಿಕೆ ಸೂಚಿಸಿದೆ.

ಈ ಸಂಬಂಧ ಪಾಲಿಕೆ ವಲಯ ಕಚೇರಿ 1ರ ವಲಯ ಆಯುಕ್ತರು, ಗಾಲ್ಫ್ ಕ್ಲಬ್‌ನ ಗೌರವ ಕಾರ್ಯದರ್ಶಿ ಕೆ.ಎಸ್. ಸುಧೀರ್ ಭಟ್ ಅವರಿಗೆ ಕಳೆದ ಜ.31 ರಂದು ಸೂಚನಾ ಪತ್ರ ಕಳುಹಿಸಿದ್ದು, ಪತ್ರ ತಲುಪಿದ ತಕ್ಷಣ ಕಟ್ಟಡವನ್ನು ತೆರವುಗೊಳಿಸಿ ಈ ಕಚೇರಿಗೆ ವರದಿ ನೀಡುವುದು, ತಪ್ಪಿದ್ದಲ್ಲಿ ನಗರಪಾಲಿಕೆ ವತಿಯಿಂದ ತೆರವುಗೊಳಿಸಿ, ಅದರ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲು ಮಾಡುವುದರ ಜೊತೆಗೆ ನಿಯಮಾನುಸಾರ ಕ್ರಮ ಕೈಗೊಳ್ಳುವುದಾಗಿ ತಿಳಿಸಿದ್ದಾರೆ.

**ತಿಳುವಳಿಕೆ ಪತ್ರದ ವಿವರ:** ಸದರಿ ವಿಷಯಕ್ಕೆ ಸಂಬಂಧಿಸಿದಂತೆ, ನಂ.1290 ಎನ್–267/1 1290 ಎನ್–267/1 ಎನ್–14, ಮೈಸೂರು ರೇಸ್ ಕ್ಲಬ್, ಲಲಿತಮಹಲ್ ರಸ್ತೆ, ಮೈಸೂರು, ಇಲ್ಲಿ ಕಟ್ಟಡ ನವೀಕರಣ ಮತ್ತು ನಿರ್ಮಾಣ ಮಾಡಿರುವುದು ಕಂಡುಬಂದಿರುತ್ತದೆ. ನಗರ ಪಾಲಿಕೆಯಿಂದ ಕಟ್ಟಡ ನವೀಕರಣ ಮತ್ತು ನಿರ್ಮಾಣ ಮಾಡಲು ಯಾವುದೇ ನಕ್ಷೆ ಅನುಮೋದನೆ ಮತ್ತು ಕಟ್ಟಡ ರಹದಾರಿ ಪಡೆಯದೇ ಹಳೇ ಕಟ್ಟಡವನ್ನು ನವೀಕರಿಸಿಕೊಂಡು ಮತ್ತು ಹೊಸದಾಗಿ ಕೆಲವು ಭಾಗಗಳನ್ನು ನಿರ್ಮಿಸಿರುವುದು ಕಂಡುಬಂದಿರುತ್ತದೆ.


ಈ ಬಗ್ಗೆ ದಿನಾಂಕ: 28.02.2025 ಮತ್ತು 22.05.2025ರಂದು ಪಾಲಿಕೆಯಿಂದ ಮೈಸೂರು ರೇಸ್ ಕ್ಲಬ್ ಆಡಳಿತಾಧಿಕಾರಿಗಳಿಗೆ ನೋಟೀಸ್ ನೀಡಲಾಗಿದ್ದು, ಸದರಿ ನೋಟಿಸನ್ನು ಪ್ರಶ್ನಿಸಿ ಹೈಕೋರ್ಟ್‌ನಲ್ಲಿ ರಿಟ್ ಅರ್ಜಿ (WP/11585/2025) ದಾಖಲಿಸಿರುತ್ತಾರೆ. ಸದರಿ ರಿಟ್‌ನ ಉಲ್ಲೇಖದಲ್ಲಿ ನಮೂದಿಸಿರುವಂತೆ ದಿನಾಂಕ:05.08.2025ರ ನ್ಯಾಯಾಲಯವು ಅಂತಿಮ ಆದೇಶ (Respondent No. 1 shall issue fresh notices to the petitioner and respondent No.3 with regard to any construction on schedule 'B' property and only after affording an opportunity of hearing to both the petitioner as well as respondent No.3, shall initiate action in accordance with law and not otherwise) ನೀಡಿರುತ್ತದೆ.

ಸದರಿ ಆದೇಶ ಪಾಲನೆ ಮಾಡಲು ನಿಮಗೆ ತಿಳುವಳಿಕೆ ಪತ್ರ ನೀಡಲಾಗಿದ್ದು, ಅದಕ್ಕೆ ಉತ್ತರವಾಗಿ ನೀವು ಲಿಖಿತ ಪತ್ರ ನೀಡಿದ್ದು, ನಿರ್ಮಾಣದ ಬಗ್ಗೆ ಈ ಕಚೇರಿಗೆ ತಿಳಿಸಿರುವುದಾಗಿ, ಘಟನೋತ್ತರ ಮಂಜೂರಾತಿ ಕೋರಿರುವುದಾಗಿ ಮತ್ತು ಈ ಬಗ್ಗೆ ರಿಟ್ ಪಿಟಿಷನ್(ಸಂಖ್ಯೆ13454/2020) ನ್ಯಾಯಾಲಯದಲ್ಲಿ ಬಾಕಿ ಇರುತ್ತದೆ ಎಂದು ಉತ್ತರ ನೀಡಿರುತ್ತೀರಿ. ಆದರೆ, ಈ ಹಿಂದೆಯೇ ಸ್ವತ್ತಿಗೆ ಸಂಬಂಧಿಸಿದ ದಾಖಲೆಗಳನ್ನು ಹಾಜರುಪಡಿಸಿ ಅರ್ಜಿ ಸಲ್ಲಿಸಿದ್ದಲ್ಲಿ ನಕ್ಷೆ ಅನುಮೋದನೆಗೆ ಕ್ರಮವಹಿಸಲಾಗುವುದೆಂದು ಹಿಂಬರಹ ನೀಡಲಾಗಿರುತ್ತದೆ ಮತ್ತು ತಿಳುವಳಿಕೆ ಪತ್ರದಲ್ಲಿ ನಿಮ್ಮ ಸ್ವತ್ತಿಗೆ ಸಂಬಂಧಿಸಿದ ಮತ್ತು ನಿರ್ಮಾಣಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆಗಳನ್ನು ಈ ಕಚೇರಿಗೆ ಹಾಜರುಪಡಿಸುವಂತೆ ಸೂಚಿಸಿ ತಿಳುವಳಿಕೆ ಪತ್ರ ನೀಡಲಾಗಿರುತ್ತದೆ. ಆದರೆ, ನೀವು ಸ್ವತ್ತಿಗೆ ಸಂಬಂಧಿಸಿದ ಮಾಲೀಕತ್ವದ ದಾಖಲಾತಿಗಳನ್ನು ಮತ್ತು ನಿರ್ಮಾಣಕ್ಕೆ ಸಂಬಂಧಿಸಿದ ಯಾವುದೇ ದಾಖಲೆಗಳನ್ನು ಈ ಕಛೇರಿಗೆ ಹಾಜರುಪಡಿಸಿರುವುದಿಲ್ಲ.

ಆದ್ದರಿಂದ ಈ ಪತ್ರ ತಲುಪಿದ ತಕ್ಷಣ ಕಟ್ಟಡವನ್ನು ತೆರವುಗೊಳಿಸಿ ಈ ಕಛೇರಿಗೆ ವರದಿ ನೀಡುವುದು. ತಪ್ಪಿದ್ದಲ್ಲಿ ನಗರ ಪಾಲಿಕೆ ವತಿಯಿಂದ ಕಟ್ಟಡ ತೆರವುಗೊಳಿಸಿ ಅದಕ್ಕೆ ತಗಲುವ ವೆಚ್ಚವನ್ನು ಕಟ್ಟಡದ ಮಾಲೀಕರಿಂದ ವಸೂಲು ಮಾಡಲಾಗುವುದು ಹಾಗೂ 1976ರ ಕರ್ನಾಟಕ ಮುನ್ಸಿಪಲ್ ಕಾರ್ಪೋರೇಷನ್ ಕಾಯ್ದೆ ಸೆಕ್ಷನ್–321ರ ಪ್ರಕಾರ ಕಾನೂನು ರೀತಿ ಮುಂದಿನ ಕ್ರಮ ಕೈಗೊಳ್ಳಲಾಗುವುದು ಎಂದು ತಿಳಿಯಪಡಿಸಿದೆ.

**ಮೊದಲು ಸೂಚನೆ 'ಶಾಸ್ತ್ರ' ನಡೆದಿತ್ತು:** ನಿರ್ಮಾಣ ಹಂತದಲ್ಲಿಯೇ ಮೈಸೂರು ರೇಸ್ ಕ್ಲಬ್(ಎಂಆರ್‌ಸಿ) ವತಿಯಿಂದ ನಗರ ಪಾಲಿಕೆ ಆಯುಕ್ತರಿಗೆ ಅನಧಿಕೃತ ನಿರ್ಮಾಣ ತಡೆಯುವಂತೆ ದೂರು ಅರ್ಜಿಯನ್ನು ಸಲ್ಲಿಸಲಾಗಿತ್ತು ಆಗ ನಗರ ಪಾಲಿಕೆ, ಎಂಆರ್‌ಸಿಗೆ ಇಂತಹ ನಿರ್ಮಾಣ ಸ್ಥಗಿತಗೊಳಿಸುವಂತೆಯೂ, ಹಾಲಿ ನಿರ್ಮಾಣ ತೆರವುಗೊಳಿಸುವಂತೆ ಎಂಆರ್‌ಸಿಗೇ ಸೂಚನಾ ಪತ್ರ ಬರೆದು ಕೈತೊಳೆದುಕೊಂಡಿತ್ತು. ಈಗ ಕಟ್ಟಡ ಪೂರ್ಣಗೊಂಡಿದೆ. ಮತ್ತೆ ಇದನ್ನು ತೆರವುಗೊಳಿಸುವಂತೆ ಪಾಲಿಕೆಯು ಗಾಲ್ಫ್ ಕ್ಲಬ್‌ನ ಗೌರವ ಕಾರ್ಯದರ್ಶಿಗೆ ಗಡುವು ನೀಡದೆಯೇ ಕಾಟಾಚಾರಕ್ಕೆ ಸೂಚನೆ ನೀಡಿದಂತಿದೆ. ಪಾಲಿಕೆಯ ಈ ರೀತಿಯ ಅಸಮರ್ಪಕ ನಿಲುವಿನಿಂದ ಅಕ್ರಮ ನಿರ್ಮಾಣಗಳು ನಿರಾತಂಕವಾಗಿ ಮುಂದುವರೆದಿವೆ.

# ಸೇವಾ ಕಾರ್ಯಗಳೊಂದಿಗೆ ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು ಹುಟ್ಟುಹಬ್ಬ ಆಚರಣೆ





ಜೆಡಿಎಸ್ ಮುಖಂಡ ಕೋಟೆಹುಂಡಿ ಮಹದೇವು ಹುಟ್ಟುಹಬ್ಬದ ಹಿನ್ನೆಲೆಯಲ್ಲಿ ಅಂಗನವಾಡಿ ಕಾರ್ಯಕರ್ತೆಯರಿಗೆ ಕೋಟ್ ವಿತರಿಸಲಾಯಿತು. ವಿವಿಧೆಡೆಯಿಂದ ಆಗಮಿಸಿದ್ದ ಹಿತೈಷಿಗಳು ಮಹದೇವು ಅವರಿಗೆ ಕೇಕ್ ತಿನ್ನಿಸಿ, ಶುಭಾಶಯ ಕೋರಿದ್ದನ್ನು ಮತ್ತೊಂದು ಚಿತ್ರದಲ್ಲಿ ಕಾಣಬಹುದು.

ಮೈಸೂರು, ಫೆ.3– ಮೈಸೂರಿನ ಚಾಮುಂಡೇಶ್ವರಿ ವಿಧಾನಸಭಾ ಕ್ಷೇತ್ರದ ಜೆಡಿಎಸ್ ಮುಖಂಡ, ಎಪಿಎಂಸಿ ಮಾಜಿ ನಿರ್ದೇಶಕ ಹಾಗೂ ಉದ್ಯಮಿ ಕೋಟೆಹುಂಡಿ ಮಹದೇವು ಅವರ ಹುಟ್ಟುಹಬ್ಬವನ್ನು ವಿವಿಧ ಸೇವಾ ಕಾರ್ಯಗಳೊಂದಿಗೆ ಅರ್ಥಪೂರ್ಣವಾಗಿ ಆಚರಿಸಲಾಯಿತು.

ಚಾಮುಂಡೇಶ್ವರಿ ಕ್ಷೇತ್ರ ವ್ಯಾಪ್ತಿಯ 50 ಅಂಗನವಾಡಿ ಕಾರ್ಯಕರ್ತೆಯರಿಗೆ ಕೋಟ್ ಹಾಗೂ ಮಕ್ಕಳಿಗೆ ಮಕ್ಕಳಿಗೆ ಬಟ್ಟೆ ವಿತರಣೆ, ಸರಸ್ವತಿಪುರಂನಲ್ಲಿರುವ ವೃದ್ಧಾಶ್ರಮದಲ್ಲಿ ಸಿಹಿ ಊಟದ ವ್ಯವಸ್ಥೆ ಸೇರಿದಂತೆ ವಿವಿಧ ಸೇವಾ ಕಾರ್ಯಗಳನ್ನು ನಡೆಸಲಾಯಿತು.

ಕೋಟೆಹುಂಡಿ ಗ್ರಾಮಸ್ಥರು ಅದ್ಧೂರಿಯಾಗಿ ಮಹದೇವು ಅವರ ಹುಟ್ಟುಹಬ್ಬ ಆಚರಿಸಿ, ಸಿಹಿ ಹಂಚಿ ಸಂಭ್ರಮಿಸಿದರು. ಚಾಮುಂಡೇಶ್ವರಿ ಕ್ಷೇತ್ರದ ಶಾಸಕರಾದ ಜಿ.ಟಿ.ದೇವೇಗೌಡರು ಕರೆ ಮಾಡಿ, ಶುಭಾಶಯ ತಿಳಿಸಿದರು. ಹುಣಸೂರು ಕ್ಷೇತ್ರದ ಶಾಸಕ ಜಿ.ಡಿ.ಹರೀಶ್ ಗೌಡರು, ಮಹದೇವು ಅವರ ಮೈಸೂರು ದಟ್ಟಗಳ್ಳಿ ನಿವಾಸದಲ್ಲಿ ಹೂಗುಚ್ಛ ನೀಡಿ, ಶುಭಾಶಯ ಕೋರಿದರು.

ಧನಗಳ್ಳಿ ಗ್ರಾಮ ಪಂಚಾಯಿತಿ, ಜಯಪುರ ಗ್ರಾಪಂ, ದೊಡ್ಡ ಮಾರಗೌಡನಹಳ್ಳಿ ಗ್ರಾಪಂ ವ್ಯಾಪ್ತಿಯ ಮುಖಂಡರು, ಜೆಡಿಎಸ್ ಕಾರ್ಯಕರ್ತರು, ತೋಣಚಿಕೊಪ್ಪಲು, ಜೆ.ಪಿ.ನಗರ, ದೊಡ್ಡಹುಂಡಿ, ಡಿ.ಸಾಲುಂಡಿ ಗ್ರಾಮಸ್ಥರು ಸೇರಿದಂತೆ ವಿವಿಧೆಡೆಯಿಂದ ಆಗಮಿಸಿದ್ದ ನೂರಾರು ಮಂದಿ ಮಹದೇವು ಅವರನ್ನು ಅಭಿನಂದಿಸಿ, ಶುಭಾಶಯ ತಿಳಿಸಿದರು.

## ನ್ಯೂಸ್ ಪ್ರಿಂಟ್ ಸಮಸ್ಯೆ: ಐಎನ್‌ಎಸ್ ಕಳವಳ




**ನವದೆಹಲಿ:** ದೇಶದಲ್ಲಿ ಮುದ್ರಣ ಮಾಧ್ಯಮಗಳಿಗೆ ಆಗುತ್ತಿರುವ ನ್ಯೂಸ್ ಪ್ರಿಂಟ್‌ನ ಸಮಸ್ಯೆ ಬಗ್ಗೆ 'ದಿ ಇಂಡಿಯನ್ ನ್ಯೂಸ್ ಪೇಪರ್ ಸೊಸೈಟಿ' ತೀವ್ರ ಕಳವಳ ವ್ಯಕ್ತಪಡಿಸಿದೆ.

ಈ ಕುರಿತು ಮಂಗಳವಾರ ಪತ್ರಿಕಾ ಪ್ರಕಟಣೆ ಬಿಡುಗಡೆ ಮಾಡಿರುವ ಐಎನ್‌ಎಸ್, ಭಾರತದಲ್ಲಿ ನ್ಯೂಸ್ ಪ್ರಿಂಟ್‌ನ (ಸುದ್ದಿ ಪತ್ರಿಕೆಗಳನ್ನು ಮುದ್ರಿಸಲು ಬಳಸುವ ಕಚ್ಚಾ ಕಾಗದ) ಸಮಸ್ಯೆ ಹೀಗೆ ಮುಂದುವರಿದಲ್ಲಿ ಮುದ್ರಣ ಮಾಧ್ಯಮವನ್ನು ವಿಸ್ತರಿಸುವುದರಲ್ಲಿ ಯಾವುದೇ ಅರ್ಥವಿಲ್ಲ ಎಂದು ಬೇಸರ ವ್ಯಕ್ತಪಡಿಸಿದೆ.

ಭಾರತದಲ್ಲಿ ನ್ಯೂಸ್ ಪ್ರಿಂಟ್‌ಗಾಗಿ ಅತಿಯಾಗಿ ಆಮದಿನ ಮೇಲೆಯೇ ಅವಲಂಬನೆ ಇದೆ. ಇದು ತಗ್ಗುತ್ತಿಲ್ಲ. ವಿದೇಶಗಳಿಂದಲೇ ಶೇ.60 ರಷ್ಟು ನ್ಯೂಸ್ ಪ್ರಿಂಟ್‌ನ್ನು ತರಿಸಿಕೊಳ್ಳುತ್ತಿದ್ದೇವೆ. ಇದರಿಂದ ವೆಚ್ಚವೂ ಹೆಚ್ಚು. ದೇಶೀಯವಾಗಿ ಉದ್ಯಮಗಳು ಶೇ.40 ರಷ್ಟು ನ್ಯೂಸ್ ಪ್ರಿಂಟ್ ಅನ್ನು ಉತ್ಪಾದಿಸಲೂ ಹೆಣಗಾಡುತ್ತಿವೆ ಎಂದು ಹೇಳಿದೆ.

ಸುಮಾರು 2 ದಶಕಗಳಿಂದ ಇದೇ ಪರಿಸ್ಥಿತಿ ದೇಶದಲ್ಲಿರುವುದರಿಂದ ಮುದ್ರಣ ಮಾಧ್ಯಮಗಳನ್ನು ನಡೆಸುವುದು ಕಷ್ಟವಾಗಿದೆ. ಆದರೆ, ಮುದ್ರಣ ಮಾಧ್ಯಮವು ದೇಶದ ಸಾರ್ವಜನಿಕ ವಿಷಯಗಳ ಚರ್ಚೆಗೆ ಅತ್ಯವಶ್ಯಕವಾಗಿದೆ ಎಂದು ಐಎನ್‌ಎಸ್ ಹೇಳಿದೆ.

## ಮುಸಲ್ಮಾನ ಬಾಂಧವರಿಂದ ವಿಶೇಷ ಪ್ರಾರ್ಥನೆ...





ಮುಸಲ್ಮಾನ ಬಾಂಧವರು ಮಂಗಳವಾರ ರಾತ್ರಿ ಶಬ್–ಎ–ಬರಾತ್ ಪ್ರಯುಕ್ತ ಮೈಸೂರಿನ ಮಿಲಾದ್ ಪಾರ್ಕ್ ಎದುರಿನ ಅಶೋಕ ರಸ್ತೆಯ ಮಸೀದಿ (ಮಸೀದಿ ಎ ಅಜಮ್) ಎದುರು ವಿಶೇಷ ಪ್ರಾರ್ಥನೆ ಸಲ್ಲಿಸಿದರು. ಮತ್ತೊಂದು ಚಿತ್ರದಲ್ಲಿ ಶಬ್–ಎ–ಬರಾತ್ ಅಂಗವಾಗಿ ಪೊಲೀಸರು ನಗರದಲ್ಲಿ ಪಥಸಂಚಲನ ನಡೆಸಿದ್ದನ್ನು ಕಾಣಬಹುದು.

# ಮಾದಿಗ ಸಮುದಾಯದ ವಕೀಲರು ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು

## ರಾಜ್ಯಮಟ್ಟದ ಮಾದಿಗ ವಕೀಲರ ಸಮ್ಮೇಳನದಲ್ಲಿ ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಕರೆ



ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಜ್ಯೋತಿ ಬೆಳಗಿಸುವ ಮೂಲಕ ಮಾದಿಗ ವಕೀಲರ ಸಮ್ಮೇಳನ ಉದ್ಘಾಟಿಸಿದರು.

ಧಾರವಾಡ, ಫೆ.3– ವಕೀಲರ ಶಕ್ತಿ ಸಂವಿಧಾನದ ಶಕ್ತಿಯಾಗಿದೆ. ಮಾದಿಗ ಸಮಾಜದ ವಕೀಲರು ಸಂಘಟಿತರಾಗಿ ಸಮಾಜದ ಅಭಿವೃದ್ಧಿಗೆ ಶ್ರಮಿಸಬೇಕು ಎಂದು ಅಬಕಾರಿ ಸಚಿವ ಆರ್.ಬಿ.ತಿಮ್ಮಾಪುರ ಹೇಳಿದರು.

ಇಲ್ಲಿನ ಕೆಲಗೇರಿ ರಸ್ತೆಯ ಸಿದ್ಧೇಶ್ವರ ಸ್ವಾಮೀಜಿ ನಗರದ ಬಿ.ಡಿ. ಪಾಟೀಲ ಕನ್ವೆನ್ಷನ್ ಸಭಾಂಗಣದ ಭಾನುವಾರ ಆಯೋಜಿಸಿದ್ದ 2ನೇ ರಾಜ್ಯಮಟ್ಟದ ಮಾದಿಗ ವಕೀಲರ ಸಮ್ಮೇಳನ ಉದ್ಘಾಟನಾ ಕಾರ್ಯಕ್ರಮದಲ್ಲಿ ಅವರು ಮಾತನಾಡಿದರು.

ಸಮುದಾಯದ ವಕೀಲರು ಇಂದಿನ ಸ್ಥಿತಿಗತಿ ಬಗ್ಗೆ ಚರ್ಚಿಸಬೇಕು. ಇತರೆ ಸಮುದಾಯಗಳಿಗೆ ಸಿಗುವ ಸೌಲಭ್ಯಗಳು ನಮ್ಮ ಸಮಾಜಕ್ಕೂ ಸಿಗಬೇಕಾದರೆ ಹೋರಾಟ ಮಾಡುವುದು ಅತ್ಯಗತ್ಯವಾಗಿದೆ ಎಂದರು.

ಮಾದಿಗ ಜನಾಂಗದ ಇತಿಹಾಸದ ಬಗ್ಗೆ ಯುವ ಪೀಳಿಗೆಯಲ್ಲಿ ಜಾಗೃತಿ ಮೂಡಿಸಬೇಕು. ಸಮುದಾಯದ ಪರ ದುಡಿಯುವ ಆಸಕ್ತಿ ಇರುವವರನ್ನು ರಾಜಕೀಯವಾಗಿ ಮುಂದೆ ತರುವ ಕೆಲಸ ಮಾಡಬೇಕಿದೆ ಎಂದರು.

ಕರ್ನಾಟಕ ಸಾಮಾಜಿಕ ನ್ಯಾಯಪರ ವಕೀಲರ ವೇದಿಕೆ ಅಧ್ಯಕ್ಷ ಎಸ್. ಅರುಣಕುಮಾರ್ ಮಾತನಾಡಿ, ತೆಲಂಗಾಣ, ಆಂಧ್ರಪ್ರದೇಶ, ತಮಿಳುನಾಡು ಹಾಗೂ ಪಂಜಾಬ್ ರಾಜ್ಯಗಳ ಮಾದರಿಯಲ್ಲಿ ಕರ್ನಾಟಕ ಸರ್ಕಾರವೂ ಒಳ ಮೀಸಲಾತಿ ಜಾರಿಗೊಳಿಸಬೇಕು. ಆ ಮೂಲಕ ಮಾದಿಗ ಸಮುದಾಯದ ಏಳಿಗೆಗೆ ಸಹಕರಿಸಬೇಕು ಎಂದು ಆಗ್ರಹಿಸಿದರು.

ಸಂವಿಧಾನಿಕ ಹಕ್ಕಿಗಾಗಿ ಮಾದಿಗ ಸಮುದಾಯ 35 ವರ್ಷಗಳಿಂದ ಹೋರಾಟ ನಡೆಸಿದೆ. ನಿಮ್ಮ ನಂಬಿಕೆ, ವಿಶ್ವಾಸವನ್ನು ಹುಸಿಯಾಗಲು ಎಂದಿಗೂ ಬಿಡುವುದಿಲ್ಲ. ನಾವು ಯಾವ ಪಕ್ಷ, ಗುಂಪು ಅಥವಾ ಯಾವ ನಾಯಕರ ಪರವೂ ಇಲ್ಲ. ಜಾತಿ ಮುಂದಿಟ್ಟುಕೊಂಡು ರಾಜಕೀಯ ಮಾಡುವ ಹಂತಕ್ಕೆ ನಾವು ಇಳಿಯುವುದಿಲ್ಲ ಎಂದರು.

ಮಾಜಿ ಶಾಸಕ ವೀರಭದ್ರಪ್ಪ ಹಾಲಹರವಿ ಮಾತನಾಡಿ, ಒಳಮೀಸಲಾತಿ ಜಾರಿಗೆ ಒತ್ತಾಯಿಸಿ ಮಾದಿಗ ಸಮಾಜ 30 ವರ್ಷಗಳಿಂದ ಹೋರಾಟ ನಡೆಸುತ್ತಿದ್ದರೂ ಈವರೆಗೂ ಬೇಡಿಕೆ ಈಡೇರಿಲ್ಲ. ಮೀಸಲಾತಿ ಪಡೆದುಕೊಳ್ಳಲು ಸಮಾಜದವರು ಒಗ್ಗಟ್ಟು ಪ್ರದರ್ಶಿಸಬೇಕು. ಸಂಘಟಿತರಾಗಿ ಹೋರಾಡಬೇಕು ಎಂದು ತಿಳಿಸಿದರು.

ಐ.ಆರ್.ಎಸ್ ಅಧಿಕಾರಿ ಎಚ್.ಆರ್. ಭೀಮಾಶಂಕರ್, ವಕೀಲರಾದ ಮರಿಚನ್ನಮ್ಮ, ಎಂ.ದಾಸಯ್ಯ, ಹನುಮೇಶ ಗುಂಡೂರ್, ಬೂದಿತಿಟ್ಟು ರಾಜೇಂದ್ರ ಎಲ್., ಬಿಸ್ನಳ್ಳಿ ಜಯಪ್ಪ, ಚಂದ್ರಪ್ಪ, ಮಾಳಪ್ಪ ಕುರ್ಕಿ, ಚಂದ್ರಶೇಖರ ನಡುವಿಮನಿ, ಸುರೇಶ ಕೋಟೂರ, ಶಿವಕುಮಾರ ದೊಡ್ಡಮನಿ ಉಪಸ್ಥಿತರಿದ್ದರು.

> ಮಾದಿಗ ಸಮಾಜವು ಸಾಮಾಜಿಕ ಶೈಕ್ಷಣಿಕ ಹಾಗೂ ಆರ್ಥಿಕವಾಗಿ ಹಿಂದುಳಿದಿದೆ. ಸಮಾಜದ ವಿದ್ಯಾರ್ಥಿಗಳ ಅಭ್ಯುದಯಕ್ಕೆ ಮೀಸಲಾತಿ ಅಗತ್ಯವಿದೆ.
> –ವೀರಭದ್ರಪ್ಪ ಹಾಲಹರವಿ, ಮಾಜಿ ಶಾಸಕ.

> ಒಳ ಮೀಸಲಾತಿಗಾಗಿ ಅನೇಕರು ಜೀವನವನ್ನೇ ತ್ಯಾಗ ಮಾಡಿದ್ದಾರೆ. ಅವರ ಪರಿಶ್ರಮದಿಂದ ಇಂದು ಗುರಿ ಮುಟ್ಟುವ ವಿಶ್ವಾಸ ಮೂಡಿದೆ. ಇದು ಸಮಾಜದ ಸಂಘಟಿತ ಹೋರಾಟಕ್ಕೆ ಸಿಕ್ಕ ಪ್ರತಿಫಲ. ಪರಿಶಿಷ್ಟ ಜಾತಿಯಲ್ಲಿ ಒಳ ಮೀಸಲಾತಿ ಕಲ್ಪಿಸುವ ಸರ್ಕಾರದ ಆದೇಶಕ್ಕೆ ಕಾನೂನು ಬಲ ನೀಡುವ ಉದ್ದೇಶದಿಂದ ವಿಧಾನಮಂಡಲ ಅನುಮೋದನೆ ನೀಡಿದ್ದ ಮಸೂದೆಯನ್ನು ರಾಜ್ಯಪಾಲರು ಸರ್ಕಾರಕ್ಕೆ ವಾಪಸ್ ಕಳುಹಿಸಿದ್ದಾರೆ. ಸರ್ಕಾರವು ಅದಕ್ಕೆ ಸೂಕ್ತ ಸ್ಪಷ್ಟನೆ ನೀಡಬೇಕು. ಶೀಘ್ರ ಒಳ ಮೀಸಲಾತಿ ಜಾರಿಗೆ ಕ್ರಮವಹಿಸಬೇಕು.
> –ಮಾದಾರ ಚನ್ನಯ್ಯ ಸ್ವಾಮೀಜಿ.

ಮೈಸೂರು ಮಿತ್ರ



# ವಿಜೃಂಭಣೆಯ ಶ್ರೀ ಸಿಡಿಲು ಮಲ್ಲಿಕಾರ್ಜುನಸ್ವಾಮಿ ರಥೋತ್ಸವ

## ಭಕ್ತರಿಂದ ಉಘೇ ಮಲ್ಲಯ್ಯ, ಉಘೇ ಗಿರಿಜಮ್ಮ, ಉಘೇ ಮಲ್ಲಿಕಾರ್ಜುನ ಜಯಘೋಷ



ಬೆಟ್ಟದಪುರದಲ್ಲಿ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಿತು.

ಬೆಟ್ಟದಪುರ, ಫೆ.3– ಪಿರಿಯಾಪಟ್ಟಣ ತಾಲೂಕಿನ ಬೆಟ್ಟದಪುರದ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿ ರಥೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನಡೆಯಿತು.

ರಥೋತ್ಸವ ಹಿನ್ನೆಲೆಯಲ್ಲಿ ಗ್ರಾಮದ ಮತ್ತು ಬೆಟ್ಟದ ಮೇಲಿನ ಶ್ರೀಸಿಡಿಲು ಮಲ್ಲಿಕಾರ್ಜುನ ಸ್ವಾಮಿ ದೇವಾಲಯಗಳಲ್ಲಿ ಮುಂಜಾನೆಯಿಂದಲೇ ಅಭಿ ಷೇಕ ಸೇರಿದಂತೆ ವಿಶೇಷ ಪೂಜಾ ಕೈಂಕರ್ಯ ಗಳು ನೆರವೇರಿದವು. ಬಳಿಕ ಬೆಳಗ್ಗೆ 11ರ ವೇಳೆಗೆ ಬಗೆ ಬಗೆಯ ಹೂಗಳು ಹಾಗೂ ಬಣ್ಣ ಬಣ್ಣದ ಬಾವುಟಗಳಿಂದ ಅಲಂಕರಿಸಿದ್ದ ರಥಗಳಲ್ಲಿ ಕ್ರಮವಾಗಿ ಬೆಳ್ಳಿ ಬಸಪ್ಪ, ಗಣಪತಿ ಹಾಗೂ ಭ್ರಮರಾಂಬ ಸಮೇತ ಶ್ರೀಸಿಡಿಲು ಮಲ್ಲಿಕಾರ್ಜುನಸ್ವಾಮಿ ಉತ್ಸವ ಮೂರ್ತಿಗಳನ್ನು ಪ್ರತಿಷ್ಠಾಪಿಸಲಾಯಿತು. ಈ ವೇಳೆ ಹಾಜರಿದ್ದ ಗಾವಡಗೆರೆ ಮಠದ ಶ್ರೀನಟ ರಾಜ ಸ್ವಾಮೀಜಿ, ಬೆಟ್ಟದ ಪುರ ಕನ್ನಡ ಮಠದ ಶ್ರೀ ಚನ್ನಬಸವ ದೇಶಿಕೇಂದ್ರ ಸ್ವಾಮೀಜಿ, ದಿಂಡು ಗಾಡು ಮಠದ ಅಪ್ಪಾಜಿ ಸ್ವಾಮೀಜಿ, ನ್ಯಾಯಾಧೀಶ ಮಲ್ಲಿಕಾರ್ಜುನ್, ಮಾಜಿ ಶಾಸಕ ಕೆ.ಮಹದೇವ್, ತಾಲೂಕು ಆಶ್ರಯ ಹಾಗೂ ಗ್ಯಾರಂಟಿ ಅನುಷ್ಠಾನ ಸಮಿತಿ ಅಧ್ಯಕ್ಷ ನಿತಿನ್ ವೆಂಕಟೇಶ್ ಹಾಗೂ ಇತರ ಗಣ್ಯರು ರಥಗಳಿಗೆ ಪೂಜೆ ಸಲ್ಲಿಸುವ ಮೂಲಕ ರಥೋತ್ಸವಕ್ಕೆ ಚಾಲನೆ ನೀಡಿದರು.

### ಬೆಟ್ಟ ಹತ್ತಿದ ಭಕ್ತರು

ಜಾತ್ರೆ ಅಂಗವಾಗಿ ಕಳೆದ ಮೂರ್‍ನಾಲ್ಕು ದಿನಗಳಿಂದ ಬೆಟ್ಟ ಹತ್ತುವ ಭಕ್ತರ ಸಂಖ್ಯೆ ಹೆಚ್ಚಾಗಿತ್ತು. ರಥೋತ್ಸವದಂದು ಸಹ ನೆತ್ತಿ ಸುಡುವ ಬಿಸಿಲನ್ನು ಲೆಕ್ಕಿಸದೆ ಸಾವಿರಾರೂ ಮಂದಿ ಬೆಟ್ಟ ಹತ್ತಿ ಶ್ರೀ ಸಿಡಿಲು ಮಲ್ಲಿಕಾರ್ಜುನ ಸ್ವಾಮಿಗೆ ಪೂಜೆ ಸಲ್ಲಿಸಿದರು. ಇದೇ ವೇಳೆ ಭಕ್ತರು, ಯುವಕ–ಯುವತಿಯರು ಸೆಲ್ಫಿ ತೆಗೆದುಕೊಂಡು, ರೀಲ್ಸ್ ಮಾಡುವ ಮೂಲಕ ಸಂತಸಪಟ್ಟರು. ದಣಿವು ನೀಗಿಸಲು ಮೆಟ್ಟಿಲುಗಳ ಉದ್ದಕ್ಕೂ ನೀರಿನ ಬಾಟಲ್, ಮಜ್ಜಿಗೆ ಮತ್ತು ಜ್ಯೂಸ್ ಮಾರಾಟ ಮಾಡುವ ಸಣ್ಣಪುಟ್ಟ ಅಂಗಡಿಗಳು ವ್ಯಾಪಾರ ವಹಿವಾಟು ನಡೆಸಿದವು.

ಈ ವೇಳೆ ಗ್ರಾಮದ ದೇವಾಲಯದ ಆವರಣದಲ್ಲಿ ಜಮಾಯಿಸಿದ್ದ ಭಕ್ತರು ಮೊದಲಿಗೆ ಬೆಳ್ಳಿ ಬಸಪ್ಪ, ನಂತರ ಗಣಪತಿ ಮತ್ತು ಕೊನೆಗೆ ಗಿರಿಜಮ್ಮ ಮಲ್ಲಯ್ಯ ರಥಗಳನ್ನು ಉಘೇ ಮಲ್ಲಯ್ಯ, ಉಘೇ ಗಿರಿಜಮ್ಮ, ಉಘೇ ಮಲ್ಲಿಕಾರ್ಜುನ ಎಂದು ಜಯಘೋಷ ಕೂಗುತ್ತಾ ಎಳೆದು ಭಕ್ತಿ ಸಮರ್ಪಿ ಸಿದರು. ಗ್ರಾಮದ ರಥ ಬೀದಿ ಸೇರಿದಂತೆ ಪ್ರಮುಖ ಬೀದಿಗಳಲ್ಲಿ ಸಂಚರಿಸಿದ ರಥಗಳು 12 ಗಂಟೆಯೊ ಳಗೆ ಬೆಟ್ಟದ ತಪ್ಪಲಿಗೆ ಆಗಮಿಸಿದವು. ಇದೇ ವೇಳೆ ಹಾಜರಿದ್ದ ನವದಂಪತಿಗಳು ಹಾಗೂ ಸಾವಿರಾರು ಭಕ್ತರು ಹಣ್ಣು ಜವನ ಎಸೆದು ಇಷ್ಟಾರ್ಥ ಸಿದ್ಧಿಗಾಗಿ ಪ್ರಾರ್ಥಿಸಿದರು. ಸಂಜೆವರೆಗೆ ಬೆಟ್ಟದ ತಪ್ಪಲಿನಲ್ಲಿ ರಥಗಳಲ್ಲಿ ಪ್ರತಿಷ್ಠಾಪಿಸಿದ್ದ ಬೆಳ್ಳಿ ಬಸಪ್ಪ, ಗಣಪತಿ ಮತ್ತು ಗಿರಿಜಮ್ಮ ಮಲ್ಲಯ್ಯ ದೇವರಿಗೆ ಭಕ್ತರು ಪೂಜೆ ಸಲ್ಲಿಸಿದರು. ಬಳಿಕ ರಥಗಳು ದೇವಾಲಯದ ಆವರಣದಲ್ಲಿದ್ದ ಸ್ವಸ್ಥಾನಕ್ಕೆ ಬಂದು ಸೇರಿದವು.

**ಅನ್ನ ದಾಸೋಹ:** ರಥೋತ್ಸವ ಅಂಗವಾಗಿ ಭಕ್ತರಿಗೆ ಸಿಡಿಲು ಮಲ್ಲಿಕಾರ್ಜುನಸ್ವಾಮಿ ಮನೆ ದೇವರ ಭಕ್ತರ ಸಮಿತಿಯಿಂದ ಅನ್ನ ದಾಸೋಹ ಆಯೋಜಿಸಲಾಗಿತ್ತು. ಅಲ್ಲದೇ ಸ್ಥಳೀಯ ವಿವಿಧ ಸೇವಾ ಸಂಘ ಸಂಸ್ಥೆಗಳೂ ಸಹ ಭಕ್ತರಿಗೆ ಅನ್ನದಾನ ಮಾಡಿದರು. ತಾಲೂಕು ಆರೋಗ್ಯ ಇಲಾಖೆಯಿಂದ ಬೆಟ್ಟದ ಬಳಿ ಆರೋಗ್ಯ ಶಿಬಿರ ಆಯೋಜಿಸಲಾಗಿತ್ತು. ನೂರಾರು ಮಂದಿ ಶಿಬಿರದ ಪ್ರಯೋಜನ ಪಡೆದರು.

ರಥೋತ್ಸವದಲ್ಲಿ ಅನ್ನದಾನ ಸಮಿತಿಯ ಕೆ.ಬಿ.ಶಿವಕುಮಾರ್, ಬೆಮ್ಮತ್ತಿ ಸುರೇಶ್, ಬಸವ ರಾಜು, ಮಂಜುನಾಥ್, ಪ್ರಭು, ಮಹೇಶ್, ಶಾಂತ ಕುಮಾರ್, ಮಂಜುನಾಥ್, ಗಣೇಶ್, ಗಿರೀಶ್, ಬೆಟ್ಟದಪುರ ಶಿವದೇವ್, ರಾಜೇಂದ್ರ, ಮಹದೇವ್, ಬೆಟ್ಟದಪುರದ ಉಪ್ಪಾರ ಸಮಾಜದವರು ಉತ್ಸವ ಮತ್ತು ರಥೋತ್ಸವ ನೆರವೇರಿಸಿದರು. ಪ್ರಧಾನ ಅರ್ಚಕ ಸತೀಶ್ ಕಶ್ಯಪ್ ಗಿರಿಜಾ ಕಲ್ಯಾಣ ಹಾಗೂ ರಥೋತ್ಸವ ಪೂಜೆ ನೆರವೇರಿಸಿದರು.

ರಥೋತ್ಸವ ವೇಳೆ ಅಹಿತಕರ ಘಟನೆ ನಡೆಯದಂತೆ ಬೆಟ್ಟದಪುರ ಪೊಲೀಸ್ ಠಾಣೆ ವತಿಯಿಂದ ಬಿಗಿ ಪೊಲೀಸ್ ಬಂದೋಬಸ್ತ್ ಏರ್ಪಡಿಸಲಾಗಿತ್ತು.

# ಪ್ರತಿ ಗ್ರಾಮಗಳಿಗೂ ಗ್ರಂಥಾಲಯ ಅವಶ್ಯಕ

## ಗ್ರಾಪಂ ಮಾಜಿ ಅಧ್ಯಕ್ಷ ಹೆಚ್.ಎಂ.ಮಹದೇವಸ್ವಾಮಿ



ಹಲ್ಲರೆಯಲ್ಲಿ ಡಿಜಿಟಲ್ ಗ್ರಂಥಾಲಯ ಉದ್ಘಾಟಿಸಲಾಯಿತು.

ಮಲ್ಲುಂಡಿ, ಫೆ.3– ಪ್ರತಿ ಗ್ರಾಮಗಳಿಗೂ ಗ್ರಂಥಾಲಯ ಅವಶ್ಯಕ ಎಂದು ಗ್ರಾಪಂ ಮಾಜಿ ಅಧ್ಯಕ್ಷ ಮಹದೇವಸ್ವಾಮಿ ತಿಳಿಸಿದರು.

ಇಲ್ಲಿಗೆ ಸಮೀಪದ ಹಲ್ಲರೆ ಗ್ರಾಪಂನಲ್ಲಿ ಡಿಜಿಟಲ್ ಗ್ರಂಥಾಲಯ ಉದ್ಘಾಟನೆ ಹಾಗೂ ಗ್ರಾಪಂ ಸದಸ್ಯರ ಬೀಳ್ಕೊಡುಗೆ ಸಮಾರಂಭದಲ್ಲಿ ಮಾತನಾಡಿದ ಅವರು, ಪ್ರಸ್ತುತ ಮೊಬೈಲ್‌ನಿಂದಾಗಿ ವಿದ್ಯಾರ್ಥಿಗಳು ಓದಿನತ್ತ ನಿರಾಸಕ್ತಿ ತೋರುತ್ತಿದ್ದಾರೆ. ಗ್ರಂಥಾಲಯದಲ್ಲಿ ಪತ್ರಿಕೆಗಳು, ಪುಸ್ತಕ ಗಳು ದೊರೆಯಲಿದ್ದು, ಪ್ರತಿಯೊಬ್ಬರೂ ಬಿಡುವು ಮಾಡಿಕೊಂಡು ಬಂದು ಪತ್ರಿಕೆ ಹಾಗೂ ಪುಸ್ತಕಗಳನ್ನು ಓದುವ ಹವ್ಯಾಸ ಮಾಡಿಕೊಂಡರೆ ಜ್ಞಾನಾರ್ಜನೆ ಜೊತೆಗೆ ದೇಶದ ವಿದ್ಯಮಾನಗಳ ಬಗ್ಗೆ ತಿಳಿಯಬಹುದಾಗಿದೆ. ಪ್ರತಿ ಗ್ರಾಪಂ ವ್ಯಾಪ್ತಿಯಲ್ಲಿ ದೇವಾಲಯದ ಬದಲು ಗ್ರಂಥಾಲಯ ತೆರೆಯಬೇಕು ಎಂದರು.

ಪಿಡಿಓ ಮಹೇಶ್ ಮಾತನಾಡಿ, ಗ್ರಾಮೀಣ ಭಾಗದಲ್ಲಿ ಹೆಚ್ಚಾಗಿ ಗ್ರಂಥಾಲಯಗಳನ್ನು ಸ್ಥಾಪಿಸಬೇಕಿದೆ. ಮಕ್ಕಳು ಶಾಲೆಯ ಬಿಡುವಿನ ವೇಳೆ ಗ್ರಂಥಾಲಯಕ್ಕೆ ಆಗಮಿಸಿ ಇಲ್ಲಿರುವ ಪುಸ್ತಕಗಳನ್ನು ಓದುವ ಮೂಲಕ ಗ್ರಂಥಾಲಯವನ್ನು ಸದುಪಯೋಗ ಪಡಿಸಿಕೊಳ್ಳಬೇಕು ಎಂದು ತಿಳಿಸಿದರು.

ಈ ವೇಳೆ ಗ್ರಾಪಂ ಅಧ್ಯಕ್ಷೆ ದೇವಮ್ಮ ಚೆಲುವರಾಜ್, ಉಪಾಧ್ಯಕ್ಷ ರೆಹಮತ್ ಉಲ್ಲಾ, ಸದಸ್ಯರಾದ ಮಲ್ಲಪ್ಪ, ಕೃಷ್ಣನಾಯಕ, ಶಿವಕುಮಾರ್, ಸ್ವಾಮಿ, ಲಕ್ಷ್ಮಿ, ಚನ್ನಮ್ಮ, ಕಮಲಮ್ಮ, ಚಂದ್ರಶೇಖರ ಆರಾಧ್ಯ, ಪ್ರತಿಮಾ, ಸೋಮೇಶ್, ಭಾಗ್ಯಮ್ಮ, ನಾಗರಾಜಪ್ಪ, ಗೌರಮ್ಮ, ನೇತ್ರಾವತಿ, ನಗೀನಾ ಭಾನು, ರತ್ನಮ್ಮ, ತೈಯಬ್ ಉನ್ನಿಸಾ, ಮುಖಂಡರಾದ ಶಿವಮೂರ್ತಿ, ಅಬ್ದುಲ್ ರಜಾಕ್, ಬಿಲ್ ಕಲೆಕ್ಟರ್ ಮರಿಸ್ವಾಮಿ, ಕಂಪ್ಯೂಟರ್ ಆಪರೇಟರ್ ಚಂದ್ರಶೇಖರ್ ಸೇರಿದಂತೆ ಸಿಬ್ಬಂದಿ ವರ್ಗದವರಿದ್ದರು.

# ಇಂದು ಶ್ರೀಸಾಯಿ ಮಂದಿರದ 10ನೇ ವಾರ್ಷಿಕೋತ್ಸವ

ಹುಣಸೂರು, ಫೆ.3– ನಗರದ ಬಿ.ಎಂ. ರಸ್ತೆಯಲ್ಲಿರುವ ಶ್ರೀಸಾಯಿ ಮಂದಿರದ 10ನೇ ವಾರ್ಷಿಕೋತ್ಸವ ಫೆ4ರಂದು ಅದ್ದೂರಿಯಾಗಿ ನಡೆಯಲಿದೆ ಎಂದು ಶ್ರೀಸಾಯಿ ಮಂದಿರದ ಪ್ರಕಟಣೆ ತಿಳಿಸಿದೆ.

ಬೆಳಗ್ಗೆ ವಿಷ್ಣು ಸಹಸ್ರನಾಮ ಪಾರಾಯಣ, ಸಂಕಲ್ಪ, ಕಳಸ ಸ್ಥಾಪನೆ, ಮಹಾಗಣಪತಿ ಹೋಮ, ಪೂರ್ಣಾಹುತಿ, ಬಾಬಾ ಮೂರ್ತಿಗೆ ಅಭಿಷೇಕ ಸೇರಿದಂತೆ ವಿವಿಧ ಧಾರ್ಮಿಕ ಪೂಜಾ ಕೈಂಕರ್ಯಗಳು ನೆರವೇರಲಿದೆ. ಮಧ್ಯಾಹ್ನ 12 ಗಂಟೆಗೆ ಮಂಗಳಾರತಿ, 12.30 ರಿಂದ ಭಕ್ತರಿಗೆ ಪ್ರಸಾದ ವಿನಿಯೋಗ ಮಾಡಲಾಗುವುದು. ಅಲ್ಲದೇ ಮಧ್ಯಾಹ್ನ 1 ಗಂಟೆಗೆ ಭಜನಾ ಕಾರ್ಯಕ್ರಮ ಆಯೋಜಿಸಲಾಗಿದೆ.

# ಹುಣಸೂರಲ್ಲಿ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ



ಹುಣಸೂರಲ್ಲಿ ಜಾಥಾ ಮೂಲಕ ಜಾಗೃತಿ ಮೂಡಿಸಲಾಯಿತು.

ಹುಣಸೂರು, ಫೆ.3– ಸವಾರರು ವಾಹನ ಚಾಲನೆ ವೇಳೆ ಜಾಗ್ರತೆ ವಹಿಸಿದರೆ ಅಪಘಾತ ತಪ್ಪಿಸಬಹುದು ಎಂದು ಡಿವೈಎಸ್ಪಿ ರವಿ ತಿಳಿಸಿದರು.

ನಗರದ ರೋಟರಿ ಸಂಸ್ಥೆ ಮತ್ತು ಪೊಲೀಸ್ ಇಲಾಖೆ ಸಂಯುಕ್ತಾಶ್ರಯದಲ್ಲಿ ನಡೆದ ರಾಷ್ಟ್ರೀಯ ರಸ್ತೆ ಸುರಕ್ಷತಾ ಸಪ್ತಾಹ ಅಂಗವಾಗಿ ಗ್ರಾಮಾಂತರ ಪೊಲೀಸ್ ಠಾಣೆಯಿಂದ ಜಾಥಾ ಹೊರಟು ನಗರದ ಪ್ರಮುಖ ರಸ್ತೆಗಳಲ್ಲಿ ಸಂಚರಿಸಿ ಜನರಲ್ಲಿ ಅರಿವು ಮೂಡಿಸಿ ಬಳಿಕ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಯುವಕರೇ ಹೆಚ್ಚಾಗಿ ಸಾವನ್ನಪ್ಪುತ್ತಿದ್ದಾರೆ. ಇದಕ್ಕೆ ಅತಿ ವೇಗದ ಚಾಲನೆ ಕಾರಣವಾಗಿದೆ ಎಂದರು.

ಪ್ರತಿಯೊಬ್ಬರೂ ರಸ್ತೆ ದಾಟುವಾಗ, ವಾಹನ ಚಾಲನೆ ಮಾಡುವಾಗ ಜಾಗ್ರತೆ ವಹಿಸಬೇಕು. ವಾಹನ ಚಾಲನೆ ಮಾಡಲು ಪರವಾನಗಿ ಅವಶ್ಯಕ. ಬೈಕ್ ಸವಾರರು ಹೆಲ್ಮೆಟ್ ಧರಿಸಿ, ಇತರೆ ದೊಡ್ಡ ವಾಹನ ಚಾಲನೆ ಮಾಡುವವರು ಮದ್ಯ ಸೇವನೆ ಮಾಡಬೇಡಿ ಎಂದು ತಿಳಿಸಿದರು.

ರೋಟರಿ ಕ್ಲಬ್ ಅಧ್ಯಕ್ಷ ಕೃಷ್ಣ ಕುಮಾರ್ ಮಾತನಾಡಿ, ರಸ್ತೆ ಎಷ್ಟೇ ದೊಡ್ಡದಿದ್ದರೂ ಇತ್ತೀಚೆಗೆ ಅಪಘಾತಗಳು ಜಾಸ್ತಿ ಸಂಭವಿಸುತ್ತಿವೆ. ಇದಕ್ಕೆ ಮೊಬೈಲ್, ಮದ್ಯ ಸೇವನೆ, ಧೂಮಪಾನ ಮತ್ತು ಅಜಾಗರೂಕತೆ ಕಾರಣ. ರಸ್ತೆಯಲ್ಲಿ ಸಂಚರಿಸುವಾಗ ಕಾನೂನು ಪಾಲನೆ ಮುಖ್ಯ. ಅದನ್ನು ನಾವೆಲ್ಲರೂ ಪಾಲಿಸಿದರೇ ಮಾತ್ರ ಅಪಘಾತ ತಪ್ಪಿಸಬಹುದು ಎಂದರು.

ಈ ವೇಳೆ ಸಿಪಿಐ ಸಂತೋಷ್ ಕಶ್ಯಪ್, ಎಸ್ಐ ರಾಮಣ್ಣ, ಎಎಸ್ಐ ಬಿ.ಕೆ. ಬಸಪ್ಪ, ದಿನೇಶ್, ರೋಟರಿ ಕಾರ್ಯದರ್ಶಿ ಶಾಮಣ್ಣ, ರೊ.ಚಿಲ್ಕುಂದ ಮಹೇಶ್, ರೊ. ಸಂತೋಷ್ ಕುಮಾರ್, ರೊ.ಮಂಜುನಾಥ್, ಗಂಗಾಧರ್, ಎಸ್ಐ ಜಮೀರ್, ಸಂತೋಷ್ ಇತರರಿದ್ದರು.

# ನಿರುಪಯುಕ್ತ ಪಾರ್ಕ್ ಇದೀಗ ಸಾರ್ವಜನಿಕರ ಉಪಯೋಗಕ್ಕೆ

## ಸದಾಶಿವ ಅವರ ಸಮಾಜಮುಖಿ ಕಾರ್ಯಕ್ಕೆ ಮೆಚ್ಚುಗೆ



ನಿರುಪಯುಕ್ತ ಪಾರ್ಕ್ ಸ್ವಚ್ಛಗೊಂಡಿರುವುದು.

ತಿ.ನರಸೀಪುರ, ಫೆ.3– ಪಟ್ಟಣದ ಕಪಿಲಾ ನದಿ ದಂಡೆಯಲ್ಲಿರುವ ಶ್ರೀಬಳ್ಳೇಶ್ವರಸ್ವಾಮಿ ದೇವಸ್ಥಾನದ ಬಳಿಯ ಪಾರ್ಕ್ ಅನ್ನು ಹೋಟೆಲ್ ಉದ್ಯಮಿಯೊಬ್ಬರು ತಮ್ಮ ಪರಿಶ್ರಮದಿಂದ ಸ್ವಚ್ಛಗೊಳಿಸುವ ಮೂಲಕ ಸಾರ್ವಜನಿಕರ ಉಪಯೋಗಕ್ಕೆ ಸಿದ್ಧಗೊಳಿಸಿದ್ದಾರೆ.

ಶ್ರೀಬಳ್ಳೇಶ್ವರಸ್ವಾಮಿ ದೇವಸ್ಥಾನಕ್ಕೆ ಹೊಂದಿ ಕೊಂಡಂತಿರುವ ಪಟ್ಟಣದ ಏಕೈಕ ಉದ್ಯಾನವನ ಈ ಹಿಂದೆ ಗಿಡ ಗಂಟಿಗಳು ಬೆಳೆದು ಸಾರ್ವಜನಿಕರ ಉಪಯೋಗಕ್ಕೆ ಬಾರದೆ ನಿರುಪಯುಕ್ತವಾಗಿತ್ತು. ಇದನ್ನು ಸ್ವಚ್ಛಗೊಳಿಸಲು ಸಂಸ್ಥೆಯೊಂದು ಮುಂದೆ ಬಂದಿತಾದರೂ ನಿರ್ವಹಣೆ ಸಾಧ್ಯವಾಗಿರಲಿಲ್ಲ. ಹೀಗಾಗಿ ಪಾರ್ಕ್‌ನಲ್ಲಿ ಮತ್ತಷ್ಟು ಗಿಡ ಗಂಟಿಗಳು ಬೆಳೆದು ನೋಡಲು ಅರಣ್ಯದಂತೆ ಕಾಣುತ್ತಿತ್ತು. ಅಲ್ಲದೇ ವಿಷಕಾರಿ ಹಾವುಗಳು ತಮ್ಮ ಆವಾಸ ಸ್ಥಾನವಾಗಿ ಮಾಡಿಕೊಂಡಿದ್ದವು. ಅಲ್ಲದೇ ಬೀಡಾಡಿ ಹಸುಗಳು ಸಹ ಪಾರ್ಕ್ ಅನ್ನು ತಮ್ಮ ನೆಲೆಯಾಗಿ ಮಾಡಿಕೊಂಡಿದ್ದವು.

ಈ ಹಿನ್ನೆಲೆಯಲ್ಲಿ ಕಳೆಗುಂದಿದ ಉದ್ಯಾನವನಕ್ಕೆ ಕಾಯಕಲ್ಪ ನೀಡಬೇಕೆಂಬ ಉದ್ದೇಶದಿಂದ ಪಟ್ಟಣದ ಹರೀಶ್ ಮಿಲ್ಟ್ರಿ ಹೋಟೆಲ್ ಮಾಲೀಕ ಸದಾಶಿವ ಅವರು ತಮ್ಮ ಸ್ವಂತ ಖರ್ಚಿನಲ್ಲಿ ಪಾರ್ಕ್‌ನಲ್ಲಿ ಅರಣ್ಯದಂತೆ ಬೆಳೆದು ನಿಂತಿದ್ದ ಗಿಡಗಂಟಿಗಳನ್ನು ತೆರವುಗೊಳಿಸಿದ್ದಾರೆ. ಅಲ್ಲದೇ ಪಾರ್ಕ್‌ನಲ್ಲಿ ವಾಕಿಂಗ್ ಪಾಥ್ ನಿರ್ಮಾಣದ ಜೊತೆಗೆ ಅಲಂಕಾರಿಕ ಗಿಡಗಳನ್ನು ನೆಟ್ಟಿದ್ದಾರೆ. ಅಲ್ಲದೇ ಸಾರ್ವಜನಿಕರು ವಿಶ್ರಾಂತಿ ಪಡೆಯಲು ಸಹ ಅನುಕೂಲ ಕಲ್ಪಿಸಿದ್ದಾರೆ. ಅಲ್ಲದೇ ದೇವಾಲಯಕ್ಕೆ ಸಂಬಂಧಿಸಿದ ಮಾಹಿತಿಯುಳ್ಳ ಬೋರ್ಡ್‌ಗಳನ್ನು ಅಳವಡಿಸಿದ್ದು, ಇದರಿಂದ ಭಕ್ತರಿಗೆ ಸಾಕಷ್ಟು ಅನುಕೂಲವಾಗಿದೆ. ಅಲ್ಲದೇ ನೀರಿನ ಸಂಪರ್ಕ ಕಲ್ಪಿಸಿದ್ದು, ಪಾರ್ಕ್‌ನ ಅಂದ ಹೆಚ್ಚಿಸಲು ಅಲಂಕಾರಿಕ ಹುಲ್ಲನ್ನು ಬೆಳೆಸಲು ಮುಂದಾಗಿದ್ದಾರೆ.

ಸದಾಶಿವ ಮಾತನಾಡಿ, ಪಟ್ಟಣದಲ್ಲಿ ಉತ್ತಮವಾದ ಪಾರ್ಕ್ ಇಲ್ಲ. ಇರುವ ಪಾರ್ಕ್ ಅನ್ನು ಯಾರೂ ನಿರ್ವಹಣೆ ಮಾಡು ತ್ತಿಲ್ಲ. ಇದೀಗ ಪಾರ್ಕ್ ಸ್ವಚ್ಛಗೊಳಿಸಿರುವುದರಿಂದ ಸಾರ್ವಜನಿಕರು ವಿಶ್ರಾಂತಿ ಪಡೆಯಲು ಇಲ್ಲಿಗೆ ಆಗಮಿಸುತ್ತಿದ್ದಾರೆ. ಮುಂದಿನ ದಿನಗಳಲ್ಲಿ ಪಾರ್ಕ್‌ಗೆ ಮತ್ತಷ್ಟು ಮೂಲ ಸೌಕರ್ಯ ಕಲ್ಪಿಸಲು ಮುಂದಾಗುತ್ತೇನೆ ಎಂದರು.

ಇನ್ನೂ ಗಿಡ ಗಂಟಿಗಳು ಸೇರಿದಂತೆ ವಿಷಕಾರಿ ಹಾವು, ಬೀಡಾಡಿ ಹಸುಗಳ ಆವಾಸ ಸ್ಥಳವಾಗಿದ್ದ ಪಾರ್ಕ್ ಅನ್ನು ತಮ್ಮ ಸ್ವಂತ ಖರ್ಚಿನಿಂದ ಸ್ವಚ್ಛಗೊಳಿಸಿ ಅಭಿವೃದ್ಧಿ ಪಡಿಸಿರುವ ಸದಾಶಿವ ಅವರ ಕಾರ್ಯಕ್ಕೆ ಸಾರ್ವಜನಿಕರು ಮೆಚ್ಚುಗೆ ವ್ಯಕ್ತಪಡಿಸಿದ್ದಾರೆ.

# ರೈತರು ಕೃಷಿಯಿಂದ ವಿಮುಖರಾಗದೆ ಕೃಷಿಯಲ್ಲಿ ತೊಡಗಿಸಿಕೊಳ್ಳಿ



ನಂಜನಗೂಡು, ಫೆ.3– ನಮ್ಮನ್ನು ಆಳುವ ಸರ್ಕಾರಗಳು ಕಾಯ್ದೆಗಳಿಗೆ ತಿದ್ದುಪಡಿ ತಂದು ರೈತರ ಭೂಮಿ ಕಸಿದುಕೊಳ್ಳಲು ಹುನ್ನಾರ ನಡೆಸುತ್ತಿವೆ. ಆದ್ದರಿಂದ ರೈತರು ಕೃಷಿಯಿಂದ ವಿಮುಖರಾಗದೆ ಕೃಷಿಯಲ್ಲಿ ತೊಡಗಿಸಿಕೊಳ್ಳಬೇಕು ಎಂದು ಸಾಮೂಹಿಕ ನಾಯಕತ್ವ ರೈತ ಸಂಘದ ರಾಜ್ಯಾಧ್ಯಕ್ಷ ಹೊಸೂರು ಪ್ರಕಾಶ್ ತಿಳಿಸಿದರು.

ತಾಲೂಕಿನ ಕಳಲೆ ಗ್ರಾಮದಲ್ಲಿ ರೈತ ಸಂಘದ ಗ್ರಾಮ ಘಟಕ ಉದ್ಘಾಟಿಸಿ ಮಾತನಾಡಿದ ಅವರು, ರೈತರು ಯಾವಾಗಲೂ ಮಾರುಕಟ್ಟೆಯಲ್ಲಿ ಸೋಲುತ್ತಿರುವ ಕಾರಣ ಕೃಷಿ ಲಾಭದಾಯಕವಲ್ಲ ಎಂದು ಕೃಷಿಯಿಂದ ವಿಮುಖರಾಗುತ್ತಿದ್ದಾರೆ. ಸರ್ಕಾರ 2 ವರ್ಷ ಬೀಳು ಬಿಟ್ಟ ಭೂಮಿಯನ್ನು ಆರ್‌ಟಿಸಿಯಲ್ಲಿ ಸರ್ಕಾರಕ್ಕೆ ಸೇರಿದ್ದು ಎಂದು ನಮೂದಿಸುವ ಮೂಲಕ ರೈತರ ಭೂಮಿಯನ್ನು ವಶಪಡಿಸಿಕೊಳ್ಳಲು ಹುನ್ನಾರ ನಡೆಸುತ್ತಿದೆ. ಆದ್ದರಿಂದ ರೈತರು ಕೃಷಿಯಿಂದ ವಿಮುಖರಾಗದೆ ಕೃಷಿಯಲ್ಲಿ ತೊಡಗಬೇಕು. ಜೊತೆಗೆ ನಿಮ್ಮ ಬೆಳೆಗಳನ್ನು ಸಂಸ್ಕರಣೆ ಮತ್ತು ಮೌಲ್ಯವರ್ಧನೆ ಮಾಡುವ ಮೂಲಕ ಮಾರುಕಟ್ಟೆ ಸೃಷ್ಟಿಸಿಕೊಳ್ಳಬೇಕು. ಅಲ್ಲದೇ ರೈತರು ಸಮಗ್ರ ಕೃಷಿ ಪದ್ಧತಿ ಮೂಲಕ ದಿನನಿತ್ಯ ಬಳಸುವ ವಸ್ತುಗಳನ್ನು ನಿಮ್ಮ ಭೂಮಿಯಲ್ಲಿ ಬೆಳೆದು ಸ್ವಾವಲಂಬಿ ಬದುಕು ಕಟ್ಟಿಕೊಳ್ಳಲು ಮುಂದಾಗಬೇಕು. ಸರ್ಕಾರದ ರೈತ ವಿರೋಧಿ ನೀತಿಗಳನ್ನು ಪ್ರತಿಭಟನೆ ಮೂಲಕ ಎದುರಿಸಲು ಮುಂದಾಗಬೇಕು ಎಂದರು.

ರೈತ ಸಂಘದ ತಾಲೂಕು ಅಧ್ಯಕ್ಷ ಮಂಜುನಾಥ್ ಮಾತನಾಡಿದರು. ಕಾರ್ಯಕ್ರಮದಲ್ಲಿ ನೂರಾರು ರೈತರು ರೈತ ಸಂಘಕ್ಕೆ ಸೇರ್ಪಡೆಗೊಂಡರು. ಈ ವೇಳೆ ರಾಜ್ಯ ಕಾರ್ಯಾಧ್ಯಕ್ಷ ಮಂಜುಕಿರಣ್, ವೆಂಕಟೇಶ್, ಕಾರ್ತಿಕ್, ವೇಣುಗೋಪಾಲ್, ಶಿವಲಿಂಗ, ಮಹೇಶ್, ಮಂಜು, ಅಪ್ಪುರಾಜ್, ಕುಮಾರ್, ಶಂಭುಲಿಂಗ, ರಂಗಸ್ವಾಮಿ ಗಿರೀಶ್ ಸೇರಿದಂತೆ ಇತರರಿದ್ದರು.

## ಗೆಜ್ಜಗಾರ ರಕ್ಷಣಾ ಸಮಿತಿ ಚುನಾವಣೆ

# ಎಸ್.ಚೆನ್ನಪ್ಪ ಅಧ್ಯಕ್ಷ, ಮಂಜು ಉಪಾಧ್ಯಕ್ಷರಾಗಿ ಆಯ್ಕೆ



ಗೆಜ್ಜಗಾರ ರಕ್ಷಣಾ ಸಮಿತಿ ಅಧ್ಯಕ್ಷರಾಗಿ ಎಸ್.ಚೆನ್ನಪ್ಪ ಉಪಾಧ್ಯಕ್ಷರಾಗಿ ಮಂಜು ಆಯ್ಕೆಯಾದರು.

ಹೆಚ್.ಡಿ.ಕೋಟೆ ಫೆ.3– ರಾಜ್ಯ ಗೆಜ್ಜಗಾರ ರಕ್ಷಣಾ ಸಮಿತಿ ಕೋಟೆ ಮತ್ತು ಸರಗೂರು ತಾಲೂಕು ಅಧ್ಯಕ್ಷರಾಗಿ ಶಿರಮಳ್ಳಿ ಡ್ರಾಮ ಮಾಸ್ಟರ್ ಎಸ್.ಚೆನ್ನಪ್ಪ, ಉಪಾಧ್ಯಕ್ಷರಾಗಿ ಮನಗನಹಳ್ಳಿ ಮಂಜು ಅವಿರೋಧವಾಗಿ ಆಯ್ಕೆಯಾಗಿದ್ದಾರೆ.


ತಾಲೂಕಿನ ಚಿಕ್ಕದೇವಮ್ಮನ ಬೆಟ್ಟದಲ್ಲಿ ರಾಜ್ಯ ಗೆಜ್ಜಗಾರ ರಕ್ಷಣಾ ಸಮಿತಿ ಉಪಾಧ್ಯಕ್ಷ ಮಹದೇವಶೆಟ್ಟರ ಸಮ್ಮುಖದಲ್ಲಿ ನಡೆದ ಸರ್ವ ಸದಸ್ಯರ ಸಭೆಯಲ್ಲಿ ಕೋಟೆ ಮತ್ತು ಸರಗೂರು ತಾಲೂಕು ಅಧ್ಯಕ್ಷರಾಗಿ ಶಿರಮಳ್ಳಿ ಡ್ರಾಮ ಮಾಸ್ಟರ್ ಎಸ್.ಚೆನ್ನಪ್ಪ, ಉಪಾಧ್ಯಕ್ಷರಾಗಿ ಮನಗನಹಳ್ಳಿ ಮಂಜು ಅವರನ್ನು ಸರ್ವಾನುಮತದಿಂದ ಅವಿರೋಧವಾಗಿ ಆಯ್ಕೆ ಮಾಡಲಾಯಿತು. ಸಭೆಯಲ್ಲಿ ಗೌರವಾಧ್ಯಕ್ಷ ಸಣ್ಣಶೆಟ್ಟಿ, ರಂಗಸ್ವಾಮಿ, ರಾಚಶೆಟ್ಟಿ, ಮಂಜು, ಪುಟ್ಟನರಸಶೆಟ್ಟಿ, ನಾಗರಾಜು, ಪ್ರಧಾನ ಕಾರ್ಯದರ್ಶಿ ಶಿವಕುಮಾರ, ಖಜಾಂಚಿ ನರಸಿಂಹಶೆಟ್ಟಿ, ಸಂಘಟನಾ ಕಾರ್ಯದರ್ಶಿ ಮಹದೇವಸ್ವಾಮಿ, ಸಹ ಸಂಘಟನಾ ಕಾರ್ಯದರ್ಶಿ ರಾಜಣ್ಣ ಇತರರಿದ್ದರು.

ನೂತನ ಅಧ್ಯಕ್ಷ ಎಸ್.ಚೆನ್ನಪ್ಪ ಮಾತನಾಡಿ, ಕೋಟೆ ಮತ್ತು ಸರಗೂರು ತಾಲೂಕುಗಳಲ್ಲಿ ಸಂಘವನ್ನು ಎಲ್ಲರ ಸಹಕಾರದಿಂದ ಉನ್ನತ ಮಟ್ಟಕ್ಕೆ ಕೊಂಡೊಯ್ಯಲು ಶಕ್ತಿಮೀರಿ ಶ್ರಮಿಸುತ್ತೇನೆ. ಇದಕ್ಕೆ ಆಡಳಿತ ಮಂಡಳಿ ಸದಸ್ಯರು ಬೆಂಬಲ ನೀಡಬೇಕು ಎಂದು ಮನವಿ ಮಾಡಿದ ಅವರು ಸರ್ಕಾರದಿಂದ ಸಂಘದ ಅಭಿವೃದ್ಧಿಗಾಗಿ ಬೇಕಾದ ಎಲ್ಲಾ ಸೌಲಭ್ಯಗಳನ್ನು ತರುವ ನಿಟ್ಟಿನಲ್ಲಿ ಕಾರ್ಯ ನಿರ್ವಹಿಸುತ್ತೇನೆ ಎಂದರು.

ಈ ವೇಳೆ ಸಮಿತಿ ರಾಜ್ಯಾಧ್ಯಕ್ಷ ಮಲ್ಲೇಶ್, ಮುಖಂಡರಾದ ಮಹೇಶ್, ಸ್ನೇಕ್ ಬಸವರಾಜು, ಅಶೋಕ್, ಶಶಿ ತಾರಕ್, ಸಿದ್ದಪ್ಪಾಜಿ, ಮಲ್ಲಿಕಾರ್ಜುನ್, ನರಸಶೆಟ್ಟಿ, ಕಾಳಪ್ಪ, ಶಿವರಾಜು, ನೇರಳೆ ಮಹದೇವ್, ವೆಂಕಟರಾಜು, ಮೋಹನ್, ಮಲ್ಲೇಶ್, ಶಿವಮಲ್ಲು, ಶಿವಕುಮಾರ್, ಕೃಷ್ಣಶೆಟ್ಟಿ, ಗೋಪಾಲ್, ಸೀನ, ಮಹೇಶ್, ಸ್ವಾಮಿ, ಶ್ರೀನಿವಾಸ, ನಾಗಶೆಟ್ಟಿ, ಬಸವರಾಜ್, ಮಲ್ಲೇಗೌಡರು, ನಂದೀಶ್, ದೇವರಾಜು, ಸುರೇಶ್ ಇತರರಿದ್ದರು.

# ಹಾಪ್ ಕಾಮ್ಸ್ ಚುನಾವಣೆಯಲ್ಲಿ ನಮ್ಮ ತಂಡ ಬೆಂಬಲಿಸಿ

## ನಿರ್ದೇಶಕ ಸ್ಥಾನದ ಅಭ್ಯರ್ಥಿ ಎಂ.ಜೆ.ರಾಜೀವ್ ಮನವಿ



ನಿರ್ದೇಶಕ ಸ್ಥಾನಕ್ಕೆ ಸ್ಪರ್ಧಿಸಿರುವ ರಾಜೀವ ಮತಯಾಚಿಸಿದರು.

ಕೆ.ಆರ್.ನಗರ, ಫೆ.3– ಜಿಲ್ಲಾ ತೋಟದ ಬೆಳೆಗಾರರ ಮಾರಾಟ ಮತ್ತು ಸಂಸ್ಕರಣ ಸಹಕಾರ ಸಂಘದ (ಜಿಲ್ಲಾ ಹಾಪ್ ಕಾಮ್ಸ್) ಆಡಳಿತ ಮಂಡಳಿ ನಿರ್ದೇಶಕ ಸ್ಥಾನಗಳಿಗೆ ನಡೆಯುವ ಚುನಾವಣೆಯಲ್ಲಿ ಸ್ಪರ್ಧಿಸಿರುವ ನಮ್ಮ ತಂಡಕ್ಕೆ ಮತದಾರರು ಬೆಂಬಲ ನೀಡಬೇಕು ಎಂದು ಕೆ.ಆರ್. ನಗರ ಕ್ಷೇತ್ರದಿಂದ ಸ್ಪರ್ಧಿಸಿರುವ ಎಂ.ಜೆ. ರಾಜೀವ್ ಮನವಿ ಮಾಡಿದ್ದಾರೆ.

ಪಟ್ಟಣದ ವಿನಾಯಕ ಬಡಾವಣೆಯಲ್ಲಿ ಮತದಾರರ ಮನೆ ಬಾಗಿಲಿಗೆ ಹೋಗಿ ಬೆಂಬಲ ಕೋರಿ ಮಾತನಾಡಿದ ಅವರು, ಜಿಲ್ಲೆಯ 7 ತಾಲೂಕುಗಳ ವ್ಯಾಪ್ತಿಯಲ್ಲಿ 1610 ಮತದಾರರಿದ್ದು, ಎಲ್ಲೆಡೆ ಉತ್ತಮ ಸ್ಪಂದನೆ ವ್ಯಕ್ತವಾಗುತ್ತಿದೆ ಎಂದರು.

ನಮ್ಮ ತಂಡದಿಂದ ಎಸ್.ಜಿ.ನಳಿನಿ, ಡಿ. ಪದ್ಮನಾಭ, ಬಿ.ಎನ್.ಪ್ರಭುಸ್ವಾಮಿ, ಬಿ.ಪಿ.ಬೋರೇಗೌಡ, ಜೆ.ಮಹದೇವ, ವೈ.ಜಿ. ಮಹೇಂದ್ರ, ಟಿ.ರಾಮೇಗೌಡ, ಎಸ್.ಕೆ.ಶಿವಣ್ಣ, ಬಿ.ಪಿ.ಶೋಭಾ, ಆರ್.ಸರ್ವೇಶ ಚುನಾವಣೆಗೆ ಸ್ಪರ್ಧೆ ಮಾಡಿದ್ದು ನಮ್ಮನ್ನು ಬೆಂಬಲಿಸಬೇಕು ಎಂದು ಕೋರಿಕೊಂಡರು.

ಫೆ.5 ರಂದು ನಡೆಯುವ ಚುನಾವಣೆಯಲ್ಲಿ ಎಲ್ಲರೂ ಚುನಾಯಿತರಾದರೆ ತಾಲೂಕು ಕೇಂದ್ರದ ಜೊತೆಗೆ ಹೋಬಳಿ ಕ್ಷೇತ್ರದಲ್ಲೂ ಹಾಪ್‌ಕಾಮ್ಸ್ ವತಿಯಿಂದ ತರಕಾರಿ ಮಳಿಗೆಗಳನ್ನು ತೆರೆಯುವುದಾಗಿ ತಿಳಿಸಿದ ಅವರು ನಮ್ಮ ಪ್ರಯತ್ನಕ್ಕೆ ಮತದಾರ ಪ್ರಭುಗಳ ಬೆಂಬಲ ಬೇಕು ಎಂದು ಮನವಿ ಮಾಡಿದರು.

ಬಳಿಕ ಅವರು ಕೆ.ಆರ್.ನಗರ ಮತ್ತು ಸಾಲಿಗ್ರಾಮದ ವಿವಿಧ ಗ್ರಾಮಗಳಿಗೆ ತೆರಳಿ ತಮ್ಮ ತಂಡಕ್ಕೆ ಮತ ನೀಡುವಂತೆ ಮನವಿ ಮಾಡಿದರು. ಜಿಲ್ಲಾ ಹಾಪ್ ಕಾಮ್ಸ್ ನಿರ್ದೇಶಕ ಚಂದ್ರೇಗೌಡ, ರೈತ ಮುಖಂಡರಾದ ಬಾಲು, ರಾಜೇಶ್, ವಸಂತ್ ಕುಮಾರ್ ಇತರರಿದ್ದರು.



### ಮುಖ್ಯಪೇದೆ ಸುರೇಶ್‌ಗೆ ಸನ್ಮಾನ

ದಾವಣಗೆರೆ ವಿಶ್ವವಿದ್ಯಾಲಯದಲ್ಲಿ ಡಾಕ್ಟರೇಟ್ ಪಡೆದ ಮುಖ್ಯಪೇದೆ ಟಿ.ಹೆಚ್.ಸುರೇಶ್ ಅವರನ್ನು ಮೂಗೂರಿನ ಉಪಠಾಣೆಯಲ್ಲಿ ಗ್ರಾಮಸ್ಥರು ಸನ್ಮಾನಿಸಿದರು. ಈ ವೇಳೆ ಮುಖ್ಯಪೇದೆ ಶಂಕರಮೂರ್ತಿ, ಮುಖಂಡರಾದ ಬಲ್ಲಯ್ಯ, ಮಹೇಶ್, ಉಪನ್ಯಾಸಕ ಕುಮಾರಸ್ವಾಮಿ, ಹರೀಶ್, ಕುಮಾರ, ನಾಗೇಂದ್ರ ಸ್ವಾಮಿ, ವಿಶ್ವ, ಮಹದೇವಸ್ವಾಮಿ ಇತರರಿದ್ದರು.

# ರೈತರ ಆರ್ಥಿಕ ಸ್ಥಿತಿ ಸುಧಾರಣೆಗೆ ಸಹಕಾರ ಸಂಘ ಸಹಕಾರಿ

## ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ



ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮಿಗೌಡರನ್ನು ಸನ್ಮಾನಿಸಲಾಯಿತು.

ತಿ.ನರಸೀಪುರ, ಫೆ.3– ಸಹಕಾರ ಸಂಘಗಳು ರೈತರ ಜೀವನಾಡಿ. ಸಹಕಾರಿ ಕ್ಷೇತ್ರ ಬಹಳಷ್ಟು ವಿಸ್ತಾರವಾಗಿ ಬೆಳೆದಿದ್ದು, ರೈತರು, ಕೂಲಿ ಕಾರ್ಮಿಕರ ಆರ್ಥಿಕ ಸ್ಥಿತಿ ಸುಧಾರಣೆಗೆ ಸಹಕಾರಿಯಾಗಿದೆ. ರೈತರು ಸಹಕಾರ ಸಂಘಗಳಿಂದ ಸಾಲ ಪಡೆದು ಕೃಷಿಯಲ್ಲಿ ತೊಡಗಿಸಿಕೊಂಡು ಆರ್ಥಿಕವಾಗಿ ಸದೃಢರಾಗಬೇಕು ಎಂದು ಎಂಸಿಡಿಸಿಸಿ ಬ್ಯಾಂಕ್ ಅಧ್ಯಕ್ಷ ದೊಡ್ಡಸ್ವಾಮೇಗೌಡ ಸಲಹೆ ನೀಡಿದರು.

ತಾಲೂಕಿನ ಬಿಳಿಗೆರೆಹುಂಡಿ ಸಹಕಾರ ಸಂಘದ ಅಧ್ಯಕ್ಷ ಮನ್ನೇಹುಂಡಿ ಶೇಖರ್ ಅವರಿಂದ ಸನ್ಮಾನ ಸ್ವೀಕರಿಸಿ ಮಾತನಾಡಿದ ಅವರು, ನೂತನವಾಗಿ ಅಸ್ತಿತ್ವಕ್ಕೆ ಬಂದಿರುವ ಸಹಕಾರ ಸಂಘಗಳ ಅಭಿವೃದ್ಧಿಗೆ ಹೆಚ್ಚು ಒತ್ತು ನೀಡಿ ಸಾಲ ಸೌಲಭ್ಯ ನೀಡುವ ಮೂಲಕ ಆರ್ಥಿಕವಾಗಿ ಮುಂದೆ ತರುತ್ತೇವೆ ಎಂದರು.

ಸಹಕಾರ ಸಂಘಗಳು ರೈತರಿಂದ ಷೇರು ಬಂಡವಾಳವನ್ನು ಪಡೆದು ಅವರಿಗೆ ಸಾಕಷ್ಟು ಸಾಲ ಸೌಲಭ್ಯ ನೀಡಿ ಅವರನ್ನು ಆರ್ಥಿಕವಾಗಿ ಸಬಲರನ್ನಾಗಿ ಮಾಡಬೇಕು. ಸರ್ಕಾರ ಸಹಕಾರ ಸಂಘಗಳ ಮೂಲಕ ನೂರಾರು ರೈತರಿಗೆ ಕೋಟ್ಯಾಂತರ ರೂ. ಕೃಷಿ ಸಾಲ ನೀಡುತ್ತಿದ್ದು, ಇದರಿಂದ ರೈತರಿಗೆ ಹೆಚ್ಚಿನ ಅನುಕೂಲವಾಗಿದೆ. ಮುಖ್ಯಮಂತ್ರಿ ಸಿದ್ದರಾಮಯ್ಯ ಅವರು ಸಹಕಾರ ಸಂಘಗಳಿಗೆ ಹೆಚ್ಚಿನ ಆದ್ಯತೆ ನೀಡುವ ಮೂಲಕ ಗ್ರಾಮೀಣ ರೈತರ ಆರ್ಥಿಕ ಪರಿಸ್ಥಿತಿ ಉತ್ತಮಗೊಳಿಸುವ ನಿಟ್ಟಿನಲ್ಲಿ ಕೆಲಸ ಮಾಡುತ್ತಿದ್ದಾರೆ ಎಂದರು.

ಬಿಳಿಗೆರೆಹುಂಡಿ ಪ್ರಾಥಮಿಕ ಕೃಷಿ ಪತ್ತಿನ ಸಹಕಾರ ಸಂಘದ ಅಧ್ಯಕ್ಷ ಎಂ.ಶೇಖರ್ ಮಾತನಾಡಿ, ಈ ಭಾಗದ ಸುತ್ತಮುತ್ತಲ ರೈತರ ಅನುಕೂಲಕ್ಕಾಗಿ ಸಂಘವನ್ನು ಸ್ಥಾಪಿಸಲಾಗಿದ್ದು, ನಮ್ಮ ಸಂಘಕ್ಕೆ ಹೆಚ್ಚಿನ ಸಾಲ ಸೌಲಭ್ಯ ಕಲ್ಪಿಸಬೇಕು ಎಂದು ಮನವಿ ಮಾಡಿದರು.

ಈ ವೇಳೆ ಸಂಘದ ಸಂಘದ ಮುಖ್ಯ ಕಾರ್ಯದರ್ಶಿ ಬಿ.ಸಿದ್ದರಾಜು, ಉಪಾಧ್ಯಕ್ಷ ಪಿ.ಚಿನ್ನಬುದ್ದಿ, ನಿರ್ದೇಶಕರಾದ ಎಂ.ಎಸ್.ಮಹದೇವಸ್ವಾಮಿ, ಬಸವಣ್ಣ, ಎಂ.ವೆಂಕಟೇಶ್, ರಾಜೀವ್.ಎಸ್, ವಸಂತ, ಗೌರಮ್ಮಣಿ, ಕೆ.ಎಂ.ದೇವರಾಜ್, ಎನ್.ಅಶ್ವಿನ್, ನಾಗರಾಜು, ಮಹಾದೇವ ಹಾಜರಿದ್ದರು.

# ವಿಜೃಂಭಣೆಯ ಮಹದೇಶ್ವರಸ್ವಾಮಿ ಕೊಂಡೋತ್ಸವ



ಸರಗೂರು, ಫೆ.3– ತಾಲೂಕಿನ ನಿಲವಾಗಿಲು ಮತ್ತು ತುಂಬಸೋಗೆ ಮಹದೇಶ್ವರಸ್ವಾಮಿ ದನಗಳ ಜಾತ್ರಾ ಮಹೋತ್ಸವ ಅಂಗವಾಗಿ ನಡೆದ ಕೊಂಡೋತ್ಸವ ಸಾವಿರಾರು ಭಕ್ತರ ಸಮ್ಮುಖದಲ್ಲಿ ಮಂಗಳವಾರ ವಿಜೃಂಭಣೆಯಿಂದ ನೆರವೇರಿತು.

ಹರಕೆ ಹೊತ್ತ ಭಕ್ತರು ಕೊಂಡ ಹಾಯ್ದು ಮಹದೇಶ್ವರರ ದರ್ಶನ ಪಡೆದು ಪುನೀತರಾದರು. ಜಾತ್ರೆ ಅಂಗವಾಗಿ ದೇವಸ್ಥಾನದ ಆವರಣವನ್ನು ಸ್ವಚ್ಛಗೊಳಿಸಲಾಗಿತ್ತು ಸೋಮವಾರ ಮುಂಜಾನೆಯೇ ಮಹದೇಶ್ವರಸ್ವಾಮಿ ದೇವಾಲಯದಲ್ಲಿ ಬಿಡಗಲು ಪಡವಲು ವಿರಕ್ತ ಮಠದ ಮಹದೇವಸ್ವಾಮೀಜಿ ಅವರ ಸಾನಿಧ್ಯದಲ್ಲಿ ವಿವಿಧ ಹೋಮ ಹಾಗೂ ಸ್ವಾಮಿಗೆ ರುದ್ರಾಭಿಷೇಕ ನಡೆಸಲಾಯಿತು.

ಹುಲಿವಾಹನ, ಬಸವ ವಾಹನ ಉತ್ಸವ ಮೂರ್ತಿಯನ್ನು ನಿಲವಾಗಿಲು ಮತ್ತು ತುಂಬಸೋಗೆ ಗ್ರಾಮಗಳಿಂದ ತಂದು ಮೆರವಣಿಗೆ ನಡೆಸಿದ ಬಳಿಕ ಜಾತ್ರಾ ಮಾಳದಲ್ಲಿ ಇರಿಸಲಾಯಿತು.

ಮಂಗಳವಾರ ಸ್ವಾಮಿಗೆ ಹಾಲರವಿ ಸೇವೆ ಹಾಗೂ ನಂತರ ಕೊಂಡೋತ್ಸವ ನಡೆಯಿತು. ರಾತ್ರಿ ಹೆಗ್ಗಡಾಪುರ ಗ್ರಾಮದ ಶ್ರೀಕಾಳಮ್ಮ ಕೃಪಾಪೋಷಿತ ನಾಟಕ ಮಂಡಳಿಯಿಂದ ಶನಿಪ್ರಭಾವ ಎಂಬ ಪೌರಾಣಿಕ ನಾಟಕ ಏರ್ಪಡಿಸಲಾಗಿತ್ತು. ಅಲ್ಲದೇ ಭಕ್ತರಿಗೆ ಅನ್ನಸಂತರ್ಪಣೆ ನೆರವೇರಿಸಲಾಯಿತು.

ಈ ವೇಳೆ ಮಹದೇಶ್ವರಸ್ವಾಮಿ ದೇವಸ್ಥಾನ ಸಮಿತಿ ಅಧ್ಯಕ್ಷ ಬಿ.ನಂಜಪ್ಪ ಕಾರ್ಯದರ್ಶಿ ಪ್ರಕಾಶ್, ಸಮಿತಿ ಮುಖಂಡರಾದ ಬಿ.ಸಿ.ಬಸಪ್ಪ ನಂಜುಂಡಸ್ವಾಮಿ, ರಾಜಣ್ಣ, ಗೋಪಾಲಯ್ಯ, ಅಂಕನಾಯಕ, ಯಜಮಾನರಾದ ಬಿ.ಎಸ್.ಚನ್ನನಾಯಕ, ನಾಗರಾಜು, ಶಿವಣ್ಣ, ವೆಂಕಟಪ್ಪ ವೆಂಕಟಾಚಲ, ಮಂಜು, ಸುರೇಶ್, ನಾಗಣ್ಣ, ಸೋಮಯ್ಯ, ಅನ್ನದಾನ ಸಮಿತಿ ಅಧ್ಯಕ್ಷ ನಾಗರಾಜು, ಕಾರ್ಯದರ್ಶಿ ಸಣ್ಣಗೌಡ, ನಿಲುವಾಗಿಲು ಮತ್ತು ತುಂಬಸೋಗೆ ಸೇರಿದಂತೆ ಅಕ್ಕ ಪಕ್ಕದ ಗ್ರಾಮಸ್ಥರಿದ್ದರು.

**ರಥೋತ್ಸವ:** ಬುಧವಾರ (ಫೆ.4) ಬೆಳಗ್ಗೆ ಮಹದೇಶ್ವರಸ್ವಾಮಿ ರಥೋತ್ಸವ ವಿಜೃಂಭಣೆಯಿಂದ ನಡೆಯಲಿದೆ. ರಾತ್ರಿ 10 ಗಂಟೆಗೆ ರಾಜಣ್ಣ ಮತ್ತು ಜೈಕುಮಾರ್ ತಂಡದವರಿಂದ ರಸಮಂಜರಿ ನಡೆಯಲಿದ್ದು, ಮಹದೇಶ್ವರಸ್ವಾಮಿಯನ್ನು ಪಲ್ಲಕ್ಕಿ ಮೇಲೆ ಕೂರಿಸಿ ಕಪಿಲಾ ನದಿಯಲ್ಲಿ ತೆಪ್ಪೋತ್ಸವ ನೆರವೇರಿಸಲಾಗುವುದು ಎಂದು ದೇವಾಲಯದ ಪ್ರಕಟಣೆ ತಿಳಿಸಿದೆ.

ಮೈಸೂರು ಮಿತ್ರ

ಬುಧವಾರ 4 ಫೆಬ್ರವರಿ 2026

# ಯುವ ಜನತೆ ಅಗತ್ಯಕ್ಕಿಂತ ಹೆಚ್ಚು ಮೊಬೈಲ್ ದಾಸರಾಗಬಾರದು...

## ಮೈಸೂರು ವಿವಿ ಕುಲಸಚಿವರಾದ ಎಂ.ಕೆ.ಸವಿತಾ ಸಲಹೆ



ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ರೂಸಾ 2.0 ಪ್ರಾಯೋಜಿತ 'ಉದ್ಯೋಗ ಕೌಶಲ್ಯ' ಕುರಿತ ಉಪನ್ಯಾಸ ಕಾರ್ಯಕ್ರಮಕ್ಕೆ ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಚಾಲನೆ ನೀಡಿದರು.

ಮೈಸೂರು, ಫೆ.3(ಎಂಟಿವೈ)– ಇತ್ತೀಚಿನ ದಿನಗಳಲ್ಲಿ ಯುವ ಸಮುದಾಯ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣದ ಗೀಳಿಗೆ ಒಳಗಾಗಿ ಜವಾಬ್ದಾರಿಯಿಂದ ವಿಮುಖರಾಗುತ್ತಿದ್ದು, ಅದರಲ್ಲೂ ವಿದ್ಯಾರ್ಥಿ ಸಮೂಹ ಎಚ್ಚೆತ್ತುಕೊಳ್ಳಬೇಕು ಎಂದು ಮೈಸೂರು ವಿಶ್ವವಿದ್ಯಾನಿಲಯದ ಕುಲಸಚಿವರಾದ ಎಂ.ಕೆ.ಸವಿತಾ ಸಲಹೆ ನೀಡಿದ್ದಾರೆ.

ಮೈಸೂರಿನ ಮಹಾರಾಜ ಪದವಿ ಕಾಲೇಜಿನ ಶತಮಾನೋತ್ಸವ ಭವನದಲ್ಲಿ ರೂಸಾ 2.0 ಪ್ರಾಯೋಜಿತ 'ಉದ್ಯೋಗ ಕೌಶಲ್ಯ' ಕುರಿತ ಉಪನ್ಯಾಸ ಕಾರ್ಯಕ್ರಮಕ್ಕೆ ಚಾಲನೆ ನೀಡಿ ಮಾತನಾಡಿದ ಅವರು, ಇತ್ತೀಚಿನ ದಿನಗಳಲ್ಲಿ ಮೊಬೈಲ್ ಬಳಸುತ್ತಿರುವ ಯುವಜನರ ಸಂಖ್ಯೆ ಹೆಚ್ಚಾಗುತ್ತಿದೆ. ಅಗತ್ಯಕ್ಕಿಂತ ಮಿತಿ ಮೀರಿದ ಪ್ರಮಾಣದಲ್ಲಿ ಮೊಬೈಲ್ ಬಳಕೆಗೆ ಯುವ ಜನರು ದಾಸರಾಗುತ್ತಿದ್ದಾರೆ. ಇದರಿಂದ ಯಾವುದೇ ಸಾಧನೆ ಮಾಡಲು ಸಾಧ್ಯವಾಗದೆ ಸಮಯ ವ್ಯರ್ಥವಾಗುತ್ತಿದೆ. ಈ ಹಿನ್ನೆಲೆಯಲ್ಲಿ ಅಗತ್ಯಕ್ಕಷ್ಟೇ ಮೊಬೈಲ್ ಹಾಗೂ ಸಾಮಾಜಿಕ ಜಾಲತಾಣಗಳ ಬಳಕೆ ಮಾಡುವುದಕ್ಕೆ ಯುವಜನರು ಬದ್ಧರಾಗಬೇಕು. ಅದರಲ್ಲೂ ವಿದ್ಯಾರ್ಥಿ ಸಮೂಹ ತಮ್ಮ ಜವಾಬ್ದಾರಿ ಅರಿತುಕೊಳ್ಳಬೇಕು. ಶೈಕ್ಷಣಿಕ ಕ್ಷೇತ್ರದ ಸಾಧನೆಯತ್ತ ಗಮನ ಹರಿಸಬೇಕು. ಮೊಬೈಲ್ ಬಳಕೆ ಕಡಿಮೆ ಮಾಡಬೇಕು ಎಂದರು.

ವಿದ್ಯಾರ್ಥಿಗಳು ಯಾವುದೇ ಕಾರಣಕ್ಕೂ ಮೊಬೈಲ್, ಸಾಮಾಜಿಕ ಜಾಲತಾಣಕ್ಕೆ ಹೆಚ್ಚು ಆಕರ್ಷಿತರಾಗಬಾರದು. ಓದು, ಅಧ್ಯಯನದ ಕಡೆಗೆ ಹೆಚ್ಚು ಗಮನ ಹರಿಸಬೇಕು ಇಂದಿನ ಸ್ಪರ್ಧಾತ್ಮಕ ಯುಗದಲ್ಲಿ ಶಿಕ್ಷಣದ ಜತೆಗೆ ಹೆಚ್ಚು ಉದ್ಯೋಗದ ಕೌಶಲ್ಯಗಳನ್ನು ಜೀವನದಲ್ಲಿ ಅಳವಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ವಿದ್ಯಾರ್ಥಿಗಳು ಮೊಬೈಲ್ ಹಾಗೂ ಸೋಷಿಯಲ್ ಮೀಡಿಯಾಗಳಿಗೆ ಬಲಿಯಾಗದೇ ಭವಿಷ್ಯವನ್ನು ಉತ್ತಮ ರೀತಿಯಲ್ಲಿ ರೂಪಿಸಿಕೊಳ್ಳಲು ಪಣ ತೊಡಬೇಕು. ಮುಂದಿನ ದಿನಗಳಲ್ಲಿ ವಿವಿಧ ಕ್ಷೇತ್ರಗಳನ್ನು ಆಯ್ಕೆ ಮಾಡಿಕೊಂಡು ಸಮಾಜದಲ್ಲಿ ಮುಖ್ಯ ವಾಹಿನಿಗೆ ಬರಲು ಈಗಿನಿಂದಲೇ ಶ್ರಮಿಸಬೇಕು. ಪ್ರತಿನಿತ್ಯ ಪತ್ರಿಕೆಗಳನ್ನು ಓದುವ ಹವ್ಯಾಸ ಬೆಳೆಸಿಕೊಳ್ಳಬೇಕು. ಇದರಿಂದ ಜ್ಞಾನ ಸಂಪಾದನೆಯೊಂದಿಗೆ ಆಯಾ ವಿದ್ಯಮಾನಗಳ ಬಗ್ಗೆ ಮಾಹಿತಿ ಕಲೆ ಹಾಕಬಹುದು. ಇದು ಸ್ಪರ್ಧಾತ್ಮಕ ಪರೀಕ್ಷೆ ಬರೆಯುವುದಕ್ಕೂ ಸಹಕಾರಿಯಾಗಲಿದೆ ಎಂದು ಹೇಳಿದರು.

ಇದೇ ವೇಳೆ ಮಹಾರಾಣಿ ಕಾಲೇಜಿನ ಭೂಗೋಳ ಶಾಸ್ತ್ರ ವಿಭಾಗದ ಸಹಾಯಕ ಪ್ರಾಧ್ಯಾಪಕ ಡಾ.ಪಿ.ಎನ್.ಹೇಮಚಂದ್ರ ಮಾತನಾಡಿ, ಖಾಸಗಿ ಕ್ಷೇತ್ರಗಳಲ್ಲಿಯೂ ಸಾಕಷ್ಟು ಉದ್ಯೋಗಾವಕಾಶಗಳಿದ್ದು, ಅವುಗಳನ್ನು ತಿಳಿದುಕೊಳ್ಳುವ ಮೂಲಕ ಎಲ್ಲಾ ಕ್ಷೇತ್ರದಲ್ಲಿಯೂ ಸಾಧನೆ ಮಾಡುವ ಕೆಲಸ ಮಾಡಬೇಕು. ಮಾತ್ರವಲ್ಲದೆ, ಇಂದು ಗೂಗಲ್ ಮೂಲಕ ಎಲ್ಲವನ್ನೂ ಅರಿತುಕೊಳ್ಳಬಹುದಾದ ನಿಟ್ಟಿನಲ್ಲಿ ಅದರ ಒಳಿತನ್ನು ಸದುಪಯೋಪಡಿಸಿಕೊಳ್ಳಬೇಕು. ಅಲ್ಲದೆ ವಿವಿಧೆಡೆ ನಡೆಯುವ ಉದ್ಯೋಗ ಮೇಳಗಳ ಸದ್ಬಳಕೆ ಆಗಲಿದೆ ಎಂದು ತಿಳಿಸಿದರು.

ಕಾರ್ಯಕ್ರಮದಲ್ಲಿ ಮೈಸೂರು ವಿವಿ ಪರೀಕ್ಷಾಂಗ ವಿಭಾಗ ಕುಲಸಚಿವ ಪ್ರೊ.ನಾಗರಾಜ್, ಭೀಮ್ಸ್ ನಿರ್ದೇಶಕ ಪ್ರೊ.ಮಹೇಶ್, ಪ್ರಾಂಶುಪಾಲ ಡಾ.ಷಣ್ಮುಗಂ, ಮೈಸೂರು ವಿವಿ ವಿಶ್ವಮಾನವ ನೌಕರರ ವೇದಿಕೆಯ ವಾಸುದೇವ್ ಇನ್ನಿತರರು ಉಪಸ್ಥಿತರಿದ್ದರು.

## ಮೈಸೂರು ಚಿತ್ರಮಂದಿರಗಳಲ್ಲಿ

| | |
|---|---|
| **ಪದ್ಮ** | (ದೂ: 2521923) |
| ಮಂಗಾತ (ತ) | 4 ಪ್ರದರ್ಶನಗಳು |
| **ವುಡ್‌ಲ್ಯಾಂಡ್ಸ್** | (ದೂ: 2422871) |
| ಲ್ಯಾಂಡ್‌ಲಾರ್ಡ್ (ಕ) | 4 ಪ್ರದರ್ಶನಗಳು |
| **ಬಾಲಾಜಿ** | (ದೂ: 2497199) |
| ಬಾರ್ಡರ್–2 (ಹಿ) | 3 ಪ್ರದರ್ಶನಗಳು |
| **ಮಹದೇಶ್ವರ** | (ಮೊ:9900820093) |
| 45 ಫೇಸ್ ದಿ ಇಯರ್ (ಕ) | 4 ಪ್ರದರ್ಶನಗಳು |
| **ಗಾಯಿತ್ರಿ** | |
| ಲ್ಯಾಂಡ್ ಲಾರ್ಡ್ (ಕ) | 4 ಪ್ರದರ್ಶನಗಳು |
| **ರಾಜಕಮಲ್** | |
| ದ್ರೌಪದಿ–2 (ತ) | 4 ಪ್ರದರ್ಶನಗಳು |
| **ಸಂಗಂ** | |
| ಕಲ್ಟ್ (ಕ) | 4 ಪ್ರದರ್ಶನಗಳು |
| **ಲಿಡೋ** | |
| ರಕ್ತ ಕಾಶ್ಮೀರ (ಕ) | 4 ಪ್ರದರ್ಶನಗಳು |
| **ತಿಬ್ಬಾದೇವಿ** | |
| – | – |
| **ಪ್ರಭಾ** | |
| ಮಾವುತ (ಕ) | 4 ಪ್ರದರ್ಶನಗಳು |

# ಗಾಂಜಾ ಮಾರಾಟಕ್ಕೆ ಯತ್ನ; ಇಬ್ಬರ ಬಂಧನ

## 385 ಗ್ರಾಂ ಗಾಂಜಾ ವಶಪಡಿಸಿಕೊಂಡ ಮಂಡಿ ಪೊಲೀಸರು

ಮೈಸೂರು,ಫೆ.3(ಪಿಎಂ)– ಗಾಂಜಾ ಮಾರಾಟ ಸಂಬಂಧ ಇಬ್ಬರನ್ನು ಬಂಧಿಸಿರುವ ಮಂಡಿ ಠಾಣೆ ಪೊಲೀಸರು, ಅವರಿಂದ 19 ಸಾವಿರ ರೂ. ಮೌಲ್ಯದ 385 ಗ್ರಾಂ ಗಾಂಜಾ ವಶಪಡಿಸಿಕೊಂಡಿದ್ದಾರೆ.

ಶಾಂತಿನಗರದ ನಿವಾಸಿಗಳಾದ ಮೊಹಮ್ಮದ್ ಜೈದ್ (20), ಮೊಹಮ್ಮದ್ ರಫೀಕ್(22) ಬಂಧಿತ ಆರೋಪಿಗಳು. ಜ.30ರಂದು ಸಂಜೆ ವೇಳೆಯಲ್ಲಿ ಶಾಂತಿನಗರ ನಿವಾಸಿ ಮೊಹಮ್ಮದ್ ಜೈದ್, ಪ್ಲಾಸ್ಟಿಕ್ ಕವರ್‌ನಲ್ಲಿ ಇರಿಸಿಕೊಂಡಿದ್ದ ಗಾಂಜಾವನ್ನು ಮಾರಾಟಕ್ಕೆ ಯತ್ನಿಸುತ್ತಿದ್ದ ವೇಳೆ ಪೊಲೀಸರಿಗೆ ಸಿಕ್ಕಿಬಿದ್ದಿದ್ದ. ಫೈವ್‌ಲೈಟ್ ವೃತ್ತದ ಬಿಇಓ ಕಚೇರಿ ಪಕ್ಕದ ಖಾಲಿ ನಿವೇಶನದಲ್ಲಿ ಈತನನ್ನು ಪೊಲೀಸರು ಬಂಧಿಸಿದ್ದರು.

ಬಳಿಕ ಆತನ ಬಳಿಯಿದ್ದ 164 ಗ್ರಾಂ ತೂಕವಿದ್ದ ಗಾಂಜಾ ವಶಪಡಿಸಿಕೊಂಡ ಪೊಲೀಸರು, ವಿಚಾರಣೆ ನಡೆಸಲಾಗಿ, ಮೊಹಮ್ಮದ್ ರಫೀಕ್(22) ಎಂಬಾತನಿಂದ ಸಾವಿರ ರೂ. ಕೊಟ್ಟು ಖರೀದಿಸಿರುವುದಾಗಿ ಬಾಯಿಬಿಟ್ಟಿದ್ದ.

ಈತನೊಂದಿಗೆ ಕಾರ್ಯಾಚರಣೆ ಆರಂಭಿಸಿದ ಪೊಲೀಸರು, ಮಹದೇವಪುರ ರಸ್ತೆಯ ಎನ್‌ಆರ್ ಠಾಣಾ ಸರಹದ್ದಿನ ಗಾಂಧಿನಗರ ಸ್ಮಶಾನದ ಒಳಭಾಗದ ಮಂಟಪದಲ್ಲಿ ಕುಳಿತಿದ್ದ ಮೊಹಮ್ಮದ್ ರಫೀಕ್‌ನನ್ನು ಬಂಧಿಸಿದರು. ಈ ವೇಳೆ ಆತನ ಬಳಿಯಲ್ಲಿ 221 ಗ್ರಾಂ ಗಾಂಜಾ ಪತ್ತೆಯಾಯಿತು. ವಿಚಾರಣೆ ವೇಳೆ ಬೆಂಗಳೂರು ಮೂಲದ ಅಪರಿಚಿತ ವ್ಯಕ್ತಿಯೊಬ್ಬರಿಂದ 3 ಸಾವಿರ ರೂ. ಕೊಟ್ಟು ಖರೀದಿಸಿದ್ದಾಗಿ ಮೊಹಮ್ಮದ್ ಜೈದ್ ಒಪ್ಪಿಕೊಂಡಿದ್ದಾನೆ. ಈ ಸಂಬಂಧ ಮಂಡಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

# ದಲಿತರ ಹೋರಾಟಕ್ಕೆ ಸಿದ್ದಲಿಂಗಯ್ಯರ ಬರಹಗಳು ಭದ್ರ ಬುನಾದಿ

## ಮೈಸೂರು ಕೇಂದ್ರ ಕಾರಾಗೃಹದ ಆಡಳಿತಾಧಿಕಾರಿ ಡಾ.ಚುಂಚಯ್ಯ ಅಭಿಮತ



ಮೈಸೂರು ವಿವಿ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಕವಿ ಡಾ.ಸಿದ್ದಲಿಂಗಯ್ಯ ಸ್ಮರಣಾರ್ಥ ಗಾಯನ ಮತ್ತು ಚಿಂತನಾ ಕಾರ್ಯಕ್ರಮ ನಡೆಯಿತು

ಮೈಸೂರು, ಫೆ.3(ಎಂಕೆ)– ಲೇಖನಿಯನ್ನು ಖಡ್ಗದಂತೆ ಬಳಸಿದ ಕವಿ ಡಾ.ಸಿದ್ದಲಿಂಗಯ್ಯ ಅವರ ಬರಹಗಳು ದಲಿತರ ಹೋರಾಟಕ್ಕೆ ಬುನಾದಿ ಹಾಕಿದವು ಎಂದು ಮೈಸೂರು ಕೇಂದ್ರ ಕಾರಾಗೃಹದ ಆಡಳಿತಾಧಿಕಾರಿ ಡಾ.ಚುಂಚಯ್ಯ ಸ್ಮರಿಸಿದರು.

ಮೈಸೂರು ವಿಶ್ವವಿದ್ಯಾನಿಲಯ ಮಾನಸಗಂಗೋತ್ರಿಯಲ್ಲಿರುವ ಕುವೆಂಪು ಕನ್ನಡ ಅಧ್ಯಯನ ಸಂಸ್ಥೆಯಲ್ಲಿ ಅರಿವು ಸಂಶೋಧನಾ ವಿದ್ಯಾರ್ಥಿ ವೇದಿಕೆ ಹಾಗೂ ಭೀಮ ಬಲ ಬಳಗದ ವತಿಯಿಂದ ಆಯೋಜಿಸಿದ್ದ ಡಾ.ಸಿದ್ದಲಿಂಗಯ್ಯ ಸ್ಮರಣಾರ್ಥ ಗಾಯನ ಮತ್ತು ಚಿಂತನಾ ಕಾರ್ಯಕ್ರಮ ಉದ್ಘಾಟಿಸಿ ಮಾತನಾಡಿದ ಅವರು, ಅಸಮಾನತೆಯ ಸಮಾಜಕ್ಕೆ ಅವಶ್ಯವಾಗಿದ್ದ ಡಾ.ಸಿದ್ದಲಿಂಗಯ್ಯ ಅವರ ಬರಹಗಳು ದಲಿತ ಬಂಡಾಯಕ್ಕೆ ಬುನಾದಿಯಾದವು ಎಂದರು.

ಅತ್ಯಂತ ಮೃದು ಸ್ವಭಾವದ ಡಾ.ಸಿದ್ದಲಿಂಗಯ್ಯ ಅವರ ಬರಹಗಳು ಖಡ್ಗದಷ್ಟೇ ಹರಿತವಾಗಿದ್ದವು. ಅವರ ನಯ–ವಿನಯದ ಮಾತುಗಳನ್ನು ಕೇಳಿದರೆ ಆಶ್ಚರ್ಯವಾಗುತ್ತಿತ್ತು. ಸುಮಾರು 12 ವರ್ಷ ವಿಧಾನ ಪರಿಷತ್ ಸದಸ್ಯರಾಗಿ, ಕನ್ನಡ ಪುಸ್ತಕ ಪ್ರಾಧಿಕಾರದ ಅಧ್ಯಕ್ಷರಾಗಿ ಸಾಹಿತ್ಯ ಲೋಕಕ್ಕೆ ಅಪಾರ ಕೊಡುಗೆ ನೀಡಿರುವ ಡಾ.ಸಿದ್ದಲಿಂಗಯ್ಯ ಸ್ಮರಣೆ ಮುಂದಿನ ಪೀಳಿಗೆಗೆ ಅವಶ್ಯವಾಗಿದೆ ಎಂದರು.

ಮೈಸೂರು ವಿವಿ ಡಾ.ಬಿ.ಆರ್. ಸಂಶೋಧನಾ ಮತ್ತು ವಿಸ್ತರಣಾ ಕೇಂದ್ರದ ನಿರ್ದೇಶಕ ಪ್ರೊ.ಎಸ್.ನರೇಂದ್ರ ಕುಮಾರ್ ಮಾತನಾಡಿ, ಡಾ.ಸಿದ್ದಲಿಂಗಯ್ಯ ಅವರ ಬರಹಗಳು ಅಸಮತೋಲದಿಂದ ಕೂಡಿರುವ ಸಾಮಾಜಿಕ ವ್ಯವಸ್ಥೆಯ ವಿರುದ್ಧ, ದಲಿತರ ಹೋರಾಟಕ್ಕೆ ಧ್ವನಿಯಾಗಿದ್ದವು ಎಂದು ನೆನೆದರು.

ಕುವೆಂಪು ಕನ್ನಡ ಅಧ್ಯಯನ ಸಂಸ್ಥೆ ನಿರ್ದೇಶಕ ಪ್ರೊ.ಎನ್.ಕೆ.ಲೋಲಾಕ್ಷಿ ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದರು. ಭೀಮ ಬಲ ಬಳಗದ ಸಂಚಾಲಕ ಆತ್ಮಪರಮಾನಂದ, ಶರತ್ ಸತೀಶ್, ಡಾ.ಕಿರಣ್, ಡಾ.ಪ್ರದೀಪ್ ರಾಜು, ಶೇಷಣ್ಣ, ವೇದಾವತಿ, ಅಶ್ವಿನಿ, ಮಹೇಶ್, ಡಾ.ಪ್ರತಾಪ್, ಆನಂದ್ ವರಹಳ್ಳಿ ಮತ್ತಿತರರಿದ್ದರು.

# 'ಮಧ್ವ–ಪುರಂದರ ನಮನ' ಗಾನಸಿರಿ ವೇದಾಂತ ಲಹರಿ



ಮಧ್ವ–ಪುರಂದರ ನಮನ ಗಾನಸಿರಿ ವೇದಾಂತ ಲಹರಿ ಕಾರ್ಯಕ್ರಮಕ್ಕೆ ಎನ್.ಎಂ. ನವೀನ್ ಕುಮಾರ್‌ರಿಂದ ಚಾಲನೆ ನೀಡಲಾಯಿತು.

ಮೈಸೂರು, ಫೆ.3(ಎಂಕೆ)– ಮೈಸೂರಿನ ಶಾರದಾ ವಿಲಾಸ ಶತಮಾನೋತ್ಸವ ಭವನದಲ್ಲಿ ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ವತಿಯಿಂದ ಹಮ್ಮಿಕೊಂಡಿರುವ 'ಮಧ್ವ–ಪುರಂದರ ನಮನ' ಗಾನಸಿರಿ ವೇದಾಂತ ಲಹರಿ ಕಾರ್ಯಕ್ರಮಕ್ಕೆ ಚಾಲನೆ ನೀಡಲಾಯಿತು. ಫೆ.9ರವರೆಗೆ ಪ್ರತಿ ದಿನ ಸಂಜೆ 5ರಿಂದ ರಾತ್ರಿ 8.30ರವರೆಗೆ 18 ಪುರಾಣಗಳ ವಿಶ್ಲೇಷಣೆಯ ಸಮಗ್ರ ಪುರಾಣ ದರ್ಶನ ಹಾಗೂ 9 ಮಂದಿ ಪ್ರಸಿದ್ಧ ವಿದ್ವಾಂಸರಿಂದ ಜ್ಞಾನಾಮೃತ ಹಾಗೂ ಪ್ರಖ್ಯಾತ 18 ಗಾಯಕರ ಗಾನಾಮೃತ ಕಾರ್ಯಕ್ರಮಕ್ಕೆ ವಿಪ್ರ ಮುಖಂಡ ಹಾಗೂ ಭಾರತ ಬ್ರಾಹ್ಮಣ ಏಕೀಕೃತ ಪರಿಷತ್ತಿನ ರಾಜ್ಯಾಧ್ಯಕ್ಷ ಎನ್.ಎಂ. ನವೀನ್ ಕುಮಾರ್ ಚಾಲನೆ ನೀಡಿದರು.

ಪಂ। ಶ್ರೀ ಕಲ್ಲಾಪುರ ಪವಮಾನಾಚಾರ್ಯ, ಉತ್ತರಾದಿ ಮಠದ ವ್ಯವಸ್ಥಾಪಕ ಅನಿರುದ್ಧಾಚಾರ್ಯ ಪಾಂಡುರಂಗಿ, ಹರಿದಾಸ ಸಂಗೀತ ಸಾಹಿತ್ಯೋತ್ಸವ ಸಮಿತಿ ಅಧ್ಯಕ್ಷ ರವಿ ಕುಮಾರ್, ಶಾರದಾ ವಿಲಾಸ ಶಿಕ್ಷಣ ಸಂಸ್ಥೆ ಕಾರ್ಯದರ್ಶಿ ನರಸಿಂಹನ್, ಖ್ಯಾತ ವೈದ್ಯರಾದ ಶ್ರೀಮತಿ ಪೂರ್ಣಿಮಾ ಕೃಷ್ಣಮೂರ್ತಿ, ಮುಖಂಡರಾದ ಎಸ್. ರಾಮಪ್ರಸಾದ್, ಗುರುರಾಜ್, ವಿಪ್ರ ಮುಖಂಡರಾದ ಎಸ್.ಬಿ.ವಾಸುದೇವ ಮೂರ್ತಿ, ಆರ್.ಎಸ್.ಸತ್ಯನಾರಾಯಣ ಮತ್ತಿತರರಿದ್ದರು.

# ಭಾರತ–ಯುಎಸ್ ವ್ಯಾಪಾರ ಒಪ್ಪಂದ ಶತಮಾನದ ಅತಿದೊಡ್ಡ ಘಟನೆ

## ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಪ್ರಧಾನಿ ಮೋದಿ ಸಂತಸ



ನವದೆಹಲಿ, ಫೆ.3– ಭಾರತ–ಅಮೆರಿಕ ವ್ಯಾಪಾರ ಒಪ್ಪಂದವನ್ನು ಈ ಶತಮಾನದ ಅತಿದೊಡ್ಡ ಘಟನೆ ಎಂದು ಪ್ರಧಾನಿ ನರೇಂದ್ರ ಮೋದಿ ಬಣ್ಣಿಸಿದ್ದಾರೆ. ಇದು ಭಾರತದ ಹೆಚ್ಚುತ್ತಿರುವ ಪ್ರತಿಷ್ಠೆ ಮತ್ತು ಜಾಗತಿಕ ವೇದಿಕೆಯಲ್ಲಿ ವೃದ್ಧಿಸುತ್ತಿರುವ ಪ್ರಭಾವವನ್ನು ಪ್ರತಿಬಿಂಬಿಸುತ್ತದೆ ಎಂದು ಅವರು ಹೇಳಿದ್ದಾರೆ.

ಭಾರತ ಮತ್ತು ಅಮೆರಿಕ ನಡುವಿನ ಈ ವ್ಯಾಪಾರ ಒಪ್ಪಂದದಡಿ, ಅಮೆರಿಕ ಭಾರತೀಯ ಸರಕುಗಳ ಮೇಲೆ ವಿಧಿಸಲಾಗಿದ್ದ ಪರಸ್ಪರ ತೆರಿಗೆಯನ್ನು ಪ್ರಸ್ತುತ 25 ಶೇಕಡದಿಂದ 18 ಶೇಕಡ ಇಳಿಸಲು ಒಪ್ಪಿಕೊಂಡಿದೆ.

ದೇಶೀಯ ರಾಜಕಾರಣದ ಕುರಿತು ಮಾತನಾಡಿದ ಪ್ರಧಾನಮಂತ್ರಿ, ಕೇರಳದ ಸ್ಥಳೀಯ ಸಂಸ್ಥೆಗಳ ಚುನಾವಣೆಯಲ್ಲಿ ಬಿಜೆಪಿಯ ಇತ್ತೀಚಿನ ಸಾಧನೆಯನ್ನು ಉಲ್ಲೇಖಿಸಿ ಪ್ರತಿಪಕ್ಷ ವಿರುದ್ಧ ಟೀಕಿಸಿದರು.

**ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಪ್ರಧಾನಿ ಮೋದಿ ಅವರಿಗೆ ಅಭಿನಂದನೆ:** ಅಮೆರಿಕದೊಂದಿಗೆ ಕೈಗೂಡಿಸಿದ ವ್ಯಾಪಾರ ಒಪ್ಪಂದಕ್ಕಾಗಿ ಎನ್‌ಡಿಎ ಸಂಸದೀಯ ಪಕ್ಷದ ಸಭೆಯಲ್ಲಿ ಎನ್‌ಡಿಎ ಸಂಸದರು ಪ್ರಧಾನಮಂತ್ರಿ ನರೇಂದ್ರ ಮೋದಿ ಅವರನ್ನು ಅಭಿನಂದಿಸಿದರು.

**ಈ ಶತಮಾನದ ಅತಿದೊಡ್ಡ ಘಟನೆ:** ಇಂದು ದೆಹಲಿಯಲ್ಲಿ ನಡೆದ ಎನ್‌ಡಿಎ ಸಂಸದೀಯ ಪಕ್ಷದ ಸಭೆಯನ್ನು ಉದ್ದೇಶಿಸಿ ಮಾತನಾಡಿದ ಪ್ರಧಾನಮಂತ್ರಿ, ಭಾರತವು ವಿಶ್ವ ವ್ಯವಹಾರಗಳಲ್ಲಿ ವೇಗವಾಗಿ ಪ್ರಮುಖ ಪಾತ್ರಧಾರಿಯಾಗಿ ಹೊರಹೊಮ್ಮುತ್ತಿದೆ ಮತ್ತು ಜಾಗತಿಕ ಸಮತೋಲನವನ್ನು ಕಾಪಾಡುವಲ್ಲಿ ಅದರ ಪಾತ್ರ ದಿನೇ ದಿನೇ ಅತ್ಯಂತ ಮಹತ್ವ ಪಡೆದುಕೊಳ್ಳುತ್ತಿದೆ ಎಂದರು.

ಈ ಶತಮಾನದ ಅತಿದೊಡ್ಡ ಘಟನೆ ಎಂದರೆ ಭಾರತವು ಜಾಗತಿಕ ವೇದಿಕೆಯಲ್ಲಿ ನಿರ್ಣಾಯಕ ಶಕ್ತಿಯಾಗಿ ರೂಪುಗೊಳ್ಳುತ್ತಿರುವುದು ಎಂದು ಅವರು ಎನ್‌ಡಿಎ ಸಂಸದರಿಗೆ ತಿಳಿಸಿದರು.

ಪ್ರಧಾನಮಂತ್ರಿ ಮೋದಿ ಅವರು ಹಾಸ್ಯಭರಿತವಾಗಿ, ಅಮೆರಿಕ ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರ ನಿರ್ಧಾರದಿಂದ ಕೆಲವರು ತುಂಬಾ ಬೇಸರಗೊಂಡಿದ್ದಾರೆ ಎಂದು ವಿರೋಧ ಪಕ್ಷಗಳಿಗೆ ತಿರುಗೇಟು ನೀಡಿದರು. ಅವರ ಈ ಮಾತು ಪಕ್ಷದ ಸದಸ್ಯರಲ್ಲಿ ನಗು ಮೂಡಿಸಿತು. ಈ ಒಪ್ಪಂದವು ಭಾರತದ ಆರ್ಥಿಕತೆ ಮತ್ತು ರಫ್ತುಗಳಿಗೆ ತಂತ್ರಾತ್ಮಕವಾಗಿ ಎಷ್ಟು ಮಹತ್ವದ್ದಾಗಿದೆ ಎಂಬುದನ್ನು ಅವರು ಒತ್ತಿಹೇಳಿದರು.

**ಭಾರತ–ಅಮೆರಿಕ ವ್ಯಾಪಾರ ಒಪ್ಪಂದ:** ಭಾರತ ಮತ್ತು ಅಮೆರಿಕವು ನಿನ್ನೆ ಸೋಮವಾರ ಒಂದು ಐತಿಹಾಸಿಕ ವ್ಯಾಪಾರ ಒಪ್ಪಂದವನ್ನು ಅಂತಿಮಗೊಳಿಸಿದ್ದು, ಒಂದು ವರ್ಷ ಕಾಲ ಮುಂದುವರಿದ ತೀವ್ರ ತೆರಿಗೆ ವಿವಾದಕ್ಕೆ ಈ ಮೂಲಕ ತೆರೆ ಬಿದ್ದಿದೆ.

ಅಧ್ಯಕ್ಷ ಡೊನಾಲ್ಡ್ ಟ್ರಂಪ್ ಅವರು ಭಾರತೀಯ ರಫ್ತುಗಳ ಮೇಲೆ ವಿಧಿಸಲಾಗಿದ್ದ ಪರಸ್ಪರ ತೆರಿಗೆಯನ್ನು ಹಿಂದಿನ 25 ಶೇಕಡಾದಿಂದ 18 ಶೇಕಡಾಕ್ಕೆ ಇಳಿಸುವುದಾಗಿ ಘೋಷಿಸಿದರು. ಇದರಿಂದ ಭಾರತೀಯ ರಫ್ತುದಾರರಿಗೆ ಬಹುಕಾಲದ ನಿರೀಕ್ಷಿತ ಪರಿಹಾರ ದೊರಕಿದೆ.

ಡೊನಾಲ್ಡ್ ಟ್ರಂಪ್ ಮತ್ತು ಪ್ರಧಾನಮಂತ್ರಿ ನರೇಂದ್ರ ಮೋದಿ ನಡುವಿನ ದೂರವಾಣಿ ಸಂಭಾಷಣೆಯ ನಂತರ ಈ ಮಹತ್ವದ ಬೆಳವಣಿಗೆ ದೃಢಪಟ್ಟಿದ್ದು, ಹಲವು ತಿಂಗಳುಗಳ ಸಂಘರ್ಷ ಬಳಿಕ ದ್ವಿಪಕ್ಷೀಯ ವ್ಯಾಪಾರ ಸಂಬಂಧಗಳಲ್ಲಿ ದೊಡ್ಡ ಮರುಹೊಂದಾಣಿಕೆಯನ್ನು ಸೂಚಿಸುತ್ತದೆ.

# ಬಸ್‌ನಿಲ್ದಾಣ, ಅಲ್ಲಿನ ಶೌಚಾಲಯ ಸ್ವಚ್ಛ ನಿರ್ವಹಣೆ ಆಗದಿದ್ದಲ್ಲಿ ಸಿಬ್ಬಂದಿ ವಿರುದ್ಧ ಶಿಸ್ತುಕ್ರಮ

## ಕೆಎಸ್‌ಆರ್‌ಟಿಸಿ ಎಂಡಿ ಅಕ್ರಂಪಾಷ ಎಚ್ಚರಿಕೆ

ಮೈಸೂರು, ಫೆ.3(ಎಸ್‌ಪಿಎನ್)– ರಾಜ್ಯದ ಎಲ್ಲಾ ಬಸ್ ನಿಲ್ದಾಣ ಮತ್ತು ಅದಕ್ಕೆ ಹೊಂದಿ ಕೊಂಡಿರುವ ಶೌಚಾಲಯಗಳ ಸ್ವಚ್ಛತೆ, ನಿರ್ವಹಣೆ ಮಾಡುವಲ್ಲಿ ವಿಫಲವಾದ ಅಧಿಕಾರಿ, ಸಿಬ್ಬಂದಿಯ ವಿರುದ್ಧ ಶಿಸ್ತು ಕ್ರಮ ಜರುಗಿಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಕೆಎಸ್‌ಆರ್‌ಟಿಸಿ ವ್ಯವಸ್ಥಾಪಕ ನಿರ್ದೇಶಕ ಅಕ್ರಂಪಾಷ ಮಂಗಳವಾರ ಸುತ್ತೋಲೆ ಹೊರಡಿಸಿದ್ದಾರೆ.

ಕರ್ನಾಟಕ ರಾಜ್ಯ ರಸ್ತೆ ಸಾರಿಗೆ ನಿಗಮವು ಪ್ರಯಾಣಿಕರಿಗೆ ಬಸ್ ನಿಲ್ದಾಣದಲ್ಲಿ ಮೂಲಸೌಕರ್ಯ ಒದಗಿಸುವುದು ಆದ್ಯ ಕರ್ತವ್ಯವಾಗಿದೆ. ಪ್ರಸ್ತುತ ನಿಗಮದ ವ್ಯಾಪ್ತಿಯಲ್ಲಿರುವ ಎಲ್ಲಾ ಬಸ್ ನಿಲ್ದಾಣಗಳಲ್ಲಿ ಶೌಚಾಲಯ ಅಸಮರ್ಪಕ ನಿರ್ವಹಣೆ ಮತ್ತು ಅಶುಚಿತ್ವದ ಬಗ್ಗೆ ಸಾರ್ವಜನಿಕರು ನೀಡಿರುವ ದೂರುಗಳು ಹಾಗೂ ಉಪಲೋಕಾಯುಕ್ತರು ಬೇರೆ ಬೇರೆ ಸಂದರ್ಭದಲ್ಲಿ ಕೆಎಸ್‌ಆರ್‌ಟಿಸಿ ಬಸ್ ನಿಲ್ದಾಣಗಳಿಗೆ ಭೇಟಿ ನೀಡಿದಾಗ ಶೌಚಾಲಯಗಳ ಅಶುಚಿತ್ವದ ಕುರಿತು ಸ್ವಯಂ ಪ್ರೇರಿತ ದೂರು ದಾಖಲಿಸಿ, ಸಮಸ್ಯೆ ಸರಿಪಡಿಸುವಂತೆ ರಾಜ್ಯ ಸರ್ಕಾರಕ್ಕೆ ಪತ್ರ ಬರೆದಿದ್ದರು. ಈ ಪತ್ರವನ್ನಾಧರಿಸಿ ಸಾರಿಗೆ ಸಚಿವ ರಾಮಲಿಂಗಾರೆಡ್ಡಿ ಸಹಾ ಈ ಕುರಿತು ಕ್ರಮ ವಹಿಸುವಂತೆ ಅಧಿಕಾರಿಗಳಿಗೆ ಸೂಚನೆ ನೀಡಿದ್ದ ಹಿನ್ನಲೆಯಲ್ಲಿ ಈ ಆದೇಶ ಹೊರಬಿದ್ದಿದೆ.

ಬಸ್ ನಿಲ್ದಾಣದ ಆವರಣ ಮತ್ತು ಶೌಚಾಲಯಗಳ ಸ್ವಚ್ಛತೆ, ನಿರ್ವಹಣೆಯನ್ನು ಗುತ್ತಿಗೆದಾರರಿಂದ ಸಮರ್ಪಕವಾಗಿ ನಿರ್ವಹಿಸುವುದು ಆಯಾಯ ಬಸ್‌ನಿಲ್ದಾಣದಲ್ಲಿ ಕರ್ತವ್ಯ ನಿರ್ವಹಿಸುವ ಅಧಿಕಾರಿ, ಸಿಬ್ಬಂದಿಯ ಜವಾಬ್ದಾರಿಯಾಗಿದೆ. ಆದರೆ, ಸಂಬಂಧಪಟ್ಟವರು ಇದರ ಬಗ್ಗೆ ಗಮನಹರಿಸದಿರುವ ಕರ್ತವ್ಯ ಲೋಪ ಕಂಡು ಬಂದಿದೆ.

ಹಾಗಾಗಿ ಕೆಎಸ್‌ಆರ್‌ಟಿಸಿ ವಿಭಾಗೀಯ ನಿಯಂತ್ರಣಾಧಿಕಾರಿ ಹಾಗೂ ವಿಭಾಗದ ಇತರೆ ಅಧಿಕಾರಿಗಳು, ಬಸ್ ನಿಲ್ದಾಣಗಳಿಗೆ ನಿಯಮಿತವಾಗಿ ಭೇಟಿ ನೀಡಿ, ಬಸ್ ನಿಲ್ದಾಣಗಳ ಸ್ವಚ್ಛತೆಯನ್ನು ಸಂಬಂಧ ಪಟ್ಟವರು ಸಮರ್ಪಕವಾಗಿ ನಿರ್ವಹಿಸಲು ಕ್ರಮ ಕೈಗೊಳ್ಳುವುದು ಹಾಗೂ ನ್ಯೂನತೆ ಗಳು ಕಂಡು ಬಂದಲ್ಲಿ ಸಂಬಂಧಪಟ್ಟವರ ಮೇಲೆ ಸೂಕ್ತ ಕ್ರಮ ಜರುಗಿಸುವಂತೆ ಸೂಚಿಸಿದ್ದಾರೆ.

ಬಸ್ ನಿಲ್ದಾಣಗಳ ಆವರಣ ಮತ್ತು ಶೌಚಾಲಯಗಳು ಶುಚಿತ್ವದಿಂದ ಕೂಡಿರಬೇಕು. ಪ್ರಯಾಣಿಕರಿಗೆ ಶೌಚಾಲಯದ ಬಳಕೆ ಉಚಿತವಾಗಿರಬೇಕು. ಇಲ್ಲವೇ ಶೌಚಾಲಯ ಬಳಕೆಗೆ ಈಗಾಗಲೇ ನಿಗಮದಿಂದ ನಿಗದಿಪಡಿಸಿದ ದರವನ್ನು ಮಾತ್ರ ಪ್ರಯಾಣಿಕರಿಂದ ಪಡೆಯುವಂತೆ ಕ್ರಮವಹಿಸುವುದು. ಈ ಅಂಶಗಳನ್ನು ಪಾಲಿಸದ ಗುತ್ತಿಗೆದಾರ ಹಾಗೂ ಸಂಬಂಧಪಟ್ಟ ಅಧಿಕಾರಿಗಳಿಗೆ ನೋಟಿಸ್ ಜಾರಿ ಮಾಡಿ, ಮುಂದಿನ ಅಗತ್ಯ ಶಿಸ್ತು ಕ್ರಮಕ್ಕಾಗಿ ಸೂಚನೆ ನೀಡಿದ್ದಾರೆ.

## ಉತ್ತರ ಕನ್ನಡದ ಗುರೂಜಿ ಜೊತೆ ಮಹಿಳೆ ಅಕ್ರಮ ಸಂಬಂಧ

# ದೂರು ನೀಡಿದ್ದಕ್ಕೆ ಹತ್ಯೆ; ಜ್ಯೋತಿಷಿ ಕಮಲಾಕರ್ ಭಟ್ ಸೇರಿ 7 ಮಂದಿ ಬಂಧನ



ಕಾರವಾರ, ಫೆ.3– ಅಕ್ರಮ ಸಂಬಂಧ ವಿಚಾರವಾಗಿ ನಡೆದ ಗಲಾಟೆ ವೇಳೆ ವ್ಯಕ್ತಿಯೋರ್ವನನ್ನು ಹತ್ಯೆ ಮಾಡಲಾಗಿದೆ. ಉತ್ತರ ಕನ್ನಡ ಜಿಲ್ಲೆಯ ಸಿದ್ದಾಪುರ ತಾಲೂಕಿನ ಅವರಗುಪ್ಪದಲ್ಲಿ ಘಟನೆ ನಡೆದಿದೆ. ಜ್ಯೋತಿಷಿ ಕಮಲಾಕರ್ ಭಟ್ ಜೊತೆ ಸುಚಿತ್ರ ಎಂಬಾಕೆ ಅಕ್ರಮ ಸಂಬಂಧ ಇಟ್ಟುಕೊಂಡಿದ್ದಳು. ಈ ವಿಚಾರ ತಿಳಿದ ಸುಚಿತ್ರ ಪುತ್ರಿ ತನ್ನ ತಂದೆ ಮಹೇಶ್ ನಾಯ್ಕ್‌ಗೆ ಹೇಳಿದ್ದಾಳೆ. ಹೀಗಾಗಿ ಮಹೇಶ್ ನಾಯ್ಕ್ ಪೊಲೀಸ್ ಠಾಣೆಗೆ ತೆರಳಿ ದೂರು ನೀಡಿದ್ದರು. ಇದರಿಂದ ಕೆರಳಿದ ಸುಚಿತ್ರಾ, ಆಕೆಯ ತಂದೆ ಲೋಕನಾಥ್ ಮತ್ತು ಸಹಚರರು ಮಹೇಶ್ ನಾಯ್ಕ್ ಹಾಗೂ ಜೊತೆಗಿದ್ದವರ ಮೇಲೆ ಹಲ್ಲೆ ನಡೆಸಿದ್ದರು. ಘಟನೆಯಲ್ಲಿ ಸುಚಿತ್ರಾ ಪತಿ ಮಹೇಶ್, ವಸಂತ್ ನಾಯ್ಕ ಮತ್ತು ಕುಮಾರ್ ಗಂಭೀರವಾಗಿ ಗಾಯಗೊಂಡಿದ್ದು, ಈ ಪೈಕಿ ವಸಂತ್ ನಾಯ್ಕ ಆಸ್ಪತ್ರೆಗೆ ಸಾಗಿಸುವ ಮಾರ್ಗ ಮಧ್ಯೆಯೇ ಮೃತಪಟ್ಟಿದ್ದಾರೆ. ಉಳಿದ ಇಬ್ಬರಿಗೆ ಸ್ಥಳೀಯ ಆಸ್ಪತ್ರೆಯಲ್ಲಿ ಚಿಕಿತ್ಸೆ ನೀಡಲಾಗುತ್ತಿದೆ.

ಕೊಲೆ ಬಳಿಕ ಎಸ್ಕೇಪ್ ಆಗಲು ಯತ್ನಿಸಿದ ಖ್ಯಾತ ಜೋತಿಷಿ ಕಮಲಾಕರ ಭಟ್ ಮತ್ತು ಸುಚಿತ್ರಾ ಸೇರಿ ನಾಲ್ವರನ್ನು ಸಿದ್ದಾಪುರದಿಂದ ಬಂಧಿಸಲಾಗಿದ್ದರೆ ಶಿವಮೊಗ್ಗದಲ್ಲಿ ಮೂವರನ್ನು ಸಿದ್ದಾಪುರ ಠಾಣೆ ಪೊಲೀಸರು ವಶಕ್ಕೆ ಪಡೆದಿದ್ದಾರೆ. ಕೆಲಸದ ನಿಮಿತ್ತ ಮಹೇಶ್ ನಾಯ್ಕ್ ಬೆಂಗಳೂರಿನಲ್ಲಿ ವಾಸವಾಗಿದ್ದರು. ರಜೆ ದಿನಗಳಲ್ಲಿ ಸಿದ್ದಾಪುರಕ್ಕೆ ಹೋಗುತ್ತಿದ್ದರು.

ಇಬ್ಬರು ಹೆಣ್ಣುಮಕ್ಕಳೊಂದಿಗೆ ಸುಚಿತ್ರಾ ಸಿದ್ದಾಪುರದಲ್ಲಿ ವಾಸವಾಗಿದ್ದಳು. ಸುಚಿತ್ರಾಳಿಗೆ ಇತ್ತೀಚೆಗೆ ಜ್ಯೋತಿಷಿ ಕಮಲಾಕರ್ ಭಟ್ ಪರಿಚಯವಾಗಿತ್ತು. ನಂತರ ಇಬ್ಬರ ನಡುವೆ ಸಲುಗೆ ಬೆಳೆದು ಕಮಲಾಕರ್ ಭಟ್ ಆಗಾಗ ಸುಚಿತ್ರಾ ಮನೆಗೆ ಬರುತ್ತಿದ್ದವನು ಆಗಾಗ ಅಲ್ಲಿಯೇ ಉಳಿಯುತ್ತಿದ್ದನು. ಇದರಿಂದ ಕುಪಿಸಿಕೊಂಡಿದ್ದ ಹಿರಿಯ ಮಗಳು ತಾಯಿ ವರ್ತನೆಯನ್ನು ಪ್ರಶ್ನಿಸಿದ್ದಳು. ಕೋಪಗೊಂಡ ಸುಚಿತ್ರಾ ಮಕ್ಕಳಿಗೆ ಹಿಂಸೆ ನೀಡಲು ಶುರು ಮಾಡಿದ್ದಳು. ಕೊನೆಗೆ ಹಿರಿಯ ಪುತ್ರಿ ಎಲ್ಲಾ ವಿಚಾರವನ್ನು ತಂದೆಗೆ ತಿಳಿಸಿದ್ದಾಳೆ.

ಮಗಳಿಂದ ಪತ್ನಿಯ ಅಕ್ರಮ ಸಂಬಂಧದ ವಿಷಯ ತಿಳಿದ ಮಹೇಶ್ ನಾಯ್ಕ್ ಊರಿಗೆ ತೆರಳಿದ್ದು ಸಿದ್ದಾಪುರ ಠಾಣೆಯಲ್ಲಿ ದೂರು ನೀಡಿದ್ದರು. ದೂರು ನೀಡಿ ಸಹೋದರ ವಸಂತ್ ಮನೆಗೆ ಮಹೇಶ್ ತೆರಳಿದ್ದರು. ಇನ್ನು ತಮ್ಮ ವಿರುದ್ಧ ದೂರು ನೀಡಿರುವ ವಿಚಾರ ತಿಳಿದ ಸುಚಿತ್ರಾ, ಆಕೆಯ ತಂದೆ ಲೋಕನಾಥ್ ಗುಂಪಿನೊಂದಿಗೆ ವಸಂತ್ ಮನೆಗೆ ಹೋಗಿ ಗಲಾಟೆ ಮಾಡಿದ್ದಾರೆ. ನಂತರ ಮಹೇಶ್ ನಾಯ್ಕ್, ವಸಂತ್ ನಾಯ್ಕ್ ಮತ್ತು ಕುಮಾರ್ ಮೇಲೆ ಮನಬಂದಂತೆ ಹಲ್ಲೆ ನಡೆಸಿದ್ದಾರೆ. ಅನೈತಿಕ ಸಂಬಂಧ, ಕೊಲೆ ಪ್ರಕರಣ ಸಂಬಂಧ ಸುಚಿತ್ರಾ, ಜ್ಯೋತಿಷಿ ಕಮಲಾಕರ್ ಭಟ್ ಸೇರಿದಂತೆ ಇತರರ ವಿರುದ್ಧ ಎಫ್‌ಐಆರ್ ದಾಖಲಾಗಿತ್ತು. ಇದೀಗ ಕಮಲಾಕರ್ ಭಟ್ ಸೇರಿ 7 ಜನರನ್ನು ಪೊಲೀಸರು ಬಂಧಿಸಿದ್ದಾರೆ.

# ಲೋಕಸಭೆಯಲ್ಲಿ ತೀವ್ರ ಕೋಲಾಹಲ: 8 ಕಾಂಗ್ರೆಸ್ ಸಂಸದರ ಅಮಾನತು

ನವದೆಹಲಿ, ಫೆ.3– ಮಾಜಿ ಸೇನಾ ಮುಖ್ಯಸ್ಥ ಎಂ.ಎಂ. ನರವಾಣೆ ಅವರ ಅಪ್ರಕಟಿತ 'ಪುಸ್ತಕ'ದಲ್ಲಿನ ಅಂಶಗಳನ್ನು ಉಲ್ಲೇಖಿಸಲು ವಿರೋಧ ಪಕ್ಷದ ನಾಯಕ ರಾಹುಲ್ ಗಾಂಧಿ ಅವರಿಗೆ ಅವಕಾಶ ನಿರಾಕರಿಸಿದ್ದಕ್ಕಾಗಿ ಲೋಕಸಭೆಯಲ್ಲಿ ಮಂಗಳವಾರ ತೀವ್ರ ಕೋಲಾಹಲಕ್ಕೆ ಕಾರಣವಾಗಿದ್ದು, ಎಂಟು ಕಾಂಗ್ರೆಸ್ ಸಂಸದರನ್ನು ಲೋಕಸಭೆ ಸ್ಪೀಕರ್ ಅಮಾನತುಗೊಳಿಸಿದ್ದಾರೆ.

ಸಂಸದರಾದ ಹಿಬಿ ಈಡನ್, ಸಿ. ಕಿರಣ್ ಕುಮಾರ್ ರೆಡ್ಡಿ, ಗುರ್ಜೀತ್ ಸಿಂಗ್ ಔಜ್ಲಾ, ಅಮರಿಂದರ್ ಸಿಂಗ್ ರಾಜಾ ವಾರಿಂಗ್, ಮಾಣಿಕ್ಕಮ್ ಟ್ಯಾಗೋರ್, ಪ್ರಶಾಂತ್ ಪಡೋಲ್ ಮತ್ತು ಡೀನ್ ಕುರಿಯಾಕೋಸ್ ಅವರನ್ನು ಸ್ಪೀಕರ್ ಪೀಠದ ಕಡೆಗೆ ಕಾಗದಗಳನ್ನು ಎಸೆದ ಆರೋಪದ ಮೇಲೆ ಅಮಾನತುಗೊಳಿಸಲಾಗಿದೆ.

ತೀವ್ರ ಗದ್ದಲದ ನಡುವೆ ಲೋಕಸಭೆಯ ಕಲಾಪವನ್ನು ನಾಳೆಗೆ ಮುಂದೂಡಲಾಗಿದೆ. ಬಳಿಕ ಕಾಂಗ್ರೆಸ್ ಸಂಸದರ ಅಮಾನತು ಖಂಡಿಸಿ ರಾಹುಲ್ ಗಾಂಧಿ ನೇತೃತ್ವದಲ್ಲಿ ಕಾಂಗ್ರೆಸ್ ನಾಯಕರು ಸಂಸತ್ತಿನ ಹೊರಗೆ ಪ್ರತಿಭಟನೆ ನಡೆಸಿದರು.

ಮಾಜಿ ಸೇನಾ ಮುಖ್ಯಸ್ಥ ಎಂ.ಎಂ. ನರವಾಣೆ ಅವರ ಅಪ್ರಕಟಿತ 'ಪುಸ್ತಕ'ದ ಕುರಿತು ಮಾತನಾಡಲು ಸ್ಪೀಕರ್ ಅವಕಾಶ ನಿರಾಕರಿಸಿದ್ದನ್ನು ಖಂಡಿಸಿ ವಿರೋಧ ಪಕ್ಷದ ಸಂಸದರು ಪ್ರತಿಭಟಿಸುತ್ತಿದ್ದಾರೆ.


ನರವಾಣೆ ಅವರ ಅಪ್ರಕಟಿತ 'ಪುಸ್ತಕ'ದಲ್ಲಿನ ಅಂಶಗಳನ್ನು ಉಲ್ಲೇಖಿಸಿ ನಿಯತಕಾಲಿಕವೊಂದರಲ್ಲಿ ಪ್ರಕಟವಾದ ಲೇಖನದ ಪ್ರತಿಯನ್ನು ರಾಹುಲ್ ಗಾಂಧಿ ಲೋಕಸಭೆಯಲ್ಲಿ ಪ್ರದರ್ಶಿಸಿದರು ಮತ್ತು ಇದು ನಮ್ಮ ರಾಷ್ಟ್ರಪತಿಗಳ ಭಾಷಣದ ಕೇಂದ್ರಬಿಂದುವಾಗಿದೆ. ನಾನು ಹೇಳುತ್ತಿರುವುದು ಚೀನಾ ಮತ್ತು ಭಾರತದ ನಡುವೆ ಏನಾಯಿತು ಮತ್ತು ನಮ್ಮ ಪ್ರಧಾನಿ ಅದಕ್ಕೆ ಹೇಗೆ ಪ್ರತಿಕ್ರಿಯಿಸಿದರು ಎಂಬುದರ ಕುರಿತು ಹೇಳಿಕೆ ನೀಡಲು ಅವಕಾಶ ನೀಡಬೇಕು. ನನ್ನನ್ನು ಏಕೆ ತಡೆಯಲಾಗುತ್ತಿದೆ ಎಂದು ಪ್ರಶ್ನಿಸಿದರು.

## ಉಚಿತ ತರಬೇತಿ ಶಿಬಿರ

ಮೈಸೂರು, ಫೆ.3(ಎಸ್‌ಪಿಎನ್)– ಕಾಲೇಜು ವಿದ್ಯಾರ್ಥಿಗಳು ಮತ್ತು ಆಸಕ್ತ ಯುವ ಸಮೂಹಕ್ಕೆ ರಂಗಭೂಮಿ ಮತ್ತು ಜನಪದ ಕಲಾಪ್ರಕಾರಗಳ ಉಚಿತ ತರಬೇತಿ ಶಿಬಿರ, ಫೆ.6ರಂದು ಸಂಜೆ 4 ಗಂಟೆಗೆ ರಂಗಾಯಣ ಆವರಣದ ಕಾರಂತರ ರಂಗಚಾವಡಿಯಲ್ಲಿ ಗೌತಮ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಸೇವಾ ಟ್ರಸ್ಟ್ ವತಿಯಿಂದ ಹಮ್ಮಿಕೊಳ್ಳಲಾಗಿದೆ. ಹೆಚ್ಚಿನ ಮಾಹಿತಿಗಾಗಿ 96320–73716 ಅನ್ನು ಸಂಪರ್ಕಿಸಬಹುದು.

# ಸಿ.ಜೆ.ರಾಯ್ ಮಾನಸಿಕ ಒತ್ತಡ, ಖಿನ್ನತೆಯಿಂದ ಬಳಲುತ್ತಿದ್ದರು

## ಎಸ್‌ಐಟಿ ತನಿಖೆ ವೇಳೆ ಮಾಹಿತಿ ಬಹಿರಂಗ!



ಬೆಂಗಳೂರು, ಫೆ.3– ಇತ್ತೀಚಿಗೆ ಆತ್ಮಹತ್ಯೆಗೆ ಶರಣಾದ ಕಾನ್ಫಿಡೆಂಟ್ ಗ್ರೂಪ್ ಅಧ್ಯಕ್ಷ ಸಿಜೆ ರಾಯ್ ತೀವ್ರ ಮಾನಸಿಕ ಒತ್ತಡ ಮತ್ತು ಖಿನ್ನತೆಯಿಂದ ಬಳಲುತ್ತಿದ್ದರು. ಮನೋವೈದ್ಯರಿಂದ ಕೌನ್ಸೆಲಿಂಗ್‌ಗೆ ಒಳಗಾಗಿದ್ದರು ಎಂಬುದು ವಿಶೇಷ ತನಿಖಾ ತಂಡ (SIT)ತನಿಖೆ ವೇಳೆ ತಿಳಿದುಬಂದಿದೆ ರಾಯ್ ಆತ್ಮಹತ್ಯೆಗೂ ಮುನ್ನಾ ಜಯನಗರದಲ್ಲಿ ಮನೋವೈದ್ಯರನ್ನು ಭೇಟಿಯಾಗಿದ್ದರು ಎನ್ನಲಾಗಿದೆ.

ಎಸ್‌ಐಟಿ ಅಧಿಕಾರಿಗಳು ಅಪರಾಧ ನಡೆದ ಸ್ಥಳಕ್ಕೆ ಭೇಟಿ ನೀಡಿ ಪರಿಶೀಲಿಸಿದಾಗ ರಾಯ್ ಅವರ ಕೊಠಡಿ ಧ್ವನಿ ನಿರೋಧಕ (soundproof) ಆಗಿತ್ತು. ಶುಕ್ರವಾರ ಮಧ್ಯಾಹ್ನ 3.15ರ ಸುಮಾರಿಗೆ ರಾಯ್ ಗುಂಡು ಹಾರಿಸಿಕೊಂಡಾಗ, ಕಚೇರಿಯಲ್ಲಿದ್ದ ಅವರ ಯಾವುದೇ ಉದ್ಯೋಗಿಗಳಿಗೆ ಗುಂಡಿನ ಸದ್ದು ಕೇಳಿಸಿಲ್ಲ.

ಅಪರಾಧ ನಡೆದ ಸ್ಥಳದಲ್ಲಿದ್ದ ಐಟಿ ಅಧಿಕಾರಿಗಳ ತಂಡವನ್ನು ಎಸ್‌ಐಟಿ ವಿಚಾರಣೆ ನಡೆಸಿದೆ ಎಂದು ವರದಿಯಾಗಿದೆ. ತನಿಖಾಧಿಕಾರಿಯಿಂದ ಅನುಮತಿ ಪಡೆಯದೆ ನಗರ ಬಿಟ್ಟು ಹೋಗದಂತೆ ಐಟಿ ಅಧಿಕಾರಿಗಳಿಗೆ ಸೂಚನೆ ನೀಡಲಾಗಿದೆ.

ಕಾನ್ಫಿಡೆಂಟ್ ಗ್ರೂಪ್ ಸಿಬ್ಬಂದಿ ಮತ್ತು ರಾಯ್ ಅವರ ಕುಟುಂಬ ಸದಸ್ಯರ ಹೇಳಿಕೆಗಳನ್ನು ಎಸ್‌ಐಟಿ ದಾಖಲಿಸಿಕೊಳ್ಳುತ್ತಿದೆ. ರಾಯ್ ಅವರಿಗೆ ಯಾವುದೇ ಬೆದರಿಕೆ ಇತ್ತೇ ಎಂಬುದನ್ನು ತಿಳಿಯಲು ಕುಟುಂಬದವರನ್ನು ವಿಚಾರಣೆ ಮಾಡಲಾಗುತ್ತಿದೆ. ಪ್ರಕರಣದ ದೂರುದಾರ ಕಾನ್ಫಿಡೆಂಟ್ ಗ್ರೂಪ್‌ನ ವ್ಯವಸ್ಥಾಪಕ ನಿರ್ದೇಶಕ ಟಿಎ ಜೋಸೆಫ್ ಅವರ ಹೇಳಿಕೆಗಳನ್ನು ಸಹ ದಾಖಲಿಸಿಕೊಳ್ಳಲಾಗುತ್ತಿದೆ.

**ಅನಗತ್ಯ ಊಹಾಪೋಹ: ಗೃಹ ಸಚಿವ ಪರಮೇಶ್ವರ್:** ಆತ್ಮಹತ್ಯೆ ಪ್ರಕರಣದಲ್ಲಿ ಅನಗತ್ಯ ವದಂತಿ ಹರಡಬಾರದು ಎಂದು ಗೃಹ ಸಚಿವ ಜಿ.ಪರಮೇಶ್ವರ ಮಾಧ್ಯಮಗಳಿಗೆ ತಿಳಿಸಿದ್ದಾರೆ.

ಆದಾಯ ತೆರಿಗೆ ಅಧಿಕಾರಿಗಳ ಕಿರುಕುಳದಿಂದ ಆತ್ಮಹತ್ಯೆ ಮಾಡಿಕೊಂಡಿರುವುದಾಗಿ ರಾಯ್ ಅವರ ನಿಕಟವರ್ತಿಗಳ ಆರೋಪಗಳಿಗೆ ಪ್ರತಿಕ್ರಿಯಿಸಿದ ಪರಮೇಶ್ವರ್, ಅಂತಹ ಊಹಾಪೋಹಗಳನ್ನು ತಡೆಯಲು ಸರ್ಕಾರ ಎಸ್‌ಐಟಿ ರಚಿಸಿದೆ. ಆತ್ಮಹತ್ಯೆಯಲ್ಲಿ ಯಾರದ್ದಾದರೂ ಪಾತ್ರವಿದ್ದರೆ ಎಸ್‌ಐಟಿ ವರದಿಯಲ್ಲಿ ಬೆಳಕಿಗೆ ಬರಲಿದೆ ಎಂದರು.

ಬೆಂಗಳೂರು ನಗರ ಪೊಲೀಸ್ ಅಧಿಕಾರಿಗಳನ್ನೊಳಗೊಂಡ ಎಸ್‌ಐಟಿಯನ್ನು ಸರ್ಕಾರ ಶನಿವಾರ ರಚಿಸಿದ್ದು, ಜಂಟಿ ಆಯುಕ್ತ (ಪಶ್ಚಿಮ) ಸಿ ವಂಶಿಕೃಷ್ಣ ಅದರ ಮುಖ್ಯಸ್ಥರಾಗಿದ್ದಾರೆ.

SLD EXCELLENT PUBLIC SCHOOL
English Medium
KHB Colony, Yalachanahalli, Yelwala Hobli, Mysuru

High School & Primary

| | |
|---|---|
| Science Teacher (B.Sc., B.Ed) | English Teacher (B.A.B.Ed) |
| Maths Teacher (B.Sc., B.Ed) | Hindi Teacher (B.A.,B.Ed) |
| Social Teacher (B.A., B.Ed) | Kannada Teacher (B.A.,B.Ed) |

(English Fluency and Experience must)

Nursery Teacher (NST) | Physical Education Teacher - (C.P.Ed/B.P.Ed)

Receptionist
(Any degree with English fluency & computer knowledge must)

Security with Family (Accommodation free)

WALK IN INTERVIEW
Every Monday - Saturday 10.30 am to 05.00 pm
For more information Contact :
9036844557, 9535332633 / 9148180700


ನಾಲ್ಕನೇ ವರ್ಷದ ಸವಿನೆನಪು



ನಾರಾಯಣ್‌ಗೌಡ
ಸದಾ ನಿಮ್ಮ ನೆನಪಿನಲ್ಲಿರುವ, ಪತ್ನಿ ಗೀತಮ್ಮ ಮತ್ತು ಕುಟುಂಬವರ್ಗದವರು

4th Year Remembrance



V.B.RAMANATH (Ningu)
MISS YOU PAPPA
-V.R.DARSHAN, FAMILY & FRIENDS

12ನೇ ವರ್ಷದ ಸವಿನೆನಪು



ಶ್ರೀಮತಿ ಮಂಜುಳ
ದುಃಖಿತಪ್ತರು: ಪುಟ್ಟಸೋಮಾರಾಧ್ಯ, ಮತ್ತು ಮಕ್ಕಳು ಹಾಗೂ ಸೊಸೆಯಂದಿರು, ಕುಟುಂಬ ವರ್ಗದವರು, ಆಕೃತಿ ಲೇಔಟ್ ಮೇನ್ ರೋಡ್, ಆರ್.ಬಿ.ನಗರ, ಮೈಸೂರು

IN LOVING MEMORY OF AMMA



Mrs. Susheela Bhagyamani
W/o Mr. Sunandaraj
DOB : 14.11.1963 Demise : 04.02.2021

Today's marks the 5th anniversary of your passing
Remembering you today for your blessings, your smiles, and the warmth you gave us".
Mom, your absence still pains us, and we miss you every single day.
You left too soon but live forever in our hearts".
Your wisdom echoes in our decisions and actions. We honor your legacy by living a life filled with love and kindness".
Miss you Amma
From your Daughters
Ramya. S & Vinutha. S


FLAT FOR SALE
Fully furnished 4.5 BHK, Luxury Flat measuring 2640sqft East facing balconies overlooking Chamundi hills for immediate sale at Brigade Mountain View Apartments, Agrahara, beside JSS Hospital
Call: 99003 63084
99002 90093

ಸೈಟು ಮಾರಾಟಕ್ಕಿದೆ
30x50
ಮುಡಾ ಅನುಮೋದಿತ
ಜೆ.ಪಿ ನಗರ–ದಡದಹಳ್ಳಿ ರಸ್ತೆ
ರೂ. 3,500/–ಚದರ ಅಡಿ ಗೆ
8123438349

ಮದುವೆ ಸಮಾರಂಭಗಳ ಪ್ರಯುಕ್ತ!
ಪರಿಶುದ್ಧ ರೇಷ್ಮೆ ಸೀರೆ ಮತ್ತು ಉತ್ಪನ್ನಗಳ
ಪ್ರದರ್ಶನ ಮತ್ತು ಮಾರಾಟ



LAST 5 DAYS
ಸಿಲ್ಕ್ ಇಂಡಿಯಾ® 2026
ಭಾರತದ ಎಲ್ಲಾ ರಾಜ್ಯಗಳಿಂದ ಪರಿಶುದ್ಧ ರೇಷ್ಮೆ ಸೀರೆಗಳು ಹಾಗೂ ರೇಷ್ಮೆ ಉತ್ಪನ್ನಗಳು
ಬಿಹಾರ್ : ತಸ್ಸರ್ ರೇಷ್ಮೆ ಸೀರೆಗಳು, ಸ್ಟೋಲ್ಸ್, ಶಾಲುಗಳು, ಕರ್ನಾಟಕ : ಕ್ರೇಪ್, ಶಿಫಾನ್ ಮತ್ತು ಜಾರ್ಜೆಟ್ ಸಿಲ್ಕ್ ಸೀರೆಗಳು, ಆರಣಿ ತಮಿಳುನಾಡು : ಕಾಂಚಿಪುರಂ ಸಿಲ್ಕ್ ಮತ್ತು ಮದುವೆ ಸೀರೆಗಳು, ಆಂಧ್ರ ಪ್ರದೇಶ : ಧರ್ಮಾವರಂ ಸೀರೆಗಳು, ಉಪ್ಪಾಡಾ ಮತ್ತು ಗೊಡ್ವಾಲ್ ಸೀರೆಗಳು, ಮಂಗಲಗಿರಿ ಹಾಗೂ ಪೋಚಂಪಲ್ಲಿ ಸೀರೆಗಳು ಉತ್ತರ ಪ್ರದೇಶ : ಬನಾರಸ್ ಮತ್ತು ಜಮ್‌ದಾನಿ, ಜಮಾವರ್ ರೇಷ್ಮೆ, ಟೆಂಪಲ್ ಬಾರ್ಡರ್‌ಉಳ್ಳ ಮುಲ್‌ಬಾರಿ ಸಿಲ್ಕ್, ಲಕ್ನೋ ಚಿಕಾನ್ ಕಸೂತಿ, ಮಹಾರಾಷ್ಟ್ರ : ಪೈಥಾಣಿ ಸೀರೆ, ಡಿಸೈನರ್ ಎಂಬ್ರಾಯಿಡರಿ ಸೀರೆ ಮತ್ತು ಡ್ರೆಸ್, ಪಂಜಾಬ್ : ಪಟಿಯಾಲ ಡ್ರೆಸ್ ಮೆಟೀರಿಯಲ್ಸ್ ಒರಿಸ್ಸಾ : ಸಂಬಲ್‌ಪುರಿ, ಇಕ್ಕತ್, ಬೋಂಕೈ ಸೀರೆಗಳು, ಹ್ಯಾಂಡ್‌ಲೂಮ್ ಸಿಲ್ಕ್ ಕಾಟನ್ ಛತ್ತೀಸ್‌ಘಡ್ : ರಾ ಸಿಲ್ಕ್ ಮತ್ತು ಕೋಸಾ ಸೀರೆಗಳು, ಮಧ್ಯ ಪ್ರದೇಶ : ಮಹೇಶ್ವರಿ ಮತ್ತು ಚಂದೇರಿ ಸಿಲ್ಕ್ ಪಶ್ಚಿಮ ಬಂಗಾಳ : ಢಾಕ ಸೀರೆಗಳು, ಬಲ್‌ಚೂರಿ ರೇಷ್ಮೆ, ಕಲ್ಕತ್ತಾ ರೇಷ್ಮೆ ಸೀರೆಗಳು ಮತ್ತು ಕಾಂತ ಎಂಬ್ರಾಯಿಡರಿ ಸೀರೆಗಳು, ಅಸ್ಸಾಂ : ಮುಗಾ ಮತ್ತು ಎರ್ರಿ ರೇಷ್ಮೆ ಸೀರೆಗಳು, ಜಮ್ಮು ಮತ್ತು ಕಾಶ್ಮೀರ : ಚಿನಾನ್, ಟಿಷ್ಯು ರೇಷ್ಮೆ ಸೀರೆಗಳು, ಪಶ್ಮೀನಾ ಸೀರೆಗಳು, ಸ್ಟೋಲ್ಸ್, ಶಾಲುಗಳು ರಾಜಾಸ್ಥಾನ್ : ಕೋಟಾ ಸಿಲ್ಕ್, ಕೈ ಅಚ್ಚಿನ ಸೀರೆಗಳು ...
Exclusive Wedding Collections
30 ಜನವರಿ ಯಿಂದ 8 ಫೆಬ್ರವರಿ 2026 ರವರೆಗೆ | ಸಮಯ : ಬೆಳಗ್ಗೆ 10.30 ರಿಂದ ಸಂಜೆ 8.30 ರವರೆಗೆ
ನಂಜರಾಜ ಬಹದ್ದೂರ್ ಛತ್ರ
ವಿನೋಬಾ ರಸ್ತೆ, ಮೈಸೂರು
Abhivrudhi Silk India | silkindia_mysore_since2011 | Entry Free | Contact : 98977 09954
(Registered with O/o D C (H) Ministry of Textiles, Govt. of India)

ಇಂಪೀರಿಯಲ್ ಸಿಟಿ
ಮೆಗಾ ರೆಸಿಡೆನ್ಸಿಯಲ್ ವಿಲ್ಲಾ ಟೌನ್‌ಶಿಪ್
ಮೈಸೂರು - ಹುಣಸೂರು ಮುಖ್ಯರಸ್ತೆ, ಮೈಸೂರು
MUDA LIMITS
ಇಲವಾಲ ಸ್ಯಾಟ್‌ಲೈಟ್ ಬಸ್ ನಿಲ್ದಾಣದಿಂದ ಕೇವಲ 4 ಕಿ.ಮೀ
ಬುಕಿಂಗ್ ಪ್ರಾರಂಭವಾಗಿದೆ
ಕೇವಲ ₹749/ ಪ್ರತಿ ಚದರ ಅಡಿ
ಸುಲಭ 4 ಕಂತುಗಳ ಸೌಲಭ್ಯವಿದೆ
30x40 | 30x50 | 40x60 | 50x80
ಅಚ್ಚೆಯ ಎಲ್ಲಾ ಸೌಲಭ್ಯಗಳನ್ನು ಒಳಗೊಳ್ಳುವ ನಿವೇಶನಗಳು
ಹೈಲ್ಯಾಂಡ್ ಪ್ರಾಪರ್ಟೀಸ್ 90713 86615
ಕಾಳಿದಾಸ ರಸ್ತೆ, ವಿಜಯನಗರ 1ನೇ ಹಂತ, ಮೈಸೂರು 95133 01854

QUALITY Plywood
15 YEARS CERTIFIED WARRANTY
₹63/Sft. Onwards
Neem® BOND PLATINUM
Neem™ AKSHAYAGOLD
9901291267 / 9148991267

LOANS HUB
ALL LOANS UNDER ONE ROOF
- Business Loans
- Personal Loans
- Housing Loans
- Mortgage Loans
- Balance Transfer & Top up

TRUSTED SERVICE - NO SERVICE CHARGES
SRI SAI FINANCIAL SERVICES
Railway Gate Road KG Koppal Mysore
Contact :
88844 47314 / 88844 47318


ಮೈಸೂರು ಮಿತ್ರ 46
**ಓದುಗರ ಗಮನಕ್ಕೆ**

ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಪೂರ್ಣವೇ ಆದರೂ ಅವುಗಳಲ್ಲಿನ ಮಾಹಿತಿ, ವಸ್ತು ಲೋಪ ದೋಷ, ಗುಣಮಟ್ಟ ಮುಂತಾದವುಗಳ ಕುರಿತು ಆಸಕ್ತ ಸಾರ್ವಜನಿಕರು ಜಾಹೀರಾತುದಾರರೊಡನೆಯೇ ವ್ಯವಹರಿಸಬೇಕಾಗುತ್ತದೆ. ಅದಕ್ಕೆ ಪತ್ರಿಕೆ ಜವಾಬ್ದಾರಿಯಾಗುವುದಿಲ್ಲ.

-ಜಾಹೀರಾತು ವ್ಯವಸ್ಥಾಪಕರು


NOT GETTING YOUR STAR OF MYSORE & ಮೈಸೂರು ಮಿತ್ರ
Call: 98452-96447 / 99003-82840

Bharathi Education Trust (R)
BHARATHI SCHOOL OF EXCELLENCE
Affiliated with CBSE, New Delhi (AFF No. 831623)
Regd No. CB(2), C.P.I.N.S. 11/2000-2001, Dated : 11.07.2001
Bharathingara, Maddur Taluk, Mandya District-571 422
WALK-IN-INTERVIEW
We invites dedicated, passionate and dynamic educators to join our team for the academic year 2026-27
Venue : CHAMUNDI GOVERNMENT GUEST HOUSE, MYSORE
Date : 8th February 2026, Sunday. Time : 10:30 am to 3:30pm
CO-ORDINATOR, KINDERGARTEN, PRIMARY, MIDDLE AND HIGH SCHOOL TEACHERS (For all Subjects), PHYSICAL EDUCATION TEACHERS (FEMALE Preferred)
QUALIFICATION
- B.Ed / M.Ed Preferred
- Graduates & Post Graduates with relevant Experience may attend
- Strong Communication & Class Management Skill Required

Carry 2 photos and original marks card with updated resume
For More Information :
Phone No : 95354 62369, 97405 91741
Location : Chamundi Govt. Guest House, Room No. 09, Jhansi Rani Lakshmi Bai Road, Chamarajapuram, Chamarajapuram Mohalla, Lakshmipuram, Mysore – 570004.
Join Bharathi School of Excellence in shaping confident, capable and compassionate learners !

FOR SALE
Prime Location Site For Sale
43x93
East Facing, 100m from Ashoka Puram, Railway Satation Near Bedarakannappa Temple
30x40, 30x50
Residential Sites for Sale Various Locations
Ready to Move-in Houses for SALE Prime Locations, Vijayanagar
40x60, 50x80
Commercial Property for Sale Dattagalli, 80Ft Road South East Corner, G+2
Commercial Property for Sale
42.5x100
80Ft Road, Near NIE College
Srirampura Commercial Property for Sale
50x80
North Facing/Rent Expected 3 lakhs
(Brokers Excuse)
9008111454


## ಸಾರ್ವಜನಿಕ ಪ್ರಕಟಣೆ

ಶ್ರೀ ಬಾಲಾಜಿ ಕನ್ವೆನ್ಷನ್ ಹಾಲ್, ವಿದ್ಯಾರಣ್ಯಪುರಂ, ಮೈಸೂರು ಮತ್ತು
ಶ್ರೀಮತಿ ಸರಸ್ವತಿ ಕನ್ವೆನ್ಷನ್ ಹಾಲ್, ಕೆ.ಎಚ್.ಬಿ ಕಾಲೋನಿ, ಪೂಟಗಳ್ಳಿ, ಮೈಸೂರು

ಇಲ್ಲಿ ಫೆಬ್ರವರಿಯಿಂದ ಮುಂದಿನ ದಿನಗಳಲ್ಲಿ ನಡೆಯಲಿರುವ ಕಾರ್ಯಕ್ರಮಗಳಿಗೆ ದಿನಾಂಕ ಕಾಯ್ದಿರಿಸಿರುವವರು, ದಯವಿಟ್ಟು ತಮ್ಮ ಕಾರ್ಯಕ್ರಮದ ದಿನಾಂಕದ ವಿವರವನ್ನು ಕಚೇರಿಗೆ ಮುಂಚಿತವಾಗಿ ತಿಳಿಸುವಂತೆ ವಿನಂತಿ. ನಮ್ಮ ಸಂಸ್ಥೆಯಲ್ಲಿ ವ್ಯವಸ್ಥಾಪಕರ ಬದಲಾವಣೆ ನಡೆದಿರುವ ಹಿನ್ನಲೆ, ದಾಖಲೆಗಳನ್ನು ಸರಿಯಾಗಿ ನವೀಕರಿಸುವ ಉದ್ದೇಶದಿಂದ ಈ ಮಾಹಿತಿ ಅಗತ್ಯವಾಗಿದೆ.

ಸಂಪರ್ಕಿಸಿ: **099166-55522** ಕೊನೆಯ ದಿನಾಂಕ: 10–02–2026


DREAM WORLD TRAVELS Mysore
Unbelievable
Singapore and Malaysia
(Free & Easy) 6 Nights 7 Days Package
Booking last date Feb 7th 2026
PACKAGE COST: Per Person Rs.1,18,000/- Incl all Tax GROUP PACKAGE
Group Tour Date 1 Feb 17th 2026
Group Tour Date 2 April 21st 2026
For More Details Contact :
9945 24 24 27

DREAM WORLD TRAVELS Mysore
Srilanka
Free & Easy 7 Nights 8 Days
PACKAGE COST: Per Person Rs.65,600/- Incl all Tax GROUP PACKAGE
DEPARTURE DATE Feb 26th 2026
For More Details Contact :
9945 24 24 27


# STAR OF MYSORE

**SPECIAL ISSUE**

**S**tar of Mysore is completing 48 years of service on **16th February 2026** and entering **49th** year of publication. As in the past, this year too we will be publishing a Special Issue.

We request our advertisers & patrons to release their advertisements before **9th February** to facilitate printing as per schedule.

**HEAD OFFICE**

0821-2496520 (5-LINES) Ad Dept. - 0821-2496522 / 23
Email : ad@starofmysore.com

**Maria G. Fernandes** - Advt. Manager: 94485-25060/80730-30835
**Joy Anthony Dove** - Sr. Executive-Ad Sales - 89516-68960
**Prema** - Sr. Executive Advertising - 98805-49879

- K.R. Circle Office : 0821-2431774 • D.D. Urs Road Office : 0821-2428695
- Kodagu Office : 97314-69871 • Mandya Office : 87629-60325
- Chamarajanagar : 92422-65657 • T.N. Pura : 94483-05750
- Nanjangud : 98805-09200 • Bengaluru : 98440-46761


IMMEDIATELY REQUIRED
Qualified Dip/ BE Civil Site Engineer and Project Manager having Min.5 Years Site Experience for on going Project at Mysore.
9448374916
E-mail:kulkarniassociatesban@gmail.com





## ಸಾರ್ವಜನಿಕ ಪ್ರಕಟಣೆ

ಸಾರ್ವಜನಿಕರಿಗೆ ಈ ಮೂಲಕ ತಿಳಿಯಪಡಿಸುವುದೇನೆಂದರೆ, ಈ ಕೆಳಗೆ ನಮೂದಿಸಿರುವ ಮಾಲೀಕರುಗಳು ತಮ್ಮ ಸ್ವಾಧೀನಾನುಭವದಲ್ಲಿರುವ ಈ ಕೆಳಗೆ ವಿವರಿಸಿರುವ ಷೆಡ್ಯೂಲ್ ಸ್ವತ್ತನ್ನು ನನ್ನ ಕಕ್ಷಿದಾರರಿಗೆ ಮಾರಾಟ ಮಾಡಲು ಅಪೇಕ್ಷಿಸಿರುತ್ತಾರೆ. ಅದರಂತೆ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧಕ್ರಯಕ್ಕೆ ಪಡೆಯಲು ಸಿದ್ಧರಿರುವುದರಿಂದ ಸದರಿ ಸ್ವತ್ತಿನ ಮೇಲೆ ಯಾರಿಗಾದರೂ ಯಾವುದೇ ರೀತಿಯ ಹಕ್ಕು, ಅಧಿಕಾರ, ಹಿತಾಸಕ್ತಿ, ಆಕ್ಷೇಪಣೆ, ಸಿವಿಲ್ ವ್ಯಾಜ್ಯ, ತಂಟೆ–ತಕರಾರುಗಳು ಇದ್ದಲ್ಲಿ ಈ ಪ್ರಕಟಣೆ ಪ್ರಕಟವಾದ ದಿನದಿಂದ 05 (ಐದು) ದಿನಗಳ ಒಳಗಾಗಿ ತಮ್ಮ ಆಕ್ಷೇಪಣೆಗಳನ್ನು ಲಿಖಿತ ರೂಪದಲ್ಲಿ ಅಥವಾ ಖುದ್ದಾಗಿ ಸೂಕ್ತ ದಾಖಲಾತಿಗಳೊಂದಿಗೆ ಈ ಕೆಳಗೆ ನಮೂದಿಸಿರುವ ಕಛೇರಿ ವಿಳಾಸಕ್ಕೆ ಸಲ್ಲಿಸಬಹುದಾಗಿದೆ. ತಪ್ಪಿದಲ್ಲಿ ನನ್ನ ಕಕ್ಷಿದಾರರು ಷೆಡ್ಯೂಲ್ ಸ್ವತ್ತನ್ನು ಶುದ್ಧ ಕ್ರಯಕ್ಕೆ ಪಡೆದುಕೊಳ್ಳುತ್ತಾರೆ. ಮೇಲ್ಕಂಡ ಅವಧಿ ನಂತರ ಬರುವ ಆಕ್ಷೇಪಣೆ, ತಂಟೆ–ತಕರಾರುಗಳಿಗೆ ನನ್ನ ಕಕ್ಷಿದಾರರು ಬಾಧ್ಯರಾಗುವುದಿಲ್ಲ ಎಂಬ ಅಂಶವನ್ನು ಈ ಮೂಲಕ ತಿಳಿಯಪಡಿಸಲಾಗಿದೆ.

**ಷೆಡ್ಯೂಲ್ ಸ್ವತ್ತಿನ ವಿವರ**

ಚಾಮರಾಜನಗರ ಜಿಲ್ಲೆ, ಚಾಮರಾಜನಗರ ತಾಲ್ಲೂಕು, ಹರವೆ ಹೋಬಳಿ, ಕೊತ್ತಲವಾಡಿ ಗ್ರಾಮಕ್ಕೆ ಸೇರಿದ ಜಮೀನುಗಳ ಒಟ್ಟು ವಿಸ್ತೀರ್ಣ 18 ಎಕರೆ 30 ಗುಂಟೆ ಜಮೀನುಗಳ ಮಾಲೀಕರ ಹೆಸರು ಸರ್ವೆ ನಂಬರ್, ವಿಸ್ತೀರ್ಣ ಮತ್ತು ಚಕ್ಕುಬಂದಿ ಈ ಕೆಳಕಂಡಂತಿದೆ.

| ಮಾಲೀಕರ ಹೆಸರು | ಸರ್ವೆ ನಂ. | ವಿಸ್ತೀರ್ಣ | | ಚಕ್ಕುಬಂದಿ | | | |
|---|---|---|---|---|---|---|---|
| | | ಎ | ಗು | ಪೂರ್ವ | ಪಶ್ಚಿಮ | ಉತ್ತರ | ದಕ್ಷಿಣ |
| ಬಿ.ಸಿದ್ಧಶೆಟ್ಟಿ ಬಿನ್ ಬಸವಶೆಟ್ಟಿ | 193 (ಹಳೇ ಸರ್ವೆ ನಂ. 193/5) | 02 | 00 | ಸುಬ್ರಹ್ಮಣ್ಯರವರ ಜಮೀನು | ಗುರುಸ್ವಾಮಿರವರ ಜಮೀನು | ಸುಬ್ರಹ್ಮಣ್ಯರವರ ಜಮೀನು | ಸರ್ಕಾರಿ ರಸ್ತೆ |
| ದೇವಶೆಟ್ಟಿ ಬಿನ್ ಬಸವಶೆಟ್ಟಿ | 193 (ಹಳೇ ಸರ್ವೆ ನಂ. 193/1) | 01 | 36 | ದೇವಶೆಟ್ಟಿರವರ ಜಮೀನು | ಮಾದಶೆಟ್ಟಿಯವರ ಜಮೀನು | ಮಹದೇವಸ್ವಾಮಿಯವರ ಜಮೀನು | ಸಿದ್ಧಮ್ಮರವರ ಜಮೀನು |
| ಚಿಕ್ಕಮಾದಪ್ಪ ಬಿನ್ ಬಸಪ್ಪ | 193 (ಹಳೇ ಸರ್ವೆ ನಂ. 193/29) | 03 | 21 | ಸಿದ್ಧಮಲ್ಲಪ್ಪರವರ ಜಮೀನು | ಮಾದಪ್ಪ ರವರ ಜಮೀನು | ಸಿದ್ಧಮಲ್ಲಪ್ಪರವರ ಜಮೀನು | ಗುಡ್ಡ (ಸರ್ಕಾರಿ ಜಾಗ) |
| ಮಾದಪ್ಪ ಬಿನ್ ಬಸಪ್ಪ | 193 (ಹಳೇ ಸರ್ವೆ ನಂ. 193/25) | 04 | 00 | ಸಿದ್ಧಮಲ್ಲಪ್ಪರವರ ಜಮೀನು | ಸರ್ವೆ ನಂ. 194/2 | ಅಂಕಯ್ಯ ರವರ ಜಮೀನು | ಗುಡ್ಡ (ಸರ್ಕಾರಿ ಜಾಗ) |
| ಗುರುತಾಯಮ್ಮ ಕೋಂ, ಲೇಟ್ ನಾಗರಾಜದೇವರು | 194/1 | 01 | 20 | ಸರ್ವೆ ನಂ. 194/2 | ಸರ್ವೆ ನಂ. 195/2 | ಸರ್ವೆ ನಂ. 195/2 ಮತ್ತು 193 | ಸರ್ವೆ ನಂ. 193 |
| ಬಿ.ದ್ಯಾವ ಬಿನ್ ಅಗಸರ ಬಸವ | 226/1 | 00 | 25 | ಸರ್ವೆ ನಂ. 228/1 | ಸರ್ವೆ ನಂ. 226/3 | ಸರ್ವೆ ನಂ. 226/2 ಮತ್ತು 228/2 | ಸರ್ವೆ ನಂ. 227 |
| | 228/1 | 05 | 08 | ರಸ್ತೆ | ಸರ್ವೆ ನಂ. 228/2 ಮತ್ತು ಸರ್ವೆ ನಂ. 226/1 | ಸರ್ವೆ ನಂ. 229 | ಸರ್ವೆ ನಂ. 227 |
| ಒಟ್ಟು ವಿಸ್ತೀರ್ಣ | | 18 | 30 | | | | |

ಎಸ್‌ಎಲ್‌ಡಿ ಲಾ ಫರ್ಮ್
ಸಹಿ/– ಶ್ರೀಲತಾ ದೀಕ್ಷಿತ್, ವಕೀಲರು
ನಂ. 1416, ನಾರಾಯಣಶಾಸ್ತ್ರೀ ರಸ್ತೆ, ಸಪ್ನ ಬುಕ್ ಹೌಸ್ ಹತ್ತಿರ, ಮೈಸೂರು. ಮೊ: 9844640641
email: sldlawfirm2021@gmail.com